ಬೆಂಗಳೂರು ವಿಶ್ವವಿದ್ಯಾಲಯದ 2015–16ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗೆ ಉತ್ತರಗಳ ಸಮೇತ

ಬೆಂಗಳೂರು ಪ್ರಾಂತೀಯ ಕಛೇರಿ

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಬೆಂಗಳೂರು

ಬೆಂಗಳೂರು ವಿಶ್ವವಿದ್ಯಾಲಯ

ಬೆಂಗಳೂರು ವಿಶ್ವವಿದ್ಯಾಲಯದ 2015–16ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗೆ ಉತ್ತರಗಳನ್ನು ತಡವಾಗಿ ಸಲ್ಲಿಸುತ್ತಿರುವ ಕುರಿತು ಟಿಪ್ಪಣಿ.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ಕಾಯಿದೆ 2000 ಕಲಂ 47(4)ರ ಅನ್ವಯ ಲೆಕ್ಕಪರಿಶೋಧನಾ ವರದಿಗೆ ಉತ್ತರಗಳ ಸಮೇತ, ರಾಜ್ಯ ವಿಧಾನ ಮಂಡಲ ಹಾಗೂ ವಿಧಾನ ಪರಿಷತ್ತಿಗಳಲ್ಲಿ ಮಂಡಿಸಬೇಕಾಗಿರುತ್ತದೆ. ಅಪರ ನಿರ್ದೇಶಕರು, ಬೆಂಗಳೂರು ಪ್ರಾಂತೀಯ ಕಛೇರಿ, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಬೆಂಗಳೂರು. ಇವರು 2015–16ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ದಿನಾಂಕ:27.11.2018 ರಂದು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುತ್ತಾರೆ. ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ವಿವಿಧ ವಿಭಾಗ/ಕಛೇರಿ/ಘಟಕ/ಮಹಾವಿದ್ಯಾಲಯ/ಕೇಂದ್ರಗಳಿಗೆ ದಿನಾಂಕ:19.12.2018 ರಂದು ಪತ್ರ ಕಳುಹಿಸಿ, ತದನಂತರ ದಿನಾಂಕ:24.01.2019, 21.03.2019, 04.04.2019, 13.05.2019, 01.06.2019 ಮತ್ತು 20.06.2019 ರಂದು ನೆನಪೋಲೆಗಳನ್ನು ಕಳುಹಿಸಿರುತ್ತದೆ. ಇದರ ಜೊತೆಗೆ ದಿನಾಂಕ:24.10.2019 ರಂದು ಸಭೆಯನ್ನು ನಡೆಸಿ, ಉತ್ತರಗಳನ್ನು ಆದ್ಯತೆ ಮೇರೆಗೆ ಸಲ್ಲಿಸಲು ತಿಳಿಸಿರುತ್ತದೆ. ಬಂದಂತಹ ಎಲ್ಲಾ ಕಂಡಿಕೆಗಳ ಉತ್ತರಗಳನ್ನು ಕ್ರೋಢೀಕರಿಸಿ ಉತ್ತರಗಳ ಸಮೇತ ವರದಿಯನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 47(4)ರ ಪ್ರಕಾರ ಹಣಕಾಸು ಸಮಿತಿ, ವಿದ್ಯಾವಿಷಯಕ ಪರಿಷತ್ತು ಹಾಗೂ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಪಡೆದು ಸರ್ಕಾರಕ್ಕೆ **ಸಲ್ಲಿಸಬೇಕಾಗಿರುತ್ತದೆ.**

ಅದರಂತೆ, ದಿನಾಂಕ:18.03.2020ರ ಹಣಕಾಸು ಸಮಿತಿ ಮತ್ತು ದಿನಾಂಕ:19.03.2020ರ **ಸಿಂಡಿಕೇಟ್ ಸಭೆಗಳ** ಮುಂದೆ ಮಂಡಿಸಿ, ಅನುಮೋದನೆ ಪಡೆಯಲಾಗಿದೆ. ಆದರೆ ದಿನಾಂಕ:24.03.2020ರಂದು ನಡೆಯಬೇಕಿದ್ದ ವಿದ್ಯಾವಿಷಯಕ ಪರಿಷತ್ತಿನ ಸಭೆಯು Covid-19 ರ ವೈರಸ್ ಸಾಂಕ್ರಾಮಿಕ ರೋಗ ಹರಡುವುದನ್ನು ತಡೆಗಟ್ಟುವ ಮುಂಜಾಗ್ರತಾ ಕ್ರಮವಾಗಿ ಲಾಕ್‌ಡೌನ್ ಪ್ರಯುಕ್ತ ಸಭೆಯನ್ನು ಮುಂದೂಡಿ ಸದಸ್ಯರುಗಳಿಗೆ ಕಳುಹಿಸಿರುವ ಕಾರ್ಯಸೂಚಿಯಲ್ಲಿನ ವಿಷಯಗಳಿಗೆ ಲಿಖಿತವಾಗಿ ಅಭಿಪ್ರಾಯವನ್ನು ದಿನಾಂಕ:30.03.2020ರೊಳಗೆ ಸಲ್ಲಿಸಲು ಪತ್ರ ಸಂಖ್ಯೆ: ಎಸಿವಿ–2/ವಿವಿಪಸಾಸಬೆ/2019–20 ದಿನಾಂಕ:23.03.2020ರಲ್ಲಿ ತಿಳಿಸಲಾಗಿತ್ತು. ನಂತರ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮ 4.19ರ ಪ್ರಾಕಾರ ಸದರಿ ಸಭೆಯ ಕಾರ್ಯಸೂಚಿಗಳ ಬಗ್ಗೆ ನಡಾವಳಿಯನ್ನು ಎಲ್ಲಾ ವಿದ್ಯಾವಿಷಯಕ ಪರಿಷತ್ ಸದಸ್ಯರುಗಳಿಗೆ ಪತ್ರ ಸಂಖ್ಯೆ:ಎಸಿವಿ–2/ವಿವಿಪಸಾಸಬೆ/2020–21 ದಿನಾಂಕ:28.05.2020 ಮುಖಾಂತರ ಕಳುಹಿಸಿ ಹಾಗೂ ಈ ನಡಾವಳಿ ತಲುಪಿದ ಹದಿನಾಲ್ಕು ದಿವಸಗಳೊಳಗೆ ಯಾವುದೇ ಆಕ್ಷೇಪಣೆಗಳು ಬಾರದಿದ್ದಲ್ಲಿ ಸದರಿ ನಡಾವಳಿಗಳಿಗೆ ವಿಶ್ವವಿದ್ಯಾಲಯದ ಪರಿನಿಯಮದಂತೆ ಸದಸ್ಯರುಗಳ ಸಮ್ಮತಿ ಇರುತ್ತದೆಂದೇ ಭಾವಿಸಲಾಗುತ್ತದೆ ಎಂದು ಪತ್ರದಲ್ಲಿ ತಿಳಿಸಲಾಗಿತ್ತು. ಅದರಂತೆ ಕ್ರಮವಹಿಸಿ, ಈ ನಡಾವಳಿಯನ್ನು ವಿದ್ಯಾವಿಷಯಕ ಪರಿಷತ್ ಸಭೆ ಸಮ್ಮತಿಸಿರುವುದರಿಂದ, 2015–16ನೇ ಸಾಲಿನ ಲೆಕ್ಕಪರಿಶೋಧಕರ ವರದಿಗೆ ವಿಶ್ವವಿದ್ಯಾಲಯದ ಅನುಸರಣಾ ವರದಿಯೊಂದಿಗೆ ಅನುಮೋದನೆ ಪಡೆಯಲಾಗಿದೆ. ಮುದ್ರಿತ ವರದಿಯನ್ನು ಕರ್ನಾಟಕ ವಿಧಾನ ಮಂಡಲ ಮತ್ತು ವಿಧಾನ ಪರಿಷತ್ತಿನ ಸಭೆಗಳಲ್ಲಿ ಮಂಡಿಸಲು ಸಲ್ಲಿಸಿದೆ.

19/8/2020

ಕುಲಸಚಿವರು

ಬೆಂಗಳೂರು ವಿಶ್ವವಿದ್ಯಾಲಯ

ಬೆಂಗಳೂರು

ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇಲ್ಲಿನ 2015–16ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಯ ಪ್ರಮುಖ ಅಂಶಗಳು ಮತ್ತು ಉತ್ತರ

ಪ್ರಮುಖ ಅಂಶಗಳು	ಷರಾ / ಉತ್ತರ	ಪುಟ
➢ ದಾಖಲಾತಿಗಳನ್ನು ಲೆಕ್ಕಪರಿಶೀಲನೆಗೆ ಸಲ್ಲಿಸದಿರುವುದು.	ದಾಖಲಾತಿಗಳನ್ನು ಲೆಕ್ಕಪರಿಶೀಲನೆಗೆ ಒದಗಿಸಲು ಸಂಬಂಧಪಟ್ಟ ಎಲ್ಲಾ ವಿಭಾಗಗಳಿಗೆ ಸೂಚನೆ ನೀಡಿ 2016–17ನೇ ಸಾಲಿನ ಲೆಕ್ಕಪರಿಶೋಧನೆಯ ವೇಳೆಯಲ್ಲಿ ಒದಗಿಸಲು ತಿಳಿಸಲಾಗಿದೆ. ಅಂತಹ ದಾಖಲೆಗಳನ್ನು ಪರಿಶೀಲಿಸಲು ಸಹ ಅಪರ ನಿರ್ದೇಶಕರನ್ನು ಕೋರಲಾಗಿದೆ. ಪೂರ್ಣ ಮಾಹಿತಿಯನ್ನು **ಕಂಡಿಕೆ** 136 ರಲ್ಲಿ ಒದಗಿಸಿರುತ್ತದೆ.	254–270
➢ ಪ್ರಾರಂಭಿಕ ಶಿಲ್ಕು ಹೊಂದಾಣಿಕೆ ಲೆಕ್ಕಗಳನ್ನು ಲೆಕ್ಕಸಮನ್ವಯಗೊಳಿಸದೆ ಮುಂದುವರಿಸುತ್ತಿರುವುದು.	ಪ್ರಾರಂಭಿಕ ಶಿಲ್ಕುಗಳನ್ನು 2015–16ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳಲ್ಲಿ ಸಿಂಡಿಕೇಟ್ ಅನುಮೋದನೆ ಪಡೆದು ರೂ. 6,12,61,826.76 ಹಾಗೂ ರೂ. 44,23,25,820.06ಗಳನ್ನು ಅನುಬಂಧ 167ರಲ್ಲಿ ತಿಳಿಸಿರುವ ವಿವರದಂತೆ ಹೊಂದಾಣಿಕೆ ಮಾಡಿರುತ್ತದೆ.	
➢ ಲೆಕ್ಕಖಾತೆಗಳಲ್ಲಿ ಋಣಾತ್ಮಕ ಶಿಲ್ಕುಗಳು ಉಂಟಾಗಿರುವುದು.	ಬ್ಯಾಂಕ್ ಖಾತೆಗಳ ಲೆಕ್ಕಸಮನ್ವಯತೆಯ ಪಟ್ಟಿಗಳಲ್ಲಿ 2014–15ನೇ ಸಾಲಿನಲ್ಲಿ ಕಂಡು ಬಂದಂತಹ ಋಣಾತ್ಮಕ ಮೊತ್ತಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆ ಪಡೆದು, 2015–16ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳಲ್ಲಿ ಹೊಂದಾಣಿಕೆಯಾಗಿರುತ್ತದೆ. ಈ ರೀತಿ ಕೈಗೊಂಡಿರುವ ಕ್ರಮ ಸರಿಯಾಗಿದೆಯೇ ಅಥವಾ ಪರ್ಯಾಯ ಕ್ರಮಗಳಿಗೆ ಅವಕಾಶವಿದೆಯೇ ಎಂಬುದನ್ನು ಪರಿಶೀಲಿಸಿ ಅಭಿಪ್ರಾಯ ನೀಡಲು ಅಪರ ನಿರ್ದೇಶಕರು ಒಳಗೊಂಡಂತೆ ಕುಲಪತಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದೆ. ದಿನಾಂಕ 13.10.2017ರಂದು ನಡೆದ ಸಮಿತಿ ಸಭೆಯಲ್ಲಿ ಈಗಾಗಲೇ ಕೈಗೊಂಡಿರುವ ಕ್ರಮವನ್ನು ಒಪ್ಪಿರುವುದಾಗಿ ಅಭಿಪ್ರಾಯ ಪಟ್ಟಿರುತ್ತದೆ. **ಕಂಡಿಕೆ 1.6**ರ ಉತ್ತರಗಳಲ್ಲಿ ಹೆಚ್ಚಿನ ವಿವರಗಳನ್ನು ಒದಗಿಸಿರುತ್ತದೆ.	31–32 249–253
➢ ಲೆಕ್ಕಖಾತೆಗಳ ಶಿಲ್ಕು ಲೆಕ್ಕಸಮನ್ವಯದಲ್ಲಿ ಅಪೂರ್ಣತೆ.	ಬ್ಯಾಂಕ್ ಖಾತೆಗಳ ಲೆಕ್ಕ ಸಮನ್ವಯತೆಯನ್ನು ಪೂರ್ಣಗೊಳಿಸಿ ಸಮನ್ವಯತೆಯ ಪಟ್ಟಿಯನ್ನು ತಯಾರಿಸಿ ಲೆಕ್ಕ ಪರಿಶೋಧನೆಗೆ ಒದಗಿಸಲಾಗಿದೆ. ಪಟ್ಟಿಯಲ್ಲಿ ತೋರಿಸಿರುವ ಹೊಂದಾಣಿಕೆಯಾಗದ ಮೊತ್ತಗಳು ಮುಂದಿನ ವರ್ಷದಲ್ಲಿ ಹೊಂದಾಣಿಕೆಯಾಗುವ ಸಂಭವವಿರುವುದರಿಂದ ಯಾವುದೇ ಲೆಕ್ಕ ಹೊಂದಾಣಿಕೆಯು ಅಪೂರ್ಣವಾಗಿರುವುದಿಲ್ಲ. ಕಂಡಿಕೆ 1.6 ಮತ್ತು 134ರಲ್ಲಿ ಲೆಕ್ಕ ಸಮನ್ವಯತೆಯ ಬಗ್ಗೆ ವಿವರಣೆ ನೀಡಲಾಗಿದೆ.	
➢ ಆಯವ್ಯಯ ಅಂದಾಜುಗಳಿಗಿಂತ ಹೆಚ್ಚುವರಿ ವೆಚ್ಚ ಮಾಡಿರುವುದು ಮತ್ತು ಅನುಮೋದನೆ ಪಡೆಯದಿರುವುದು.	ಆಯವ್ಯಯ ಅಂದಾಜುಗಳಿಗಿಂತ ಹೆಚ್ಚುವರಿ ವೆಚ್ಚ ಮಾಡಿರುವುದನ್ನು ಹಣಕಾಸು ಸಮಿತಿ, ಸಿಂಡಿಕೇಟ್ ಸಮಿತಿಯಿಂದ ಘಟನೋತ್ತರ ಅನುಮೋದನೆ ಪಡೆಯಲು ಮತ್ತು ಇನ್ನು ಮುಂದೆ ಈ ರೀತಿ ಆಗದಂತೆ ಎಚ್ಚರ ವಹಿಸಲು ಸಂಬಂಧಪಟ್ಟವರಿಗೆ ಸೂಚನೆ ನೀಡಲಾಗಿದೆ. ಈ ಬಗ್ಗೆ **ಕಂಡಿಕೆ 135** ರಲ್ಲಿ ಪೂರ್ಣ ಮಾಹಿತಿಯನ್ನು ಒದಗಿಸಲಾಗಿದೆ.	253–254

ಪ್ರಮುಖ ಅಂಶಗಳು	ಷರಾ / ಉತ್ತರ	ಪುಟ
➢ ದಿನಗೂಲಿ/ಗುತ್ತಿಗೆ ಆಧಾರ/ಸಂಚಿತ ವೇತನ ರೂಪದಲ್ಲಿ ತಾತ್ಕಾಲಿಕ ನೌಕರರ ನೇಮಕಾತಿ ಮಾಡಿಕೊಂಡಿರುವುದು.	ಹಲವು ವರ್ಷಗಳಿಂದ ಖಾಲಿಯಿರುವ ಹುದ್ದೆಗಳನ್ನು ತುಂಬದೆ ಇರುವುದರಿಂದ ದೈನಂದಿನ ಕೆಲಸ ಕಾರ್ಯಗಳನ್ನು ಮಾಡಲು ದಿನಗೂಲಿ/ಗುತ್ತಿಗೆ ಆಧಾರ/ಸಂಚಿತ ವೇತನದ ಆಧಾರದ ಮೇಲೆ ನೇಮಿಸಿಕೊಂಡು ದೈನಂದಿನ ಕೆಲಸ ಕಾರ್ಯಗಳನ್ನು ಮಾಡಿರುತ್ತದೆ. ಕಂಡಿಕೆ (24)ರಲ್ಲಿ ಆಕ್ಷೇಪಣೆಗೆ ವಿವರ ಒದಗಿಸಲಾಗಿದೆ.	81–82
➢ ಸರ್ಕಾರದ ನಿರ್ದೇಶನಗಳನ್ನು ಪಾಲಿಸದೆ ನಿವೃತ್ತ ಸರ್ಕಾರಿ/ವಿ.ವಿ.ಅಧಿಕಾರಿಗಳ ಮರುನೇಮಕಾತಿ ಮಾಡಿಕೊಂಡು ವೇತನ ಪಾವತಿಸಿರುವುದು.	ಹಲವು ವರ್ಷಗಳಿಂದ ಖಾಲಿಯಿರುವ ಹುದ್ದೆಗಳನ್ನು ತುಂಬದೆ ಇರುವುದರಿಂದ ದೈನಂದಿನ ಕೆಲಸ ಕಾರ್ಯಗಳನ್ನು ಮಾಡಲು ನಿವೃತ್ತಿ ನೌಕರರನ್ನು ನೇಮಿಸಿಕೊಂಡು ದೈನಂದಿನ ಕೆಲಸ ಕಾರ್ಯಗಳನ್ನು ಮಾಡಿರುತ್ತದೆ. ಕಂಡಿಕೆ (10)ರಲ್ಲಿ ವಿವರಣೆ ನೀಡಲಾಗಿದೆ.	61–64
➢ ಸರಕು ಮತ್ತು ಸೇವೆಗಳು ಸಂಗ್ರಹಣೆಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರ ನಿಯಮಗಳನ್ನು ಮತ್ತು ಖರೀದಿ ನಿಯಮಗಳನ್ನು ಪಾಲಿಸದಿರುವುದು.	ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ನಿಯಮಗಳನ್ನು ಪಾಲಿಸಲಾಗುತ್ತಿದೆ. **ಕಂಡಿಕೆ 29 & 30**ರಲ್ಲಿ ಉತ್ತರಗಳನ್ನು ಸಲ್ಲಿಸಿರುತ್ತದೆ.	92–108 108–117
➢ ಎನ್.ಡಿ.ಸಿ ಬಿಲ್ಲು ಸಲ್ಲಿಸಿರುವ ಸಂಕ್ಷಿಪ್ತ ಸಾದಿಲ್ವಾರು ಮುಂಗಡಗಳ ಲೆಕ್ಕಗಳನ್ನು ಈಂಖಾಲ್ಲಿ ಹೊಂದಾಣಿಕೆ ಮಾಡದಿರುವುದು ಮತ್ತು ಚಾಲ್ತಿ ಆಸ್ತಿಗಳೆಂದು ಹಣಕಾಸು ಲೆಕ್ಕಪತ್ರದಲ್ಲಿ ತೋರಿಸಿರುವುದು ಹಾಗೂ ಸದರಿ ಬಿಲ್ಲುಗಳಲ್ಲಿ ನಿಯಮಗಳ ಉಲ್ಲಂಘನೆ ಪುನರಾವರ್ತನೆಗೊಂಡಿರುವುದು.	2016–17 ನೇ ಸಾಲಿನ ಅಂತ್ಯಕ್ಕೆ ತೀರುವಳಿಯಾಗದೇ ಬಾಕಿ ಉಳಿದಿದ್ದ ರೂ.3,41,70,000.00 ಗಳ ತೀರುವಳಿಗೆ ಆದ್ಯತೆ ಮೇಲೆ ಕ್ರಮ ಕೈಗೊಳ್ಳುತ್ತಿದ್ದು 2017–18ನೇ ಸಾಲಿನ ವರ್ಷಾಂತ್ಯಕ್ಕೆ ಪ್ರಸಕ್ತ ಸಾಲಿನಲ್ಲಿ ಮಂಜೂರಾಗಿರುವ ಎ.ಸಿ ಬಿಲ್ಲು ಮುಂಗಡವು ರೂ.11,19,86,000/– ಗಳ ಮೊತ್ತವಾಗಿರುತ್ತದೆ. ಎ.ಸಿ. ಬಿಲ್ ಎನ್‌ಡಿಸಿ ಬಿಲ್‌ಗೆ ಸಂಬಂಧಿಸಿದಂತೆ ಕಂಡಿಕೆ 1.3, 100 ರಿಂದ 111 ಗಳಿಗೆ ವಿವರಣೆ ಒದಗಿಸಲಾಗಿದೆ.	28 178–179 216–217
➢ ಸಮಾಲೋಚನ ಶುಲ್ಕ ಮತ್ತು ಮೌಲ್ಯಮಾಪನ ಸಂಭಾವನೆ ಹಣ ಪಾವತಿಸುವಾಗ ಆದಾಯ ತೆರಿಗೆಯನ್ನು ಕಡಿತಗೊಳಿಸದಿರುವುದು.	ಸಮಾಲೋಚನ ಶುಲ್ಕದ ಬಗ್ಗೆ ಯಾವುದೇ ಆಕ್ಷೇಪಣೆಯಿರುವುದಿಲ್ಲ. ಮೌಲ್ಯಮಾಪಕರ ಸಂಭಾವನೆಯಲ್ಲಿ ಆದಾಯ ತೆರಿಗೆಯನ್ನು ಈಗ ಕಡಿತಗೊಳಿಸಲಾಗುತ್ತಿದೆ.	
➢ ಪರಿನಿಯಮಗಳನ್ನು ರಚಿಸಿಕೊಳ್ಳದೆ ವ್ಯಾಸಂಗ ವಿಭಾಗಗಳ ಸ್ಥಾಪನೆ ಮಾಡಿರುವುದು.	ಪರಿನಿಯಮಗಳನ್ನು ರಚಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ. ಹೆಚ್ಚಿನ ಮಾಹಿತಿಯನ್ನು **ಕಂಡಿಕೆ 1.7 ಮತ್ತು ಕಂಡಿಕೆ 2**ರಲ್ಲಿ ಒದಗಿಸಿದೆ.	32–34 49–51
➢ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರ ಕಲಂ 46(3) ರನ್ವಯ ವಿಶ್ವವಿದ್ಯಾಲಯದ ನಿಧಿಯನ್ನು ವಿವಿಧ ಉದ್ದೇಶಗಳಿಗೆ ವಿನಿಯೋಗಿಸುವ ಬಗ್ಗೆ ಪರಿನಿಯಮ ರಚಿಸಿಕೊಂಡಿಲ್ಲ ದಿರುವುದು.	ಹಣಕಾಸು ಸಮಿತಿ, ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತಿನಿಂದ ಆಯವ್ಯಯಕ್ಕೆ ಅನುಮೋದನೆ ಪಡೆದು ವೆಚ್ಚಗಳನ್ನು ಭರಿಸಲಾಗುತ್ತಿದೆ.	

ಪ್ರಮುಖ ಅಂಶಗಳು	ಷರಾ / ಉತ್ತರ	ಪುಟ
➢ ಬೋಧಕರ ಮತ್ತು ಬೋಧಕೇತರ ವರ್ಗದ ಎನ್‌ಪಿಎಸ್ ಕಟಾವಣೆಯಲ್ಲಿ ಕಂಡು ಬಂದ ವ್ಯತ್ಯಾಸ.	ಈ ಬಗ್ಗೆ ಯಾವುದೇ ಆಕ್ಷೇಪಣೆಯಿರುವುದಿಲ್ಲ.	
➢ ಸಿಬ್ಬಂದಿ ಸಂಬಂಧಿತ ನಿಯಮ ಪಾಲಿಸದೆ ಮಾಡಿರುವ ವೆಚ್ಚಗಳು.	ಸಿಬ್ಬಂದಿ ಸಂಬಂಧಿತ ವೆಚ್ಚಗಳಿಗೆ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚನೆ ನೀಡಲಾಗಿದೆ.	
➢ ನಿಯಮಬಾಹಿರವಾಗಿ ಗೃಹ ಪರಿಚಾರಕ ಭತ್ಯೆ ಪಾವತಿಸಲಾದ ಬಾಬ್ತು.	ನಿಯಮಬಾಹಿರವಾಗಿ ಕೊಟ್ಟಿರುವ ಗೃಹ ಪರಿಚಾರಿಕೆ ಭತ್ಯೆಯನ್ನು ವಸೂಲಿ ಮಾಡಲು ಕ್ರಮ ಕೈಗೊಳ್ಳಲಾಗಿದೆ.	55–56
➢ ಗ್ರಂಥಾಲಯ ಸಲಹೆಗಾರರ ನೇಮಕಾತಿಯಲ್ಲಿ ಕಂಡು ಬಂದ ನ್ಯೂನ್ಯತೆ.	ಗ್ರಂಥಾಲಯ ಸಲಹೆಗಾರರ ನೇಮಕದ ಬಗ್ಗೆ ವಿವರವಾದ ಮಾಹಿತಿಯನ್ನು **ಕಂಡಿಕೆ 10**ರಲ್ಲಿ ನೀಡಿದೆ.	63–64
➢ ಅಧಿಕಾರಿಗಳ ನಿವಾಸಕ್ಕೆ ಕಛೇರಿಯಿಂದ ಗೃಹಪರಿಚಾರಕ ನೇಮಕಾತಿ ಮಾಡಿರುವ ಬಾಬ್ತು.	ಕುಲಪತಿಗಳು ತಮ್ಮ ನಿವಾಸದಿಂದಲೂ ಕಛೇರಿ ಕೆಲಸವನ್ನು ಮಾಡುತ್ತಿದ್ದುದರಿಂದ ಅಲ್ಲಿ ಗ್ರೂಪ್ ಡಿ ಸಿಬ್ಬಂದಿಯನ್ನು ನೇಮಿಸಿರುತ್ತದೆ. ಅದನ್ನು ಗೃಹಪರಿಚಾರಿಕೆಯೆಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯಪಡಲಾಗಿದೆ.	
➢ ಸ್ವೀಕೃತಿಗಳ ವಿಳಂಬ ಜಮೆ ಮತ್ತು ಏಕಕಾಲಕ್ಕೆ ಜಮೆ ಮಾಡದಿರುವುದು.	ಈ ಹಿಂದೆ ಹಲವಾರು ಸಲ ವಿವರಿಸಿರುವಂತೆ, ಪ್ರವೇಶಾನುಮೋದನೆ, ಪರೀಕ್ಷೆ, ಘಟಿಕೋತ್ಸವ ಮತ್ತು ಸಂಯೋಜನೆಯ ವೇಳೆಯಲ್ಲಿ ಏಕ ಕಾಲಕ್ಕೆ ಬಹಳಷ್ಟು ವಿದ್ಯಾರ್ಥಿಗಳು ಶುಲ್ಕ ತುಂಬುವುದರಿಂದ, ಅಂತಹ ಶುಲ್ಕಗಳ ಪಟ್ಟಿಯನ್ನು ಬ್ಯಾಂಕ್‌ವಾರು ವಿಂಗಡಿಸಿ, ಡಿ.ಡಿ.ಗಳನ್ನು ಜಮಾ ಮಾಡುವಾಗ ಆಗುತ್ತಿರುವ ವಿಳಂಬ, ಸಾರ್ವತ್ರಿಕ ರಜೆಗಳು ಮತ್ತು ಸಿಬ್ಬಂದಿಯು ಅನಿವಾರ್ಯವಾಗಿ ರಜೆ ಪಡೆಯುವುದರಿಂದ ಈ ರೀತಿ ವಿಳಂಬವಾಗಿರುತ್ತದೆ. ಇದನ್ನು ಹೊರತು ಪಡಿಸಿದರೆ ಮತ್ತೆ ವಿಳಂಬವಾಗಿರುವುದಿಲ್ಲ. ಈ ರೀತಿಯ ವಿಳಂಬವನ್ನು ತಪ್ಪಿಸಲು ಎಲ್ಲಾ ಜಮೆಗಳನ್ನು ಆನ್‌ಲೈನ್ ಮೂಲಕ ಪಡೆಯಲು ದಿನಾಂಕ: 01.04.2019 ರಿಂದ ಜಾರಿಗೊಳಿಸಲಾಗಿದೆ. ಕಂಡಿಕೆ 56, 58ರಲ್ಲಿ ವಿವರಣೆ ನೀಡಲಾಗಿದೆ.	143–144

ಬೆಂಗಳೂರು ವಿಶ್ವವಿದ್ಯಾಲಯದ 2015–16 ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡುಬಂದ

ಕ್ರ. ಸಂ	ಕಂಡಿಕೆ	ವಿವರ	ಆಕ್ಷೇಪಣೆ ಮೊತ್ತ (ರೂ.ಗಳಲ್ಲಿ)	ವಸೂಲಾತಿ (ಲಕ್ಷ ರೂ.ಗಳಲ್ಲಿ)	ಪುಟ ಸಂಖ್ಯೆ
ಪರಿನಿಯಮ ರಚಿಸಿ ಕೊಳ್ಳದೆ/ನಿಯಮಗಳನ್ನು ಪಾಲಿಸದೆ ಭರಿಸಿರುವ ವೆಚ್ಚಗಳು.					
1	2	ಪರಿನಿಯಮಗಳ ಮೂಲಕ ಸ್ಥಾಪನೆಯಾಗದ ವ್ಯಾಸಂಗ ವಿಭಾಗಗಳಿಗೆ ಭರಿಸಿರುವ ವೆಚ್ಚಗಳು.	4,13,51,00,000.00		49–51
2	3	ಪ್ರಯಾಣ ಭತ್ಯೆ ಪಾವತಿಸಿರುವ ಮೊತ್ತ		59,830.00	51–52
3	4	ಕಛೇರಿ ಅವಧಿ ನಂತರ ಕಾರ್ಯ ನಿರ್ವಹಿಸಿರುವುದಕ್ಕೆ ಸಂಭಾವನೆ ನೀಡಿರುವುದು		2,95,872.00	52–54
4	5	ಮೊಬೈಲ್ ದೂರವಾಣಿ ವೆಚ್ಚ ಮರುಪಾವತಿಸದಿರುವುದು.		41,600.00	54–55
5	6	ಗೃಹ ಪರಿಚಾರಿಕ ಭತ್ಯೆ ನೀಡಿರುವುದು		1,53,100.00	55–56
6	6(1)	ಅಧಿಕೃತ ಸಂಸ್ಥೆಯಾಗಿರದ ಮೆ॥ ಆರಾಧ್ಯ ಸಂಸ್ಥೆಗೆ ಪಾವತಿಸಿರುವುದು	71,275.00	8,809.00	56
7	6(2)	ಪಿ.ಎಫ್. ಪೆನಾಲ್ಟಿ ದಂಡ ಪಾವತಿಸಿರುವುದು		78,466.00	56–57
8	7	ಅತಿಥಿ ಉಪನ್ಯಾಸಕರಿಗೆ ಪಾವತಿಸಿರುವ ಸಂಭಾವನೆ ಹಾಗೂ ಖಾಯಂ ಉಪನ್ಯಾಸಕರು ಅತಿಥಿ ಉಪನ್ಯಾಸ ಮಾಡಿ ಸಂಭಾವನೆ ಪಡೆದಿರುವುದು		14,94,184.00	57–58
9	8	ಕಾನೂನು ವಿಭಾಗದ ಸಿಬ್ಬಂದಿಯವರಿಗೆ ಹೆಚ್ಚುವರಿ ಕಾರ್ಯಗಳಿಗಾಗಿ ವಾಹನ ಭತ್ಯೆ ಮಂಜೂರು ಮಾಡಿರುವುದು	67,562.00		58–59
10	9	ಹಣಕಾಸು ವಿಭಾಗದ ಸಿಬ್ಬಂದಿ ವರ್ಗದವರಿಗೆ ಆಯಾವ್ಯಯ ಅಂದಾಜು ತಯಾರಿಸಲು ಹೆಚ್ಚುವರಿ ಪಾವತಿ		11,77,266.00	59–61
11	10	ನಿವೃತ್ತಿ ಹೊಂದಿದ ನೌಕರರನ್ನು ಪುನರ್ ನೇಮಕಾತಿ ಮಾಡಿರುವುದು	13,10,735.00		61–64
12	11	ಉಪಕುಲಪತಿಗಳು ಹಾಗೂ ಕುಲಸಚಿವರ ಆಪ್ತ ಶಾಖೆಗೆ ಹೆಚ್ಚುವರಿ ಸಾರಿಗೆ ಭತ್ಯೆ ಮತ್ತು ಸ್ಥಳೀಯ ವಿಚಾರಣೆ ಸಮಿತಿಗೆ ಹೆಚ್ಚುವರಿ ಸಂಭಾವನೆಯನ್ನು ಪಾವತಿಸಿರುವುದು		5,73,691.00	64–68
13	12	ಮಂಜೂರಾಗದ ಹುದ್ದೆಗೆ ಎದುರಾಗಿ ನೇಮಕಾತಿ ಮಾಡಿ ಪಾವತಿಸಿರುವುದು	7,02,982.00		68–69
14	13	ಹೆಚ್ಚುವರಿ ದಿನಭತ್ಯೆ ಪಾವತಿಸಿರುವುದು		5,85,029.00	69–71
15	14	ಎಕ್ಸ್‌ಪರ್ಟ್ ಕಮಿಟಿ ಮೀಟಿಂಗ್ ಬಿ.ಒ.ಎ ಮೀಟಿಂಗ್‌ನಲ್ಲಿ ಭಾಗವಹಿಸಿರದ ಅಧಿಕಾರಿಗಳಿಗೆ ಪರಿನಿಯಮಗಳನ್ನು ರಚಿಸಿಕೊಳ್ಳದೆ ಪಾವತಿಸಲಾದ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆ	1,78,810.00		71

ಕ್ರ. ಸಂ	ಕಂಡಿಕೆ	ವಿವರ	ಆಕ್ಷೇಪಣೆ ಮೊತ್ತ (ರೂ.ಗಳಲ್ಲಿ)	ವಸೂಲಾತಿ (ಲಕ್ಷ ರೂ.ಗಳಲ್ಲಿ)	ಪುಟ ಸಂಖ್ಯೆ
16	15	ಪರೀಕ್ಷಾ ಮೌಲ್ಯಮಾಪಕರುಗಳಿಗೆ ಒಂದೇ ದಿನದಲ್ಲಿ ಎರಡು ಬಾರಿ ಸಂಭಾವನೆ ಪಾವತಿಸಿರುವುದು		7,920.00	71–73
17	16	ಪರೀಕ್ಷಾ ಕಾರ್ಯ, ಮೌಲ್ಯಮಾಪನ, ದತ್ತಾಂಶಗಳ ಸಂಯೋಜನೆ ಹಾಗೂ ಇತರೆ ಸೇವೆಗಳ ಸಲುವಾಗಿ ಪಾವತಿಸಲಾದ ಸಂಭಾವನೆ ಹಾಗೂ ಡಿ.ಎ ಪಾವತಿಸಿರುವುದು	1,64,72,536.00	5,86,42,321.00	73–74
18	17	1. ಭೂಗೋಳಶಾಸ್ತ್ರ ವಿಭಾಗದ ಅತಿಥಿ ಉಪನ್ಯಾಸಕರ ನೇಮಕಾತಿ ಮಾಡಿ ಪಾವತಿಸಿರುವುದು 2. ಭೂಗರ್ಭಶಾಸ್ತ್ರ ವಿಭಾಗದಲ್ಲಿ ಅತಿಥಿ ಉಪನ್ಯಾಸಕರ ನೇಮಕಾತಿ ಮಾಡಿ ಪಾವತಿಸಿರುವುದು.	21,35,489.00 4,29,850.00		74–76
19	18	ವಾಣಿಜ್ಯ ವಿಭಾಗದ ಅತಿಥಿ ಉಪನ್ಯಾಸಕ ನೇಮಕಾತಿ ಮಾಡಿ ಪಾವತಿಸಿರುವುದು	62,42,444.00		76–77
20	19	ಹೊರಗಿನ ಸಂಸ್ಥೆಗಳಿಂದ ಡಿ.ಡಿ.ಪಿ ಕಾರ್ಯಗಳನ್ನು ಮಾಡಿಸಿರುವುದು	2,23,175.00		77–78
21	20	ಸಿಬ್ಬಂದಿಗಳಿಗೆ ಉಪಾಹಾರ ಭತ್ಯೆ ಪಾವತಿಸಿರುವುದು	2,35,550.00		78–79
22	21	ಗ್ಲಾಸ್ ಕ್ಲಿನಿಂಗ್‌ಗೆ ಸಂಬಂಧಿಸಿದ ಮಾಹಿತಿ ಹಾಗೂ ಯು.ಜಿ.ಸಿ. ಪರೀಕ್ಷಾ ವೆಚ್ಚದ ಮಾಹಿತಿ ಲಭ್ಯವಿಲ್ಲದಿರುವುದು		44,240.00	79–80
23	22	ಡಿ.ಸಿ.ಸಿ ವಿಭಾಗದಲ್ಲಿ ನಗದು ಪುಸ್ತಕ ನಿರ್ವಹಿಸಿರುವ ಬಗ್ಗೆ	171,62,000.00		80–81
24	23	ವಿಶ್ವವಿದ್ಯಾಲಯದ ನೌಕರರ ಮಕ್ಕಳಿಗೆ ಪ್ರವೇಶ ಶುಲ್ಕದಲ್ಲಿ ವಿನಾಯಿತಿ ನೀಡಿರುವುದು		80,000.00	81
25	24	ಮಂಜೂರಾತಿ ಆದೇಶ ನೀಡದೆ ಪರೀಕ್ಷ ವಿಭಾಗಕ್ಕೆ ಹೊರಗುತ್ತಿಗೆ ಆಧಾರದಲ್ಲಿ ಸಿಬ್ಬಂದಿಯನ್ನು ನೇಮಿಸಿಕೊಂಡು ಪಾವತಿಸಿರುವುದು	48,48,514.00		81–82
26	25	ಪರೀಕ್ಷಾ ಕಾರ್ಯದ ಸಲುವಾಗಿ ಅವಶ್ಯಕತೆಗಿಂತ ಹೆಚ್ಚುವರಿ ಮೌಲ್ಯಮಾಪಕರು/ ದಿನಗೂಲಿ ನೌಕರರನ್ನು ನೇಮಿಸಿಕೊಂಡು ಹೆಚ್ಚುವರಿಯಾಗಿ ಪಾವತಿಸಿರುವುದು	1,25,000.00	1,42,250.00	83–87
27	26	ಅಂತರ್ ವಿಶ್ವವಿದ್ಯಾಲಯ ಕ್ರೀಡಾ ಕೂಟದಲ್ಲಿ ಭಾಗವಹಿಸಲು ಹೋಗಿಬಂದ ಮ್ಯಾನೇಜರ್/ ಕೋಚ್‌ಗಳಿಗೆ ಕ್ರೀಡಾಪಾಲಿಸಿ ನಿಯಮಗಳಲ್ಲಿ ಅವಕಾಶ ಮಾಡಿಕೊಳ್ಳದೆ ಹಾಗೂ 3 ಎ.ಸಿ ಪ್ರಥಮ ದರ್ಜೆ ರೈಲು ಪ್ರಯಾಣ ಮಾಡದೆ ಸದರಿ ಪ್ರಯಾಣಕ್ಕೆ ದರ ಪಡೆದಿರುವುದು		1,34,615.00	88–89
28	27	ಕ್ರೀಡಾ ತೀರ್ಪುಗಾರರಿಗೆ ತುಟ್ಟಿ ಭತ್ಯೆ, ದಿನಭತ್ಯೆ ಪಾವತಿಸಿರುವುದು	8,82,501.00		89–90

ಕ್ರ. ಸಂ	ಕಂಡಿಕೆ	ವಿವರ	ಆಕ್ಷೇಪಣೆ ಮೊತ್ತ (ರೂ.ಗಳಲ್ಲಿ)	ವಸೂಲಾತಿ (ಲಕ್ಷ ರೂ.ಗಳಲ್ಲಿ)	ಪುಟ ಸಂಖ್ಯೆ
29	28	ಕ್ರೀಡಾ ಮ್ಯಾನೇಜರ್ ಮತ್ತು ಕೋಚ್‌ಗಳಿಗೆ ದಿನ ಭತ್ಯೆ, ಪ್ರಯಾಣ ಭತ್ಯೆ ಪಾವತಿಸಿರುವುದು	3,33,180.00		90–91
		ಸರಕು ಮತ್ತು ಸೇವೆಗಳ ಸಂಗ್ರಹಣೆಯಲ್ಲಿ ಕರ್ನಾಟಕ ಪಾರದರ್ಶಕ ನಿಯಮಗಳನ್ನು ಉಲ್ಲಂಘಿಸಿರುವ ಬಾಬ್ತು.			
30	29	ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ಹಾಗೂ 2000 ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಖರೀದಿ ನಿಯಮಗಳು 2003 ರನ್ನು ಉಲ್ಲಂಘಿಸಿ ಸರಕು ಮತ್ತು ಸೇವೆಗಳ ಸಂಗ್ರಹಣೆ ಪಡೆದು ಪಾವತಿಸಿರುವ ವೆಚ್ಚ.	7,31,81,864.00	10,09,083.00	92–107
31	30	ಬೆಂಗಳೂರು ವಿ.ವಿ ಯ ಖರೀದಿ ನಿಯಮ ಉಲ್ಲಂಘನೆ	12,81,100.00		109–117
		ಅಧಿಕಾರಿ/ಸಿಬ್ಬಂದಿಗಳ ನಿರ್ಲಕ್ಷತೆಯಿಂದ ಉಂಟಾದ ನಷ್ಟದ ಪ್ರಕರಣಗಳು.			
32	31	ಮೆ॥ ನಿಸರ್ಗ ಲಿಸರ್ಸ್ ಮತ್ತು ಟ್ರಾವೆಟ್ಸ್ ಲಿ. ಇವರಿಗೆ ಪಾವತಿಸಲಾದ ವಾಹನಗಳ ಬಾಡಿಗೆ ಮೊತ್ತ ಹಾಗೂ ರಿಸ್ಕ್ & ಕಾಸ್ಟ್ ವ್ಯತ್ಯಾಸ		2,52,834.00	118–119
33	32	ಭೂಗೋಳಶಾಸ್ತ್ರ ವಿಭಾಗದಲ್ಲಿ 2006–07 ರಿಂದ 2016–17ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಪ್ರವೇಶ ಶುಲ್ಕದ ಮರುಭರಣ		5,65,320.00	119
34	33	ಸಿ.ಬಿ.ಎಸ್.ಎಂ. ವಿಭಾಗದ 2013–14 ರಿಂದ 2015–16 ನೇ ಸಾಲಿನವರೆಗಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ಮತ್ತು ಪ್ರವೇಶ ಶುಲ್ಕದ ವಿನಾಯಿತಿ ಮೊತ್ತವನ್ನು ಮರುಭರಣ ಮಾಡಿಕೊಳ್ಳುವುದು		14,71,665.00	119–120
35	34	ಭೂಗರ್ಭಶಾಸ್ತ್ರ ವಿಭಾಗದಲ್ಲಿ 2006–07 ರಿಂದ 2016–17ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಪ್ರವೇಶ ಶುಲ್ಕದ ಮರುಭರಣ		3,55,430.00	121
36	35	ತಾಂತ್ರಿಕ ಶಿಕ್ಷಣ ಪರೀಕ್ಷ ಶುಲ್ಕದ ಮರುಭರಣ ಮೊತ್ತ		33,80,717.00	121–122
37	36	ನಿಯಂತಕಾಲಿಕೆಗಳ ಸರಬರಾಜು ಆಗದಿರುವುದು		3,10,690.00	122–123
38	37	ಜೆರಾಕ್ಸ್ ಜಾಗಕ್ಕೆ ಕಡಿಮೆ ಬಾಡಿಗೆ ಪಡೆದಿರುವುದು		40,100.00	123
39	38	ಪುಸ್ತಕ ದಾಸ್ತಾನುವಹಿಯಲ್ಲಿ ಕಡಿಮೆ ಲೆಕ್ಕ ತೋರಿಸಿರುವುದು		3,615.00	123–125
40	39	2014–15ನೇ ಸಾಲಿನಲ್ಲಿ ತೋರಿಸಿದ್ದ	5,332.00	4,292.00	125

ಕ್ರ. ಸಂ	ಕಂಡಿಕೆ	ವಿವರ	ಆಕ್ಷೇಪಣೆ ಮೊತ್ತ (ರೂ.ಗಳಲ್ಲಿ)	ವಸೂಲಾತಿ (ಲಕ್ಷ ರೂ.ಗಳಲ್ಲಿ)	ಪುಟ ಸಂಖ್ಯೆ
		ವೆಚ್ಚವನ್ನು 2015–16ನೇ ಸಾಲಿನಲ್ಲಿ ತೋರಿಸಿರುವುದು ಹಾಗೂ ದಾಸ್ತಾನಿಗೆ ತೆಗೆದುಕೊಳ್ಳದಿರುವುದು			
41	40	ಅಂಕಪಟ್ಟಿ ಮುದ್ರಣದಲ್ಲಿ ನಿರ್ಲಕ್ಷತೆಯಿಂದಾಗಿ ರದ್ದುಪಡಿಸಲಾದ 5386 ಅಂಕಪಟ್ಟಿಗಳು		10,341.00	126–127
42	41	ಪರೀಕ್ಷಾ ಮುಖ್ಯ ಸ್ಕ್ವಾಡ್‌ಗಳು, ಫ್ಲೇಯಿಂಗ್ ಸ್ಕ್ವಾಡ್‌ಗಳು ಪರೀಕ್ಷಾ ಕೇಂದ್ರಗಳಿಗೆ ಹೋಗಿಬಂದ ಬಾಡಿಗೆ ವಾಹನಕ್ಕೆ ಹೆಚ್ಚುವರಿಯಾಗಿ ಪಾವತಿಸಿರುವುದು		1,100.00	127
ವಿ.ವಿ ನಿಧಿಗೆ ಜಮೆಯಾಗದಿರುವ ಸ್ವೀಕೃತಿಗಳು/ವಿಳಂಬ ಜಮೆ					
43	42	ಎನ್.ಎಸ್.ಎಸ್. ಭವನದ ಬಾಡಿಗೆಯನ್ನು ಕಡಿಮೆ ವಸೂಲಿಸಿರುವುದು		78,000.00	127–129
44	43	ವಿ.ವಿ ಆವರಣ ಹಾಗೂ ಕ್ಯಾಂಪಸ್ ಬಿಲ್ಡಿಂಗ್ ಆವರಣದಲ್ಲಿನ ಭೂಮಿ ಹಾಗೂ ಕಟ್ಟಡಗಳನ್ನು ಬೋಗ್ಯದ ಆಧಾರದ ಮೇಲೆ ನೀಡಿರುವುದಕ್ಕೆ ರಾಜಸ್ವ ವಸೂಲಾತಿ ಮೊತ್ತ		5,64,811.00	129–131
45	44	ಬೆಂಗಳೂರು ವಿ.ವಿ ಹಾಗೂ ಸಿಟಿ ಕ್ಯಾಂಪಸ್ ಆವರಣದಲ್ಲಿನ ಭೂಮಿ ಹಾಗೂ ಕಟ್ಟಡದ ಭೋಗ್ಯ ಮತ್ತು ಬಾಡಿಗೆಯ ವಸೂಲಾತಿ ಮೊತ್ತ		9,21,600.00	132–133
46	45	ಜ್ಞಾನಭಾರತಿ ಆರವಣದ ಹಾಗೂ ಸೆಂಟ್ರಲ್ ಕಾಲೇಜು ಆವರಣದ ಕ್ಯಾಂಟಿನ್ ಬಾಡಿಗೆ ಬೆಂಗಳೂರು		1,22,700.00	133–134
47	46	ಬೆಂಗಳೂರು ವಿ.ವಿ ಆಡಳಿತ ಕಛೇರಿ ಆವರಣದ ಹಿಂಭಾಗದ ಉಪಾಹಾರ ಮಂದಿರದ ಬಾಡಿಗೆ ಹಣ ವಸೂಲಾತಿ ಮಾಡಬೇಕಿರುವುದು		1,98,000.00	135–136
48	47	ನಿಯಮಬಾಹಿರ ವಸತಿ ಗೃಹ ಹಂಚಿಕೆ ಹಾಗೂ ವಸತಿ ಗೃಹಗಳ ಬಾಡಿಗೆಗಳ ವಸೂಲಾತಿ ಮೊತ್ತ		16,57,520.00	136
49	48	2015–16ನೇ ಸಾಲಿನ ವಿದ್ಯಾ ಕಾರ್ಯ ಶಾಖೆ–1 ರಲ್ಲಿನ ಬರುವಂತಹ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಪ್ರವೇಶ ಶುಲ್ಕಗಳನ್ನು ಪರಿಶೀಲಿಸಿದಾಗ ಕಂಡುಬಂದ ನ್ಯೂನತೆಗಳು	7,14,68,050.00	16,64,804.00	137–138
50	49	2015–16ನೇ ಸಾಲಿನ ಶೈಕ್ಷಣಿಕ ವರ್ಷದ ಬಿ.ಎಡ್ ಪ್ರವೇಶಾತಿ ಸಂಬಂಧಿಸಿದಂತೆ ದಂಡಶುಲ್ಕ ವಸೂಲಿಸ ಬೇಕಿರುವುದು		30,530.00	138–139
51	50	ಪ್ರವೇಶ ಶುಲ್ಕದ ನಷ್ಟದ ಮೊಬಲಗು	13,32,132.00	48,780.00	139–140

ಕ್ರ. ಸಂ	ಕಂಡಿಕೆ	ವಿವರ	ಆಕ್ಷೇಪಣೆ ಮೊತ್ತ (ರೂ.ಗಳಲ್ಲಿ)	ವಸೂಲಾತಿ (ಲಕ್ಷ ರೂ.ಗಳಲ್ಲಿ)	ಪುಟ ಸಂಖ್ಯೆ
52	51	ಬೆಂಗಳೂರು ವಿಶ್ವವಿದ್ಯಾಲಯವು ಮೈಸೂರು ಪೇಪರ್ ಮಿಲ್ಸ್ ಸಂಸ್ಥೆಯಲ್ಲಿ 3.00 ಲಕ್ಷವನ್ನು ಠೇವಣಿ ಇಟ್ಟಿರುವ ಬಗ್ಗೆ		1,51,416.00	140–141
53	52	ಅಂಚೆ ತೆರಪು ಮತ್ತು ದೂರ ಶಿಕ್ಷಣ ನಿರ್ದೇಶನಾಲಯ ವಿಭಾಗದ 2015–16ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ವಿದ್ಯಾರ್ಥಿ ವೇತನಕ್ಕೆ ಸಂಬಂಧಿಸಿದ ವಿವರ ಪರಿಶೀಲನೆಗೆ ಒದಗಿಸದಿರುವುದು	4,15,495.00		141–142
54	53	ಬ್ಯಾಂಕ್ ವಹಿವಾಟಿನಲ್ಲಿ ಸ್ವೀಕೃತಿಸಿದ ಬಡ್ಡಿ ಹಣವನ್ನು ವಿ.ವಿ ಖಾತೆಗೆ ವರ್ಗಾಹಿಸುವ ಬಗ್ಗೆ	7,37,616.00		142
55	54	ನೊಂದಣಿ ಶುಲ್ಕ ಕಡಿಮೆ ವಸೂಲಿ ಮಾಡಿರುವುದು		1,300.00	142
56	55	ಪರೀಕ್ಷಾ ಶುಲ್ಕ ರಿಯಾಯಿತಿ ಮೊತ್ತ		30,22,520.00	143
57	56	ಪರೀಕ್ಷಾ ಶುಲ್ಕವನ್ನು ವಿ.ವಿಗೆ ವಿಳಂಬವಾಗಿ ಸಲ್ಲಿಸಿರುವ ಕಾಲೇಜುಗಳಿಂದ ವಸೂಲಿಸಿರುವುದು		5,20,000.00	143–144
58	57	ಪರೀಕ್ಷಾ ಶುಲ್ಕವನ್ನು ನಿಗದಿತ ದಿನಾಂಕ ನಂತರ ಪಾವತಿಸಿರುವ ಕಾಲೇಜುಗಳಿಂದ		3,00,000.00	144
59	58	ಪಿ.ಜಿ ಪರೀಕ್ಷಾ ಶುಲ್ಕ ವಿಳಂಬ ಜಮೆ		87,000.00	144–145
60	59	ಪಿ.ಜಿ. ಮರು ಮೌಲ್ಯಮಾಪನ ಹಾಗೂ ಉತ್ತರ ಪತ್ರಿಕೆ ನಕಲು ಪ್ರತಿಯ ಮೊತ್ತ		1,14,000.00	145
61	60	ಪಿಹೆಚ್.ಡಿ. ಸಂಶೋಧನಾರ್ಥಿಗಳಿಂದ ಬಾಕಿಯಿರುವ ಶುಲ್ಕ		4,05,211.00	146
62	61	ಯುಜಿ ಹಾಗೂ ಪಿಜಿ ಪದವಿ ನಕಲು ಅಂಕಪಟ್ಟಿ/ಪ್ರಮಾಣ ಪತ್ರ, ಅಂಕಪಟ್ಟಿಗಳ ತಿದ್ದುಪಡಿ ಹಾಗೂ ಇತರೆ ಸ್ವೀಕೃತಿ ಶುಲ್ಕ	20,82,861.00		146–147
63	62	ವಿಶ್ವವಿದ್ಯಾಲಯದ 50ನೇ ಕಿರು ಘಟಿಕೋತ್ಸವ ಹಾಗೂ 51ನೇ ವಾರ್ಷಿಕ ಘಟಿಕೋತ್ಸವದ Short collection of fee ಹಾಗೂ Penal fee		55,415.00	147–148
ಹಣಕಾಸಿನ ಇತರೆ ನ್ಯೂನತೆಗಳು					
64	63	ಎನ್.ಎಸ್.ಎಸ್. ವಿಭಾಗದ ಲೆಕ್ಕಪರಿಶೋಧನೆಯಲ್ಲಿ ಸಾದಿಲ್ವಾರು ಬಿಲ್ಲುಗಳ ಬಗ್ಗೆ ನ್ಯೂನತೆಗಳು	41,750.00		148–149
65	64	ರಾಷ್ಟ್ರೀಯ ಸೇವಾ ಯೋಜನೆ ದೈನಂದಿನ ಹಾಗೂ ವಿಶೇಷ ಶಿಬಿರಗಳಿಗೆ ಸಂಬಂಧಿಸಿದಂತೆ ಬಿಡುಗಡೆ ಅನುದಾನಕ್ಕೆ ಸಂಬಂಧಿಸಿ	38,72,140.00	5,000.00	149–150

ಕ್ರ. ಸಂ	ಕಂಡಿಕೆ	ವಿವರ	ಆಕ್ಷೇಪಣೆ ಮೊತ್ತ (ರೂ.ಗಳಲ್ಲಿ)	ವಸೂಲಾತಿ (ಲಕ್ಷ ರೂ.ಗಳಲ್ಲಿ)	ಪುಟ ಸಂಖ್ಯೆ
66	65	12ನೇ ಯೋಜನೆಯಡಿಯಲ್ಲಿ ಬಿಡುಗಡೆಯಾದ 8.50 ಕೋಟಿ ಅನುದಾನದ ಬಳಕೆಯ ಬಗ್ಗೆ ಹಾಗೂ ಹೆಚ್ಚುವರಿ ವೆಚ್ಚ	12,83,304.00		150–153
67	66	ಇಂಪ್ರೆಸ್ಟ್ ಅಕೌಂಟ್ ವಸೂಲಾತಿ ಮೊತ್ತ		18,041.00	154
68	67	ಲೆಕ್ಕಶೀರ್ಷಿಕೆ ವೆಚ್ಚ ಹಾಗೂ ವಾರ್ಷಿಕ ಲೆಕ್ಕಗಳ ವ್ಯತ್ಯಾಸದ ಮೊತ್ತ	23,63,919.00		154
69	68	ಭೂಗೋಳ ಶಾಸ್ತ್ರ ವಿಭಾಗದ ಕಛೇರಿ ಕೈ ಮುಂಗಡದ ಪರಿಶೀಲನೆಯ ನ್ಯೂನತೆಗಳು	68,740.00		154–157
70	69	ಪ್ರಯೋಗಾಲಯದ ಉಪಕರಣಗಳ ದಾಸ್ತಾನು ವಹಿ ಪರಿಶೀಲನೆ	4,91,590.00		155–156
71	70	ಯು.ಜಿ.ಸಿ ಅನುದಾನದ ಅಡಿ Special Assistance Programme (SAP) ಕೈಗೊಂಡಿರುವ ಬಗ್ಗೆ	12,25,639.00		156–157
72	71	ಜೆರಾಕ್ಸ್ ಜಾಗ ಬಾಡಿಗೆ,ಬಾಡಿಗೆ ನಿಯಂತ್ರಣ ಸಂಸ್ಥೆಯಿಂದನಿರ್ಧಾರವಾಗದಿರುವುದು	1,05,500.00		157
73	72	ಲ್ಯಾಮಿನೇಷನ್ ಯಂತ್ರ ಉಪಯೋಗ ಆಗದಿರುವುದು	12,366.00		157–158
74	73	2014–15 ಹಾಗೂ 2016–17ನೇ ಸಾಲಿನ ಗ್ರಂಥಾಲಯ ವಿಭಾಗದ ಲೆಕ್ಕಪರಿಶೋಧನೆಯಲ್ಲಿ ಇನ್‌ವಾಯ್ಸ್ ಬಿಲ್ ಪಾವತಿ ಬಗ್ಗೆ	27,31,502.00		158–159
75	74	ಕರ್ನಾಟಕ ಸ್ಟೇಟ್ ವೇರ್ ಹೌಸಿಂಗ್ ಕಾರ್ಪೋರೇಷ್ ರವರಿಂದ ಕೀಟ ನಾಶಕ ಔಷಧ ಖರೀದಿಸಿರುವುದು	1,42,200.00		159–161
76	75	ಸಿ.ಬಿ.ಎಸ್.ಎಂ.ಎಸ್ ವಿಭಾಗದಲ್ಲಿ ನಗದು ಪುಸ್ತಕ ಪರಿಶೀಲನಾ ನ್ಯೂನತೆಗಳು	1,93,498.00	4,570.00	161–162
77	76	ಸಿ.ಬಿ.ಎಸ್.ಎಂ. ವಿಭಾಗದ ಕಛೇರಿ ಮುಂಗಡದಲ್ಲಿ ಕಂಡು ಬಂದ ನ್ಯೂನತೆಗಳು	6,807.00		162
78	77	ಪ್ರಸಾರಂಗ ವಿಭಾಗದಲ್ಲಿ 2014–15 ಮತ್ತು 2015–16ನೇ ಸಾಲಿನ ಜಿ.ಎಲ್ ನಲ್ಲಿ ದಾಖಲಿಸದಿರುವುದು	1,17,316.00		162–163
79	78	ಮೈಸೂರು ಪೇಪರ್ ಮಿಲ್ಸ್ ಲಿ. ಭದ್ರಾವತಿ ಇವರಿಂದ ಕಾಗದ ಖರೀದಿಸಿರುವುದು ಹಾಗೂ ಮುದ್ರಣ ಕಾಗದ ಸ್ವೀಕರಿಸಿರುವ	30,73,503.00		163
80	79	ಭೂಗರ್ಭ ಶಾಸ್ತ್ರ ವಿಭಾಗದಲ್ಲಿ ನಗದು ಪುಸ್ತಕ, ಬ್ಯಾಂಕ್ ಪಾಸ್ ಪುಸ್ತಕದ ನ್ಯೂನತೆಗಳು	6,27,448.00	7,920.00	165

ಕ್ರ. ಸಂ	ಕಂಡಿಕೆ	ವಿವರ	ಆಕ್ಷೇಪಣೆ ಮೊತ್ತ (ರೂ.ಗಳಲ್ಲಿ)	ವಸೂಲಾತಿ (ಲಕ್ಷ ರೂ.ಗಳಲ್ಲಿ)	ಪುಟ ಸಂಖ್ಯೆ
81	80	ಮಹಿಳಾ ಅಧ್ಯಯನ ವಿಭಾಗದಲ್ಲಿ ಕಛೇರಿ ಕೈ ಮುಂಗಡ ಹಣದ ಬಗ್ಗೆ	29,030.00		165
82	81	ಮಹಿಳಾ ಅಧ್ಯಯನ ವಿಭಾಗದ ಗ್ರಂಥಾಲಯ ಸಂಬಂಧಿಸಿದ ವಿಭಾಗದ ದಾಸ್ತಾನು ವಹಿ ಪರಿಶೀಲನೆ	2,59,165.00		165
83	82	ಮಹಿಳಾ ಅಧ್ಯಯನ ವಿಭಾಗದ ವಿದ್ಯಾರ್ಥಿಗಳ ದಾಖಲಾತಿ ಪ್ರವೇಶದ ಬಗ್ಗೆ	14,525.00		165–166
84	83	ಕಛೇರಿ ವೆಚ್ಚಕ್ಕೆ ಸಂಬಂಧಿಸಿದ ಕಡತ ಮತ್ತು ವೋಚರ್‌ಗಳಲ್ಲಿ ಕಂಡು ಬಂದ ನ್ಯೂನತೆಗಳು	82,658.00		167
85	84	2014–15 ಹಾಗೂ 2015–16ನೇ ಸಾಲಿನ ಯು.ವಿ.ಸಿ.ಇ ಕಾಲೇಜು ವಿಭಾಗದ ಲೆಕ್ಕಪರಿಶೋಧನೆಯಲ್ಲಿ ಒ.ಬಿ.ಸಿ ಹಾಗೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮಂಜೂರಾಗಿದ್ದು, ಆರ್.ಟಿ.ಜಿ.ಎಸ್ ಮೂಲಕ ಸರ್ಕಾರದಿಂದ ಪ್ರಾಂಶುಪಾಲರ ಖಾತೆಗೆ ಜಮೆಯಾಗಿರುವ ಬಗ್ಗೆ	1,17,96,150.00		168
86	85	2014–15,2015–16ನೇ ಸಾಲಿನ ವಾರ್ಷಿಕ ವೆಚ್ಚದ ತಃಖ್ತೆಯನ್ನು ಒದಗಿಸುವ ಬಗ್ಗೆ	13,25,000.00		168
87	86	ದೈಹಿಕ ಶಿಕ್ಷಣ ನಿರ್ದೇಶನಾಲಯ ವಿಭಾಗದಲ್ಲಿ ದಾಸ್ತಾನಿಗೆ ತೆಗೆದುಕೊಂಡು ವಿತರಿಸಿರುವ ದಾಖಲೆ ಹಾಗೂ ದೃಢೀಕರಣ	2,24,288.00		168–169
88	87	ದೈಹಿಕ ಶಿಕ್ಷಣ ನಿರ್ದೇಶನಾಲಯ ವಿಭಾಗದಲ್ಲಿ ನೆಲಬಾಡಿಗೆಗೆ ಸಂಬಂಧಿಸಿದಂತೆ ಪೂರಕ ಮನವಿ ಪತ್ರ ಪಡೆಯದಿರುವುದು	2,66,750.00		169
89	88	ನಗದು ಪುಸ್ತಕ ಹಾಗೂ ಬ್ಯಾಂಕ್ ಪಾಸ್ ಪುಸ್ತಕ ಶಿಲ್ಕು ವ್ಯತ್ಯಾಸ	28,241.00		169–170
90	89	ಪರೀಕ್ಷಾ ವಿಭಾಗದ ರಹಸ್ಯ ಹಾಗೂ ಅತಿ ಮುಖ್ಯ ಲಕೋಟೆಗಳನ್ನು ತುರ್ತು ಅಂಚೆ ಮೂಲಕ ಕಳುಹಿಸಿದ ವೆಚ್ಚ	5,06,824.00		170–171
91	90	ಮುದ್ರಣಾಲಯ ವಿಭಾಗದ ಲಾಗ್ ಪುಸ್ತಕದ ನ್ಯೂನತೆಗಳು	22,090.00		171
92	91	ದಿನಬಳಕೆ ವಸ್ತುಗಳ ದಾಸ್ತಾನು ಬೇಡಿಕೆ, ಇನ್‌ವಾಯ್ಸ್ ಪರಿಶೀಲನೆ ನ್ಯೂನತೆಗಳು	15,48,741.00		171–173
93	92	ಭೂಗರ್ಭ ವಿಭಾಗದ ಯೋಜನೆಗಳ ವಿವರಗಳು	11,08,223.00		172–173

ಕ್ರ. ಸಂ	ಕಂಡಿಕೆ	ವಿವರ	ಆಕ್ಷೇಪಣೆ ಮೊತ್ತ (ರೂ.ಗಳಲ್ಲಿ)	ವಸೂಲಾತಿ (ಲಕ್ಷ ರೂ.ಗಳಲ್ಲಿ)	ಪುಟ ಸಂಖ್ಯೆ
94	93	ಯು.ಜಿ.ಸಿ ಯಿಂದ ಅನುದಾನ ನಿರೀಕ್ಷಿಸಿ ವಿ.ವಿ. ನಿಧಿಯಿಂದ ಭರಿಸಿರುವ ವೆಚ್ಚ	31,68,000.00		173–174
95	94	ಗೃಹ ಸಾಲ ಮುಂಗಡ ಕಂತುಗಳ ಕಟಾವಣೆ ಮಾಡದಿರುವುದು		70,224.00	174–175
96	95	ಕಾನೂನು ಕೋಶ ವಿಭಾಗದಲ್ಲಿ ಕೈ ಹಣದ ಖರ್ಚಿನ ಬಗ್ಗೆ	46,521.00		176
97	96	ಕಾನೂನು ಕೋಶ ವಿಭಾಗದಲ್ಲಿ ಹೊರಗುತ್ತಿಗೆ ಆಧಾರದ ನೇಮಕಾತಿ ಮಾಡಿರುವುದು	8,71,200.00		
98	97	ಕೈ ಹಣವನ್ನು ದೈನಂದಿನ ವೆಚ್ಚಕ್ಕಾಗಿ ಮಂಜೂರು ಮಾಡಿರುವ ಬಾಬ್ತು	54,157.00		177
99	98	ವಾಹನ ಭತ್ಯೆ ಮಂಜೂರು ಮಾಡಿ ಪಾವತಿಸಿರುವ ಭತ್ಯೆ	5,74,109.00		177
100	99	ಕಾನೂನು ಕೋಶ ವಿಭಾಗದ ಜರ್ನಲ್ ಖರೀದಿ ಬಗ್ಗೆ ನ್ಯೂನತೆಗಳು	1,10,025.00		178
ಎ.ಸಿ ಬಿಲ್ ಮತ್ತು ಡಿ.ಸಿ ಬಿಲ್ಲಿನಲ್ಲಿ ಕಂಡುಬಂದ ನ್ಯೂನತೆಗಳು					
101	100	ಪರೀಕ್ಷಾ ಕಾರ್ಯದ ಸಲುವಾಗಿ ಎ.ಸಿ ಬಿಲ್ಲಿನಲ್ಲಿ ಪಾವತಿಸಲಾದ ಮೊತ್ತಕ್ಕೆ ಎಸ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸದಿರುವುದು	5,08,000.00		178–179
102	101	ಭೂಗೋಳ ಶಾಸ್ತ್ರ ವಿಭಾಗದಲ್ಲಿ ಎ.ಸಿ ಬಿಲ್ಲಿನಲ್ಲಿ ಕಂಡುಬಂದ ನ್ಯೂನತಗಳು	3,25,784.00		
103	102	ಸಿ.ಬಿ.ಎಸ್.ಎಂ.ಎಸ್ ವಿಭಾಗದಲ್ಲಿ ಸಾದಿಲ್ವಾರು ವೆಚ್ಚದಲ್ಲಿ ಕಂಡುಬಂದ ನ್ಯೂನತೆಗಳು	64,000.00		
104	103	ಸಿ.ಬಿ.ಎಸ್.ಎಂ.ಎಸ್ ವಿಭಾಗದಲ್ಲಿ ಎ.ಸಿ ಬಿಲ್ಲುಗಳ ಪರಿಶೀಲನೆ ನ್ಯೂನತೆಗಳು	37,084.00		
105	104	ಸಿ.ಬಿ.ಎಸ್.ಎಂ.ಎಸ್ ವಿಭಾಗದಲ್ಲಿ 2013–14 ರಿಂದ 2015–16ನೇ ಸಾಲಿನವರೆಗೆ ಲೆಕ್ಕಪರಿಶೋಧನೆಯಲ್ಲಿ ಡಿ.ಸಿ ಬಿಲ್ಲುಗಳನ್ನು	1,45,740.00	2,013.00	
106	105	ಭೂಗರ್ಭ ಶಾಸ್ತ್ರ ವಿಭಾಗದಲ್ಲಿ ಎ.ಸಿ. ಬಿಲ್ ಹಾಗೂ ಡಿ.ಸಿ ಬಿಲ್ಲಿನ ಸಾದಿಲ್ವಾರು ವೆಚ್ಚಕ್ಕೆ ಸಂಬಂಧಿಸಿದ ಶೈಕ್ಷಣಿಕ ಪ್ರವಾಸ ಹಾಗೂ ವಾಹನ ಬಾಡಿಗೆ ವೆಚ್ಚದ ಪರಿಶೀಲನೆಯಲ್ಲಿನ ನ್ಯೂನತೆಗಳು	14,36,319.00		
107	106	ಎ.ಸಿ. ಮುಂಗಡಕ್ಕೆ ಸಂಬಂಧಿಸಿದಂತೆ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸದಿರುವುದು		1,000.00	
108	107	ಮುಂಗಡ ಪಡೆದ ಹಣಕ್ಕೆ ಎಸ್.ಡಿ.ಸಿ ಬಿಲ್ಲುಗಳನ್ನು ವಿಳಂಬವಾಗಿ ಸಲ್ಲಿಸಿರುವುದು	50,000.00		

ಕ್ರ. ಸಂ	ಕಂಡಿಕೆ	ವಿವರ	ಆಕ್ಷೇಪಣೆ ಮೊತ್ತ (ರೂ.ಗಳಲ್ಲಿ)	ವಸೂಲಾತಿ (ಲಕ್ಷ ರೂ.ಗಳಲ್ಲಿ)	ಪುಟ ಸಂಖ್ಯೆ
109	108	ವೋಚರ್ 2016–17ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಎ.ಸಿ. ಬಿಲ್ಲಿನ ಪರಿಶೀಲನೆಯಲ್ಲಿ ಕಂಡುಬಂದ ನ್ಯೂನತೆಗಳು	69,99,398.00	1,78,233.00	
110	109	2015–16ನೇ ಸಾಲಿನ ವೋಚರ್ ಲೆಕ್ಕಪರಿಶೋಧನೆಯಲ್ಲಿ ಎ.ಸಿ. ಬಿಲ್ಲಿನಲ್ಲಿ ಕಂಡುಬಂದಿರುವ ವ್ಯತ್ಯಾಸ,	14,34,670.00		
111	110	ಹಾಸ್ಟಲ್ ದಿನಾಚರಣೆ ಸಮಾರಂಭಕ್ಕೆ ಸಂಬಂಧಪಟ್ಟ ಮೊತ್ತ	50,000.00		
112	111	ವೋಚರ್ ಲೆಕ್ಕಪರಿಶೋಧನೆಯ ಡಿ.ಸಿ. ಬಿಲ್ಲಿನಲ್ಲಿ ಕಂಡುಬಂದ ನ್ಯೂನತೆಗಳು	1,00,000.00		
ಕಾಮಗಾರಿ ಸಂಬಂಧಿತ ನಿಯಮಬಾಹಿರ ವೆಚ್ಚಗಳು.					
113	112	ಕಟ್ಟಡ ಕಾಮಗಾರಿ ಬಿಲ್ಲುಗಳಲ್ಲಿ ನೀರು ಪೂರೈಕೆ ಮತ್ತು ವಿದ್ಯುತ್ ವೆಚ್ಚ ಕಟಾಯಿಸದಿರುವುದು.		15,90,972.00	
114	113	ಗುತ್ತಿಗೆದಾರರು ಟೆಂಡರ್‌ನಲ್ಲಿ ನಮೂದಿಸಿರುವ ದರಗಳಿಗಿಂತ ಹೆಚ್ಚುವರಿ ದರಗಳನ್ನು **"ಷೆಡ್ಯೂಲ್ ಬಿ"** ನಲ್ಲಿ ನಿಗದಿಪಡಿಸಿ ಹೆಚ್ಚವರಿಯಾಗಿ ಪಾವತಿಸಿರುವುದು.		33,83,556.00	
115	114	ಕಾಮಗಾರಿಯ ಬಿಲ್ಲುಗಳಲ್ಲಿ ಮುರುಗಡೆ ಮಾಡಲಾಗಿರುವ Short Recovery of Royalty ಯ ವಿವರ.		1,34,580.00	
116	115	ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ಅಕಾಡೆಮಿಕ್ ಕಾಲೇಜು ಮತ್ತು ಅತಿಥಿ ಗೃಹ ನಿರ್ಮಾಣ ಕಾಮಗಾರಿಯ ಉಳಿಕೆ ಕಾಮಗಾರಿಯ ಪ್ರಥಮ ಹಾಗೂ ಭಾಗದ ಬಿಲ್ಲಿನಲ್ಲಿ ಹೆಚ್ಚುವರಿಯಾಗಿ ಪಾವತಿಸಿರುವುದು.		1,12,653.00	
117	116	"Construction of Acadamic College and Guest house" at JBC, BU. ನೆಲ ಅಂತಸ್ತು ಹಾಗೂ ಮೊದಲನೇ ಮಹಡಿ ಕಾಮಗಾರಿ.		34,96,978.00	
118	117	"Construction of Boys hostel" JBC BU ಕಟ್ಟಡದ ನೆಲ ಅಂತಸ್ತು ಹಾಗೂ ಮೊದಲ ಮಹಡಿ ಕಾಮಗಾರಿಯ ಬಾಬ್ತು.	91,65,720.00		
119	118	ಬೆಂಗಳೂರು ವಿಶ್ವವಿದ್ಯಾಲಯದ ಸಿಟಿ ಕ್ಯಾಂಪಸ್ ಆವರಣದಲ್ಲಿ Construction of Commerce Buildings ಕಟ್ಟಡದ ನಿರ್ಮಾಣ ಕಾಮಗಾರಿ	10,49,634.00		

ಕ್ರ. ಸಂ	ಕಂಡಿಕೆ	ವಿವರ	ಆಕ್ಷೇಪಣೆ ಮೊತ್ತ (ರೂ.ಗಳಲ್ಲಿ)	ವಸೂಲಾತಿ (ಲಕ್ಷ ರೂ.ಗಳಲ್ಲಿ)	ಪುಟ ಸಂಖ್ಯೆ
120	119	ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ ಆವರಣದಲ್ಲಿನ ಮುದ್ರಾಣಾಲಯ ಮತ್ತು ಪ್ರಸಾರಾಂಗ ಕಟ್ಟಡ ಕಾಮಗಾರಿ.	1,23,64,557.00		
121	120	ಬೆಂಗಳೂರು ವಿಶ್ವವಿದ್ಯಾಲಯದ ಕಛೇರಿಯ ಆವರಣದಲ್ಲಿನ ಲೈಬ್ರರಿ ಕಟ್ಟಡದ ನವೀಕರಣ ಕಾಮಗಾರಿ.	53,73,197.00		
122	121	ಬೆಂಗಳೂರು ವಿಶ್ವವಿದ್ಯಾಲಯದ ಕಛೇರಿಯ ಆವರಣದಲ್ಲಿರುವ ಮೌಲ್ಯಮಾಪನ ಕಟ್ಟಡ ನವೀಕರಣ ಕಾಮಗಾರಿ.	36,82,926.00		
123	122	ಬೆಂಗಳೂರು ವಿಶ್ವವಿದ್ಯಾಲಯ ಆಡಳಿತ ಕಛೇರಿ ಕಟ್ಟಡದ ನವೀಕರಣ ಕಾಮಗಾರಿ.	58,92,239.00		
124	123	ಬೆಂಗಳೂರು ವಿಶ್ವವಿದ್ಯಾಲಯದ ಕಛೇರಿಯ ಆವರಣದಲ್ಲಿನ ಪಿ.ಹೆಚ್.ಡಿ. ಕಟ್ಟಡದ ನವೀಕರಣ ಮತ್ತು ರಿಪೇರಿ ಕಾಮಗಾರಿ.	53,25,353.00		
125	124	ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿನ ದೈಹಿಕ ಶಿಕ್ಷಣ ವಿದ್ಯಾರ್ಥಿ ನಿಲಯ ಕಟ್ಟಡ ನವೀಕರಣ ಹಾಗೂ ರಿಪೇರಿ ಕಾಮಗಾರಿ.	33,24,180.00		
126	125	ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ಮಹಿಳಾ ಹಾಸ್ಟೆಲ್ ಕಟ್ಟಡದ ರಿಪೇರಿ ಮತ್ತು ನವೀಕರಣ ಕಾಮಗಾರಿ.	27,38,202.00		
127	126	ಬೆಂಗಳೂರು ವಿಶ್ವವಿದ್ಯಾಲಯ ಸೆಂಟ್ರಲ್ ಕಾಲೇಜು ಕ್ಯಾಂಪಸ್ ಆವರಣದಲ್ಲಿ ಸರಪಳಿ ಇಂದ 139.40 ರವರೆವಿಗೆ ಕಾಂಪೌಂಡ್	9,13,251.00		
128	127	ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ಸಿವಿಲ್ ಇಂಜಿನಿಯರಿಂಗ್ ಕಟ್ಟಡದ ರಿಪೇರಿ ಮತ್ತು ನವೀಕರಣ ಕಾಮಗಾರಿ.	35,66,863.00		
129	128	ವರ್ಕ್ ಇಂಡೆಂಟ್ ನಂ–37ರಿಂದ 43ರವರೆಗಿನ 7 ಕಾಮಗಾರಿಗಳ ಬಿಲ್ಲುಗಳು ಪಾವತಿಗೆ ಸಂಬಂಧಿಸಿದ ಕಾಮಗಾರಿ.	48,11,255.00		
130	129	ಎ.ಸಿ.ಬಿಲ್ ಮೂಲಕ ಪಡೆದಿರುವ ಮುಂಗಡ ಹಣಕ್ಕೆ ಎನ್‌ಡಿಸಿಬಿಲ್ ಸಲ್ಲಿಸದೇ ಇರುವುದು	2,97,805.00	8,90,000.00	
131	130	ವಾಣಿಜ್ಯ ಮಳಿಗೆಗಳು ಹಾಗೂ ಇತರೆ ಪೆಟ್ಟಿ ಅಂಗಡಿಗಳ ಬಾಡಿಗೆ ಸ್ವೀಕೃತ ವಿವರಗಳು	–	5,47,852.00	
132	131	ನೀರು ಸರಬರಾಜು ವೆಚ್ಚದ ಬಿಲ್ಲುಗಳಲ್ಲಿ ಹಿಂದಿನ ಬಾಕಿ ಹಾಗೂ ಬಡ್ಡಿ ಮೊಬಲಗು ಪಾವತಿ ಕುರಿತಂತೆ ಕ್ರಮವಹಿಸದಿರುವುದು	41,63,355.00		

ಕ್ರ. ಸಂ	ಕಂಡಿಕೆ	ವಿವರ	ಆಕ್ಷೇಪಣೆ ಮೊತ್ತ (ರೂ.ಗಳಲ್ಲಿ)	ವಸೂಲಾತಿ (ಲಕ್ಷ ರೂ.ಗಳಲ್ಲಿ)	ಪುಟ ಸಂಖ್ಯೆ
133	132	ತುಂಡು ಗುತ್ತಿಗೆ ಆಧಾರದ ಮೇಲೆ ಕಾಮಗಾರಿಗಳನ್ನು ನಿರ್ವಹಿಸುವುದು.	70,92,407.00		
134	133	ವಿದ್ಯುತ್ ವೆಚ್ಚ ಬಿಲ್ಲುಗಳಲ್ಲಿನ ಶುಲ್ಕವನ್ನು ನಿಗಧಿತ ಸಮಯದೊಳಗೆ ಪಾವತಿಸದೇ ಬಡ್ಡಿ ಪಾವತಿಸಿರುವುದು.		7,187.00	
ಇತರೆ ಪ್ರಕರಣಗಳು					
135	134	ಲೆಕ್ಕಸಮನ್ವಯಗೊಳ್ಳದಿರುವುದು	5,94,35,579.00		
136	135	ಆಯವ್ಯಯ ಅಂದಾಜು ಅವಕಾಶಕ್ಕಿಂತ ಹೆಚ್ಚುವರಿ ವೆಚ್ಚ	11,04,000.00		
137	136	ಕಡತಗಳನ್ನು/ವೋಚರ್‌ಗಳನ್ನು/ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಒದಗಿಸದಿರುವುದು	5,13,16,399.00		
		ಒಟ್ಟು ರೂ.	**47,44,37,889.00**	**9,13,18,766.00**	
138	138	2015–16ನೇ ಸಾಲಿನ ವಾರ್ಷಿಕ ಕರಡು ಲೆಕ್ಕಪರಿಶೋಧನಾ ವರದಿಗೆ ಸಲ್ಲಿಸಲಾದ ಅನುಪಾಲನಾ ವರದಿಗಳನ್ನು ಪರಿಶೀಲಿಸಿ ಕೈಬಿಡಲಾದ ಮೊತ್ತ.	(–) **1,73,20,159.00**	–	
			45,71,17,730.00	9,13,18,766.00	

ಸಹಿ/–
ಅಪರ ನಿರ್ದೇಶಕರು,
ಬೆಂಗಳೂರು ಪ್ರಾಂತೀಯ ಕಛೇರಿ,
ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ & ಲೆಕ್ಕಪತ್ರಗಳ ಇಲಾಖೆ, ಬೆಂಗಳೂರು

ಅಪರ ನಿರ್ದೇಶಕರು, ಬೆಂಗಳೂರು ಪ್ರಾಂತೀಯ ಕಛೇರಿ, ಬೆಂಗಳೂರು.

ಬೆಂಗಳೂರು ವಿಶ್ವವಿದ್ಯಾಲಯದ 2015–16 ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ

ಲೆಕ್ಕಪರಿಶೋಧನಾ ವ್ಯಾಪ್ತಿ:

1. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಕಾಯ್ದೆ 2000 ಕಲಂ 47, ಉಪ ಕಲಂ (3) ರನ್ವಯ ಬೆಂಗಳೂರು ವಿಶ್ವವಿದ್ಯಾಲಯದ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲು ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನಾ ಇಲಾಖೆ, ಬೆಂಗಳೂರು ಇವರಿಗೆ ಅಧಿಕಾರವಿರುತ್ತದೆ. ಅದರಂತೆ ಬೆಂಗಳೂರು ವಿಶ್ವವಿದ್ಯಾಲಯದ 2015–16 ನೇ ಸಾಲಿನ ಲೆಕ್ಕಪರಿಶೋಧನಾ ಕಾರ್ಯವನ್ನು ಕೈಗೊಂಡು ವರದಿಯನ್ನು ತಯಾರಿಸಿ ಸಲ್ಲಿಸಲಾಗಿರುತ್ತದೆ.

2. ಲೆಕ್ಕಪರಿಶೋಧನಾ ಕಾರ್ಯದಲ್ಲಿ ಮೈಸೂರು ಸ್ಥಳೀಯ ನಿಧಿ ಲೆಕ್ಕಪರಿಶೋಧನಾ ಕೈಪಿಡಿ ಅಧ್ಯಾಯ–1, ನಿಯಮ 4 ರಿಂದ 72 ಮತ್ತು ಅಧ್ಯಾಯ–4, ನಿಯಮ 217 ರಿಂದ 242ರಲ್ಲಿ ನೀಡಿರುವ ನಿರ್ದೇಶನಗಳನ್ನು ಪಾಲಿಸಲಾಗಿದೆ. ಕೈಪಿಡಿಯ ನಿಯಮ 217ರಲ್ಲಿ ನೀಡಿರುವ ನಿರ್ದೇಶನದನ್ವಯ, ಕಾಯಿದೆಯ ಕಲಂ 4 ರಲ್ಲಿ ವಿಶ್ವವಿದ್ಯಾಲಯಕ್ಕೆ ಪ್ರದತ್ತವಾದ ಅಧಿಕಾರಗಳು, ಕಲಂ 29 ಮತ್ತು ಕಲಂ 31ರಲ್ಲಿ ಅನುಕ್ರಮವಾಗಿ ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತಿಗೆ ಪ್ರದತ್ತವಾದ ಅಧಿಕಾರಗಳು, ಕಲಂ 32ರಲ್ಲಿ ಹಣಕಾಸು ಸಮಿತಿಗೆ ವಹಿಸಲಾದ ಪ್ರಕಾರ್ಯಗಳು ಮತ್ತು ಕಲಂ 15ರಲ್ಲಿ ಕುಲಪತಿಗಳಿಗೆ ಪ್ರದತ್ತವಾದ ಅಧಿಕಾರಗಳನ್ನು ಗಮನದಲ್ಲಿಟ್ಟುಕೊಂಡು ಲೆಕ್ಕಪರಿಶೋಧನೆ ಮಾಡಲಾಗಿದೆ.

3. ಲೆಕ್ಕಪರಿಶೋಧನಾ ಕಾರ್ಯದಲ್ಲಿ ಆಧಾರವಾಗಿರುವ ಇತರೆ ನಿಯಮಾವಳಿಗಳು;
   - ಅ. ಬೆಂಗಳೂರು ವಿಶ್ವವಿದ್ಯಾಲಯವು ಕಾಲಕಾಲಕ್ಕೆ ರಚಿಸಿದ ಪರಿನಿಯಮಗಳು, ಆಧ್ಯಾದೇಶಗಳು, ವಿನಿಯಮಗಳು ಮತ್ತು ನಿಯಮಗಳು.
   - ಆ. ಬೆಂಗಳೂರು ವಿಶ್ವವಿದ್ಯಾಲಯದ ಆರ್ಥಿಕ ನಿಯಮಗಳು ಸಂಪುಟ 1 ಮತ್ತು 2.
   - ಇ. ಬೆಂಗಳೂರು ವಿಶ್ವವಿದ್ಯಾಲಯದ ಖರೀದಿ ನಿಯಮಗಳು 2003.
   - ಈ. ಕರ್ನಾಟಕ ನಾಗರಿಕ ಸೇವಾ ನಿಯಮಗಳು
   - ಉ. ಕರ್ನಾಟಕ ಆರ್ಥಿಕ ಸಂಹಿತೆ–1958
   - ಊ. ಸಾದಿಲ್ವಾರು ವೆಚ್ಚ ಕೈಪಿಡಿ–1958
   - ಋ. ಆಯವ್ಯಯ ಕೈಪಿಡಿ.
   - ಎ. ಕರ್ನಾಟಕ ಲೋಕೋಪಯೋಗಿ ಇಲಾಖೆ ಸಂಹಿತೆ ಸಂಪುಟ 1 ಮತ್ತು 2.
   - ಏ. ಕರ್ನಾಟಕ ಲೋಕೋಪಯೋಗಿ ಲೆಕ್ಕಪತ್ರ ಸಂಹಿತೆ 1 ಮತ್ತು 2.
   - ಐ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999 ಮತ್ತು ನಿಯಮ 2000
   - ಒ. ಸರ್ಕಾರದ ಸುತ್ತೋಲೆ ಸಂ. ಇಡಿ 157 ಯುಎನ್ಇ 2003, ದಿ: 26.03.2004
   - ಓ. ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ 124 ಯುಡಿವಿ 98 ಬೆಂ. ದಿನಾಂಕ 05.01.1999, ಇತ್ಯಾದಿ.

4. ಕೈಪಿಡಿಯ ನಿಯಮ 220ರನ್ವಯ ಬೆಂಗಳೂರು ವಿಶ್ವವಿದ್ಯಾಲಯದ ಮಾಸಿಕ ಲೆಕ್ಕಪತ್ರಗಳ ಪರಿಶೋಧನೆ ಕೈಗೊಳ್ಳುವುದು ಕಡ್ಡಾಯವಾಗಿದೆ. ಆದರೆ ವಿತ್ತಾಧಿಕಾರಿಗಳು ಮಾಸಿಕ ಲೆಕ್ಕಪತ್ರಗಳನ್ನು ಸಲ್ಲಿಸಿದ್ದರೂ ಸಂಬಂಧಿಸಿದ ಪೂರಕ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಸಲ್ಲಿಸದ ಕಾರಣ, 2015–16ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಏಕಕಾಲಕ್ಕೆ ಪರಿಶೀಲನೆ ಮಾಡಿ ವರದಿಯನ್ನು ಸಿದ್ಧಪಡಿಸಲಾಗಿದೆ. ಸದರಿ ವರದಿಯಲ್ಲಿ ವಾರ್ಷಿಕ ಲೆಕ್ಕಪತ್ರಗಳ ನಿರ್ವಹಣೆಯಲ್ಲಿ ಕಂಡುಬಂದ ನ್ಯೂನತೆಗಳು ಮತ್ತು ಹಣಕಾಸು ವಹಿವಾಟಿನಲ್ಲಿ ಪ್ರಮುಖ ಪಾತ್ರ ನಿರ್ವಹಿಸುವ ವಿಭಾಗಗಳಾದ ಹಣಕಾಸು ವಿಭಾಗ', ವಿದ್ಯಾವಿಷಯಕ ವಿಭಾಗ, ಅಭಿವೃದ್ಧಿ ವಿಭಾಗ, ಸಿಬ್ಬಂದಿ ವಿಭಾಗ, ವಿದ್ಯಾರ್ಥಿ ನಿಲಯಗಳು, ಮೌಲ್ಯಮಾಪನ ವಿಭಾಗ, ಗ್ರಂಥಾಲಯ ವಿಭಾಗ, ಇತ್ಯಾದಿ ವಿಭಾಗಗಳ ಹಣಕಾಸು ವಹಿವಾಟಿನ ಪರಿಶೋಧನೆಯಲ್ಲಿ ಕಂಡುಬಂದ ಗುರುತರ ನ್ಯೂನತೆಗಳನ್ನು ವರದಿ ಮಾಡಲಾಗಿದೆ.
5. ಲೆಕ್ಕ ಪರಿಶೋಧನಾ ವರದಿ ಸಿದ್ಧಪಡಿಸುವಲ್ಲಿ ಕೈಪಿಡಿ ಅಧ್ಯಾಯ–13, ನಿಯಮ 511 ರಿಂದ 537ರಲ್ಲಿ ನೀಡಿರುವ ನಿರ್ದೇಶನಗಳನ್ನು ಅನುಸರಿಸಲಾಗಿದೆ.

2015–16 ನೇ ಸಾಲಿನಲ್ಲಿ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಿರುವ ಅಧಿಕಾರಿಗಳ ಹೆಸರು, ಹುದ್ದೆ ಮತ್ತು ಅವಧಿಯ ವಿವರಗಳು

ಪದನಾಮ ಮತ್ತು ಹೆಸರು		ಸೇವಾ ಅವಧಿ
ಮಾನ್ಯ ಕುಲಪತಿಗಳು: ಡಾ.ಬಿ.ತಿಮ್ಮೇಗೌಡ.		01.04.2015 ರಿಂದ 31.03.2016
ಕುಲಸಚಿವರು (ಆಡಳಿತ) :	ಕೆ.ಕೆ ಸೀತಮ್ಮ ಡಾ.ಕೆ.ಕೆ.ಸೀತಮ್ಮ	01.04.2015 ರಿಂದ 31.03.2016 01.04.2013 ರಿಂದ 31.03.2014.
ಕುಲಸಚಿವರು (ಮೌಲ್ಯಮಾಪನ) :	ಕೆ.ಎನ್.ನಿಂಗೇಗೌಡ	01.04.2015 ರಿಂದ 31.03.2016.
ವಿತ್ತಾಧಿಕಾರಿಗಳು:	ಶ್ರೀಮತಿ ಸರಸ್ವತಿ. ಎಸ್. ಶ್ರೀ.ಜೀವನ್‌ಕುಮಾರ್.ಡಿ. ಶ್ರೀ.ಲೋಕೇಶ್.ಎ.	01.04.2015 ರಿಂದ 21.07.2015 22.07.2015 ರಿಂದ 08.09.2015 08.09.2015 ರಿಂದ 31.03.2016
ಕಾರ್ಯಪಾಲಕ ಅಭಿಯಂತರರು:	ಶ್ರೀ ಪುಟ್ಟಸ್ವಾಮಿ	01.04.2015 ರಿಂದ 31.03.2016.
ಗ್ರಂಥಪಾಲಕರು:	ಶ್ರೀ ಆಂಜನಪ್ಪ	01.04.2015 ರಿಂದ 31.03.2016
ಲೆಕ್ಕಪರಿಶೋಧನಾ ಅವಧಿ.		01.04.2015 ರಿಂದ 31.03.2016
ವಿತ್ತಾಧಿಕಾರಿಗಳು ವಾರ್ಷಿಕ ಹಣಕಾಸು ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಗೆ ನೀಡಿದ ದಿನಾಂಕ.		**16–01–2017**
ವಾರ್ಷಿಕ ಲೆಕ್ಕಪತ್ರ ಪರಿಶೋಧನೆ ಪ್ರಾರಂಭ ದಿನಾಂಕ ಮುಕ್ತಾಯದ ದಿನಾಂಕ		01.03.2017 ರಿಂದ 28.04.2017 31.07.2017 ರಿಂದ 15.08.2017
ಲೆಕ್ಕಪರಿಶೋಧನಾ ತಂಡ		
ಲೆಕ್ಕಪರಿಶೋಧನಾಧಿಕಾರಿಗಳು		1. ಶ್ರೀಮತಿ. ಸಿ. ವಿಜಯಲಕ್ಷ್ಮಿ 2.ಶ್ರೀ. ಶಂಕರ ಶರ್ಮ
ಲೆಕ್ಕಾಧಿಕ್ಷಕರು		1. ಶ್ರೀಮತಿ. ಪಲ್ಲವಿ 2. ಶ್ರೀಮತಿ ಅನಿತಾ 3. ಶ್ರೀಮತಿ ಮಂಜುಳಾ. ಎಲ್ 4. ಶ್ರೀಮತಿ. ಆರ್.ಸಿ. ಮಂಜುಳಾ
ಲೆಕ್ಕಪರಿಶೋಧಕರು		1. ಶ್ರೀಮತಿ. ರೂಪಶ್ರೀ. ಪಿ 2. ಶ್ರೀಮತಿ. ಸಹನಾ. ಸಿ.ಎಸ್. 3. ಶ್ರೀಮತಿ. ಟಿ.ಎಸ್. ಶಾಂತ
ಲೆಕ್ಕಪರಿಶೋಧನಾ ವರದಿಯ ಪುನರ್ ಪರಿಶೀಲನಾಧಿಕಾರಿಗಳು		ಶ್ರೀ ಎನ್.ಬಿ. ಶಿವರುದ್ರಪ್ಪ ಅಪರ ನಿರ್ದೇಶಕರು ಬೆಂಗಳೂರು ಪ್ರಾಂತೀಯ ಕಛೇರಿ ಕ.ರಾ.ಲೆ.ಪ ಮತ್ತು ಲೆ.ಪ ಇಲಾಖೆ, ಬೆಂಗಳೂರು.
ಹಿರಿಯ ಉಪ ನಿರ್ದೇಶಕರು		1. ಶ್ರೀಮತಿ ಜೊಹರಾ ಜಬೀನ್ (ದಿ:17.12.2016 ರವರೆಗೆ) 2. ಶ್ರಿಮತಿ ಕೆ.ಸಿ. ದಮಯಂತಿ (ದಿ:18–12–2016ರಿಂದ)
ಲೆಕ್ಕ ಪರಿಶೋಧನಾ ವರದಿಯ ಪುನರ್ ಪರಿಶೀಲನಾ ದಿನಾಂಕ		10.05.2018

ವಿಶ್ವವಿದ್ಯಾಲಯದ ಪರಿಚಯ

ಬೆಂಗಳೂರು ವಿಶ್ವವಿದ್ಯಾಲಯವು 1964 ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಪ್ರತ್ಯೇಕಗೊಂಡು ಸ್ವತಂತ್ರ ವಿಶ್ವವಿದ್ಯಾಲಯವಾಗಿ ಕಾರ್ಯಾರಂಭ ಮಾಡಿರುತ್ತದೆ.1964ರ ಕಾಯಿದೆ, 1973ರ ಬದಲಾವಣೆ–ಆದೇಶ/ಕಾಯಿದೆ 1976ರ ಕಾಯಿದೆ ಮತ್ತು 2000 ರ ಕಾಯಿದೆಗಳನ್ನು ವಿಶ್ವವಿದ್ಯಾಲಯವು ಕಾಲಕಾಲಕ್ಕೆ ಅನುಸರಿಸಿರುತ್ತದೆ.

1.	2015–16 ನೇ ಸಾಲಿನಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಸಂಯೋಜನೆಗೆ ಒಳಪಟ್ಟಿದ್ದ ಒಟ್ಟು ಸ್ನಾತಕ ಪದವಿ ಕಾಲೇಜುಗಳು	448
	ಸ್ನಾತಕ ಪದವಿ ಕೋರ್ಸುಗಳಿಗೆ ಪ್ರವೇಶ ದಾಖಲಾತಿ ನೀಡಿದ್ದ ಒಟ್ಟು ಕಾಲೇಜುಗಳ ಸಂಖ್ಯೆ	111
	ಸ್ನಾತಕ ಪದವಿ ಕೋರ್ಸುಗಳಿಗೆ ಪ್ರವೇಶ ದಾಖಲಾತಿ ಆಗದಿದ್ದ ಒಟ್ಟು ಕಾಲೇಜುಗಳ ಸಂಖ್ಯೆ	–
	ಸ್ನಾತಕ ಪದವಿ ಕೋರ್ಸುಗಳಿಗೆ ಪ್ರವೇಶ ಪಡೆದಿದ್ದ ಒಟ್ಟು ವಿದ್ಯಾರ್ಥಿಗಳು	74518
2.	2015–16 ನೇ ಸಾಲಿನಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಸಂಯೋಜನೆಗೆ ಒಳಪಟ್ಟಿದ್ದ ಒಟ್ಟು ಬಿ.ಎಡ್ ಕಾಲೇಜುಗಳು.	80
	ಬಿ.ಇಡಿ ಕೋರ್ಸುಗಳಿಗೆ ಪ್ರವೇಶ ದಾಖಲಾತಿ ನೀಡಿದ್ದ ಒಟ್ಟು ಕಾಲೇಜುಗಳು	–
	ಬಿ.ಇಡಿ ಕೋರ್ಸುಗಳಿಗೆ ಪ್ರವೇಶ ದಾಖಲಾತಿ ಆಗದಿದ್ದ ಒಟ್ಟು ಕಾಲೇಜುಗಳು	–
	ಬಿ.ಇಡಿ ಕೋರ್ಸುಗಳಿಗೆ ಪ್ರವೇಶ ಪಡೆದಿದ್ದ ಒಟ್ಟು ವಿದ್ಯಾರ್ಥಿಗಳು	4309
3.	2015–16 ನೇ ಸಾಲಿನಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಸಂಯೋಜನೆಗೆ ಒಳಪಟ್ಟಿದ್ದ ಒಟ್ಟು ಸ್ನಾತಕೋತ್ತರ ಪದವಿ ಕೋರ್ಸು (ಸಂಯೋಜಿತ ಕಾಲೇಜುಗಳು)	124
	ಬೆಂಗಳೂರು ವಿಶ್ವವಿದ್ಯಾಲಯದ ವಿಭಾಗಗಳು	46
	2014–15 ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಪ್ರವೇಶ ಪಡೆದಿದ್ದ ಒಟ್ಟು ವಿದ್ಯಾರ್ಥಿಗಳು	11553

ಭಾಗ – 1

ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೂಚಿಸಿದ ಗುರುತರ ಆಕ್ಷೇಪಣೆಗಳು ಮತ್ತು ವಸೂಲಾತಿ ಪ್ರಕರಣಗಳ ಇತ್ಯರ್ಥಕ್ಕೆ ವಿಶ್ವವಿದ್ಯಾಲಯ ತೆಗೆದುಕೊಂಡಿರುವ ಕ್ರಮಗಳು

ಆಕ್ಷೇಪಣೆಗಳು	***ಉತ್ತರಗಳು***
ಭಾಗ– 01	
1.1 1973–74 ರಿಂದ 2015–16ನೇ ಸಾಲಿನವರೆಗೆ ಬೆಂಗಳೂರು ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳು ಕೇಂದ್ರ ಲೆಕ್ಕಪರಿಶೋಧನೆ ಮತ್ತು ವಿಶ್ವವಿದ್ಯಾಲಯದ ಕಾರ್ಯ ವ್ಯಾಪ್ತಿಯಲ್ಲಿ ಬರುವ ವಿವಿಧ ವಿಭಾಗಗಳು, ಘಟಕಗಳು ಮತ್ತು ಕಛೇರಿಗಳಲ್ಲಿ ನಡೆಸಲಾದ ವಹಿವಾಟುಗಳ ಸ್ಥಳೀಯ ಲೆಕ್ಕಪರಿಶೋಧನೆಯನ್ನು ಕೈಗೊಂಡು ವರದಿಗಳನ್ನು ಜಾರಿಮಾಡಲಾಗಿರುತ್ತದೆ. ಲೆಕ್ಕಪರಿಶೋಧನಾ ವರದಿಗಳಲ್ಲಿ ತಿಳಿಸಿರುವ ಆಕ್ಷೇಪಣೆಗಳು ಮತ್ತು ವಸೂಲಾತಿ ಪ್ರಕರಣಗಳ ಇತ್ಯರ್ಥದ ಬಗ್ಗೆ ವಿಶ್ವವಿದ್ಯಾಲಯದ ಅಧಿಕಾರಿಗಳು ತೀರ ನಿರ್ಲಕ್ಷತೆ ತೋರಿರುವ ಕಾರಣ 1973–74 ರಿಂದ 2014–15 ನೇ ಸಾಲಿನವರೆಗಿನ ಆಕ್ಷೇಪಾರ್ಹ ವಹಿವಾಟುಗಳು ಮತ್ತು ವಸೂಲಾತಿ ಪ್ರಕರಣಗಳ ಬಾಬ್ತು ಅನುಕ್ರಮವಾಗಿ ರೂ.778,76,53,715.00 ಮತ್ತು ರೂ.91,63,16,323.00 ಗಳಿಗೆ ಏರಿಕೆ ಆಗಿರುತ್ತದೆ. ವಿವರಗಳನ್ನು **ಅನುಬಂಧ–1** ರಲ್ಲಿ ನೀಡಲಾಗಿದೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳದಿದ್ದರೆ ವಸೂಲಾತಿಯ ಮೊತ್ತಗಳು ವಸೂಲಾಗದ ಹಂತ ತಲುಪಿ ವಿಶ್ವವಿದ್ಯಾಲಯಕ್ಕೆ ಶಾಶ್ವತ ನಷ್ಟ ಉಂಟಾಗಲು ಕಾರಣವಾಗಿರುತ್ತದೆ. ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳುವಲ್ಲಿ ವಿಳಂಬವುಂಟಾದಲ್ಲಿ ವಿಶ್ವವಿದ್ಯಾಲಯದ ಹಣಕಾಸಿನ ಮೇಲಿನ ನಿಯಂತ್ರಣ ಮತ್ತಷ್ಟು ದುರ್ಬಲವಾಗಿ ಹಣಕಾಸಿನ ದುರುಪಯೋಗ ಮತ್ತು ನಷ್ಟದ ಪ್ರಕರಣಗಳು ಉಂಟಾಗಲು ಅವಕಾಶ ನೀಡಿದಂತಾಗುವುದು ಎಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯಪಡಲಾಗಿದೆ.	1973–74 ರಿಂದ 2013–14ನೇ ಸಾಲಿನವರೆಗೆ ಲೆಕ್ಕಪರಿಶೋಧನಾ ವರದಿಗಳಲ್ಲಿ ವಸೂಲಾತಿಗೆ ಸೂಚಿಸಿರುವ ಮೊತ್ತ ರೂ. 85,33,24,450=00 (2014–15ರ ಸಾಲಿನ ಅನುಬಂಧ–1) ಗಳಿಗೆ ಪರಿಶೀಲಿಸಿ, **ಅನುಬಂಧ–86** (ಪು.ಸಂ.587)ರಲ್ಲಿ ತಿಳಿಸಿರುವಂತೆ, ಕ್ರಮ ಸಂಖ್ಯೆ (1) ಸಂಕ್ಷಿಪ್ತ ಸಾದಿಲ್ವಾರು ಮುಂಗಡ ರೂ. 20,28,42,695=00 ಗಳು ಮತ್ತು ಕ್ರಮ ಸಂಖ್ಯೆ(2) ಸರ್ಕಾರದಿಂದ ಮರುಭರಣ ಮೊತ್ತ ರೂ. 9,58,48,854=00 ಇವುಗಳ ಮತ್ತು ಒಟ್ಟು ರೂ. 29,86,91,549=00ಗಳನ್ನು ಆಕ್ಷೇಪಣೆಗೆ ವರ್ಗಾಯಿಸಲಾಗಿದೆ. ಸರ್ಕಾರದ ಪತ್ರ ಸಂಖ್ಯೆ ಇಡಿ 103/ಯುಬಿವಿ/2017, ದಿನಾಂಕ 18.01.2018ರಲ್ಲಿ ತಿಳಿಸಿರುವಂತೆ, NDC ಬಿಲ್ಲು ಸಲ್ಲಿಕೆಗೆ ನಿಯಮ ಉಲ್ಲಂಘಿಸಿದವರನ್ನು ಗುರುತಿಸಿ, ಅವರ ವಿರುದ್ಧ ಶಿಸ್ತುಕ್ರಮ ಆರಂಭಿಸಿದ ನಂತರ, ವರದಿ ಮಾಡಿದ ನಂತರವಷ್ಟೇ ವಸೂಲಾತಿ ಮೊತ್ತದ ತೀರುವಳಿಯ ಬಗ್ಗೆ ನಿಯಮಾನುಸಾರ ಕ್ರಮ ವಹಿಸಲಾಗುವುದೆಂದು ಅಪರ ನಿರ್ದೇಶಕರು ತಮ್ಮ ಪತ್ರ ದಿನಾಂಕ 22.02.2018ರಲ್ಲಿ ತಿಳಿಸಿರುತ್ತಾರೆ. ಉಳಿದಂತೆ, **ಅನುಬಂಧ–86**ರ ಕ್ರಮ ಸಂಖ್ಯೆ (3) ರಿಂದ (6) ರವರೆಗಿನ ಪುನರಾವರ್ತನೆ ಮತ್ತು ಉತ್ತರಿಸಿರುವುದರಿಂದ ಕೈಬಿಡಲಾದ ಮೊತ್ತ 4,15,63,486=00ಗಳನ್ನು ವಸೂಲಾತಿಯಿಂದ ಕೈಬಿಡಲಾಗಿದೆ. ಮುಂದುವರೆದು, ಅಪರ ನಿರ್ದೇಶಕರು ಇವರಿಗೆ ಬರೆದಿರುವ ಪತ್ರ ಸಂಖ್ಯೆ: ಹ.ವಿ./ಆಡಿಟ್ & ಆಯವ್ಯಯ ವಿಭಾಗ/2015–16/ವಾ.ಕ/ವರದಿ/2018–19, ದಿನಾಂಕ 18.09.2018ರಲ್ಲಿ **ಅನುಬಂಧ–9**ಕ್ಕೆ ಸಂಬಂಧಿಸಿದಂತೆ, ರೂ. 2,32,54,593=00ಗಳಿಗೆ ಉತ್ತರಗಳನ್ನು ನೀಡಲಾಗಿದೆ ಮತ್ತು **ಅನುಬಂಧ–10**ಕ್ಕೆ ಸಂಬಂಧಿಸಿದಂತೆ, ರೂ. 1,11,42,686=00ಗಳಿಗೆ ಉತ್ತರ ಒದಗಿಸಲಾಗಿದೆ. **(ಅನುಬಂಧ–87)** (ಪು.ಸಂ.595) **ಅನುಬಂಧ–88** (ಪು.ಸಂ.597)ರಲ್ಲಿ ತಿಳಿಸಿರುವ ವಿವರದಂತೆ, 2011–12 ರಿಂದ 2013–14ರವರೆಗಿನ ವಸೂಲಾತಿ ಮೊತ್ತ ರೂ. 95,04,477=00 ಗಳಿಗೆ ತತ್ಪೂರ್ತ ಸಮಿತಿಗೆ ಒದಗಿಸಲಾದ ವಸೂಲಾತಿ ವಿವರಗಳನ್ನು ನಂತರ ಲೆಕ್ಕಪರಿಶೋಧಕರು ಪರಿಶೀಲಿಸಿರುತ್ತಾರೆ. ಈ ಮೊತ್ತ ಅಪರ ನಿರ್ದೇಶಕರು ಕೈಬಿಟ್ಟಿರುವ ಬಗ್ಗೆ ಮಾಹಿತಿ ಬಂದಿಲ್ಲ.

ಆಕ್ಷೇಪಣೆಗಳು	***ಉತ್ತರಗಳು***
	ಅಪರ ನಿರ್ದೇಶಕರ ಪತ್ರ ಸಂಖ್ಯೆ: ಅನಿ/ಬೆಂಪ್ರಾಕ/ಸಿ–3/ಬೆಂ.ವಿ.ವಿ./ಅವ/2018–19/278, ದಿನಾಂಕ 24.07.2018ರಲ್ಲಿ 2001–02ನೇ ಸಾಲಿನ ಕಂಡಿಕೆ 44ರಲ್ಲಿನ ವಸೂಲಾತಿ ಮೊತ್ತ ರೂ. 59,090=00ಗಳು ಮತ್ತು ಪತ್ರ ಸಂಖ್ಯೆ: ಅನಿ/ಬೆಂಪ್ರಾಕ/ಸಿ–4/ಬೆಂ.ವಿ.ವಿ./ಅವ/2018–19/32, ದಿನಾಂಕ 09.04.2018ರಲ್ಲಿ 2014–15ರ ಕಂಡಿಕೆ 41ರಲ್ಲಿ ರೂ. 16,012=00ಗಳನ್ನು ವಿವಿ ನಿಧಿಗೆ ಜಮಾ ಆಗಿರುವುದು ಮತ್ತು ಲೆಕ್ಕಪತ್ರಗಳಲ್ಲಿ ಅಳವಡಿಸಿದ ಬಗ್ಗೆ ಈ ಸಂಬಂಧ ಮುಂದಿನ ಲೆಕ್ಕಪರಿಶೋಧನಾ ಅವಧಿಯಲ್ಲಿ ಸ್ಥಳೀಯವಾಗಿ ಪರಿಶೀಲಿಸಿ, ಸದರಿ ಕಂಡಿಕೆಗಳನ್ನು ಕೈಬಿಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿರುತ್ತಾರೆ **(ಅನುಬಂಧ–89)** (ಪು.ಸಂ.607). ಅಪರ ನಿರ್ದೇಶಕರು ತಮ್ಮ ಪತ್ರ ಸಂಖ್ಯೆ: ಅನಿ/ಬೆಂಪ್ರಾಕ/ಸಿ–4/ಬೆಂ.ವಿ.ವಿ./ಲೆಪಕಾಕ್ರ/ 2019–20/293, ದಿನಾಂಕ 31.07.2019ರಲ್ಲಿ ತಿಳಿಸಿರುವಂತೆ 2010–11 ರಿಂದ 2014–15ರ ಸಾಲಿನ ವಸೂಲಾತಿಯಾಗಿರುವ ಮೊತ್ತಗಳ ದಾಖಲಾತಿಗಳನ್ನು ಲೆಕ್ಕಪರಿಶೋಧಕರು ಸ್ಥಳೀಯ ಪರಿಶೀಲನೆ ಆಗಸ್ಟ್ 2019ರಲ್ಲಿ ಕೈಗೊಂಡಿರುತ್ತಾರೆ **(ಅನುಬಂಧ–90)** (ಪು.ಸಂ.608).
1.2 ಲೆಕ್ಕಪರಿಶೋಧನಾ ವರದಿಗಳಲ್ಲಿನ ಆಕ್ಷೇಪಣೆಗಳಿಗೆ ಸೂಕ್ತ ಅನುಪಾಲನೆ ವರದಿಗಳನ್ನು ಸಕಾಲದಲ್ಲಿ ಸಲ್ಲಿಸದ ಕಾರಣ ವರದಿಗಳಲ್ಲಿ ಸೂಚಿಸಿರುವ ಆಕ್ಷೇಪಣೆಗಳು, ವಸೂಲಾತಿ ಪ್ರಕರಣಗಳು ಅದೇ ರೀತಿ ಪ್ರತಿ ವರ್ಷಗಳಲ್ಲಿ ಪುನರಾವರ್ತನೆಗೊಳ್ಳುತ್ತಿವೆ. ಅನುಪಾಲನಾ ವರದಿ ಸಲ್ಲಿಸುವಲ್ಲಿ ತೋರುವ ವಿಳಂಬವು ಲೆಕ್ಕಪರಿಶೀಲನೆಯ ಉದ್ದೇಶ ವಿಫಲವಾದಂತಾಗಿದೆ. ವಸೂಲಾತಿಗೆ ಸೂಚಿಸಿರುವ ಹೆಚ್ಚುವರಿ ವೇತನ ಭತ್ಯೆಗಳು, ತೆರಿಗೆಗಳು, ವೇತನ ನಿಗಧಿಯಲ್ಲಿ ಲೋಪಗಳು, ಓವರ್ ಟೈಂ ಕೆಲಸಕ್ಕೆ ನಿಯಮಬಾಹಿರವಾಗಿ ಪಾವತಿಸಿರುವ ಹೆಚ್ಚುವರಿ ಭತ್ಯೆಗಳು, ಸಮಾಲೋಚನಾ ಶುಲ್ಕ ಸಂಭಾವನೆಗಳು, ವಾಹನ ಭತ್ಯೆ ಇತ್ಯಾದಿಗಳು ಸಕಾಲದಲ್ಲಿ ವಸೂಲಾತಿ ಆಗದಿದ್ದರೆ ಅಂತಹ ಬಾಬ್ತುಗಳು ವಸೂಲಾಗದ ಹಂತ ತಲುಪಿ ವಿ.ವಿ. ನಿಧಿಗೆ ನಷ್ಟ ಉಂಟಾಗುತ್ತದೆ. ಲೆಕ್ಕಪರಿಶೋಧನಾ ವರದಿಗಳಲ್ಲಿನ ಆಕ್ಷೇಪಣೆ ಮತ್ತು ವಸೂಲಾತಿ ಮೊಬಲಗಿನ ತೀರುವಳಿಗೆ ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿಕೊಂಡು ಕಾಲಮಿತಿಯಲ್ಲಿ ಅನುಪಾಲನಾ ವರದಿಗಳನ್ನು ಸಲ್ಲಿಸುವುದು ಅವಶ್ಯಕವೆಂದು ಅಭಿಪ್ರಾಯಪಡಲಾಗಿದೆ. ಈ ನಿಟ್ಟಿನಲ್ಲಿ ಕುಲಸಚಿವರು, ವಿತ್ತಾಧಿಕಾರಿಗಳು ಮತ್ತು ಹಿರಿಯ ಉಪನಿರ್ದೇಶಕರುನ್ನೊಳಗೊಂಡ ಅಡ್‌ಹಾಕ್ ಸಮಿತಿಯನ್ನು	ಅನುಬಂಧ–(2)ರ ಕ್ರಮ ಸಂಖ್ಯೆ (1) ಮತ್ತು (2)ರ ಮೊತ್ತ ರೂ. 29,86,91,549=00ಗಳು ವಸೂಲಾತಿಯಿಂದ ಆಕ್ಷೇಪಣೆಗೆ ವರ್ಗಾಯಿಸಲ್ಪಟ್ಟಿದೆ. ಮತ್ತು ಕ್ರಮ ಸಂಖ್ಯೆ (3) ಮತ್ತು (6)ರ ಮೊತ್ತ ರೂ. 4,15,63,686=00 ವಸೂಲಾತಿಯಿಂದ ಕೈಬಿಡಲಾಗಿದೆ. ತತ್ಪೂರ್ತ ಸಭೆಯ ರಚನೆಯ ನಂತರ, ಇದುವರೆವಿಗೂ ದಿನಾಂಕ 16.10.2015, 13.11.2015, 05.08.2017, 13.10.2017 ಮತ್ತು 27.11.2017ಗಳಲ್ಲಿ ತತ್ಪೂರ್ತ ಸಭೆ ನಡೆಸಲಾಗಿದ್ದು, ಆ ಸಭೆಗಳಿಗೆ ಸಂಬಂಧಿಸಿದ ನಡಾವಳಿಯ ಪ್ರತಿಗಳನ್ನು ಮುಂದಿನ ಕ್ರಮಕ್ಕಾಗಿ ಸಂಬಂಧಿಸಿದವರಿಗೆ ಕಳುಹಿಸಲಾಗಿದೆ. 1999–2000ರಿಂದ 2013–14ರವರೆಗಿನ ವಸೂಲಾತಿ ಮೊತ್ತಗಳಿಗೆ **ಅನುಬಂಧ–9** ಮತ್ತು **ಅನುಬಂಧ–10**ರಲ್ಲಿ ಉಳಿದಿರುವ ಮೊತ್ತಗಳಿಗೆ ತೀರುವಳಿ ಪಡೆಯಲು ಅಗತ್ಯ ಕ್ರಮ ವಹಿಸಲಾಗುತ್ತಿದೆ. 2014–15 ರಿಂದ ವರ್ಷವಾರು ವಾರ್ಷಿಕ ಲೆಕ್ಕಪರಿಶೋಧನೆ ವರದಿಗಳಲ್ಲಿಯೇ ಉತ್ತರಿಸಿರುವುದರಿಂದ ಮತ್ತು ವಸೂಲಾತಿಯಾಗಿ ರುವ ಮೊತ್ತಗಳಿಗೆ ವಿವರಗಳನ್ನು ಒದಗಿಸಿರು ವುದರ ವಸೂಲಾತಿ ಮೊತ್ತಗಳ ತೀರುವಳಿಗೆ

ಆಕ್ಷೇಪಣೆಗಳು	***ಉತ್ತರಗಳು***
ರಚಿಸಿ ಬಾಕಿ ಇರುವ ಆಡಿಟ್ ಕಂಡಿಕೆಗಳ ತೀರುವಳಿಗೆ ಕ್ರಮ ಕೈಗೊಳ್ಳುವಂತೆ ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ, ಬೆಂಗಳೂರು ಇವರು ತಮ್ಮ ಸುತ್ತೋಲೆ ಸಂ. ರಾಲೆಪ/ಲೆತಾವಿ–5/26/ಸುತ್ತೋಲೆ/2011–12/6394 ದಿನಾಂಕ: 28.01.2012 ರಲ್ಲಿ ನೀಡಿರುವ ಸೂಚನೆಯಂತೆ ಕುಲಪತಿಯವರ ಅನುಮೋದನೆ ದಿನಾಂಕ: 23–03–2013 ರಂತೆ ಬೆಂಗಳೂರು ವಿಶ್ವವಿದ್ಯಾಲಯದ ಲೆಕ್ಕತಪಾಸಣಾ ವೇಳೆಯಲ್ಲಿ ಆಕ್ಷೇಪಿಸಿರುವ ಆಕ್ಷೇಪಣೆಗಳಿಗೆ ಉತ್ತರಿಸಲು ತತ್ಪೂರ್ತ(AD-HOC COMMITTEE) ಸಮಿತಿ ರಚಿಸಿರುವುದಾಗಿ ಕುಲಸಚಿವರು ಬೆಂಗಳೂರು ವಿ.ವಿ. ರವರು ಹೊರಡಿಸಿರುವ ಅಧಿಸೂಚನೆ ಸಂಖ್ಯೆ:ಕುಕಾ:ಲೆಕ್ಕಪರಿಶೋಧನೆ/2013–14 ದಿನಾಂಕ 30–03–2013 ರಲ್ಲಿ ತಿಳಿಸಿರುತ್ತಾರೆ. ಅಧಿಸೂಚನೆಯಂತೆ ಮೊದಲ ಪರಾಮರ್ಷಣಾ ಸಭೆ ದಿ:27–05–2013 ಮತ್ತು 26.08.2014 ರಂದು ಜರುಗಿರುತ್ತದೆ. 2015–16 ನೇ ಸಾಲಿನಲ್ಲಿ ದಿನಾಂಕ 16.10.2015 ಹಾಗೂ 13.11.2015 ರಂದು ತತ್ಪೂರ್ತ ಸಭೆ ಜರುಗಿರುತ್ತದೆ.	ಲೆಕ್ಕಪರಿಶೋಧಕರು 2010–11 ರಿಂದ 2014–15ರ ಸಾಲುಗಳ ವಸೂಲಾತಿಯಾಗಿರುವ ಮೊತ್ತಗಳ ದಾಖಲಾತಿಗಳನ್ನು ಸ್ಥಳೀಯ ಪರಿಶೀಲನೆ ಕೈಗೊಂಡಿರುತ್ತಾರೆ.
1.3 ವಿಭಾಗಗಳ ಮುಖ್ಯಸ್ಥರು ಲೆಕ್ಕಪರಿಶೋಧನಾ ವರದಿಗಳಲ್ಲಿನ ಆಕ್ಷೇಪಣೆಗಳಿಗೆ ಸಲ್ಲಿಸಿರುವ ಅನುಪಾಲನಾ ವರದಿಗಳನ್ನು ಹಾಗೂ ಮೂಲ ದಾಖಲಾತಿಗಳನ್ನು ವಿವರವಾಗಿ ಪರಿಶೀಲಿಸದೆ / ಉತ್ತರಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ದಾಖಲಿಸದೆ ಆಕ್ಷೇಪಣೆಗಳನ್ನು ಹಿಂತೆಗೆಯುವಂತೆ ಮೇಲಾಭಿಪ್ರಾಯ/ಷರಾ ನೀಡಿ ವಿತ್ತಾಧಿಕಾರಿಗಳು ಅನುಸರಣಾ ವರದಿಗಳನ್ನು ಕಳುಹಿಸುತ್ತಿಲ್ಲದಿರುವುದನ್ನು ವಿತ್ತಾಧಿಕಾರಿಗಳ ಗಮನಕ್ಕೆ 2013–14ನೇ ಸಾಲಿನ ವಾರ್ಷಿಕ ವರದಿಯಲ್ಲಿ ತಿಳಿಸಲಾಗಿತ್ತು. ಆದಾಗ್ಯೂ ಈ ಸಂಬಂಧ ಯಾವುದೇ ಸುಧಾರಣೆ ಆಗದಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.	ವಿಭಾಗಗಳ ಎಲ್ಲಾ ಮುಖ್ಯಸ್ಥರಿಗೆ ಸೂಚನೆಯನ್ನು ನೀಡಿ ಇನ್ನೂ ಮುಂದೆ, ವಿಭಾಗಗಳಿಗೆ ಬರುವ ಎಲ್ಲಾ ಲೆಕ್ಕಪರಿಶೋಧನಾ ವರದಿಗಳಿಗೆ ಉತ್ತರಗಳನ್ನು ತಯಾರಿಸಿ, ವಿತ್ತಾಧಿಕಾರಿಗಳಿಗೆ Soft Copy ಮತ್ತು Hard Copy ಗಳನ್ನು ಸಲ್ಲಿಸಲು ಸೂಚನೆ ನೀಡಲಾಗಿದೆ. ವಿಭಾಗಗಳಿಂದ ಉತ್ತರಗಳೊಂದಿಗೆ ಬರುವ ಲೆಕ್ಕಪರಿಶೋಧನಾ ವರದಿ ಕಂಡಿಕೆಗಳಿಗೆ ಈಗ ವಿತ್ತಾಧಿಕಾರಿಗಳ ಅಭಿಪ್ರಾಯಗಳನ್ನು ದಾಖಲಿಸಿ ಆಕ್ಷೇಪಣೆ ಹಿಂಪಡೆಯುವಂತೆ, ಅನುಸರಣಾ ಉತ್ತರಗಳೊಂದಿಗೆ ವರದಿಗಳನ್ನು ಅಪರ ನಿರ್ದೇಶಕರು, ಬೆಂಗಳೂರು ಪ್ರಾಂತೀಯ ಕಛೇರಿ, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಬೆಂಗಳೂರು ರವರಿಗೆ ಸಲ್ಲಿಸಲಾಗುತ್ತಿದೆ.

ಭಾಗ–2

ಬೆಂಗಳೂರು ವಿಶ್ವವಿದ್ಯಾಲಯದ 2015–16 ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಹಾಗೂ ಪ್ರಮುಖ ವಿಭಾಗಗಳು, ಘಟಕಗಳು ಮತ್ತು ಕಛೇರಿಗಳ ಹಣಕಾಸು ವಹಿವಾಟುಗಳ ಲೆಕ್ಕಪರಿಶೋಧನಾ ವರದಿ.

1. ವಿಶ್ವವಿದ್ಯಾಲಯದ ಲೆಕ್ಕಪತ್ರಗಳು

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಕಲಂ 47(3) ರನ್ವಯ ಸಿದ್ದಪಡಿಸಿ ಸಿಂಡಿಕೇಟ್‌ನಿಂದ ಅನುಮೋದನೆಗೊಂಡ 2014–15ನೇ ಸಾಲಿನ ಬೆಂಗಳೂರು ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲಿಸಲಾಗಿರುತ್ತದೆ. ವಿಶ್ವವಿದ್ಯಾಲಯವು ತನ್ನ ಲೆಕ್ಕಪತ್ರಗಳನ್ನು *ದ್ವಿ ನಮೂದು ಪದ್ಧತಿಯ* ನಿಯಮಗಳನ್ನು ಅನುಸರಿಸಿ ಅಭಿವೃದ್ಧಿ ಪಡಿಸಿರುವ ***ನಿಧಿಯಾಧಾರಿತ ಲೆಕ್ಕಪತ್ರ ನಿರ್ವಹಣಾ ವ್ಯವಸ್ಥೆ*** ಯ (Fund Based Accounting System-FBAS) ತಂತ್ರಾಂಶದಲ್ಲಿ ನಿರ್ವಹಿಸಿದ್ದು, *ದ್ವಿ ನಮೂದು ಪದ್ಧತಿ* ಲೆಕ್ಕಪತ್ರಗಳ ನಿಯಮಗಳನುಸಾರ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳಲ್ಲಿ ಒಳಗೊಳ್ಳಬೇಕಾದ *ಸ್ವೀಕೃತಿ ಮತ್ತು ಪಾವತಿಗಳ ತಃಖ್ತೆ (Receipts & Payments Statement), ರಾಜಸ್ವ/ಆದಾಯ ಮತ್ತು ವೆಚ್ಚಗಳ ತಃಖ್ತೆ (Revenue/Income & Expenditure Statement)ಹಾಗೂ ಅಡಾವೆ ಪತ್ರಿಕೆ (Balance Sheet) ಗಳನ್ನು* ಮಂಡಿಸಿರುತ್ತದೆ. ಈ ಲೆಕ್ಕಪತ್ರಗಳಲ್ಲಿ ದಾಖಲಿಸಿರುವಂತೆ ಅಂಕಿಅಂಶಗಳನ್ನು ಪರಿಶೀಲಿಸಿ ವಿಶ್ವವಿದ್ಯಾಲಯದ ಹಣಕಾಸು ಸ್ಥಿತಿಯನ್ನು ಈ ಕೆಳಗೆ ಸಂಕ್ಷಿಪ್ತವಾಗಿ ನೀಡಿದೆ.

2015–16ನೇ ಸಾಲಿನಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ವಾರ್ಷಿಕ ಸ್ವೀಕೃತಿಗಳು ಮತ್ತು ಪಾವತಿಗಳ ಸಂಕ್ಷಿಪ್ತ ವಿವರ ಈ ಕೆಳಕಂಡಂತಿದೆ

(ರೂ. ಲಕ್ಷಗಳಲ್ಲಿ)

ಸ್ವೀಕೃತಿಗಳು	ಮೊತ್ತ ರೂ.	ಪಾವತಿಗಳು	ಮೊತ್ತ ರೂ.
ಪ್ರಾರಂಭಿಕ ಶಿಲ್ಕು /Opening Balance	1697.89		
ಒಟ್ಟು ಸ್ವೀಕೃತಿಗಳು/Total Receipts	87488.44	ಒಟ್ಟು ಪಾವತಿಗಳು/Total Payments	83,136.18
		ಅಂತಿಮ ಶಿಲ್ಕು/Closing Balance	**6050.15**
ಒಟ್ಟು ರೂ.	**89,186.33**	**ಒಟ್ಟು ರೂ.**	**89,186.33**

ಭಾಗ – 2

ಬೆಂಗಳೂರು ವಿಶ್ವವಿದ್ಯಾಲಯದ 2015–16ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಹಾಗು ಪ್ರಮುಖ ವಿಭಾಗಗಳು, ಘಟಕಗಳು ಮತ್ತು ಕಛೇರಿಗಳ ಹಣಕಾಸು ವಹಿವಾಟುಗಳ ಲೆಕ್ಕಪರಿಶೋಧನಾ ವರದಿ

2015–16ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಪುನರ್ವಿಲೋಕನ ಫಲಿತಾಂಶ

ಆಕ್ಷೇಪಣೆಗಳು	ಉತ್ತರಗಳು

ಭಾಗ– 02

1.1. ವಿಶ್ವವಿದ್ಯಾಲಯದ ನಿಧಿಗಳು: ಬೆಂಗಳೂರು ವಿಶ್ವವಿದ್ಯಾಲಯವು ತನ್ನ ಉದ್ದೇಶಿತ ಉನ್ನತ ಶಿಕ್ಷಣ ಪ್ರಸರಣಾ ಕಾರ್ಯ ಚಟುವಟಿಕೆಗಳಿಗಾಗಿ ಅಗತ್ಯವಿರುವ ಹಣಕಾಸು ನಿಧಿಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಕಲಂ 46(1)ರನ್ವಯ ನಿರ್ವಹಿಸಲಾಗುತ್ತಿದ್ದು, ಬಂಡವಾಳ ಯೋಜನಾ ನಿಧಿ, ಸಾಮಾನ್ಯ ನಿಧಿ, ಸಂಶೋಧನಾ ಯೋಜನೆಯ ನಿಧಿ, ಬಾಹ್ಯ ಸೇವಾ ನಿಧಿ, ಬಾಹ್ಯ ಕಲ್ಯಾಣ ನಿಧಿ ಹಾಗೂ ದತ್ತಿ ನಿಧಿಗಳೆಂದು ಪ್ರತ್ಯೇಕವಾಗಿ ವರ್ಗೀಕರಿಸಲಾಗಿದೆ. ಈ ನಿಧಿಗಳಿಗೆ ರಾಜಸ್ವ ಮೂಲಗಳು ಪ್ರಮುಖವಾಗಿ ವಿಶ್ವವಿದ್ಯಾಲಯದ ಧನ ಸಹಾಯ ಆಯೋಗದ ಅನುದಾನ ಹಾಗೂ ಕೇಂದ್ರ ಸರ್ಕಾರವು ನೀಡುವ ಅನುದಾನ, ವಿಶ್ವವಿದ್ಯಾಲಯ ಸ್ವತ್ತುಗಳಿಂದ ಸ್ವೀಕರಿಸಿದ ಆದಾಯ, ಹೂಡಿಕೆಗಳಿಂದ ಸ್ವೀಕರಿಸಿದ ಆದಾಯ, ರಾಜ್ಯ ಸರ್ಕಾರದ ಅನುದಾನ, ರಾಜ್ಯ ಸರ್ಕಾರದ ಬ್ಲಾಕ್ ಗ್ರಾಂಟ್ಸ್, ಸಂಯೋಜನೆ, ಪ್ರವೇಶಾತಿ ಮತ್ತು ಪರೀಕ್ಷಾ ಶುಲ್ಕ ಹಾಗೂ ಇತರೆ ಚಾರ್ಜುಗಳು, ಇತರೆ ಮೂಲದಿಂದ ಸ್ವೀಕರಿಸಿದ ಆದಾಯಗಳು ಒಳಗೊಂಡಿರುತ್ತದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಕಲಂ 46(2)ರನ್ವಯ ವಿಶ್ವವಿದ್ಯಾಲಯದ ನಿಧಿಗಳನ್ನು ಭಾರತ ರಿಜರ್ವ್ ಬ್ಯಾಂಕ್ ಅಧಿನಿಯಮ, 1943 ರಲ್ಲಿ ಪರಿಭಾಷಿಸಿರುವಂತೆ ಅನುಸೂಚಿತ ಬ್ಯಾಂಕ್ ಅಥವಾ ಬ್ಯಾಂಕಿಂಗ್ ಕಂಪನಿಗಳು ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ ಅಧಿನಿಯಮ 1970ರ ಮೇರೆಗೆ ರಚಿತವಾದ ಹೊಸ ಸಂವಾದಿ ಬ್ಯಾಂಕ್‌ನಲ್ಲಿ ಇಡತಕ್ಕದ್ದು ಹಾಗೂ ವಿಶ್ವವಿದ್ಯಾಲಯದ ನಿಧಿಗಳನ್ನು ಬ್ಯಾಂಕ್‌ಗಳ ಮೂಲಕ ವ್ಯವಸ್ಥಿತ ನಿರ್ವಹಣೆಯನ್ನು ರಾಜ್ಯ ಸರ್ಕಾರದ ಆರ್ಥಿಕ ಇಲಾಖೆ ಹೊರಡಿಸಿರುವ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ. 5 ಟಿಎಆರ್ 2017 ದಿನಾಂಕ: 30.01.2017ರ ಮಾರ್ಗಸೂಚಿಯಲ್ಲಿ ನೀಡಿರುವಂತೆ ನಿರ್ವಹಿಸಬೇಕಾಗಿರುತ್ತದೆ.	ವಿಶ್ವವಿದ್ಯಾಲಯದ ಎಲ್ಲಾ ಆರ್ಥಿಕ ವ್ಯವಹಾರಗಳು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಮಾತ್ರ ನಿರ್ವಹಿಸುತ್ತಿದ್ದು ಹಾಗೂ ವಿಶ್ವವಿದ್ಯಾಲಯದ ನಿಧಿಗಳನ್ನು ಸದರಿ ಬ್ಯಾಂಕ್‌ಗಳ ಮೂಲಕ ವ್ಯವಸ್ಥಿತ ನಿರ್ವಹಣೆಯನ್ನು ರಾಜ್ಯ ಸರ್ಕಾರದ ಆರ್ಥಿಕ ಇಲಾಖೆ ಹೊರಡಿಸಿರುವ ಸರ್ಕಾರಿ ಆದೇಶ ಸಂಖ್ಯೆ ಎಫ್ ಡಿ ಮತ್ತು ಟಿಎಆರ್ 2017 ದಿನಾಂಕ:31.01.2017ರ ಮಾರ್ಗ ಸೂಚಿಯಲ್ಲಿ ನೀಡಿರುವಂತೆ ನಿರ್ವಹಿಸಲಾಗಿದೆ.
1.2. ವಿಶ್ವವಿದ್ಯಾಲಯದ ಲೆಕ್ಕಪತ್ರ ನಿರ್ವಹಣೆ: ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಕಲಂ 47(1)&(2) ರನ್ವಯ ಸಿದ್ಧಪಡಿಸಿ ಸಿಂಡಿಕೇಟ್‌ನಿಂದ ಅನುಮೋದನೆಗೊಂಡ 2015–16ನೇ ಸಾಲಿನ ಬೆಂಗಳೂರು ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲಿಸಲಾಗಿರುವಂತೆ, ವಿಶ್ವವಿದ್ಯಾಲಯವು ತನ್ನ ವಿವಿಧ ನಿಧಿಗಳಿಗೆ ಸಂಗ್ರಹವಾಗುವ ರಾಜಸ್ವ ಜಮೆಗಳು ಮತ್ತು ಈ ನಿಧಿಗಳಿಂದ ಪಾವತಿಯಾದ ವೆಚ್ಚಗಳ ಲೆಕ್ಕಪತ್ರಗಳನ್ನು *ದ್ವಿ ನಮೂದು ಪದ್ಧತಿಯ* ನಿಯಮಗಳನ್ನು ಅನುಸರಿಸಿ ಅಭಿವೃದ್ಧಿ ಪಡಿಸಿರುವ ನಿಧಿಯಾಧಾರಿತ ಲೆಕ್ಕಪತ್ರ ನಿರ್ವಹಣಾ ವ್ಯವಸ್ಥೆಯ(Fund Based Accounting System-FBAS)ತಂತ್ರಾಂಶದಲ್ಲಿ ನಿರ್ವಹಿಸಿದ್ದು, ದ್ವಿ	2003–04 ನೇ ಸಾಲಿನಿಂದ ನಿಧಿಯಾಧಾರಿತ ಲೆಕ್ಕಪತ್ರಗಳನ್ನು ಜಾರಿಗೆ ತಂದಂದಿನಿಂದಲೂ ಜಮಾ ಖರ್ಚಿನ ಪಟ್ಟಿಯಲ್ಲಿ ಅಯಾ ವರ್ಷದಲ್ಲಿ ಬಂದಂತಹ ನಗದು ವಹಿವಾಟುಗಳ ಜಮೆಗಳು ಮತ್ತು ವೆಚ್ಚದ ಮಾಹಿತಿಯನ್ನು ಮಾತ್ರ ಕೊಟ್ಟಿರುತ್ತದೆ. FBAS Manual ನ ಅಧ್ಯಾಯ 3 ರಲ್ಲಿ ಈ ರೀತಿ ಹೇಳಿರುತ್ತದೆ. The cash flow Statement is nothing but the Receipts and Payments Statement which is prepared in the existing system also, this shows the actual inflow and out flow of cash during the period.

ಆಕ್ಷೇಪಣೆಗಳು	***ಉತ್ತರಗಳು***
ನಮೂದು ಪದ್ಧತಿ ಲೆಕ್ಕಪತ್ರಗಳ ನಿಯಮಗಳನುಸಾರ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳಲ್ಲಿ ಒಳಗೊಳ್ಳಬೇಕಾದ ಸ್ವೀಕೃತಿ ಮತ್ತು ಪಾವತಿಗಳ ತಃಖ್ತೆ*(Receipts & Payments Statement),ರಾಜಸ್ವ/ಆದಾಯ ಮತ್ತು ವೆಚ್ಚಗಳ ತಃಖ್ತೆ(Revenue/Income & Expenditure Statement)ಹಾಗೂ ಅಡಾವೆ ಪತ್ರಿಕೆ (Balance Sheet)*ಗಳನ್ನು ಮಂಡಿಸಿರುತ್ತದೆ. ವಿಶ್ವವಿದ್ಯಾಲಯದ ***ನಿಧಿಯಾಧಾರಿತ ಲೆಕ್ಕಪತ್ರ ನಿರ್ವಹಣಾ ವ್ಯವಸ್ಥೆ*** ಯ ಕೈಪಿಡಿಯಲ್ಲಿ ಸ್ಪಷ್ಟಪಡಿಸಿರುವಂತೆ ವಿಶ್ವವಿದ್ಯಾಲಯವು ಈ ಮೇಲಿನ ಲೆಕ್ಕಪತ್ರಗಳನ್ನು ದ್ವಿ ನಮೂದು ಪದ್ಧತಿಯ ಸಂಚಯನ ಪದ್ಧತಿಯನ್ನು*(Accrual System)*ಆಧರಿಸಿ ಸಿದ್ದಪಡಿಸಲಾಗಿರುತ್ತದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಕಾಯ್ದೆ 2000ರ ಕಲಂ 32(3)(i) ರನ್ವಯ ಲೆಕ್ಕಪತ್ರಗಳ ನಿಖರತೆಯನ್ನು ಪರಿಶೀಲಿಸಿ ಖಚಿತಪಡಿಸುವ ಹೊಣೆ ವಿಶ್ವವಿದ್ಯಾಲಯದ ಹಣಕಾಸು ಸಮಿತಿಯ ಮೇಲಿದ್ದು, 2015–16ನೇ ಸಾಲಿನ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳಲ್ಲಿ ಪರಿಗಣಿಸಿರುವ ಬ್ಯಾಂಕ್ ಖಾತೆಗಳನ್ನು ಹಣಕಾಸು ಸಮಿತಿ ಪರಿಶೀಲಿಸಿ ದೃಢಪಡಿಸಿದೆ ಎಂದು ಭಾವಿಸಿ, ಬೆಂಗಳೂರು ವಿಶ್ವವಿದ್ಯಾಲಯದ 2015–16 ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಲೆಕ್ಕಪರಿಶೋಧನಾ ಕಾರ್ಯವನ್ನು ಪರೀಕ್ಷಾರ್ಥವಾಗಿ ಕೈಗೊಂಡು, ವರದಿಯನ್ನು ತಯಾರಿಸಿ ಸಲ್ಲಿಸಲಾಗಿರುತ್ತದೆ. **(ವಿವರಗಳನ್ನು ಅನುಬಂಧ–2)** ವಿಶ್ವವಿದ್ಯಾಲಯದ ಲೆಕ್ಕಪತ್ರಗಳಲ್ಲಿ ಕಂಡುಬಂದಿರುವಂತೆ: ಸ್ವೀಕೃತಿ ಭಾಗದ ಒಟ್ಟು ಮೊತ್ತ ರೂ. 89186.33 ಲಕ್ಷಗಳು ಪಾವತಿಗಳ ಭಾಗದ ಒಟ್ಟು ಮೊತ್ತ ರೂ. 89186.88 ಲಕ್ಷಗಳು **ವ್ಯತ್ಯಾಸದ ಮೊತ್ತ ರೂ. 0.55 ಲಕ್ಷಗಳು** ಈ ಮೇಲೆ ತಿಳಿಸಿದಂತೆ, ರೂ.55,000/–ಗಳ ವ್ಯತ್ಯಾಸ ಕಂಡುಬರುತ್ತಿರುವುದು ಸ್ವೀಕೃತಿ ಮತ್ತು ಪಾವತಿಗಳ ತಃಖ್ತೆಯ ಪ್ರಾರಂಭಿಕ ಶಿಲ್ಕು ಹಾಗೂ ಅಂತಿಮ ಶಿಲ್ಕು ತಾಳೆಯಾಗದಿರುವುದು ಸ್ಪಷ್ಟವಾಗುತ್ತದೆ. ಮುಂದುವರೆದು, ಸಾಮಾನ್ಯ ಅಂಗೀಕೃತ ಲೆಕ್ಕಪತ್ರ ತತ್ವಗಳ (Generally Accepted Accounting Principles-GAAP) ಅನುಸಾರ ಸ್ವೀಕೃತಿ ಮತ್ತು ಪಾವತಿಗಳ ತಃಖ್ತೆಯಲ್ಲಿ ಆರಂಭಿಕ ಹಾಗೂ ಅಂತಿಮ ಶಿಲ್ಕುಗಳನ್ನು ಅಗತ್ಯವಾಗಿ ತೋರಿಸಬೇಕಾಗಿದ್ದು, ಈ ಎರಡು ಶಿಲ್ಕುಗಳನ್ನು ವಿಶ್ವವಿದ್ಯಾಲಯದ ಸ್ವೀಕೃತಿ ಮತ್ತು ಪಾವತಿಗಳ ತಃಖ್ತೆಯಲ್ಲಿ ವರ್ಜಿಸಲಾಗಿದೆ. ಹಿಂದಿನ ಹಾಗೂ ಪ್ರಸಕ್ತ ಸಾಲಿನ ಅಡಾವೆ	ಮುಖ್ಯವಾಗಿ ಲೆಕ್ಕ ಪತ್ರಗಳನ್ನು ತಯಾರಿಸುವ ಮೊದಲು "Trial Balance" ಪಟ್ಟಿಯನ್ನು ಪರಿಶೀಲನೆ ಮಾಡಲು ಅಧ್ಯಾಯ 19 ರಲ್ಲಿ ತಿಳಿಸಿರುತ್ತದೆ. "Trial Balance" ಪಟ್ಟಿಯಲ್ಲಿ ಜಮೆ ಮತ್ತು ಖರ್ಚಿನ (Credit & Debit) ವಹಿವಾಟುಗಳ ಮೊತ್ತ ತಾಳೆಯಾಗಿರುತ್ತದೆ. ಈ ರೀತಿ ತಾಳೆಯಾದ ನಂತರ ಸಿಸ್ಟಂನಲ್ಲಿ ಬರುವ ಇತರೆ ಎಲ್ಲಾ ದಾಖಲೆಗಳು ತಾಳೆಯಾಗಿರುತ್ತವೆ. ಒಂದು ವೇಳೆ ತಾಳೆಯಾಗದೆ ಇದ್ದಿದ್ದರೆ, ಆದಾಯ ಮತ್ತು ವೆಚ್ಚದ ಪಟ್ಟಿಯಲ್ಲಿ ಕೊನೆಗೆ ಬರುವ ನಿವ್ವಳ ಉಳಿತಾಯ/ ಖೋತ ಮೊತ್ತವನ್ನು ವರ್ಗಾಯಿಸಿದಾಗ Balance Sheet ತಾಳೆಯಾಗುತ್ತಿರಲಿಲ್ಲ ಆದರೆ ಅಂತಹ ಯಾವುದೇ ವ್ಯತ್ಯಾಸ ಬರದೆ ಇರುವುದರಿಂದ 2015–16ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳು ಸಂಪೂರ್ಣವಾಗಿ ತಾಳೆಯಾಗಿರುತ್ತದೆ. ಹಾಲಿ ಇರುವ ನಿಧಿ ಆಧಾರಿತ ಲೆಕ್ಕ ಪತ್ರಗಳ ತಂತ್ರಾಂಶವನ್ನು ಉನ್ನತೀಕರಿಸಲು ಕ್ರಮ ಕೈಗೊಳ್ಳುತ್ತಿದ್ದು, ಅದರಲ್ಲಿ ಜಮೆ ಮತ್ತು ಖರ್ಚಿನ ಪಟ್ಟಿಯನ್ನು ತಾಳೆಯಾಗುವಂತೆ ರೂಪಿಸಲು ಕ್ರಮ ವಹಿಸಲಾಗುವುದು.ಆದುದರಿಂದ ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ.

ಆಕ್ಷೇಪಣೆಗಳು	ಉತ್ತರಗಳು
ಪತ್ರಿಕೆಗಳ ಸಹಾಯದಿಂದ ಲೆಕ್ಕಪರಿಶೋಧನೆಯು ಆರಂಭಿಕ ಹಾಗೂ ಅಂತಿಮ ಶಿಲ್ಕುಗಳನ್ನು ಲೆಕ್ಕಹಾಕಿದರೂ ಈ ಮೇಲೆ ತಿಳಿಸಿದ ವ್ಯತ್ಯಾಸಗಳು ಕಂಡುಬರುತ್ತಿದೆ. ಈ ಕುರಿತು ವಿಶ್ವವಿದ್ಯಾಲಯದ ವಿವರಣೆಯನ್ನು ಕೇಳಲಾಗಿ, ಯಾವುದೇ ಉತ್ತರಗಳು ಲೆಕ್ಕಪರಿಶೋಧನೆಗೆ ಸ್ವೀಕೃತವಾಗಿರುವುದಿಲ್ಲ. ಮುಂದುವರೆದು, ಲೆಕ್ಕಪತ್ರಗಳನ್ನು ಪರೀಕ್ಷಾರ್ಥವಾಗಿ ಪರಿಶೋಧಿಸಲಾಗಿ, ಲೆಕ್ಕಪರಿಶೋಧನೆಗೆ ಕಂಡುಬಂದ ಪ್ರಮುಖ ನ್ಯೂನತೆಗಳನ್ನು ಮುಂದಿನ ಕಂಡಿಕೆಗಳಲ್ಲಿ ವಿವರಿಸಲಾಗಿದೆ.	
1.3. ವಿಶ್ವವಿದ್ಯಾಲಯದ ವಿವಿಧ ಕಾರ್ಯ ಚಟುವಟಿಕೆಗಳಿಗಾಗಿ ಮಂಜೂರು ಮಾಡಲಾದ ಎ.ಸಿ. ಬಿಲ್ಲುಗಳ ಮುಂಗಡವನ್ನು ತೀರುವಳಿಗೊಳಿಸದಿರುವುದು. 2015–16ನೇ ಸಾಲಿನ ಬೆಂಗಳೂರು ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರದ ಬ್ಯಾಲೆನ್ಸ್ ಶೀಟ್‌ನಲ್ಲಿ ದಿನಾಂಕ: 31.03.2016ರ ಅಂತ್ಯಕ್ಕೆ ವಿಶ್ವವಿದ್ಯಾಲಯದ ವಿವಿಧ ಕಾರ್ಯ ಚಟುವಟಿಕೆಗಳಿಗಾಗಿ ಮಂಜೂರು ಮಾಡಲಾದ ಎ.ಸಿ. ಬಿಲ್ಲುಗಳ ಮುಂಗಡಗಳು ತೀರುವಳಿಗೊಳ್ಳದೇ ಒಟ್ಟು ರೂ.3,41,71,000/–ಗಳು ಬಾಕಿ ಉಳಿದಿರುತ್ತದೆ. ಈ ಮೊತ್ತದಲ್ಲಿ ಸುಮಾರು ವರ್ಷಗಳ ಹಿಂದೆ ಮಂಜೂರು ಮಾಡಲಾದ ಎ.ಸಿ. ಬಿಲ್ಲು ಮುಂಗಡಗಳು ಒಳಗೊಂಡಿದ್ದು, ಈವರೆವಿಗೂ ಇದರ ತೀರುವಳಿಯಾಗದಿರುವುದು ಕಂಡು ಬಂದಿರುತ್ತದೆ. ಸಾದಿಲ್ವಾರು ವೆಚ್ಚಗಳ ಕೈಪಿಡಿ 1958ರ ನಿಯಮ 36 & 37 ರ ಅನ್ವಯ ಎ.ಸಿ.ಬಿಲ್ಲುಗಳನ್ನು ಅಗತ್ಯ ತುರ್ತು ಸಂದರ್ಭದ ವೆಚ್ಚಗಳ ಪಾವತಿಗಾಗಿ ಮಾತ್ರ ಹಣ ಮಂಜೂರು ಮಾಡಬೇಕಾಗಿದ್ದು, ಹಣ ಸೆಳೆದ ದಿನಾಂಕದಿಂದ ಒಂದು ತಿಂಗಳೊಳಗಾಗಿ ವೆಚ್ಚ ಭರಿಸಿದ ವೋಚರ್‌ಗಳೊಂದಿಗೆ ಎನ್.ಡಿ.ಸಿ ಬಿಲ್ಲುಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕಾಗಿರುತ್ತದೆ. ಈ ನಿಯಮ ಉಲ್ಲಂಘಿಸಿದರೆ ಮುಂಗಡ ಹಣ ಪಡೆದವರ ವೇತನದಿಂದ ಕಟಾವಣೆ ಮಾಡಲು ಸೂಚನೆಯಿರುತ್ತದೆ. ಆದಾಗ್ಯೂ ಮಂಜೂರು ಮಾಡಿದ ಮುಂಗಡ ಹಣದ ಲೆಕ್ಕವನ್ನು ನಿಗದಿತ ಸಮಯದೊಳಗೆ ತೀರುವಳಿಗೊಳಿಸದೇ ಅಥವಾ ಸಂಬಂಧಿಸಿದವರ ವೇತನಗಳಿಂದಲೂ ವಸೂಲಿಸದೇ ಇರುವುದರಿಂದ ಮಂಜೂರು ಮಾಡಿದ ಮೊತ್ತವು ವಿಶ್ವವಿದ್ಯಾಲಯದ ಬ್ಯಾಂಕ್ ಖಾತೆಯಲ್ಲಿದ್ದರೆ ಅನ್ವಯವಾಗುವ ಬಡ್ಡಿ ಸ್ವೀಕೃತಿಯಾಗುತ್ತಿತ್ತು ಹಾಗೂ ಈ ಮೊತ್ತವನ್ನು ನಿಶ್ಚಿತ ಠೇವಣಿಯಲ್ಲಿ ಇರಿಸಿದ್ದರೆ, ಹೆಚ್ಚಿನ ಬಡ್ಡಿ ಸ್ವೀಕೃತವಾಗುತ್ತಿತ್ತು. ಮಂಜೂರು ಮಾಡಲಾದ ಎ.ಸಿ ಬಿಲ್ಲುಗಳ ಲೆಕ್ಕಗಳು ತೀರುವಳಿಗೊಳ್ಳದೆ ವಿಳಂಬವಾದರೆ, ಈ ಮೇಲೆ ತಿಳಿಸಿದಂತೆ ವಿಶ್ವವಿದ್ಯಾಲಯಕ್ಕೆ ಬಡ್ಡಿಯ ನಷ್ಟ ಉಂಟಾಗುವುದಲ್ಲದೆ ಹಣ ದುರುಪಯೋಗವಾಗುವ ಸಾಧ್ಯತೆಗಳು ಹೆಚ್ಚಾಗಿರುತ್ತದೆ.	2016–17 ನೇ ಸಾಲಿನ ಅಂತ್ಯಕ್ಕೆ ತೀರುವಳಿಯಾಗದೇ ಬಾಕಿ ಉಳಿದಿದ್ದ ರೂ.3,41,70,000.00 ಗಳ ತೀರುವಳಿಗೆ ಆದ್ಯತೆ ಮೇಲೆ ಕ್ರಮ ಕೈಗೊಳ್ಳುತ್ತಿದ್ದು 2017–18ನೇ ಸಾಲಿನ ವರ್ಷಾಂತ್ಯಕ್ಕೆ ಪ್ರಸಕ್ತ ಸಾಲಿನಲ್ಲಿ ಮಂಜೂರಾಗಿರುವ ಎ.ಸಿ ಬಿಲ್ಲು ಮುಂಗಡವು ರೂ.11,19,86,000/–ಗಳಾಗಿದೆ. FBAS ತಂತ್ರಜ್ಞಾನ ಉನ್ನತೀಕರಣಕ್ಕೆ ಈಗಾಗಲೇ ಕ್ರಮಕೈಗೊಂಡಿದ್ದು ಸಾದಿಲ್ವಾರು ವೆಚ್ಚಗಳ ಕೈ ಪಿಡಿ 1958 ರ ನಿಯಮ 36 ಮತ್ತು 37ರ ಅನ್ವಯ ಎಸಿ ಬಿಲ್ಲುಗಳ ಮುಂಗಡ ನಿಯಂತ್ರಣಕ್ಕೆ ಸೂಕ್ತ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಾಗುವುದು.

ಆಕ್ಷೇಪಣೆಗಳು	ಉತ್ತರಗಳು

1.4.ವಿಶ್ವವಿದ್ಯಾಲಯದ ಆಯವ್ಯಯ ಅಂದಾಜುಗಳು (Budget Variance)

2015–16ನೇ ಸಾಲಿನ ವಿಶ್ವವಿದ್ಯಾಲಯದ ಆಯವ್ಯಯ ಅಂದಾಜುಗಳು ಹಾಗೂ ವಾಸ್ತವಿಕ ಸ್ವೀಕೃತಿ ಮತ್ತು ಪಾವತಿಗಳಲ್ಲಿನ ವ್ಯತ್ಯಯಗಳನ್ನು ಪರಿಶೀಲಿಸಲಾಗಿ, ಪರೀಕ್ಷಾ ವಿಭಾಗದ ಅಂದಾಜುಗಳು ಮತ್ತು ಸ್ವೀಕೃತಿಗಳಲ್ಲಿ ಶೇ.10 ರಿಂದ 25ರ ವರೆಗೂ ಅಂದಾಜಿಗಿಂತ ವಾಸ್ತವಿಕ ಸ್ವೀಕೃತಿಯಲ್ಲಿ ಕಡಿಮೆಯಿದ್ದು, ಉಳಿದ ಅಂದಾಜುಗಳೂ ಮತ್ತು ವಾಸ್ತವಿಕ ಸ್ವೀಕೃತಿಗಳು ಅಲ್ಪ ಪ್ರಮಾಣದ ಏರುಪೇರು ಗಮನಿಸಲಾಗಿದೆ. ಈ ಕೆಳಗಿನ ಸ್ವೀಕೃತಿಗಳ ಅಂದಾಜುಗಳು ಪೂರ್ವ ನಿರ್ಧಾರಿತ ಕ್ರಮಗಳ ಅನುಗುಣವಾಗಿ ಅಂದಾಜಿಸಲಾಗಿದ್ದು, ಅಂದಾಜಿನಂತೆ ಯಾವುದೇ ಕ್ರಮ ಜರುಗಿಸದ ಕಾರಣ ಬಾರಿ ಪ್ರಮಾಣದ ವ್ಯತ್ಯಸವಿರುತ್ತದೆ ಹಾಗೂ ಕೆಲವು ಅಂದಾಜುಗಳಲ್ಲಿ ಶೂನ್ಯ ಸಾಧನೆಯು ಕಂಡುಬಂದಿರುತ್ತದೆ.

Receipts	Budget Estimation for 2015-16	Actual for 2015-16	Difference	Difference in Percentage
168-Rent from other University Building	10.00	5.88	(-)4.12	74.9%
164-Sale of Old Answer Books (Exam Branch)	15.00	-	(-)15.00	100%
166-Sale of Dead Stock Materials	25.00	-	(-)25.00	100%

ಈ ಮೇಲಿನ ಅಂದಾಜುಗಳ ಗುರಿ ಸಾಧಿಸಲು ವಿಶ್ವವಿದ್ಯಾಲಯದ ಸಕಾಲದ ಕ್ರಮ ಅಗತ್ಯವಿರುತ್ತದೆ ಹಾಗು ಪೂರ್ವ ನಿರ್ಧಾರಿತ ಕ್ರಮಗಳ ಅನುಷ್ಠಾನದಿಂದ ಮೇಲಿನ ಸ್ವೀಕೃತಿಗಳ ಗುರಿಯನ್ನು ಪೂರ್ಣವಾಗಿ ಸಾಧಿಸಬಹುದಾಗಿದೆ.

ವಿಶ್ವವಿದ್ಯಾಲಯದ ಒಟ್ಟಾರೆ ಅಂದಾಜುಗಳ ಏರುಪೇರುಗಳನ್ನು ಗಮನಿಸಿದಂತೆ ಕೆಳಗಿನ ವ್ಯತ್ಯಯಗಳು ಕಂಡುಬಂದಿರುತ್ತದೆ.

Capital Project Fund	Budget Estimation for 2015-16	Actual for 2015-16	Difference
Receipts	100.01	6,212.82	(+)6,112.81
Payments	2,569.21	3,734.98	(+)3,734.98
General Fund			
Receipts	28,955.76	41,549.45	(+)12,593.69
Payments	23,730.86	44,182.05	(+)20,451.19
Employee Welfare Fund			
Receipts	2,826.00	6,731.29	(+)3905.29
Payments	560.00	579.82	(+)19.82
External Service Fund			
Receipts	157.51	188.53	(+)31.02
Payments	0.01	821.65	(+)821.64
Endowment Fund			
Receipts	20.01	358.02	(+)338.01
Payments	41.00	6.69	(-)34.31

2015–16ನೇ ಸಾಲಿನಲ್ಲಿ ಖರ್ಚಾಗಿದೆ ಎಂದು ತೋರಿಸಿರುವ ಕಾಲಂನ ಮೊತ್ತದಲ್ಲಿ ಪ್ರಸಕ್ತ ಸಾಲಿನ ನಿಧಿಗಳಲ್ಲಿ ಆಯವ್ಯಯ ಲೆಕ್ಕ ಶೀರ್ಷಿಕೆವಾರು ಖರ್ಚಾಗಿರುವ ವೆಚ್ಚದ ಜೊತೆಗೆ ಆಕ್ಷೇಪಣೆಯಲ್ಲಿ ತಿಳಿಸಿರುವಂತೆ ಆಯವ್ಯಯವೇತರ ವೆಚ್ಚಗಳು (Non-Budget Item) ಸೇರಿರುತ್ತವೆ. ಈ ಮಾಹಿತಿಯನ್ನು 2017–18ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ Actuals for 2015–16 ಕಾಲಂನಲ್ಲಿ ತೋರಿಸಿರುತ್ತದೆ. ನಿಧಿ ಆಧಾರಿತ ಲೆಕ್ಕಪತ್ರಗಳಲ್ಲಿ ಯಾವುದೇ ಒಂದು ಓಚರ್‌ನ್ನು FBASನಲ್ಲಿ ಅಳವಡಿಸ ಬೇಕಾದರೆ, ಆಯವ್ಯಯ ಲೆಕ್ಕಶೀರ್ಷಿಕೆಯಲ್ಲಿ ದಾಖಲಿಸಬೇಕಾಗುತ್ತದೆ. ಆಯಾ ಸಾಲಿನ ಆಯವ್ಯಯದಲ್ಲಿ ತೋರಿಸದಿರುವಂತಹ ನಿಶ್ಚಿತ ಠೇವಣಿ ಹೂಡಿಕೆ, ಬಿಲ್ಲುಗಳಲ್ಲಿನ ಕಡಿತಗಳು, ಇತ್ಯಾದಿಗಳನ್ನು Non Budget ಲೆಕ್ಕಶೀರ್ಷಿಕೆಯಲ್ಲಿ ದಾಖಲಿಸಲಾಗಿರುತ್ತದೆ.

ಈ ಎಲ್ಲಾ ಮಾಹಿತಿಯನ್ನು ಆಯವ್ಯಯ ಲೆಕ್ಕ ಶೀರ್ಷಿಕೆಗಳ General Ledgerನಲ್ಲಿ ಹಾಗೂ Budget Variance ನಲ್ಲಿ ಪ್ರತ್ಯೇಕವಾಗಿ ತೋರಿಸಿರುವುದರಿಂದ ಆಯವ್ಯಯವಾರು ವೆಚ್ಚದ ಮಾಹಿತಿಯು ಲಭ್ಯವಿರುತ್ತದೆ.

ಹಾಗಾಗಿ, ಮೇಲೆ ಹೇಳಿರುವ ಕಾರಣದಿಂದ, ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ.

ಆಕ್ಷೇಪಣೆಗಳು	***ಉತ್ತರಗಳು***
ಈ ಮೇಲಿನ ತಃಖ್ತೆಯಲ್ಲಿ ತೋರಿಸಲಾಗಿರುವಂತೆ ಅಂದಾಜುಗಳಿಗಿಂತ ವಾಸ್ತವ ಸ್ವೀಕೃತಿ ಮತ್ತು ಪಾವತಿಗಳಲ್ಲಿ ಸಾಕಷ್ಟು ವ್ಯತ್ಯಾಸಗಳಿದ್ದು, ಈ ವ್ಯತ್ಯಾಸಗಳಿಗೆ ಅಂದಾಜೇತರ ಹಂಚಿಕೆಗಳ ಸ್ವೀಕೃತಿ ಮತ್ತು ಪಾವತಿಗಳಾದ ನಿಶ್ಚಿತ ಠೇವಣಿಗಳಲ್ಲಿನ ಹೂಡಿಕೆ, ಎಲ್ಲಾ ರೀತಿಯ ಕಟಾವಣೆಗಳ ವಹಿವಾಟುಗಳಿಂದ ಈ ರೀತಿಯಾದ ವ್ಯತ್ಯಾಸಗಳಾಗುತ್ತದೆ ಹಾಗೂ ಕೇಲವೊಂದು ಅಂದಾಜೇತರ ಹಂಚಿಕೆಗಳ ಸ್ವೀಕೃತಿ ಮತ್ತು ಪಾವತಿಗಳು ನಿಧಿಗಳ ವಿಂಗಡಣೆಯಲ್ಲಿ ಪುನರಾವರ್ತನೆಯಾಗಿರುತ್ತದೆಯೆಂದು ವಿಶ್ವವಿದ್ಯಾಲಯದಿಂದ ವಿವರಣೆ ನೀಡಲಾಗಿದೆ. ತಂತ್ರಾಂಶದಲ್ಲಿ ನಿರ್ವಹಿಸಲಾಗುತ್ತಿರುವ ಲೆಕ್ಕಪತ್ರಗಳು ಮತ್ತು ಅಂದಾಜುಗಳು ಸುಲಭವಾಗಿ ಅರ್ಥೈಸಿಕೊಳ್ಳುವ ರೀತಿ ಇರಬೇಕಿದ್ದು, ವಿಶ್ವವಿದ್ಯಾಲಯದ ಬಡ್ಜೆಟ್ ವೆರಿಯನ್ಸ್ ವರದಿಯು ಲೆಕ್ಕಪರಿಶೋಧನೆಯು ಅಪೇಕ್ಷಿಸಿದ ನಿಖರವಾದ ಮಾಹಿತಿಗಳು ಲಭ್ಯವಿರುವುದಿಲ್ಲ.	
1.5. ವಿಶ್ವವಿದ್ಯಾಲಯದ ಹೂಡಿಕೆಗಳು: ವಿಶ್ವವಿದ್ಯಾಲಯದ ಹಣಕಾಸು ಸಮಿತಿಯ ಶಿಫಾರಸ್ಸು ಮೇರೆಗೆ ಸಿಂಡಿಕೇಟ್ ತಿರ್ಮಾನಿಸಬಹುದಾದಂತೆ, ಭಾರತ ನ್ಯಾಸ ಅಧಿನಿಯಮ, 1882ರ ಮೂಲಕ ಪ್ರಾಧೀಕೃತವಾದ ಭದ್ರತೆಗಳಲ್ಲಿ ಹೂಡಿಕೆಗಳನ್ನು ಮಾಡಬೇಕಾಗಿದ್ದು, 2015–16ನೇ ಸಾಲಿನ ಬೆಂಗಳೂರು ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳಲ್ಲಿ ಗಮನಿಸಿದಂತೆ, ವಿಶ್ವವಿದ್ಯಾಲಯಕ್ಕೆ ಸಂಗ್ರಹಣೆಯಾದ ಹೆಚ್ಚುವರಿ ನಿಧಿಯನ್ನು ನಿಶ್ಚಿತ ಠೇವಣಿಗಳಲ್ಲಿ ಹೂಡಿಕೆ ಮಾಡಲಾಗಿರುತ್ತದೆ. 2015–16ನೇ ಸಾಲಿನಲ್ಲಿ ಮಾಡಲಾದ ಹೂಡಿಕೆಗಳೂ ಸೇರಿ ಐದು ವರ್ಷದ ಹೂಡಿಕೆಗಳ ವಿವರಗಳು ಕೆಳಕಂಡಂತಿದೆ. **Investments of the University out of surplus funds** (Rs. In Lakhs) **Year** | **2011-12** | **2012-13** | **2013-14** | **2014-15** | **2015-16** **Investment** | ***16266.71*** | ***18526.52*** | ***20589.49*** | ***25540.07*** | ***35419.36*** ಕಳೆದ ಸಾಲಿಗೆ ಹೋಲಿಕೆ ಮಾಡಿದಾಗ 2015–16ನೇ ಸಾಲಿನಲ್ಲಿ ಶೇಕಡ 38.68ರಷ್ಟು ಹೆಚ್ಚುವರಿ ಹೂಡಿಕೆ ಮಾಡಲಾಗಿದೆ. ಈ ಹೂಡಿಕೆಗಳ ಅಂಕಿ ಅಂಶಗಳನ್ನು ಲೆಕ್ಕಪತ್ರದಲ್ಲಿರುವಂತೆ ಪರಿಶೀಲಿಸಿ, ಲೆಕ್ಕಹಾಕಲಾಗಿರುವಂತೆ ಕೆಳಗಿನ ವ್ಯತ್ಯಾಸ ಲೆಕ್ಕಪರಿಶೋಧನೆಗೆ ಕಂಡುಬಂದಿರುತ್ತದೆ. (ರೂ. ಲಕ್ಷಗಳಲ್ಲಿ) 2015–16ನೇ ಸಾಲಿನ ಪ್ರಾರಂಭಿಕ ಶಿಲ್ಕು ರೂ. **24540.07** (–) 2015–16ನೇ ಸಾಲಿನಲ್ಲಿ ಹೂಡಿಕೆಗಳಿಂದ ಹಿಂದಿರುಗಿದ ಮೊತ್ತ ರೂ. 21757.04 (+) 2015–16ನೇ ಸಾಲಿನಲ್ಲಿ ರೂ. 32338.58	2015–16ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳಲ್ಲಿ ಲೆಕ್ಕಶೀರ್ಷಿಕೆ 00783 Investment in Banks-Fixed Deposits ನಲ್ಲಿ ರೂ. 35419.36 ಲಕ್ಷಗಳ ಅಂತಿಮ ಶಿಲ್ಕನ್ನು ತೋರಿಸಿರುತ್ತದೆ. ಅದೇ ಸಾಲಿನ ಜನರಲ್ ಲೆಡ್ಜರ್‌ನಲ್ಲಿಯೂ ಸಹ ಅದೇ ಮೊತ್ತವನ್ನು ತೋರಿಸಿರುತ್ತದೆ. ವಿವರಗಳು ಈ ಕೆಳಕಂಡಂತಿವೆ. ರೂ. ಲಕ್ಷಗಳು 1) ಪ್ರಾರಂಭ ಶಿಲ್ಕು 24540.07 2) ಹೂಡಿಕೆಗಳು Deposit ಮೊತ್ತ 32636.33 3) ಒಟ್ಟು ಮೊತ್ತ 57176.40 4) ಹೂಡಿಕೆಗಳ ನಗದೀಕರಣ 21757.04 5) ಅಂತಿಮ ಶಿಲ್ಕು 35419.36 ಆದರೆ, ಆಕ್ಷೇಪಣೆಯಲ್ಲಿ ಹೂಡಿಕೆಗಳ ಮೊತ್ತ ರೂ. 32636.33 ಲಕ್ಷಗಳನ್ನು ತೆಗೆದುಕೊಳ್ಳುವ ಬದಲು ರೂ. 32338.58 ಲಕ್ಷಗಳನ್ನು ತೆಗೆದುಕೊಂಡಿರುವುದರಿಂದ ವ್ಯತ್ಯಾಸ ರೂ. 297.75 ಲಕ್ಷಗಳು ಬಂದಿದೆಯೇ ಹೊರತು ವಾರ್ಷಿಕ ಲೆಕ್ಕಪತ್ರಗಳಲ್ಲಿ ಯಾವುದೇ ವ್ಯತ್ಯಾಸ ಬಂದಿರುವುದಿಲ್ಲ. ಇದಕ್ಕೆ ಪೂರಕವಾಗಿ 2015–16ನೇ ಸಾಲಿನ ಲೆಕ್ಕಶೀರ್ಷಿಕೆ 00783 Investment in Banks-Fixed Deposits ನಲ್ಲಿ ಜನರಲ್ ಲೆಡ್ಜರ್‌ನ

ಆಕ್ಷೇಪಣೆಗಳು	***ಉತ್ತರಗಳು***
ಹೂಡಿಕೆ ಮಾಡಲಾಗಿರುವ ಮೊತ್ತ ಈ ಮೇಲಿನ ಲೆಕ್ಕಚಾರದಂತೆ ಅಂತಿಮ ಶಿಲ್ಕು **ರೂ. 35419.36** (–) ವಾರ್ಷಿಕ ಲೆಕ್ಕಪತ್ರದಲ್ಲಿರುವ ಹೂಡಿಕೆಗಳ ಅಂತಿಮ ಶಿಲ್ಕು **ರೂ. 35121.61** **ವ್ಯತ್ಯಾಸದ ಮೊತ್ತ ರೂ. 297.75** ಈ ಮೇಲೆ ವಿವರಿಸಿದಂತೆ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳಲ್ಲಿ ನಿಶ್ಚಿತ ಠೇವಣಿಗಳಲ್ಲಿ ಹೂಡಿಕೆ ಮಾಡಲಾದ ಅಂತಿಮ ಶಿಲ್ಕು ರೂ.297.75 ಲಕ್ಷಗಳು ಕಡಿಮೆ ತೋರಿಸಲಾಗಿರುತ್ತದೆ. ಮೇಲಿನ ಎಲ್ಲಾ ಅಂಕಿ ಅಂಶಗಳನ್ನು ವಾರ್ಷಿಕ ಲೆಕ್ಕಪತ್ರಗಳಲ್ಲಿದ್ದಂತೆ ಲೆಕ್ಕಹಾಕಲಾಗಿದೆ. ಆದಾಗ್ಯೂ ಈ ವ್ಯತ್ಯಾಸವಿರುವುದಕ್ಕೆ ಯಾವುದೇ ಸ್ಪಷ್ಟನೆ ಲೆಕ್ಕಪತ್ರಗಳಲ್ಲಿ ಕಂಡುಬಂದಿರುವುದಿಲ್ಲ. ಈ ಕುರಿತು ವಿಶ್ವವಿದ್ಯಾಲಯದ ವಿವರಣೆಯನ್ನೂ ಸಹ ಕೇಳಲಾಗಿದ್ದು, ಈವರೆಗೂ ಉತ್ತರಗಳು ಸ್ವೀಕೃತವಾಗಿರುವುದಿಲ್ಲ.	ಕಂಪ್ಯೂಟರ್ ಪ್ರತಿಯನ್ನು ಹಾಗೂ ವಾರ್ಷಿಕ ಲೆಕ್ಕಪತ್ರಗಳ ಪುಟ 19ರ ಜೆರಾಕ್ಸ್ ಪ್ರತಿಯನ್ನು ಲಗತ್ತಿಸುತ್ತಾ ವಾರ್ಷಿಕ ಲೆಕ್ಕಪತ್ರಗಳಲ್ಲಿ ತೋರಿಸಿರುವ ಮೊತ್ತ ರೂ. 35,419.36 ಲಕ್ಷಗಳು ಸರಿಯಾಗಿರುವುದರಿಂದ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ **(ಅನುಬಂಧ–91)** (ಪು.ಸಂ.609)**.**
1.6.ವಿಶ್ವವಿದ್ಯಾಲಯವು ನಿರ್ವಹಿಸುತ್ತಿರುವ ಬ್ಯಾಂಕ್ ಖಾತೆಗಳ ಲೆಕ್ಕಸಮನ್ವಯ: 2015–16ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ವಯ ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟ ಒಟ್ಟು 22 ಬ್ಯಾಂಕ್ ಖಾತೆಗಳನ್ನು ನಿರ್ವಹಿಸಲಾಗಿದ್ದು, ದಿನಾಂಕ: 31.03.2016ರ ಅಂತ್ಯಕ್ಕೆ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ದಪಡಿಸಿ ಅಂತಿಮಗೊಳಿಸಲು ಲೆಕ್ಕಪತ್ರದ ಖಾತೆವಾರು ಅಂತಿಮ ಶಿಲ್ಕುಗಳನ್ನು ಬ್ಯಾಂಕ್ ಪಾಸ್ ಶೀಟ್‌ಗಳಲ್ಲಿನ ಅಂತಿಮ ಶಿಲ್ಕುಗಳೊಂದಿಗೆ ಲೆಕ್ಕಸಮನ್ವಯಿಕರಿಸಿದ ತಃಖ್ತೆಯನ್ನು ವಾರ್ಷಿಕ ಲೆಕ್ಕಪತ್ರಗಳೊಂದಿಗೆ ಮಂಡಿಸಲಾಗಿದೆ **(ಅನುಬಂಧ–3)**. ಈ ತಃಖ್ತೆಯ ಅಂಕಿಅಂಶಗಳನ್ನು ಖಚಿತಪಡಿಸಿಕೊಳ್ಳಲು ಲೆಕ್ಕಸಮನ್ವಯಗೊಳಿಸಿದ ಖಾತೆವಾರು ವಿವರಗಳನ್ನು ಬ್ಯಾಂಕ್ ಪಾಸ್ ಶೀಟುಗಳೊಂದಿಗೆ ಅಡ್ಡಪರಿಶೀಲನೆ ನಡೆಸಲಾಗಿ, ಎರಡು ಖಾತೆಗಳಲ್ಲಿ ವ್ಯತ್ಯಯಗಳನ್ನು ಗಮನಿಸಲಾಗಿರುತ್ತದೆ. ವಿವರ ಕೆಳಕಂಡಂತಿದೆ. 1. ಲೆಕ್ಕಸಮನ್ವಯ ತಃಖ್ತೆಯಲ್ಲಿರುವಂತೆ ಪ್ರಸಾರಂಗ ಬ್ಯಾಂಕ್ ಖಾತೆ ಸಂ: 54051262750 ಎಸ್.ಬಿ.ಎಂ ಬ್ಯಾಂಕ್‌ನ ಅಂತಿಮ ಶಿಲ್ಕು ರೂ. 81,91,238/–ಗಳಿದ್ದು, ಪಾಸ್ ಶೀಟ್ ಪರಿಶೀಲನೆ ಮಾಡಿದಾಗ ರೂ. 82,28,989/–ಗಳಿರುತ್ತದೆ. ವ್ಯತ್ಯಾಸ ರೂ. 37,751/–ಗಳಾಗಿದ್ದು, ಈ ಕುರಿತು ವಿಶ್ವವಿದ್ಯಾಲಯದ ವಿವರಣೆ ಸ್ವೀಕೃತವಾಗಿರುವುದಿಲ್ಲ. 2. ಬ್ಯಾಂಕ್ ಖಾತೆ ಸಂ: 64062451456 ಎಸ್.ಬಿ.ಎಂ. ಬ್ಯಾಂಕ್ ಇದರ ವಿಶ್ವವಿದ್ಯಾಲಯದ ಲೆಕ್ಕಪತ್ರಗಳನ್ವಯ ರೂ. (–) 76,29,282/–ಗಳ ಋಣಾತ್ಮಕ ಅಂತಿಮ	2015–16ನೇ ಸಾಲಿನಲ್ಲಿ ಎಲ್ಲಾ ಬ್ಯಾಂಕ್ ಖಾತೆಗಳ ಲೆಕ್ಕ ಸಮನ್ವಯವನ್ನು ಮಾಡಿ, ವಾರ್ಷಿಕ ಲೆಕ್ಕಪತ್ರಗಳಲ್ಲಿ Status of Bank Reconciliation as on 31.03.2016 ರ ಪಟ್ಟಿಯನ್ನು ಅಳವಡಿಸಿರುತ್ತದೆ. ಬ್ಯಾಂಕಿನವರು ಜೂನ್ 2016ರಲ್ಲಿ31.03.2016ರ ವರೆಗೆ ಬ್ಯಾಂಕ್ ಪಾಸ್ ಶೀಟುಗಳನ್ನು ಹಾಕಿದಾಗ ಬ್ಯಾಂಕ್ ಖಾತೆ 54051262750 ರ ಪಾಸ್ ಶೀಟಿನಲ್ಲಿ ಅಂತಿಮ ಶುಲ್ಕು ರೂ.81,98,238.00 ತೋರಿಸಿದ್ದರಿಂದ ಅವರು ಕೊಟ್ಟಿಂದಂತಹ ಪಾಸ್ ಶೀಟಿನೊಂದಿಗೆ ತಾಳೆ ಮಾಡಿ ಲೆಕ್ಕ ಸಮನ್ವಯ ಮಾಡಿರುತ್ತದೆ. ಅದರೆ 2016–17ನೇ ಸಾಲಿನಲ್ಲಿ ಅವರಿಂದ ಬಂದಂತಹ ಪಾಸ್ ಶೀಟಿನೊಂದಿಗೆ ಪಾಸ್ ಶೀಟ್ ಪ್ರಾರಂಭ ಶಿಲ್ಕು ತಾಳೆಯಾಗದಿರುವುದರಿಂದ ಹಿಂದಿನ ವರ್ಷದಲ್ಲಿ ಅವರು ಕೊಡದಂತಹ ಕೊನೆಯ ಪುಟದ ಮಾಹಿತಿಯನ್ನು ಪಡೆದುಕೊಂಡು 2015–16ನೇ ಸಾಲಿನಲ್ಲಿ ಬಿಟ್ಟು ಹೋಗಿದ್ದಂತಹ ವಹಿವಾಟುಗಳನ್ನು 2016–17ನೇ ಲೆಕ್ಕ ಪತ್ರಗಳಲ್ಲಿ ಅಳವಡಿಸಿಕೊಂಡು ಸರಿಪಡಿಸಿಕೊಂಡಿರುತ್ತದೆ. ಇಂತಹ ತಪ್ಪುಗಳನ್ನು ತಪ್ಪಿಸಲು ವರ್ಷದ ಅಂತ್ಯಕ್ಕೆ ಬ್ಯಾಂಕ್ ಖಾತೆಗಳಲ್ಲಿರುವ ಅಂತಿಮ ಶಿಲ್ಕನ್ನು ಬ್ಯಾಂಕಿನಿಂದ ಪಡೆದುಕೊಂಡು ಪರಿಶೀಲನೆ ಮಾಡಿಕೊಳ್ಳಲಾಗುತ್ತಿದೆ. ಈಗಾಗಲೇ ಸರಿಪಡಿಸಿಕೊಂಡಿರುವುದರಿಂದ ಬ್ಯಾಂಕ್ ಖಾತೆ 54051262750 ರಲ್ಲಿನ ವ್ಯತ್ಯಾಸದ ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ.

ಆಕ್ಷೇಪಣೆಗಳು	***ಉತ್ತರಗಳು***
ಶಿಲ್ಕು ಕಂಡುಬರುತ್ತಿದ್ದು, ಬ್ಯಾಂಕ್ ಪಾಸ್ ಶೀಟಿನಲ್ಲಿ ಅಂತಿಮ ಶಿಲ್ಕು ರೂ. 29,12,653/–ಗಳಿರುತ್ತದೆ. 2014–15ನೇ ಸಾಲಿನ ಅಂತ್ಯಕ್ಕೆ ಅದರ ಹಿಂದಿನ ಸಾಲುಗಳಲ್ಲಿ ಸ್ವೀಕೃತಿ ಮತ್ತು ಪಾವತಿಗಳ ಸರಿಯಾದ ಲೆಕ್ಕಪತ್ರ ದಾಖಲಾತಿಗಳನ್ನು ದಾಖಲಿಸದೇ ಇರುವ ಕಾರಣ ವಿಶ್ವವಿದ್ಯಾಲಯದ ಲೆಕ್ಕಪತ್ರದ ತಂತ್ರಾಂಶದಲ್ಲಿ ರೂ.(–)44,23,18,869/–ಗಳ ಋಣಾತ್ಮಕ ಶಿಲ್ಕು ತೋರಿಸಲಾಗಿತ್ತು. ಈ ವ್ಯತ್ಯಯಗಳಿಗೆ ನಿಖರವಾದ ಕಾರಣಗಳನ್ನು ತಿಳಿಯಲು ವಿಶ್ವವಿದ್ಯಾಲಯಕ್ಕೆ ಸಾಧ್ಯವಾಗದೆ ಈ ನ್ಯೂನತೆಗಳನ್ನು ಸರಿಪಡಿಸಲು ಬ್ಯಾಂಕ್ ಖಾತೆಗಳಲ್ಲಿನ ಧನಾತ್ಮಕ ಸ್ವೀಕೃತಿಗಳನ್ನು ಆಧರಿಸಿ, As One Time Measurement ಎಂದು ಋಣಾತ್ಮಕ ಶಿಲ್ಕುಗಳನ್ನು ಫಂಡ್ ಬ್ಯಾಲೆನ್ಸ್‌ಗಳಿಗೆ ವರ್ಗಾಯಿಸಿ ಜರ್ನಲ್ ವೋಚರ್ ಪಾಸು ಮಾಡುವುದರ ಮೂಲಕ ಸಮದೂಗಿಸಿ ದಿನಾಂಕ: 12.05.2016ರಂದು ನಡೆದ 128ನೇ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯಲಾಗಿದೆ. ಇದನ್ನು ಹೊರತು ಪಡಿಸಿ ಈ ಮೇಲೆ ತಿಳಿಸಿದ ಬ್ಯಾಂಕ್ ಖಾತೆಯ ವಿಶ್ವವಿದ್ಯಾಲಯದ ಲೆಕ್ಕಪತ್ರದಲ್ಲಿ ಹಾಗೂ ಲೆಕ್ಕಪತ್ರಗಳ ಇತರೆ ವಿಷಯದ ಲೆಕ್ಕಗಳಲ್ಲಿ ಋಣಾತ್ಮಕ ಶಿಲ್ಕುಗಳು 2015–16ನೇ ಸಾಲಿನಲ್ಲೂ ಮುಂದುವರೆದಿದೆ. ಇತರೆ ವಿಷಯದ ಲೆಕ್ಕಗಳಲ್ಲಿನ ಋಣಾತ್ಮಕ ಶಿಲ್ಕುಗಳ ಕುರಿತು ಮುಂದಿನ ಕಂಡಿಕೆಗಳಲ್ಲಿ ವಿವರಿಸಲಾಗಿದೆ. ಹಣಕಾಸು ವಹಿವಾಟುಗಳ ದಾಖಲೆಗಳನ್ನು ಲೆಕ್ಕಪತ್ರಗಳಲ್ಲಿ ಕ್ರಮವಾಗಿ ದಾಖಲಿಸದೇ ಇರುವುದು ಲೆಕ್ಕಪತ್ರಗಳಲ್ಲಿ ವ್ಯತ್ಯಯವಾಗುವುದಕ್ಕೆ ಕಾರಣವಾಗುತ್ತದೆ.	ಬ್ಯಾಂಕ್ ಖಾತೆ 54062451456 ರಲ್ಲಿ ನಗದು ಪುಸ್ತಕದ ಪ್ರಕಾರ ರೂ.76,29,282.00 ಗಳ ಋಣ ಮೊತ್ತ ಬಂದಿರುತ್ತದೆ. ಬ್ಯಾಂಕ್ ಪಾಸ್‌ಶೀಟಿನಲ್ಲಿರುವ ಶುಲ್ಕ ಮೊತ್ತ ರೂ.29,12,653.00 ಗಳೊಂದಿಗೆ ತಾಳೆ ಮಾಡಿಕೊಂಡು ತಾಳೆಯಾದ ಬ್ಯಾಂಕ್ ಸಮನ್ವಯತೆಯ ಪಟ್ಟಿಯನ್ನು ಲೆಕ್ಕಪರಿಶೋಧನೆಗೆ ಒದಗಿಸಿರುತ್ತದೆ. 2016–17ನೇ ಸಾಲಿನಲ್ಲಿ ಯಾವುದೇ ಬ್ಯಾಂಕ್ ಖಾತೆಯಲ್ಲಿ ಋಣಾತ್ಮಕ ಮೊತ್ತ ಇಲ್ಲದಿರುವುದರಿಂದ ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ.
1.7. ಪರಿನಿಯಮಗಳನ್ನು ರಚಿಸಿಕೊಳ್ಳದೇ ಪ್ರಾರಂಭಿಸಲಾದ ಅಧ್ಯಯನ ವಿಭಾಗಗಳು ಹಾಗೂ ಭರಿಸಲಾಗಿರುವ ವೆಚ್ಚಗಳು ಮುಂದುವರೆದು, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 83 ರಲ್ಲಿ ಪರಿನಿಯಮಗಳು, ವಿನಿಮಯಗಳ ಆರ್ಡಿನೆನ್ಸ್ ಇತ್ಯಾದಿಗಳ ಮುಂದುವರಿಕೆಗೆ ಸಂಬಂಧಿಸಿದಂತೆ, ಕ್ರಮ ಸಂಖ್ಯೆ. (1) ರಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 1976ರ ಉಪಬಂಧಗಳ ಅಡಿಯಲ್ಲಿ ಮಾಡಿದ ಹಾಗೂ ಈ ಅಧಿನಿಯಮದ ಪ್ರಾರಂಭದ ನಿಕಟಪೂರ್ವದಲ್ಲಿ ಜಾರಿಯಲ್ಲಿರುವ ಪರಿನಿಯಮಗಳು, ಅರ್ಡಿನೆನ್ಸ್‌ಗಳು, ವಿನಿಮಯಗಳು ಮತ್ತು ನಿಯಮಗಳ ಉಪಬಂಧಗಳು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರುವಷ್ಟರ ಮಟ್ಟಿಗೆ ರಾಜ್ಯ ಸರ್ಕಾರದ ಮೂಲಕ ಕುಲಾಧಿಪತಿ ಯವರಿಂದ ಪಡೆದುಕೊಂಡ ಅನುಮೋದನೆಯೊಡನೆ, ಕುಲಪತಿಗಳು ಅದರಲ್ಲಿ ಮಾಡಬಹುದಾದ ಅಂತಹ ಅಳವಡಿಕೆಗಳು ಅಥವಾ ಮಾರ್ಪಾಡುಗಳಿಗೆ ಒಳಪಟ್ಟು ಈ ಅಧಿನಿಯಮದ ಸೂಕ್ತ ಉಪಬಂಧಗಳ ಅಡಿಯಲ್ಲಿ ಮಾಡಿದ ಪರಿನಿಯಮಗಳು, ಅರ್ಡಿನೆನ್ಸ್‌ಗಳು ವಿನಿಮಯಗಳು ಮತ್ತು ನಿಯಮಗಳೆಂದು ಭಾವಿಸತಕ್ಕದೆಂದು ತಿಳಿಸಿದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ	**ಅ)** ಉಡುಪು ತಂತ್ರಜ್ಞಾನ ವಿಷಯದಲ್ಲಿ ಅಧ್ಯಯನ ಮಂಡಳಿಯನ್ನು ರಚಿಸಲು ಆರ್ಡಿನೆನ್ಸ್ ಮಾನ್ಯ ಕುಲಾಧಿಪತಿಗಳಿಂದ ದಿನಾಂಕ 19.08.2007 ರಂದು ಅಂಕಿತವಾಗಿರುತ್ತದೆ. ಈ ಬಗ್ಗೆ ಅಧ್ಯಯನ ಮಂಡಳಿಯ ರಚನೆಯ ಬಗ್ಗೆ ಅಧಿಸೂಚನೆಯನ್ನು ಹೊರಡಿಸಲಾಗಿದೆ ಮತ್ತು ಉಡುಪು ತಂತ್ರಜ್ಞಾನ ವಿಭಾಗದ ಸೃಜನೆಗೆ ಪರಿನಿಯಮಾವಳಿಯನ್ನು ರಚಿಸಿ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ದಿನಾಂಕ 28.04.2008 ರಂದು ಕಳುಹಿಸಿಕೊಡಲಾಗಿತ್ತು. ಈ ಬಗ್ಗೆ ಹಲವಾರು ಬಾರಿ ಸರ್ಕಾರದೊಂದಿಗೆ ಪತ್ರ ವ್ಯವಹಾರಗಳನ್ನು ನಡೆಸಲಾಗಿದ್ದು, ದಿನಾಂಕ 12.06.2013 ರ ಸರ್ಕಾರಿ ಪತ್ರದ ನಿರ್ದೇಶನದಂತೆ ಮತ್ತೊಮ್ಮೆ ವಿವಿಧ ಪ್ರಾಧಿಕಾರಗಳ ಅನುಮೋದನೆ ನಂತರ ದಿನಾಂಕ 17.03.2015 ರಂದು ಕುಲಾಧಿಪತಿಗಳ ಅಂಕಿತಕ್ಕಾಗಿ ಕಳುಹಿಸಿದ್ದ ಪರಿನಿಯಮಗಳ ಬಗ್ಗೆ ಸರ್ಕಾರಿ ಪತ್ರ ದಿನಾಂಕ 29.06.2018 ರ ಮೂಲಕ ಪರಿನಿಯಮದ ಬಗ್ಗೆ ಮತ್ತೊಮ್ಮೆ ಸ್ಪಷ್ಟೀಕರಣವನ್ನು ಕೋರಿದ್ದರ ಮೇರೆಗೆ ಈ ಕಛೇರಿಯ ಪತ್ರದ ದಿನಾಂಕ

ಆಕ್ಷೇಪಣೆಗಳು	***ಉತ್ತರಗಳು***
2000ರ ಪ್ರಕರಣ 34(4) ರಲ್ಲಿ ಯಾವುದೇ ಅಧ್ಯಯನ ವಿಭಾಗವನ್ನು ಪರಿನಿಯಮಗಳ ಮೂಲಕ ಸ್ಥಾಪಿಸಬಹುದು ಅಥವಾ ರದ್ದುಗೊಳಿಸಬಹುದೆಂದು ತಿಳಿಸಿರುತ್ತದೆ. ಪ್ರಕರಣ 40(1) (ಎಫ್) ರಲ್ಲಿ ವ್ಯಾಸಂಗ ವಿಭಾಗಗಳು, ವಿದ್ಯಾರ್ಥಿ ನಿಲಯಗಳು, ಕಾಲೇಜುಗಳು ಮತ್ತು ಸಂಸ್ಥೆಗಳ ಸ್ಥಾಪನೆ, ನಿರ್ವಹಣೆ ಮತ್ತು ಅವುಗಳನ್ನು ರದ್ದುಪಡಿಸುವ ಬಗ್ಗೆ ತಿಳಿಸಿರುತ್ತದೆ. ಪ್ರಕರಣ 46(3) ರಲ್ಲಿ ವಿಶ್ವವಿದ್ಯಾಲಯದ ನಿಧಿಯನ್ನು ಪರಿನಿಯಮಗಳಲ್ಲಿ ನಿಯಮಿಸಿದ ಉದ್ದೇಶಗಳಿಗೆ ವಿನಿಯೋಗಿಸಬಹುದು ಎಂದು ತಿಳಿಸಿರುತ್ತದೆ. ಈ ಕೆಳಕಂಡ ಅಧ್ಯಯನ ವಿಭಾಗಗಳ ಸ್ಥಾಪನೆ ಕುರಿತಂತೆ ಪರಿನಿಯಮಗಳನ್ನು ರಚಿಸಿಕೊಂಡಿರುವುದಿಲ್ಲ. (ಅ) ಉಡುಪು ತಂತ್ರಜ್ಞಾನ ವಿಭಾಗ(Dept. of Apparel Technology). (ಆ) ಮಹಿಳಾ ಅಧ್ಯಯನ ವಿಭಾಗ(Dept. of Women Studies). (ಇ) ಜೈವಿಕ ತಂತ್ರಜ್ಞಾನ ವಿಭಾಗ(Dept. Bio Technology). ಮೇಲೆ ತಿಳಿಸಿದ ಮೂರು ಅಧ್ಯಯನ ವಿಭಾಗಗಳನ್ನು ಪರಿನಿಯಮಗಳ ಮೂಲಕ ಸ್ಥಾಪಿಸದೇ, ಅನಧಿಕೃತವಾಗಿ ಸ್ಥಾಪನೆ ಮಾಡಿ ಅಧಿನಿಯಮ 2000ರ ಪ್ರಕರಣ 34(4) ಹಾಗೂ ಈ ಸಂಬಂಧ ವೆಚ್ಚ ಮಾಡುವುದರ ಮೂಲಕ ಪ್ರಕರಣ 46(3) ಪಾಲನೆ ಆಗಿರುವುದಿಲ್ಲ. ಪರಿಣಾಮವಾಗಿ, ಸದರಿ ಮೂರು ಅಧ್ಯಯನ ವಿಭಾಗಗಳ ಸಂಬಂಧ ನಿಯಮ ಪಾಲಿಸದೆ ಭರಿಸಲಾದ ವೆಚ್ಚಗಳನ್ನು ನಿಯಮಬಾಹಿರ ವೆಚ್ಚಗಳೆಂದು ಪರಿಗಣಿಸಿ ಆಕ್ಷೇಪಣೆಯಲ್ಲಿಡಲಾಗಿದೆ. ಲೆಕ್ಕಪರಿಶೋಧನೆಗೆ ಸಲ್ಲಿಸಿದ ಜನರಲ್ ಲೆಡ್ಜರ್ ಮತ್ತು 2016–17ನೇ ಸಾಲಿನ ಆಯವ್ಯಯ ಪುಸ್ತಕದ ಪ್ರಕಾರ, ಈ ಅಧ್ಯಯನ ವಿಭಾಗಗಳ ಸಂಬಂಧ 2015–16ನೇ ಸಾಲಿನಲ್ಲಿ ಭರಿಸಲಾದ ವೆಚ್ಚಗಳ ಮೊತ್ತ ರೂ.314.83 ಲಕ್ಷಗಳು ಆಗಿರುತ್ತದೆ. ವಿವರಗಳು ಕೆಳಕಂಡಂತಿದೆ. **ವಿಭಾಗದ ಹೆಸರು** — **ಒಟ್ಟು ವೆಚ ್ಚದ ಮೊಬಲಗು (ರೂ. ಲಕ್ಷಗಳಲ್ಲಿ)** ಉಡುಪು ತಂತ್ರಜ್ಞಾನ — 51.82 ಮಹಿಳಾ ಅಧ್ಯಯನ — 28.74 ಜೈವಿಕ ತಂತ್ರಜ್ಞಾನ — 234.27 **ಒಟ್ಟು ರೂ.** — **314.83** ಮುಂದುವರೆದು, 2015–16ನೇ ವಾರ್ಷಿಕ ಲೆಕ್ಕಪತ್ರಗಳಲ್ಲಿನ ಸ್ವೀಕೃತಿ ಮತ್ತು ಪಾವತಿಗಳನ್ನು ಪರಿಶೀಲಿಸಲಾಗಿ, ಮೌಲ್ಯಮಾಪನ ಕಾರ್ಯಗಳಿಗೆ ಪಾವತಿಸಿರುವ ವೆಚ್ಚ, ಸಾರಿಗೆ ಭತ್ಯೆ, ಉಪಕುಲಪತಿರವರು ಹಾಗೂ ಕುಲಸಚಿವರ ಆಪ್ತ ಶಾಖೆಗೆ ಹೆಚ್ಚುವರಿ ಸಾರಿಗೆ ಭತ್ಯೆ	27.07.2018 ಮತ್ತು ನೆನಪೋಲೆಯ ದಿನಾಂಕ 15.10.2018 ರ ಮೂಲಕ ಸರ್ಕಾರದಿಂದ ಕೋರಿರುವ ಸ್ಪಷ್ಟೀಕರಣವನ್ನು ಸಂಬಂಧಿಸಿದ ವಿಭಾಗದಿಂದ ಒದಗಿಸಲು ಕೋರಲಾಗಿರುತ್ತದೆ. **ಆ)** ಮಹಿಳಾ ಅಧ್ಯಯನ ವಿಷಯದ ಅಧ್ಯಯನ ಮಂಡಳಿಯ ರಚನೆಗೆ ಆರ್ಡಿನೆನ್ಸ್ಸ ಮಾನ್ಯ ಕುಲಾಧಿಪತಿಗಳಿಂದ ದಿನಾಂಕ 19.08.2007 ರಂದು ಅಂಕಿತವಾಗಿರುತ್ತದೆ. ಈ ಬಗ್ಗೆ ಅಧ್ಯಯನ ಮಂಡಳಿಯನ್ನು ರಚಿಸಿ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಮಹಿಳಾ ಅಧ್ಯಯನ ಕೇಂದ್ರಕ್ಕೆ ಸಂಬಂಧಿಸಿದ ಕರಡು ಪರಿನಿಯಮಾವಳಿಯನ್ನು ಮಹಿಳಾ ಅಧ್ಯಯನ ಕೇಂದ್ರದ ಸಮನ್ವಯಾಧಿಕಾರಿಗಳು ರಚಿಸಿ ಮುಂದಿನ ಕ್ರಮಕ್ಕೆ ಸಿಂಡಿಕೇಟ್ ವಿಭಾಗಕ್ಕೆ ಸಲ್ಲಿಸಿದ್ದು, ಸದರಿ ಪರಿನಿಯಮಾವಳಿಯನ್ನು ವಿಶ್ವವಿದ್ಯಾಲಯದ ಹಣಕಾಸು ಸಮಿತಿ, ವಿದ್ಯಾ ವಿಷಯಕ ಪರಿಷತ್ತು ಮತ್ತು ಸಿಂಡಿಕೇಟ್ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ದಿನಾಂಕ 22.12.2018ರ ಮೂಲಕ ಕರ್ನಾಟಕ ಸರ್ಕಾರದ ಘನತೆವೆತ್ತ ರಾಜ್ಯಪಾಲರ ಅನುಮೋದನೆಗೆ ಸಲ್ಲಿಸಲಾಗಿದೆ. **(ಅನುಬಂಧ–92)** (ಪು.ಸಂ.613) **ಇ)** ಜೈವಿಕ ತಂತ್ರಜ್ಞಾನ ವಿಷಯವು ಸೂಕ್ಷ್ಮ ಜೀವಶಾಸ್ತ್ರ (Microbiology) ವಿಭಾಗದಲ್ಲಿಯೇ ಒಂದು ಪ್ರತ್ಯೇಕ ಕೋರ್ಸನ್ನು ಪರಿಚಯಿಸಲಾಗಿದೆ. ಪರಿನಿಯಮಾವಳಿಗಳನ್ನು ರಚಿಸಿರುವುದಿಲ್ಲ ಹಾಗೂ ಪ್ರತ್ಯೇಕ ಅಧ್ಯಯನ ವಿಭಾಗವನ್ನು ರಚಿಸಿರುವುದಿಲ್ಲ. ಆದುದರಿಂದ, ಆಕ್ಷೇಪಣೆಯ ಮೊತ್ತ ರೂ. 2,34,270.00ಗಳನ್ನು ಕೈಬಿಡುವಂತೆ ವಿನಂತಿಸಿದೆ.

ಆಕ್ಷೇಪಣೆಗಳು	ಉತ್ತರಗಳು

ಮತ್ತು ಸ್ಥಳೀಯ ವಿಚಾರಣಾ ಸಮಿತಿಗೆ ಹೆಚ್ಚುವರಿ ಸಂಭಾವನೆ ಪಾವತಿಗಳ ವೆಚ್ಚಗಳಿಗೆ ಅಗತ್ಯ ಪರಿನಿಯಮಗಳನ್ನು ರಚಿಸಿಕೊಳ್ಳದೇ ನಿಯಮಬಾಹಿರವಾಗಿ ವೆಚ್ಚಗಳನ್ನು ಪಾವತಿಸಲಾಗಿರುತ್ತದೆ.

Payments made without framing the Statutes
(Rs. In Lakhs)

1.	Sitting Fee,TA & DA etc. – Academic Council	1.30
2.	Sitting Fee,TA & DA etc.- Board of Appointments	3.15
3.	Sitting Fee,TA & DA etc.- Board of Studies	1.34
4.	Sitting Fee,TA & DA etc.-Faculty & other sub-committees	0.33
5.	Sitting Fee,TA & DA etc.-Other Committees	3.37
6.	Sitting Fee,TA & DA etc.- Syndicate	4.00
7.	Conveyance Allowance	1.30
8.	House Orderly	1.13
	Total Rs.	**15.92**

ಈ ಕುರಿತು ಹಿಂದಿನ ಸಾಲಿನ ಲೆಕ್ಕಪರಿಶೋಧನೆಗಳಲ್ಲಿ ಆಕ್ಷೇಪಿಸಲಾಗಿದ್ದರೂ, ಈವರೆವಿಗೂ ಅಗತ್ಯವಿರುವ ಪರಿನಿಯಮಗಳನ್ನು ರಚಿಸಿಕೊಳ್ಳದೇ ಹಾಗೆಯೆ ಪಾವತಿಸಿ ಲೆಕ್ಕಪತ್ರಗಳಲ್ಲಿ ವೆಚ್ಚಗಳೆಂದು ತೋರಿಸಲಾಗುತ್ತಿದೆ. ಈ ಕುರಿತು ವಿಶ್ವವಿದ್ಯಾಲಯದ ವಿವರಣೆಯನ್ನು ನಿರೀಕ್ಷಿಸಿದೆ.

1.8. ಕನ್ವೆನ್‌ಷನ್ ಸೆಂಟರ್ ಕಟ್ಟಡ ಮೌಲ್ಯವನ್ನು ಕಡಿಮೆ ನಿರ್ಧರಿಸಿರುವುದು.

2015–16ನೇ ಸಾಲಿನ ಬೆಂಗಳೂರು ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳ ಅಡವೆ ಪತ್ರದಲ್ಲಿ (BALANCE SHEET) ಬೆಂಗಳೂರು ವಿಶ್ವವಿದ್ಯಾಲಯದಲ್ಲಿನ ಆಸ್ತಿಗಳ ಮೌಲ್ಯವನ್ನು ತೋರಿಸಲಾಗಿದ್ದು, ಸದರಿ ಆಸ್ತಿಗಳನ್ನು ಯಾವ ನಿಯಮಗಳ ಆಧಾರದ ಮೇಲೆ ಮೌಲ್ಯಿಕರಣ ಮಾಡಲಾಗಿದೆಯೆಂದು ತಿಳಿದುಬರುತ್ತಿಲ್ಲ. ವಾರ್ಷಿಕವಾಗಿ ಸ್ಥಿರಾಸ್ತಿಗಳ ವಹಿಗಳಲ್ಲಿ ಅಗತ್ಯವಿದ್ದರೆ ಸವಕಳಿಯನ್ನು ಕಳೆದು ಸ್ಥಿರಾಸ್ತಿಯ ಮೌಲ್ಯವನ್ನು ದೃಢೀಕರಿಬೇಕಾಗಿದ್ದು, ದೃಢೀಕರಣವಾಗಿರುವ ಮೌಲ್ಯಗಳನ್ನು ಲೆಕ್ಕಪತ್ರಗಳಲ್ಲಿ ಅಳವಡಿಸಕೊಳ್ಳಬೇಕಾಗಿರುತ್ತದೆ. ಆದರೆ ಈ ಕುರಿತು ಯಾವುದೇ ದಾಖಲೆಗಳು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

ಮುಂದುವರೆದು, ವಿಶ್ವವಿದ್ಯಾಲಯದ ಕನ್ವೆನ್‌ಷನ್ ಸೆಂಟರ್ ಕಟ್ಟಡ ಮೌಲ್ಯವು 2014–15ನೇ ಸಾಲಿನಲ್ಲಿ ರೂ.19.51 ಲಕ್ಷಗಳಿದ್ದು, 2015–16ನೇ ಸಾಲಿನಲ್ಲಿ ರೂ.17.56 ಲಕ್ಷಗಳೆಂದು ಮೌಲೀಕರಿಸಲಾಗಿರುತ್ತದೆ. ಹಿಂದಿನ ಸಾಲಿಗೆ ಹೋಲಿಕೆ ಮಾಡಿದಾಗ ಈ ಕಟ್ಟಡದ ಮೌಲ್ಯ ರೂ.1.95 ಲಕ್ಷಗಳಷ್ಟು ಕಡಿಮೆ ಮೌಲೀಕರಣವಾಗಿರುವುದು ಕಂಡುಬಂದಿದ್ದು, ಈ ಮೌಲ್ಯವನ್ನು ಯಾವ ಮಾನದಂಡದ ಆಧಾರದ ಮೇಲೆ ನಿರ್ಧರಿಸಲಾಗಿದೆಯೆಂದು ಲೆಕ್ಕಪರಿಶೋಧನೆಗೆ ಸ್ಪಷ್ಟನೆಯಿರುವುದಿಲ್ಲ.

2015–16ನೇ ವಾರ್ಷಿಕ ಲೆಕ್ಕಪತ್ರಗಳಲ್ಲಿನ ಅಢಾವೆ ಪಟ್ಟಿಯಲ್ಲಿನ ಕನ್ವೆನ್ಷನ್ ಸೆಂಟರ್ ಕಟ್ಟಡದಲ್ಲಿ 2014–15ನೇ ಸಾಲಿನಲ್ಲಿ ರೂ. 19.51 ಲಕ್ಷಗಳು External Service Fund ನಲ್ಲಿ ಉಳಿದಿರುತ್ತದೆ.

ವಿಶ್ವವಿದ್ಯಾಲಯವು ಅಳವಡಿಸಿಕೊಂಡಿರುವ ನಿಧಿ ಆಧಾರಿತ ಲೆಕ್ಕಪತ್ರ ನಿಯಮಗಳ ಪ್ರಕಾರ, ವಿಶ್ವವಿದ್ಯಾಲಯದ ನಿಧಿಯನ್ನು ಹೊರತುಪಡಿಸಿ, ಉಳಿದ ನಿಧಿಯಲ್ಲಿ ಭರಿಸಲಾದ ವೆಚ್ಚಗಳಿಗೆ ಸವಕಳಿಯನ್ನು ತೆಗೆದು ಉಳಿದ ಮೊತ್ತವನ್ನು ತೋರಿಸಬೇಕಾಗುತ್ತದೆ. ಈ ಪದ್ಧತಿಯನ್ನು ನಿಧಿ ಆಧಾರಿತ ಲೆಕ್ಕಪತ್ರ ನಿಯಮಗಳು ಜಾರಿಗೆ ಬಂದಂದಿನಿಂದಲೂ ಪಾಲಿಸಿಕೊಂಡು ಬರಲಾಗುತ್ತಿದೆ. ಅದರಂತೆ, 2015–16ನೇ ಸಾಲಿನಲ್ಲಿ 19.51 ಲಕ್ಷಗಳ ಮೇಲೆ 10% ಸವಕಳಿಯ ಮೊತ್ತ ರೂ. 1.95 ಲಕ್ಷಗಳನ್ನು ಕಳೆದು, ಉಳಿದ ಮೊತ್ತ ರೂ. 17.56 ಲಕ್ಷಗಳನ್ನು ತೋರಿಸಿರುವುದು ಸರಿಯಾಗಿರುತ್ತದೆ. ಈ ಎಲ್ಲಾ ಮಾಹಿತಿಯು ಲೆಕ್ಕಶೀರ್ಷಿಕೆ 00761 Convention Centre Building ನ ಜನರಲ್ ಲೆಡ್ಜರ್‌ನಲ್ಲಿ ಲಭ್ಯವಿರುತ್ತದೆ. ಜನರಲ್ ಲೆಡ್ಜರ್‌ನ

ಆಕ್ಷೇಪಣೆಗಳು	*ಉತ್ತರಗಳು*
	ಪ್ರತಿಯನ್ನು ಮಾಹಿತಿಗಾಗಿ ಲಗತ್ತಿಸುತ್ತಾ ವಾರ್ಷಿಕ ಲೆಕ್ಕಪತ್ರಗಳಲ್ಲಿ ತೋರಿಸಿರುವ ಮಾಹಿತಿಯು ಸರಿಯಾಗಿರುವುದರಿಂದ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. **(ಅನುಬಂಧ–93)** (ಪು.ಸಂ.628)
1.9. ವಾರ್ಷಿಕ ಲೆಕ್ಕಪತ್ರಗಳಲ್ಲಿ ನಿಧಿಗಳ ವರ್ಗೀಕರಣ ತಪ್ಪಾಗಿರುವುದು. 2015–16ನೇ ಸಾಲಿನ ಬೆಂಗಳೂರು ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯಲ್ಲಿ ಗಮನಿಸಿದಂತೆ, General Provident Fund, Group Insurance Scheme Fund & Pension Reserve Fund ಗಳನ್ನು ಅಡವೆ ಪತ್ರಿಕೆಯಲ್ಲಿ ಚಾಲ್ತಿ ಋಣಗಳ ಅಡಿಯಲ್ಲಿ (Current Liabilities) ವರ್ಗೀಕರಿಸಲಾಗಿರುತ್ತದೆ. ಈ ನಿಧಿಗಳು ದ್ವಿ ನಮೂದು ಲೆಕ್ಕಪತ್ರಗಳ ಪದ್ಧತಿಯ ಸಾಮಾನ್ಯ ನಿಯಮಾನುಸಾರ ಮೀಸಲು ಮತ್ತು ಹೆಚ್ಚುವರಿ (Reserve & Surplus) ವಿಭಾಗದಲ್ಲಿ ವರ್ಗೀಕರಿಸುವುದು ಸೂಕ್ತವಾಗಿರುತ್ತದೆ. ಚಾಲ್ತಿ ಋಣ ಶೀರ್ಷಿಕೆಯಡಿಯಲ್ಲಿ ಆಯಾ ಆರ್ಥಿಕ ವರ್ಷಗಳಲ್ಲಿಯೇ (ಒಂದು ವರ್ಷದ ಕಾಲ ಮಿತಿ) ಪಾವತಿ ಮಾಡಿ ಇತ್ಯರ್ಥಗೊಳಿಸುವಂತಹ ವಿಷಯಗಳನ್ನು ಮಾತ್ರ ಒಳಗೊಳ್ಳಬೇಕಾಗಿದ್ದು, ಈ ಮೇಲೆ ತಿಳಿಸಲಾಗಿರುವ ನಿಧಿಗಳು ಒಂದು ಆರ್ಥಿಕ ವರ್ಷಗಳಿಗೂ ಮೇಲ್ಪಟ್ಟ ಅವಧಿಗೆ ಮುಂದುವರೆಸಿ ನಿರ್ವಹಿಸಲಾಗುವುದರಿಂದ ಸದರಿ ನಿಧಿಗಳನ್ನು ಚಾಲ್ತಿ ಋಣಗಳಲ್ಲಿ ವರ್ಗೀಕರಿಸಿರುವುದು ತಪ್ಪಾಗುವ ಕಾರಣ ಈ ಕುರಿತು ವಿವರಣೆ ಕೇಳಲಾಗಿ, ಉತ್ತರ ಸ್ವೀಕೃತವಾಗಿರುವುದಿಲ್ಲ.	ವಾರ್ಷಿಕ ಲೆಕ್ಕಪತ್ರಗಳಲ್ಲಿ ನಿಧಿಗಳ ವರ್ಗೀಕರಣ ತಪ್ಪಾಗಿರುವುದು. ನಿಧಿ ಆಧಾರಿತ ಲೆಕ್ಕ ಪತ್ರಗಳ ತಂತ್ರಾಂಶವನ್ನು 2003–04 ನೇ ಸಾಲಿನಿಂದ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಜಾರಿಗೆ ತಂದಿರುತ್ತದೆ. ಈ ತಂತ್ರಾಂಶ ಜಾರಿಗೆ ಬಂದ ದಿನದಿಂದಲೂ ಇಲ್ಲಿಯವರಿಗೆ ಅಕ್ಷೇಪಣೆಯಲ್ಲಿ ತೋರಿಸಿರುವ ಎಲ್ಲಾ ವಹಿವಾಟಿಗಳನ್ನು ತಂತ್ರಾಂಶದಲ್ಲೇ Current Liabilities ನಲ್ಲಿ ವರ್ಗೀಕರಿಸಿರುತ್ತದೆ. ನಿಧಿ ಆಧಾರಿತ ಲೆಕ್ಕ ಪತ್ರಗಳ ಮ್ಯಾನ್ಯುಯಲ್ ಪ್ರಕಾರ Fiduciary fund comprise trust and agency fund ಎಂದು ತಿಳಿಸಿರುವುದರಿಂದ ಈ ನಿಧಿಯಲ್ಲಿನ ವಹಿವಾಟುಗಳನ್ನು Current Liabilities ನಲ್ಲಿಟ್ಟಿರುವ ಸಂಭವವುಂಟು ಇಂತಹ ಪ್ರಕರಣಗಳಲ್ಲಿ ಪತ್ಯೇಕ ಟ್ರಸ್ಟ್ ರಚನೆಯಾದರೆ, ಆಗ ಈ ಎಲ್ಲಾ ನಿಧಿಯಲ್ಲಿ ಅಂತಹ ಟ್ರಸ್ಟ್ಗೆ ವರ್ಗಾಯಿಸಬೇಕಾಗಿರುವುದರಿಂದ ಈ ರೀತಿ ಅವಕಾಶ ಕಲ್ಪಿಸಿರಬಹುದು. ಆದರೂ, ಈ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ತಮ್ಮೊಂದಿಗೆ ಚರ್ಚಿಸಿ, ಮುಂದಿನ ಉನ್ನತೀಕರಣದಲ್ಲಿ ಅಳವಡಿಸಿಕೊಳ್ಳಲಾಗುವುದು. ಆದುದರಿಂದ ಆಕ್ಷೇಪಣೆಯನ್ನು ಕೈ ಬಿಡಲು ವಿನಂತಿಸಿದೆ.
1.10. ವೇತನಗಳಲ್ಲಿನ ಕಡ್ಡಾಯ ಕಡಿತಗಳನ್ನು ಸಂಬಂಧಪಟ್ಟ ಸಂಸ್ಥೆಗಳಿಗೆ ಪಾವತಿ ಮಾಡದೇ ವಿಲೇ ಇಡಲಾಗಿರುವುದು. 2015–16ನೇ ಸಾಲಿನ ಬೆಂಗಳೂರು ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳಲ್ಲಿ ಪರಿಶೀಲಿಸಲಾಗಿ, ವೇತನಗಳಲ್ಲಿನ ಕಡ್ಡಾಯ ಕಡಿತಗಳಾದ ಆದಾಯ ತೆರಿಗೆ, ವೃತ್ತಿ ತೆರಿಗೆ ಹಾಗೂ ಇತರೆ ಕಟಾವಣೆಗಳನ್ನು ಮುಂದಿನ ಮಾಹೆಗಳಲ್ಲಿ ಪಾವತಿಸಬೇಕಾಗಿರುವುದೆಂದು 2014–15ನೇ ಸಾಲಿನ ಅಡವೆ ಪತ್ರದ ಚಾಲ್ತಿ ಋಣಗಳಡಿಯಲ್ಲಿ ತೋರಿಸಲಾಗಿದ್ದು, ಇದೇ ಮೊತ್ತವು ಯಾವುದೇ ವ್ಯತ್ಯಾಸವಾಗದೆ ಅಥವಾ ವಿಲೇ ಮಾಡದೆ 2015–16ನೇ ಸಾಲಿನ ಅಡಾವೆ ಪತ್ರದಲ್ಲಿ ತೋರಿಸಲಾಗಿರುತ್ತದೆ. ಸಿಬ್ಬಂದಿಗಳ ವೇತನದಿಂದ ಕಟಾವಣೆ ಮಾಡಲಾದ ಕಡಿತಗಳು ಮುಂದಿನ ನಿಗದಿತ ಮಾಹೆಗಳಲ್ಲಿ ಸಂಬಂಧಿಸಿದ ಇಲಾಖೆ ಹಾಗೂ ಸಂಸ್ಥೆಗಳಿಗೆ ಪಾವತಿಸಿ ಇತ್ಯರ್ಥಪಡಿಸಿಕೊಳ್ಳಬೇಕಾಗಿರುತ್ತದೆ. ಆದರೆ ಲೆಕ್ಕಪತ್ರಗಳ ಅಂಕಿಅಂಶಗಳನ್ನು ಗಮನಿಸಿದಾಗ ಈ ಕುರಿತು ಯಾವುದೇ ಕ್ರಮಕ್ಕೈಗೊಳ್ಳದೆ ಬಾಕಿ ಉಳಿಸಿಕೊಂಡಿರುವುದು ಕಂಡುಬಂದಿರುತ್ತದೆ.	ಲೆಕ್ಕ ಪತ್ರಗಳಲ್ಲಿ FBAS ನಲ್ಲಿ ದಾಖಲಾಗಿರುವ ವಹಿವಾಟುಗಳ ಆಧಾರದ ಮೇಲೆ ಲೆಕ್ಕ ಪತ್ರಗಳ ತಯಾರಿಕೆ ಆಗಿರುತ್ತವೆ. ಈಗಾಗಲೇ ವಿವರಿಸಿರುವಂತೆ ಋಣಾತ್ಮಕ ಮೊತ್ತಗಳನ್ನು 2015–16ನೇ ಸಾಲಿನ ಲೆಕ್ಕ ಪತ್ರಗಳಲ್ಲಿ ಸರಿಪಡಿಸಿರುತ್ತದೆ. ಈ ಎಲ್ಲಾ ಋಣಾತ್ಮಕ ಮೊತ್ತಗಳು ಹಿಂದಿನ ವರ್ಷಗಳಿಗೆ ಸಂಬಂಧಪಟ್ಟಿರುತ್ತವೆ. ಹಾಲಿ ಉಪಯೋಗಿಸುತ್ತಿರುವ FBAS ತಂತ್ರಾಂಶವನ್ನು 2003–04 ರಿಂದ ಬಳಸಲಾಗುತ್ತಿದ್ದು, ಇದು ಹಳೆಯ ತಂತ್ರಾಂಶವಾಗಿರುವುದರಿಂದ ಈಗಿನ ಅಗತ್ಯತೆಗೆ ತಕ್ಕಂತೆ ತಂತ್ರಜ್ಞಾನ ಉನ್ನತೀಕರಣಕ್ಕೆ ಸಮಿತಿ ರಚಿಸಿ ಸಮಿತಿಯ ಶಿಫಾರಸ್ಸಿನಂತೆ ಟೆಂಡರ್ ಕರೆದು 2019–20 ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರ ತಯಾರಿಕೆಯಲ್ಲಿ ಇಂತಹ ನ್ಯೂನತೆಗಳಿಗೆ ಅವಕಾಶವಿಲ್ಲದಂತೆ ನೋಡಿಕೊಳ್ಳಲಾಗುವುದು.ಎಲ್ಲಾ ವಹಿವಾಟುಗಳನ್ನು FBAS ತಂತ್ರಾಂಶದಲ್ಲಿ ದಾಖಲಿಸಿ ಲೆಕ್ಕಪತ್ರಗಳನ್ನು ತಯಾರಿಸಿರುವುದರಿಂದ ವಾರ್ಷಿಕ ಲೆಕ್ಕಪತ್ರಗಳನ್ನು ದೃಢೀಕರಿಸಲು ಅಪರ

ಆಕ್ಷೇಪಣೆಗಳು	***ಉತ್ತರಗಳು***
ಮುಂದುವರೆದು, ಸಾಮಾನ್ಯ ನಿಧಿಯಡಿಯಲ್ಲಿ ಆದಾಯ ತೆರಿಗೆ ಹಾಗೂ ವೃತ್ತಿ ತೆರಿಗೆಗಳ ಮೊತ್ತವು ಋಣಾತ್ಮಕವಾಗಿದ್ದು, ನಿಧಿಯಾಧಾರಿತ ಲೆಕ್ಕಪತ್ರ ನಿರ್ವಹಣೆಯಲ್ಲಿ ಈ ರೀತಿಯಾದ ಋಣಾತ್ಮಕ ಶಿಲ್ಕುಗಳಿಗೆ ಅವಕಾಶವಿಲ್ಲದಿರುವ. ಈ ಕುರಿತು ವಿಶ್ವವಿದ್ಯಾಲಯದ ವಿವರಣೆ ಸ್ವೀಕೃತವಾಗಿರುವುದಿಲ್ಲ. ಈ ಮೇಲಿನ ಪ್ರಸ್ತಾಪಿತ ವಿಷಯದ ವಿವರಣೆ ಕೆಳಕಂಡಂತಿದೆ.	ನಿರ್ದೇಶಕರಿಗೆ ಕೋರಲಾಗಿದೆ.

(ರೂ. ಲಕ್ಷಗಳಲ್ಲಿ)

Particular	University Fund			Proprietary Fund	Fiduciary Fund		Total
	Capital Project Fund	General Fund	Research Project Fund	External Services	Employee welfare Fund	Endowment Fund	
Income Tax-Salaries	1.34 (Same in 2014-15)	(38.85)	22.19 (Same in 2014-15)	0.04 (Same in 2014-15)	2.81 (Same in 2014-15)	0.08 (Same in 2014-15)	(12.38)
Profession Tax (PT)	-	(5.50)	17.08	-	0.01 (Same in 2014-15)	0.02 (Same in 2014-15)	11.62
SC/ST class 3& 4 Employees Credit Co-operative Society	-	0.07 (Same in 2014-15)	-	-	-	-	0.07
Hotel Industrialist Co-operative Bank Ltd	-	1.85	0.01 (Same in 2014-15)	-	0.61 (Same in 2014-15)	-	2.46
Other deductions	12.22 (Same in 2014-15)	130.18	6.18	0.09 (Same in 2014-15)	-	-	148.60

1.11.ಲೆಕ್ಕಪತ್ರದ ಅಡಾವೆ ಪತ್ರಿಕೆಯಲ್ಲಿ ದತ್ತಿನಿಧಿಯ ಅಡಿಯಲ್ಲಿ ತೋರಿಸಲಾಗಿರುವ ಸ್ಥಿರಾಸ್ತಿಯ ಕುರಿತು. 2015–16ನೇ ಸಾಲಿನ ಬೆಂಗಳೂರು ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರವನ್ನು ಪರಿಶೀಲಿಸಲಾಗಿ, ಅಡಾವೆ ಪತ್ರಿಕೆಯಲ್ಲಿ ಸ್ಥಿರಾಸ್ತಿಯ ಈ ಕೆಳಕಂಡ ತಃಖ್ತೆಯಲ್ಲಿರುವ ಸ್ಥಿರಾಸ್ತಿಯನ್ನು ದತ್ತಿ ನಿಧಿಯ ಅಡಿಯಲ್ಲಿ ವರ್ಗೀಕರಿಸಲಾಗಿದೆ. ಮೇಲ್ನೋಟಕ್ಕೆ ಈ ಸ್ಥಿರಾಸ್ತಿಗಳು ದತ್ತಿ ರೂಪದಲ್ಲಿ ಬಂದಿರುವಂತಹ ವಸ್ತುಗಳು ಅಥವಾ ಸೇವೆಗಳೆಂದು ಕಂಡುಬಂದಿದ್ದು, ಇದರ ದಾಖಲೆಯ ಕುರಿತಾದ ದತ್ತಿ ನಿಧಿಯ ವಹಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಒಂದ ವೇಳೆ ಈ ವಸ್ತು ಹಾಗೂ ಸೇವೆಗಳು ದತ್ತಿ ರೂಪದಲ್ಲಿ ವಿಶ್ವವಿದ್ಯಾಲಯಕ್ಕೆ ಸ್ವೀಕೃತವಾಗದೆ ದತ್ತಿ ನಿಧಿಯಿಂದ ವಿಶ್ವವಿದ್ಯಾಲಯವೆ ಖರೀದಿಸಿದ್ದರೆ, ಯಾವ ನಿಯಮದ ಅನುಸಾರ ನಿರ್ದಿಷ್ಟ ದತ್ತಿ ಕಾರ್ಯದ ಉದ್ದೇಶಕ್ಕಾಗಿ ಮೀಸಲಿರಿಸಲಾದ ದತ್ತಿ ನಿಧಿಯಿಂದ ಖರೀದಿ/ಸೇವೆ ಪಡೆಯಲಾಗಿದೆಯೆಂದು ಲೆಕ್ಕಪರಿಶೋಧನೆಗೆ ವಿವರಣೆ ನೀಡಲು ತಿಳಿಸಲಾಗಿತ್ತು. ವಿಶ್ವವಿದ್ಯಾಲಯದ ಉತ್ತರ ಸ್ವೀಕೃತವಾಗಿರುವುದಿಲ್ಲ.	ಈ ಬಗ್ಗೆ ವಿವರಣೆಯನ್ನು ಮುಂದಿನ ಲೆಕ್ಕಪರಿಶೋಧನಾ ಸಮಯದಲ್ಲಿ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಒದಗಿಸಲಾಗುವುದು.

ದತ್ತಿ ನಿಧಿಯ ಅಡಿಯಲ್ಲಿ ತೋರಿಸಲಾಗಿರುವ ಸ್ಥಿರಾಸ್ತಿಯ ವಿವರಗಳು (ರೂ. ಲಕ್ಷಗಳಲ್ಲಿ)

No	Fixed Assets Major Classification	Budget Head	Particulars	Endowment Fund
1.	Computers	00556	Printers	0.33
2.	Electrical Installation	00583	Air Conditioner	1.51

ಆಕ್ಷೇಪಣೆಗಳು			ಉತ್ತರಗಳು	
3.	Equipments	00547	Projector	0.76
		00570	Audio, Visual & Training equipments	1.12
		00790	Other Office Equipments	0.32
4.	Furniture & Fixtures	00543	Furniture & Fixtures	1.59
5.	Land	00161	Parks & Gardens	0.07
6.	Plant & Machinery	00198	Water Supply Equipments	0.40
7.	Non-Interest bearing Advances	00552	AC bills	10.46

1.12.ಮಂಜೂರಾದ ಅನುದಾನ ಬಳಸದೆ ಇರುವುದು. 2015–16ನೇ ಸಾಲಿನ ವಾರ್ಷಿಕ ಲೆಕ್ಕಪತ್ರದ ಅಡಾವೆ ಪತ್ರದ ಚಾಲ್ತಿ ಋಣದ (Current Liabilities) ಅಡಿಯಲ್ಲಿ(Other liabilities-00950) ಬಳಸದೆ ಇರುವ ಅನುದಾನವೆಂದು Capital Project Fund ನಲ್ಲಿ ವರ್ಗೀಕರಿಸಿ ರೂ.554.00 ಲಕ್ಷಗಳನ್ನು ತೋರಿಸಲಾಗಿದೆ. ಇದೇ ಮೊತ್ತವನ್ನು 2014–15ನೇ ಸಾಲಿನ ಲೆಕ್ಕಪತ್ರಗಳಲ್ಲಿಯೂ ತೋರಿಸಲಾಗಿದ್ದು, ಮಂಜೂರಾದ ಅನುದಾನವನ್ನು ಒಂದು ವರ್ಷಕ್ಕೂ ಮೀರಿದ ಅವಧಿಗೆ ಬಳಸದೇ ಹಾಗೆಯೆ ಲೆಕ್ಕಪತ್ರದ ಚಾಲ್ತಿ ಋಣ ಶೀರ್ಷಿಕೆ ಅಡಿಯಲ್ಲಿ ತೋರಿಸಲಾಗುತ್ತಿದೆ. ಬಳಸದೇ ಇರುವ ಈ ಅನುದಾನದ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲು ತಿಳಿಸಲಾಗಿತ್ತು. ಚಾಲ್ತಿ ಋಣದ ಅಡಿಯಲ್ಲಿ ತೋರಿಸಲಾಗುವ ಎಲ್ಲಾ ಋಣಗಳು ಒಂದು ಆರ್ಥಿಕ ವರ್ಷದ ಅವಧಿಯೊಳಗೆ ಬಳಸಲಾಗುವಂತಹ/ ಪಾವತಿಸುವಂತಹ/ಹಿಂದಿರುಗಿಸುವು ದಾಗಿರುವುದರಿಂದ, ಈ ಮೇಲಿನ ಅನುದಾನವನ್ನು ಬಳಸದೇ ಎರಡು ವರ್ಷದ ಲೆಕ್ಕಪತ್ರಗಳಲ್ಲಿಯೂ ತೋರಿಸಲಾಗುತ್ತಿರುವುದು ಲೆಕ್ಕಪತ್ರ ನಿರ್ವಹಣೆ ನಿಯಮಗಳನ್ವಯ ತಪ್ಪಾಗುತ್ತದೆ.	2015–16ನೇಸಾಲಿನ ವರ್ಷಂತ್ಯದಲ್ಲಿ ಈಶಾನ್ಯ ಕಾನ್ಸಿಲ್ ವಿದ್ಯಾರ್ಥಿಗಳ (R) ಅಡಿಯಲ್ಲಿ ವಿದ್ಯಾರ್ಥಿನಿಗಳ ಹಾಸ್ಟೆಲ್ ಕಟ್ಟಡ ನಿರ್ಮಾಣಕ್ಕಾಗಿ ರೂ.461.91 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ಅದನ್ನು ಮುಂದಿನ ಹಣಕಾಸು ವರ್ಷದಲ್ಲಿ ವೆಚ್ಚವಾಗಿದೆ ಎಂಬ ಅಂಶವನ್ನು ಈ ಮೂಲಕ ತಿಳಿಯಬಯಸುತ್ತೇನೆ.
1.13. ಕಡಿತಗೊಳಿಸಿರುವ ಶಾಸನಬದ್ಧ ಕಟಾವಣೆಗಳನ್ನು ಸಂಬಂಧಿಸಿದ ಇಲಾಖೆ/ಸಂಸ್ಥೆಗಳಿಗೆ ಪಾವತಿಸದೆ ಬಾಕಿ ಉಳಿಸಿಕೊಂಡಿರುವುದು. ವಿಶ್ವವಿದ್ಯಾಲಯದ 2014–15ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಅಡಾವೆ ಪತ್ರಿಕೆಯ ಚಾಲ್ತಿ ಋಣದ(Current Liabilities) ಅಡಿಯಲ್ಲಿ ಪಾವತಿ ಮಾಡಿರುವ ಬಿಲ್ಲುಗಳಿಂದ ಕಡಿತ ಮಾಡಲಾಗಿ ಸಂಬಂಧಿಸಿದ ಇಲಾಖೆ/ಸಂಸ್ಥೆಗಳಿಗೆ ಇನ್ನೂ ಪಾವತಿ ಮಾಡದ ಅಗತ್ಯ ಶಾಸನಬದ್ಧ ಕಟಾವಣೆಗಳನ್ನು ದಿನಾಂಕ: 31.03.2015ರ ಅಂತ್ಯಕ್ಕೆ ತೋರಿಸಲಾಗಿರುತ್ತದೆ. ಇದೇ ಮೊತ್ತವು ಯಾವುದೇ ಬದಲಾವಣೆ ಇಲ್ಲದೆ 2015–16ನೇ ಸಾಲಿನಲ್ಲೂ ಬಿಂಬಿತವಾಗಿದ್ದು, ಇದರಿಂದ 2014–15ನೇ ಸಾಲಿನಲ್ಲಿ ಕಡಿತಗೊಳಿಸಿರುವ ಶಾಸನಬದ್ಧ ಕಟಾವಣೆಗಳನ್ನು 2015–16ನೇ ಸಾಲಿನ ಅಂತ್ಯದವರೆಗೂ ಸಂಬಂಧಿಸಿದ ಇಲಾಖೆ/ಸಂಸ್ಥೆಗಳಿಗೆ ಪಾವತಿ ಮಾಡದೆ ಬಾಕಿ ಉಳಿಸಿಕೊಂಡಿರುವುದು ಸ್ಪಷ್ಟವಾಗುತ್ತದೆ.	ಲೆಕ್ಕ ಪತ್ರಗಳಲ್ಲಿ FBAS ನಲ್ಲಿ ದಾಖಲಾಗಿರುವ ವಹಿವಾಟುಗಳ ಆಧಾರದ ಮೇಲೆ ಲೆಕ್ಕ ಪತ್ರಗಳ ತಯಾರಿಕೆ ಆಗಿರುತ್ತವೆ. ಈಗಾಗಲೇ ವಿವರಿಸಿರುವಂತೆ ಋಣಾತ್ಮಕ ಮೊತ್ತಗಳನ್ನು 2015–16ನೇ ಸಾಲಿನ ಲೆಕ್ಕ ಪತ್ರಗಳಲ್ಲಿ ಸರಿಪಡಿಸಿರುತ್ತದೆ. ಈ ಎಲ್ಲಾ ಋಣಾತ್ಮಕ ಮೊತ್ತಗಳು ಹಿಂದಿನ ವರ್ಷಗಳಿಗೆ ಸಂಬಂಧಪಟ್ಟಿರುತ್ತವೆ. ಹಾಲಿ ಉಪಯೋಗಿಸುತ್ತಿರುವ FBAS ತಂತ್ರಾಂಶವನ್ನು 2003–04 ರಿಂದ ಬಳಸಲಾಗುತ್ತಿದ್ದು, ಇದು ಹಳೆಯ ತಂತ್ರಾಂಶವಾಗಿರುವುದರಿಂದ ಈಗಿನ ಅಗತ್ಯತೆಗೆ ತಕ್ಕಂತೆ ತಂತ್ರಜ್ಞಾನ ಉನ್ನತೀಕರಣಕ್ಕೆ ಸಮಿತಿ ರಚಿಸಿ ಸಮಿತಿಯ ಶಿಫಾರಸ್ಸಿನಂತೆ ಟೆಂಡರ್ ಕರೆಯಲಾಗಿದ್ದು, ಆದೇಶ ಸಂಖ್ಯೆ:FB-VII/Pur/FBAS/FB/2019-20, ದಿನಾಂಕ 14.08.2019ರಂತೆ, M/s K2 Consulting ಸಂಸ್ಥೆಗೆ ತಂತ್ರಜ್ಞಾನ ಉನ್ನತೀಕರಣ ಕಾರ್ಯ ವಹಿಸಲಾಗಿದೆ

ಆಕ್ಷೇಪಣೆಗಳು	ಉತ್ತರಗಳು
ಮುಂದುವರೆದು ಸಾಮಾನ್ಯ ನಿಧಿಯ ವರ್ಗೀಕರಣದ ಅಡಿಯಲ್ಲಿ ಆದಾಯ ತೆರಿಗೆ ಮತ್ತು ಸೇವಾ ತೆರಿಗೆ ಮೊತ್ತವು ಹಿಂದಿನ ಸಾಲಿನಿಂದಲೂ ಋಣಾತ್ಮಕ ವಹಿವಾಟುಗಳನ್ನೇ ತೋರಿಸುತ್ತಿದ್ದು, ಈ ಋಣಾತ್ಮಕ ಮೊತ್ತಕ್ಕೆ ಕಾರಣವಾದ ವೋಚರ್‌ಗಳನ್ನು ಸರಿಪಡಿಸಿ ಕ್ರಮಗೊಳಿಸಿರುವುದಿಲ್ಲ. ನಿಧಿಯಾಧಾರಿತ ಲೆಕ್ಕಪತ್ರಗಳಲ್ಲಿ ಋಣ ಶಿಲ್ಕುಗಳಿಗೆ ಅವಕಾಶವಿರುವುದಿಲ್ಲ. ಇದರ ವಿವರಗಳು ಕೆಳಕಂಡ ತಃಖ್ತೆಯಲ್ಲಿ ನೀಡಿದ್ದು, ವಿಶ್ವವಿದ್ಯಾಲಯದ ವಿವರಣೆಯನ್ನು ನಿರೀಕ್ಷಿಸಿದೆ.	**ಅನುಬಂಧ–94**. 2019–20 ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರ ತಯಾರಿಕೆಯಲ್ಲಿ ವಾರ್ಷಿಕ ಲೆಕ್ಕ ಪತ್ರ ತಯಾರಿಕೆಯಲ್ಲಿ ಇಂತಹ ನ್ಯೂನತೆಗಳಿಗೆ ಅವಕಾಶವಿಲ್ಲದಂತೆ ನೋಡಿಕೊಳ್ಳಲಾಗುವುದು. ಎಲ್ಲಾ ವಹಿವಾಟುಗಳನ್ನು FBAS ತಂತ್ರಾಂಶದಲ್ಲಿ ದಾಖಲಿಸಿ ಲೆಕ್ಕಪತ್ರಗಳನ್ನು ತಯಾರಿಸಿರುವುದರಿಂದ ವಾರ್ಷಿಕ ಲೆಕ್ಕಪತ್ರಗಳನ್ನು ದೃಢೀಕರಿಸಲು ಅಪರ ನಿರ್ದೇಶಕರಿಗೆ ಕೋರಲಾಗಿದೆ.

Current Liabilities-Deposits & Recoveries from Outsiders	University Fund			Proprietary Fund	Fiduciary Fund		Total
Statutory Dues	Capital Project Fund	General Fund	Research Project Fund	External Services	Employee welfare Fund	Endowment Fund	
00573 Payable to RBI-Stamp duty, Royalty etc.	29.55	0.94	(0.67) (Same in 2014-15)	0.09	-	-	29.91
00594 Contractors Benevolent Fund	5.24	3.77	0.03 (Same in 2014-15)	0.09 (Same in 2014-15)	-	-	9.14
00595 Income Tax (Others)	65.20	(30.71)	0.12 (Same in 2014-15)	2.02 (Same in 2014-15)	-	0.02 (Same in 2014-15)	36.65
00961 Service Tax	-	(20.49)	0.03	-	-	-	(20.52)

1.14. ವಿಶ್ವವಿದ್ಯಾಲಯದಿಂದ ಖರೀದಿಸಿರುವ ಸ್ಥಿರಾಸ್ತಿಗಳನ್ನು ಬ್ಯಾಲೆನ್ಸ್ ಶೀಟ್‌ನಲ್ಲಿ ಆಸ್ತಿಯೆಂದು ಪರಿಗಣಿಸದೆ ನಾಮಿನಲ್ ವೆಚ್ಚವೆಂದು ರಾಜಸ್ವ ಮತ್ತು ವೆಚ್ಚಗಳ ತಃಖ್ತೆಯ ಲೆಕ್ಕಪತ್ರಗಳಲ್ಲಿ ಗಣನೆಗೆ ತೆಗೆದುಕೊಂಡು ತಪ್ಪಾಗಿ ವರ್ಗೀಕರಿಸಿರುವುದು

2015–16ನೇ ಸಾಲಿನಲ್ಲಿ ವಿಶ್ವವಿದ್ಯಾಲಯದಿಂದ ಒಟ್ಟಾರೆ ರೂ.1,173.37 ಲಕ್ಷಗಳ ಸ್ಥಿರಾಸ್ತಿಗಳನ್ನು ಖರೀದಿಸಲಾಗಿದೆ. ಈ ವಸ್ತುಗಳು ಖರೀದಿ ಮಾಡಿದ ವರ್ಷದಲ್ಲಿ ಮಾತ್ರ ಉಪಯೋಗಿಸದೇ ಮುಂದಿನ ವರ್ಷಗಳಲ್ಲೂ ಬಳಕೆಯಾಗುವುದರಿಂದ ಈ ವೆಚ್ಚದ ಪಾವತಿಯನ್ನು ಬ್ಯಾಲೆನ್ಸ್ ಶೀಟ್‌ಗೆ ವರ್ಗಾಯಿಸುವುದು ದ್ವಿ ನಮೂದು ಲೆಕ್ಕಪತ್ರಗಳ ನಿಯಮಗಳನ್ವಯ ಅನಿವಾರ್ಯವಾಗಿದೆ. ಮುಂದುವರೆದು, ಲೆಕ್ಕಪತ್ರ ನಿರ್ವಹಣೆಯ ನಿಯಮಗಳ ಪ್ರಕಾರ ಬಂಡವಾಳ ಸ್ವೀಕೃತಿಗಳು ಹಾಗೂ ಬಂಡವಾಳ ವೆಚ್ಚಗಳನ್ನು ಆಯಾ ವರ್ಷದ ರಾಜಸ್ವ ಮತ್ತು ವೆಚ್ಚಗಳ ನಿಖರವಾದ ಮಾಹಿತಿ ನೀಡುವ ರಾಜಸ್ವ ಮತ್ತು ವೆಚ್ಚಗಳ ತಃಖ್ತೆಯಲ್ಲಿ ದಾಖಲಿಸುವಂತಿಲ್ಲ ಹಾಗೂ ಈ ವೆಚ್ಚಗಳನ್ನು ಸಂಬಂಧಿಸಿದ ಲೆಡ್ಜರ್‌ಗಳಲ್ಲಿ ದಾಖಲಿಸಿ ಇದರ ಅಂತಿಮ ಶಿಲ್ಕುಗಳನ್ನು ಬ್ಯಾಲೆನ್ಸ್ ಶೀಟ್‌ನಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಈ ವೆಚ್ಚವನ್ನು ರಾಜಸ್ವ ಮತ್ತು ವೆಚ್ಚಗಳ ತಃಖ್ತೆಯಲ್ಲಿ ತಪ್ಪಾಗಿ ವರ್ಗೀಕರಿಸಿ 2015–16ನೇ ಸಾಲಿನ ನಾಮಿನಲ್ ವೆಚ್ಚವೆಂದು ಪರಿಗಣಿಸಿ ಇದೇ ವರ್ಷಕ್ಕೆ ಮುಕ್ತಾಯ ಮಾಡಲಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಇದರ ಹೊರತಾಗಿ, ರಾಜಸ್ವ ಮತ್ತು ವೆಚ್ಚಗಳ ತಃಖ್ತೆಯಲ್ಲಿ ಬಂಡವಾಳ ವೆಚ್ಚಗಳನ್ನೂ ತೋರಿಸಲಾಗಿದ್ದು, ಇದು ಯಾವ ಲೆಕ್ಕಪತ್ರಗಳ ನಿಯಮದ ಆಧಾರದ ಮೇಲೆ ಪರಿಗಣನೆಗೆ ತೆಗೆದುಕೊಳ್ಳಲಾಗಿದೆಯೆಂದು ಲೆಕ್ಕಪರಿಶೋಧನೆಗೆ ತಿಳಿದು

FBAS Manual chapter 18 ರ ಪ್ರಕಾರ, fixed Assets are disclosed as a direct element of financial statements only in case of proprietary Funds & Fiduciary Funds , In the case of University the Cost incurred to acquire/construct a fixed assets during an accounting period is charged off expenditure incurred during that period. Such expenditure is reflected in the "Fixed Asset Accounting Group" (FAAG) as an asset and disclosed appropriately under the statement account head. The sources of fund for such acquisitions/constructions are disclosed under the caption "Investment in Fixed Assets" as a liability.

ಮೇಲಿನ FBAS Manual ನಿಯಮಗಳ ರೀತ್ಯ 2015–16ನೇ ಸಾಲಿನ ಅಂತ್ಯಕ್ಕೆ ಸ್ಥಿರಾಸ್ತಿ ಮೌಲ್ಯ ರೂ. 7846.55 ಲಕ್ಷಗಳು ಅಡಾವೆ ಪತ್ರಿಕೆಯ ಆಸ್ತಿಗಳ FAAG ಕಾಲಂನಲ್ಲಿ ತೋರಿಸಲಾಗಿದ್ದು, ಅದೇ ರೀತಿ ಹೊಣೆಗಾರಿಕೆಯಲ್ಲಿ Investment in Fixed Assets ನ FAAG ನಲ್ಲಿ ತೋರಿಸಲಾಗಿದೆ. ಆದ್ದರಿಂದ ಈ ವ್ಯವಹಾರವು FBAS Manual ನ System Generated Transaction ಆಗಿದ್ದು, ಇದು Manual made Trasaction ಅಲ್ಲವೆಂದು ಸ್ಪಷ್ಟಪಡಿಸುತ್ತಾ ಸದರಿ ವಾರ್ಷಿಕ ಲೆಕ್ಕಪತ್ರಗಳನ್ನು FBAS Manual ಪ್ರಕಾರವೇ

ಆಕ್ಷೇಪಣೆಗಳು	*ಉತ್ತರಗಳು*
ಬರುತ್ತಿಲ್ಲ. ಹಾಗೂ ಈ ವಹಿವಾಟುಗಳನ್ನು ಲೆಕ್ಕಪತ್ರದ ಬ್ಯಾಲೆನ್ಸ್ ಶೀಟ್‌ನಲ್ಲಿ ಯಾವ ರೀತಿ ಗಣನೆಗೆ ತೆಗೆದುಕೊಳ್ಳಲಾಗುತ್ತದೆಯೆಂದೂ ಸಹ ಲೆಕ್ಕಪರಿಶೋಧನೆಗೆ ಸ್ಪಷ್ಟವಾಗಬೇಕಾಗಿದೆ. ಇದೇ ರೀತಿ 2014–15ನೇ ಸಾಲಿನಲ್ಲೂ ರೂ.365.84 ಲಕ್ಷಗಳ ಸ್ಥಿರಾಸ್ತಿಗಳನ್ನು ಖರೀದಿಸಿದ್ದು, ಈ ಮೇಲೆ ತಿಳಿಸಿದ ಹಾಗೆ 2014–15ನೇ ಸಾಲಿನ ವೆಚ್ಚವೆಂದು ಪರಿಗಣಿಸಿ ಮುಕ್ತಾಯ ಮಾಡಲಾಗಿದೆ. ಈ ಕುರಿತು ವಿಶ್ವವಿದ್ಯಾಲಯದ ವಿವರಣೆ ನಿರೀಕ್ಷಿಸಿದೆ.	ನಿರ್ವಹಿಸಿರುವುದರಿಂದ ಸದರಿ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ.
1.15. ವಿಶ್ವವಿದ್ಯಾಲಯದ ಸ್ವೀಕೃತಿಗಳಲ್ಲಿ ತಪ್ಪು ವರ್ಗೀಕರಣ ಮಾಡಿ ಲೆಕ್ಕಪತ್ರಗಳಲ್ಲಿ ಅಳವಡಿಸಿಕೊಳ್ಳುತ್ತಿರುವುದು. 2015–16ನೇ ಸಾಲಿನ ಬೆಂಗಳೂರು ವಿಶ್ವವಿದ್ಯಾಲಯದ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುವಂತೆ, ವಿಶ್ವವಿದ್ಯಾಲಯಕ್ಕೆ ಸ್ವೀಕೃತಿಯಾಗುವ ಪ್ರವೇಶ ಶುಲ್ಕ, ಸಂಯೋಜನಾ ಶುಲ್ಕ, ಅರ್ಜಿ ಶುಲ್ಕ, ದಂಡಗಳು, ಪ್ರಯೋಗಾಲಯ ಶುಲ್ಕ, ಪರೀಕ್ಷಾ ಶುಲ್ಕ ಇತ್ಯಾದಿಗಳನ್ನು ಸ್ವೀಕೃತಿ ವಿಭಾಗದಲ್ಲಿ ಸ್ವೀಕರಿಸಿ ರಸೀದಿಯನ್ನು ನೀಡಲಾಗುತ್ತಿದೆ. ಈ ಸ್ವೀಕೃತಿ ರಸೀದಿಯ ಕಛೇರಿ ಪ್ರತಿಯನ್ನು ಲೆಕ್ಕಪತ್ರಗಳಲ್ಲಿ ದಾಖಲಿಸಲು (FBAS) ಗಣಕೀಕೃತ ಲೆಕ್ಕಪತ್ರಗಳ ತಂತ್ರಾಂಶವನ್ನು ನಿರ್ವಹಿಸುತ್ತಿರುವ ಶಾಖೆಗೆ ಕಳುಹಿಸಲಾಗುತ್ತದೆ. ರಸೀದಿಯ ದಾಖಲೆಯಂತೆ ಸ್ವೀಕೃತಿ ದಾಖಲೆಗಳನ್ನು ಲೆಕ್ಕಪತ್ರದಲ್ಲಿ ದಾಖಲಿಸಲಾಗುತ್ತದೆ. ಆದರೆ ಸ್ವೀಕೃತಿ ಪಡೆದು ವಿತರಿಸಲಾಗುತ್ತಿರುವ ರಸೀದಿಯನ್ನು ವಿಶ್ವವಿದ್ಯಾಲಯದ ವಿಭಾಗಗಳ ಲೆಕ್ಕಪರಿಶೋಧನೆ ಕೈಗಳ್ಳುವ ಸಮಯದಲ್ಲಿ ಸಂಬಂಧಿಸಿದ ಕಡತಗಳೊಂದಿಗೆ ಸತ್ಯಾಪನೆ ಮಾಡಿದಾಗ, ಬಹುತೇಕ ಸ್ವೀಕೃತಿ ರಸೀದಿಗಳಲ್ಲಿ ಕ್ರಮವಾಗಿ ಯಾವ ಯಾವ ವಿಷಯಗಳಿಗೆ ಶುಲ್ಕ/ದಂಡಗಳು ಪಾವತಿಸಲಾಗಿರುತ್ತದೆ ಎಂದು ನಿಖರವಾಗಿ ವರ್ಗೀಕರಿಸಿ, ಅನಂತರ ಅದರ ಒಟ್ಟು ಸ್ವೀಕೃತಿಯ ಮೊತ್ತವನ್ನು ಅಂತಿಮವಾಗಿ ತೋರಿಸದೆ, ಹಲವು ವಿಷಯಗಳಿಗೆ ಪಾವತಿಸಿರುವ ಶುಲ್ಕಗಳನ್ನು ಒಟ್ಟಿಗೆ ಒಂದೇ ವಿಷಯದ ಅಡಿಯಲ್ಲಿ ಸ್ವೀಕೃತಿಯೆಂದು ತೋರಿಸಿ ರಸೀದಿ ನೀಡಲಾಗುತ್ತಿದೆ. ಈ ರೀತಿ ಆಯಾ ವಿಷಯಕ್ಕೆ ಸ್ವೀಕರಿಸುವ ಮೊತ್ತಗಳನ್ನು ಕ್ರಮವಾಗಿ ರಸೀದಿಯಲ್ಲಿ ಮಾಹಿತಿಗಳನ್ನು ದಾಖಲಿಸಿ, ಇದೇ ಮಾಹಿತಿಯನ್ನು ಲೆಕ್ಕಪತ್ರದ ತಂತ್ರಾಂಶದಲ್ಲಿಯೂ ಅಳವಡಿಸಿದರೆ, ಲೆಕ್ಕಪತ್ರದಲ್ಲಿ ನೈಜವಾದ ಅಂಕಿಅಂಶಗಳನ್ನು ತೋರಿಸುತ್ತದೆ. ಈ ಮೇಲಿನ ತಪ್ಪು ವರ್ಗೀಕರಣದಿಂದಾಗಿ ವಿಶ್ವವಿದ್ಯಾಲಯದ ಆಯಾ ವಿಷಯಕ್ಕೆ ಸಂಬಂಧಿಸಿದ ನಿಖರವಾದ ಲೆಕ್ಕಪತ್ರದ ಮಾಹಿತಿ ತಪ್ಪಾಗಿ ತೋರಿಸುವುದರಿಂದ, ಲೆಕ್ಕಪತ್ರದ ನೈಜತೆಯ ದೃಢೀಕರಣಕ್ಕೆ ಧಕ್ಕೆಯಾಗುತ್ತದೆ. ಈ ಕುರಿತು ವಿಶ್ವವಿದ್ಯಾಲಯದ ವಿವರಣೆಯನ್ನು ನೀಡಲು ತಿಳಿಸಿದೆ.	ಈ ವಿಷಯದ ಕಂಡಿಕೆಯಲ್ಲಿ ತಿಳಿಸಿರುವ ಆಕ್ಷೇಪಣೆ ಅಂಶಗಳನ್ನು ಗಮನದಲ್ಲಿಟ್ಟು ಕಂಡಿಕೆಯನ್ನು FBAS ತಂತ್ರಾಂಶ ಉನ್ನತ್ತಿಕರಣ ಕೈಗೊಂಡಿರುವುದರಿಂದ, ವಾರ್ಷಿಕ ಲೆಕ್ಕ ಪತ್ರಗಳನ್ನು ಸಿದ್ಧಪಡಿಸುವಾಗ ವಹಿವಾಟುಗಳ ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತದೆ.
1.16.ಮೆಟ್ರೋ ರೈಲು ಯೋಜನೆಗೆ ವಿಶ್ವವಿದ್ಯಾಲಯವು ಭೂಮಿ ನೀಡಿರುವ ಸಂಬಂಧ ಸ್ವೀಕೃತಿಯಾಗಿರುವ ಮೊತ್ತವು ವಾರ್ಷಿಕ ಲೆಕ್ಕಪತ್ರಗಳಲ್ಲಿ ಕಂಡುಬರದೆ ಇರುವುದು.	2015–16ನೇ ಸಾಲಿನಲ್ಲಿ ಬೆಂಗಳೂರು ಮೆಟ್ರೋ ರೈಲು ಯೋಜನೆಗೆ ಎರಡು ಚೆಕ್ಕುಗಳ ಮೂಲಕ ಬಂದಿರುವ

ಆಕ್ಷೇಪಣೆಗಳು	***ಉತ್ತರಗಳು***
2015–16ನೇ ಸಾಲಿನ ಬೆಂಗಳೂರು ವಿಶ್ವವಿದ್ಯಾಲಯದ ಸ್ವೀಕೃತಿಗಳನ್ನು ಕಡತಗಳೊಂದಿಗೆ ಪರಿಶೀಲಿಸಲಾಗಿ, ಬೆಂಗಳೂರು ಮೆಟ್ರೋ ರೈಲು ಯೋಜನೆಗೆ ಬೆಂಗಳೂರು ವಿಶ್ವವಿದ್ಯಾಲಯವು ತನ್ನ 3624.45 ಸ್ಕ್ವೇರ್ ಮೀಟರ್‌ಗಳ ಭೂಮಿಯನ್ನು ಬಿ.ಎಂ.ಆರ್.ಸಿ.ಎಲ್.ಗೆ ನೀಡಿರುವ ಸಂಬಂಧ ವಿಶ್ವವಿದ್ಯಾಲಯಕ್ಕೆ ಎರಡು ಕಂತುಗಳಲ್ಲಿ ಒಟ್ಟು ರೂ. 3,80,63,538/–ಗಳ ಮೊತ್ತವನ್ನು ಬಿ.ಎಂ.ಆರ್.ಸಿ.ಎಲ್. ನಿಂದ ನೀಡಲಾಗಿರುತ್ತದೆ. ಇದರ ವಿವರಗಳು ಕೆಳಕಂಡಂತಿದೆ. **Receipts Details** | **Amount Credited to University** | **Amount Rs.** Cheque No. 676648/04.08.2015 | 28.09.2015 | 3,51,91,732/- Cheque No. 676898/08.10.2015 | 08.10.2015 | 28,71,806/- Total Rs. | **3,80,63,538/-** ಈ ಸ್ವೀಕೃತಿಯು ಬಂಡವಾಳ ಸ್ವೀಕೃತಿಯಾಗಿದ್ದು, ಇದರ ದಾಖಲಾತಿ 2015–16ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳಲ್ಲಿ ಕಂಡುಬರುತ್ತಿಲ್ಲ. ಅದ್ದರಿಂದ, ಮೇಲಿನ ಬಂಡವಾಳ ಸ್ವೀಕೃತಿಯನ್ನು ವಾರ್ಷಿಕ ಲೆಕ್ಕಪತ್ರಗಳಲ್ಲಿ ಯಾವ ರೀತಿ ಅಳವಡಿಸಿಕೊಳ್ಳಲಾಗಿದೆಯೆಂದು ಲೆಕ್ಕಪರಿಶೋಧನೆಗೆ ಸ್ಪಷ್ಟನೆಯಾಗಬೇಕಿದೆ.	ಮೊತ್ತ ರೂ. 380,63,538/–ಗಳ ಮಾಹಿತಿಯು ವಾರ್ಷಿಕ ಲೆಕ್ಕಪತ್ರಗಳಲ್ಲಿ ಕಂಡು ಬರುತ್ತಿಲ್ಲವೆಂದು ಆಕ್ಷೇಪಿಸಲಾಗಿದೆ. ಆದರೆ, ಎರಡು ಚೆಕ್ಕುಗಳನ್ನು BURCM ನಲ್ಲಿ ದಾಖಲಿಸಿರುವುದರಿಂದ, ಡಿಡಿ ಶಾಖೆಯ ಜಮೆಗಳ ಪರಿಶೀಲನೆಯಲ್ಲಿ ನೋಡಬಹುದಿತ್ತು. ಇದರ ಜೊತೆಗೆ F.B.A.S ನಲ್ಲಿ ಚೆಕ್ಕುಗಳ ಸಂಖ್ಯೆಯ ಆಧಾರದ ಮೇಲೆ ಬಂದಿರುವ ಮಾಹಿತಿಯನ್ನು ಪರಿಶೀಲಿಸಲು ಅವಕಾಶವಿರುತ್ತದೆ. ಆಕ್ಷೇಪಣೆಯಲ್ಲಿನ ಎರಡೂ ಚೆಕ್ಕುಗಳಿಂದ ಬಂದಿರುವ ಮೊತ್ತಗಳನ್ನು 2015–16ನೇ ಸಾಲಿನ ಲೆಕ್ಕಪತ್ರಗಳಲ್ಲಿ ಅಳವಡಿಸಿಕೊಂಡಿರುತ್ತದೆ. ವಿವರಗಳು ಈ ಕೆಳಕಂಡಂತಿವೆ. **(ಅನುಬಂಧ–95)** (ಪು.ಸಂ.629) **ಕ್ರ. ಸಂ.** | **ಚೆಕ್ ಸಂಖ್ಯೆ ಮತ್ತು ದಿನಾಂಕ** | **RRV ಸಂಖ್ಯೆ ಮತ್ತು ದಿನಾಂಕ** | **ಮೊತ್ತ** | **ಜಮೆಯ ಲೆಕ್ಕ ಶೀರ್ಷಿಕೆ** 1) | 676648 /4.8.15 | 55937/ 28.9.15 | 3,51,91,732.00 | 00463 Other Miscellanies Receipts 2) | 676898/ 8.10.15 | 55940/ 14.10.15 | 28,71,806.00 | 00463 Other Miscellanies Receipts **ಒಟ್ಟು ಮೊತ್ತ** | **3,80,63,538.00** ವಾರ್ಷಿಕ ಲೆಕ್ಕಪತ್ರಗಳ ಅಧ್ಹಾವೆ ಪಟ್ಟಿಯಲ್ಲಿ "Land" ಲೆಕ್ಕ ಶೀರ್ಷಿಕೆಯಲ್ಲಿ ಯಾವುದೇ ಮೊತ್ತ ಇಲ್ಲದಿರುವುದರಿಂದ ಬೆಂಗಳೂರು ಮೆಟ್ರೋ ರೈಲು ಯೋಜನೆಗೆ ಕೊಟ್ಟಿರುವ ಭೂಮಿಯಿಂದ ಬಂದಿರುವ ಮೊತ್ತವನ್ನು ಮೇಲೆ ತೋರಿಸಿರುವಂತೆ ವರ್ಗೀಕರಿಸಿರುವುದು ಕಂಡು ಬರುತ್ತದೆ. ಎರಡೂ ಚೆಕ್ಕುಗಳಿಂದ ಬಂದಿರುವ ಮೊತ್ತವನ್ನು 2015–16ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳಲ್ಲಿ ಸೇರಿರುವುದರಿಂದ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ.
1.17ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ ಬಿಡುಗಡೆಯಾದ ಸಮೂಹ ಅನುದಾನ ಮೊತ್ತಕ್ಕೂ ಲೆಕ್ಕಪತ್ರದಲ್ಲಿ ತೋರಿಸುತ್ತಿರುವ ಮೊತ್ತಕ್ಕೂ ವ್ಯತ್ಯಾಸ ಕಂಡುಬರುತ್ತಿರುವುದು. 2015–16ನೇ ಸಾಲಿನಲ್ಲಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ 4 ತ್ರೈಮಾಸಿಕವಾಗಿ ಬಿಡುಗಡೆಯಾದ ಸಮೂಹ ಅನುದಾನದ ಮೊತ್ತ ರೂ.116,60,00,000/– ಗಳೆಂದು ಜನರಲ್ ಲೆಡ್ಜರ್‌ನ ಪರಿಶೀಲನೆಯಿಂದ ಕಂಡುಬಂದಿದ್ದು, ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳಲ್ಲಿ ಸಮೂಹ ಅನುದಾನದ ಸ್ವೀಕೃತಿ ಮೊತ್ತ ರೂ.125,33,69,000/–ಗಳೆಂದು ತೋರಿಸಲಾಗಿದೆ.	2015–16ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳಲ್ಲಿ ತೋರಿಸಿರುವ ಲೆಕ್ಕ ಶೀರ್ಷಿಕೆ 00722 Block Maintenance Grants ನಲ್ಲಿನ ಮೊತ್ತ ರೂ.12,5,33,69,000.00 ಗಳಿಗೆ ಬಂದಿರುವ ಮಾಹಿತಿಯನ್ನು ಜನರಲ್ ಲೆಡ್ಜರಿನಲ್ಲಿ ತೋರಿಸಲಾಗಿದೆ. ಆದರೆ ಆಕ್ಷೇಪಣೆಯಲ್ಲಿ ತೋರಿಸಿರುವ ಮೊತ್ತಗಳು ವೇತನಕ್ಕಾಗಿ ತ್ರೈಮಾಸಿಕವಾಗಿ ಸರ್ಕಾರದಿಂದ ಬಿಡುಗಡೆ ಮಾಡಿರುವ ಅನುದಾನ ಮಾತ್ರ ತೋರಿಸಿರುತ್ತದೆ. ಯುಜಿಸಿ

ಆಕ್ಷೇಪಣೆಗಳು	ಉತ್ತರಗಳು

2015–16ನೇ ಸಾಲಿನಲ್ಲಿ ಸರ್ಕಾರದಿಂದ ಬ್ಲಾಕ್ ಗ್ರಾಂಟ್ಸ್ ಬಿಡುಗಡೆಯಾದ ವಿವರ

ಕಂತುಗಳು	ಸಮೂಹ ಅನುದಾನ ಸ್ವೀಕೃತಿಯಾದ ಖಾತೆ ಸಂಖ್ಯೆ	ಬಿಡುಗಡೆಯಾದ ದಿನಾಂಕ	ಸಮೂಹ ಅನುದಾನದ ಮೊತ್ತ
1.	64062450768	07.07.2015	29,15,00,000/–
2.	64062450768	07.01.2016	29,15,00,000/–
3.	64062450768	22.02.2016	29,15,00,000/–
4.	64062450768	22.03.2016	29,15,00,000/–
		ಒಟ್ಟು ರೂ.	**116,60,00,000**/–

ಲೆಕ್ಕಪತ್ರಗಳಲ್ಲಿ ತೋರಿಸಿರುವಂತೆ ಸರ್ಕಾರದಿಂದ ರೂ. 8,73,69,000/–ಗಳ ಹೆಚ್ಚುವರಿಯಾಗಿ ಬಿಡುಗಡೆಯಾದ ಮೊತ್ತದ ಕುರಿತು ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ ಹಾಗೂ ಲೆಕ್ಕಪತ್ರಗಳಲ್ಲಿ ಸರ್ಕಾರದಿಂದ ಬಂದ ಅನುದಾನಗಳನ್ನು ಯಾವ ರೀತಿ ಪರಿಗಣನೆಗೆ ತೆಗೆದುಕೊಳ್ಳಲಾಗುತ್ತಿದೆಯೆಂದು ಸ್ಪಷ್ಟನೆಯಾಗಬೇಕಾಗಿದೆ.

ಮತ್ತು ಎಐಸಿಟಿಇ ಬಾಕಿ ಹಿಂಪಾವತಿಗಾಗಿ ಬಂದಿರುವ ಅನುದಾನಗಳು ಆಕ್ಷೇಪಣೆಯಲ್ಲಿ ತೋರಿಸಿರುವ ಪಟ್ಟಿಯಲ್ಲಿ ಸೇರದೆ ಇರುವುದರಿಂದ ವ್ಯತ್ಯಾಸ ಬಂದಿರುತ್ತದೆ. ವಿವರಗಳು ಈ ಕೆಳಕಂಡಂತಿವೆ.

No	FBAS Vr No	Cheque No and Date	Amount	Remarks
1	QRV 39027	230320, 30.07.2015	2,39,00,000.00	-
2	QRV 14551	345337, 14.01.2016	1,15,12,000.00	-
3	QRV 14551	345338, 14.01.2016	3,00,00,000.00	-
4	JV 429	440396, 28.11.2014	2,19,57,000.00	Misclosifoetion of in QRV No.95597 and JV No 428/31.03.2016 is Rectified.
		Total	**8,73,69,000.00**	

ಈ ಎರಡು ಮೊತ್ತಗಳು ಲೆಕ್ಕ ಪತ್ರಗಳಿಗೆ ತಾಳೆಯಾಗುತ್ತವೆ.

1. ಆಕ್ಷೇಪಣೆಯಲ್ಲಿ ತೋರಿಸಿರುವ ಮೊತ್ತ
   ರೂ. 116,60,00,000.00
2. ಮೇಲೆ ತಿಳಿಸಿರುವ ಮೊತ್ತ
   ರೂ. 8,73,69,000.00 **(ಅನುಬಂಧ–96)** (ಪು.ಸಂ.630)
3. ಲೆಕ್ಕ ಪತ್ರಗಳಲ್ಲಿ ತೋರಿಸಿರುವ ಮೊತ್ತ
   ರೂ. 125,33,69,000.00

2015–16ನೇ ಸಾಲಿನಲ್ಲಿ ಸರ್ಕಾರದಿಂದ ಚೆಕ್ಕುಗಳ ಮೂಲಕ ಬಿಡುಗಡೆಯಾದ ಅನುದಾನವನ್ನು BURCM ನಲ್ಲಿ ದಾಖಲಿಸಿ FBAS ನಲ್ಲಿ ಅಳವಡಿಕೆಯಾಗಿರುತ್ತದೆ. ಜೆ.ವಿ ಮೂಲಕ ಅಳವಡಿಕೆಯಾದ ವಹಿವಾಟನ್ನು ಹಿಂದೆ ಆಗಿದ್ದಂತಹ ತಪ್ಪುವರ್ಗೀಕರಣವನ್ನು ಸರಿಪಡಿಸಿರುವುದಕ್ಕೆ ಸಂಬಂಧಪಟ್ಟಿರುತ್ತದೆ. ಇದಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಜೆ.ವಿ ನಲ್ಲಿ ವಿವರಿಸಿರುತ್ತದೆ. ಆದುದರಿಂದ ಆಕ್ಷೇಪಣೆಯನ್ನು ಕೈ ಬಿಡಲು ಕೋರಿದೆ.

1.18.ವಿಶ್ವವಿದ್ಯಾಲಯದ ಬೋಧಕ ವರ್ಗಕ್ಕೆ ಪಾವತಿಸಿರುವ ಬಾಕಿ ವೇತನದಲ್ಲಿ ಕಂಡುಬಂದ ವ್ಯತ್ಯಯಗಳು.

2015–16ನೇ ಸಾಲಿನಲ್ಲಿ ಬೆಂಗಳೂರು ವಿಶ್ವವಿದ್ಯಾಲಯವು ತನ್ನ ಬೋಧಕ ವರ್ಗಕ್ಕೆ ಯು.ಜಿ.ಸಿ ಮಾರ್ಗಸೂಚಿ ಅನ್ವಯ ಬಾಕಿ ವೇತನವನ್ನು ಪಾವತಿಸಿರುತ್ತದೆ. ಈ ಕುರಿತ ದಾಖಲೆಗಳನ್ನು ಪರಿಶೀಲಿಸಲಾಗಿ ಹಲವು ವ್ಯತ್ಯಯಗಳು ಲೆಕ್ಕಪರಿಶೋಧನೆಗೆ ಕಂಡುಬಂದಿರುತ್ತದೆ.

1. ಬಾಕಿ ವೇತನ ಪಾವತಿಸಲು ಅರ್ಹ ಬೋಧಕ ಸಿಬ್ಬಂದಿಗಳಿಗೆ ಯು.ಜಿ.ಸಿ/ಎ.ಐ.ಸಿ.ಟಿ.ಇ ವತಿಯಿಂದ 2015–16ನೇ ಸಾಲಿನಲ್ಲಿ ಒಟ್ಟು ರೂ. 6,54,12,000/–ಗಳ ಮೊತ್ತ ಬಿಡುಗಡೆಯಾಗಿರುತ್ತದೆ.
2. ವಿಶ್ವವಿದ್ಯಾಲಯದ ವೇತನ ವಿತರಣಾ ವಹಿಗಳನ್ನು ಪರಿಶೀಲಿಸಲಾಗಿ, ಒಟ್ಟು ರೂ. 8,91,86,169/–ಗಳ ಬಾಕಿ ವೇತನ ಪಾವತಿಸಿರುವುದು ಕಂಡುಬಂದಿರುತ್ತದೆ.
3. ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳಲ್ಲಿ ಒಟ್ಟು ರೂ. 11,11,44,000/–ಗಳ ಬಾಕಿ ವೇತನವನ್ನು

1. 2015–16ನೇ ಸಾಲಿನಲ್ಲಿ ಸರ್ಕಾರದಿಂದ ಬಿಡುಗಡೆಯಾದ ಮೊತ್ತ 09.06.2015 – 239.00 ಲಕ್ಷ
   29.10.2015 – 115.12 ಲಕ್ಷ
   19.12.2015 – 300.00 ಲಕ್ಷ

2. 2014–15ನೇ ಸಾಲಿನಲ್ಲಿ ಒಟ್ಟು ಪಾವತಿಸಿರುವ ಮೊತ್ತ 5,51,27,073/– ಲೆಕ್ಕಾಚಾರದ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಬಾಕಿ ವೇತನವನ್ನು ಮೊತ್ತವನ್ನು ಸಾಮಾನ್ಯ ನಿಧಿಯಿಂದ ಭರಿಸಿರುವುದು ವಿಶ್ವವಿದ್ಯಾಲಯದ

ಆಕ್ಷೇಪಣೆಗಳು	ಉತ್ತರಗಳು
ಪಾವತಿಸಿರುವುದಾಗಿ ದಾಖಲಾಗಿರುತ್ತದೆ. 4. ವಿಶ್ವವಿದ್ಯಾಲಯದ ಜನರಲ್ ಲೆಡ್ಜರ್ ಲೆಕ್ಕಪತ್ರದನ್ವಯ ಬಾಕಿ ವೇತನ ಪಾವತಿಸಿರುವ ಮೊತ್ತವು ರೂ. 12,29,32,550/–ಗಳಾಗಿದೆ. ಯು.ಜಿ.ಸಿ/ಎ.ಐ.ಸಿ.ಟಿ.ಇ ಯಿಂದ ಬಿಡುಗಡೆಯಾದ ಅನುದಾನಕ್ಕನುಗುಣವಾಗಿ ಬಾಕಿ ವೇತನವನ್ನು ಪಾವತಿಸದೇ ಹೆಚ್ಚುವರಿ ಮೊತ್ತವನ್ನು ಸಾಮಾನ್ಯ ನಿಧಿಯಿಂದ ಭರಿಸಿರುವ ಕ್ರಮವು ಮುಂದಿನ ದಿನಗಳಲ್ಲಿ ವಿಶ್ವವಿದ್ಯಾಲಯದ ಅಗತ್ಯ ವೆಚ್ಚಗಳ ನಿರ್ವಹಣೆಗಾಗಿ ವಿತ್ತೀಯ ಕೊರತೆಯಾಗುವ ಸಾಧ್ಯತೆಗಳಿರುತ್ತದೆ. ಮುಂದುವರೆದು, ಲೆಕ್ಕಪತ್ರದ ಜನರಲ್ ಲೆಡ್ಜರ್‌ನಲ್ಲಿರುವ ಮೊತ್ತಕ್ಕೂ ವಾರ್ಷಿಕ ಲೆಕ್ಕಪತ್ರದಲ್ಲಿರುವ ಮೊತ್ತಕ್ಕೂ ಮತ್ತು ವಿಷಯ ನಿರ್ವಾಹಕರು ನಿರ್ವಹಿಸಿರುವ ವಹಿಗೂ ತಾಳೆಯಾಗದೆ ವ್ಯತ್ಯಾಸ ಕಂಡುಬರುತ್ತಿರುವುದರಿಂದ ಈ ಮೊತ್ತಗಳಲ್ಲಿ ಯಾವ ಮೊತ್ತವನ್ನು ಪರಿಗಣಿಸಬೇಕು ಹಾಗೂ ಈ ಪಾವತಿಯನ್ನು ಯಾವ ಆಧಾರದ ಲೆಕ್ಕಪತ್ರಗಳಲ್ಲಿ ದಾಖಲಿಸಲಾಗಿದೆಯೆಂದು ಸ್ಪಷ್ಟೀಕರಣದ ಅಗತ್ಯವಿರುತ್ತದೆ. ಸರ್ಕಾರದಿಂದ ಬಿಡುಗಡೆಗೊಂಡ ಮೊತ್ತದಲ್ಲಿ ಅನರ್ಹ ಬೋಧಕ ಸಿಬ್ಬಂದಿಗಳಿಗೆ ಪಾವತಿಸಲಾದ ಹೆಚ್ಚುವರಿ ವೇತನವನ್ನು ಹಿಂಪಡೆಯಲು ಸೂಚಿಸಿದ್ದು, ಈಗಾಗಲೇ ವಿ.ವಿ. ಸಾಮಾನ್ಯ ನಿಧಿಯಿಂದ ಬಾಕಿ ವೇತನ ಪಾವತಿಸಿದ್ದು, ಹಿಂಬಾಕಿ ಪಾವತಿಸುವ ಮೊತ್ತವನ್ನು ಭರಿಸುವ ಹಾಗೂ ಹೊಂದಾಣಿಕೆ ಮಾಡುವ ಕುರಿತು ವಿವರಣೆ ನೀಡಬೇಕಿದೆ.	ಆದೇಶದ ಮೇರೆಗೆ ಪಾವತಿಸಿರುವುದು ಈ ಹೆಚ್ಚುವರಿ ಮೊತ್ತವನ್ನು ವಿಶ್ವವಿದ್ಯಾಲಯದ ನಿಧಿಗೆ ಭರಿಸಲು ಸರ್ಕಾರಕ್ಕೆ ಪತ್ರವನ್ನು ಕಳುಹಿಸಿಕೊಡಲಾಗಿದೆ. ಅನರ್ಹ ಬೋಧಕ ಸಿಬ್ಬಂದಿಗಳಿಗೆ ಪಾವತಿಸಲಾದ ಹೆಚ್ಚುವರಿ ವೇತನವನ್ನು ಹಿಂಪಡೆಯಲು ಸರ್ಕಾರಕ್ಕೆ ಪತ್ರವನ್ನು ಬರೆಯಲಾಗಿದೆ. ಸರ್ಕಾರದ ಆದೇಶ ಬಂದ ನಂತರ ಹಿಂಪಡೆಯಲಾಗುವುದು.
1.19.ವಿಶ್ವವಿದ್ಯಾಲಯಕ್ಕೆ ಸ್ವೀಕೃತಿಯಾದ ವಿವಿಧ ಅನುದಾನಗಳಲ್ಲಿ ಕಂಡುಬಂದ ವ್ಯತ್ಯಾಸಗಳು. 2015–16ನೇ ಸಾಲಿನಲ್ಲಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಂಶೋಧನಾ ಕ್ಷೇತ್ರಗಳನ್ನು ವ್ಯಾಪ್ತಿ ವಿಸ್ತಾರಗೊಳಿಸುವ ಹಾಗೂ ಉತ್ತೇಜಿಸುವ ಸಲುವಾಗಿ ಭಾರತ ಸರ್ಕಾರ, ಯು.ಜಿ.ಸಿ., ಬಾಹ್ಯಕಾಶ ಸಂಸ್ಥೆ ಹಾಗೂ ಇತರೆ ಅನುದಾನ ಸಂಸ್ಥೆಗಳು ಅನುದಾನ ನೀಡುತ್ತಿದ್ದು, ವಿಶ್ವವಿದ್ಯಾಲಯವು ಸ್ವೀಕೃತಗೊಂಡ ಅನುದಾನವನ್ನು ಲೆಕ್ಕ ಖಾತೆ ಸಂಖ್ಯೆ:54047022009, 54047021979, 0443101027053ಗಳಲ್ಲಿ ನಿರ್ವಹಿಸುತ್ತಿರುವ ಕುರಿತು ಬ್ಯಾಂಕ್ ಪಾಸ್ ಶೀಟ್‌ಗಳನ್ನು ಒದಗಿಸಿರುತ್ತಾರೆ. ಅನುದಾನ ಸ್ವೀಕೃತಿ ವಹಿ ಹಾಗೂ ಲೆಕ್ಕಪರಿಶೋಧನೆಗೆ ಒದಗಿಸಲಾದ ಬ್ಯಾಂಕ್ ಪಾಸ್ ಶೀಟ್‌ಗಳನ್ನು ಪರಿಶೀಲಿಸಲಾಗಿ, ಅನುದಾನ ಸ್ವೀಕೃತಿ ವಹಿಯಲ್ಲಿ ಸ್ವೀಕೃತಿಯಾಗಿರುದ ಮೊತ್ತವು ಯಾವ ಲೆಕ್ಕ ಖಾತೆಗಳಿಗೆ ಜಮೆಯಾಗಿದೆ ಎಂಬುದನ್ನು ಖಚಿತ ಪಡಿಸಿಕೊಳ್ಳಲು ಪೂರ್ಣ ದಾಖಲೆಗಳನ್ನು ಒದಗಿಸಿರುವುದಿಲ್ಲ ಹಾಗೂ ಅನುದಾನ ಸ್ವೀಕೃತಿ ವಹಿಯಲ್ಲಿ ನಮೂದಿಸಿರುವ ಮೊತ್ತಕ್ಕೂ ವಾರ್ಷಿಕ ಲೆಕ್ಕಪತ್ರಗಳಲ್ಲಿ ನಮೂದಿಸಿರುವ ಮೊತ್ತಕ್ಕೂ ಅಗಾಧ ವ್ಯತ್ಯಾಸ ಕಂಡುಬಂದಿದ್ದು, ಈ ವ್ಯತ್ಯಾಸದ ಕುರಿತು ಲೆಕ್ಕಪರಿಶೋಧನೆಗೆ ವಿವರಣೆ ನೀಡಬೇಕಿದೆ.	ಈ ವಿಷಯದ ಕಂಡಿಕೆಯಲ್ಲಿ ತಿಳಿಸಿರುವ ಆಕ್ಷೇಪಣೆಯ ಅಂಶಗಳನ್ನು ಗಮನದಲ್ಲಿತ್ತುಕೊಂಡು FBAS ತಂತ್ರಾಂಶ ಉನ್ನತೀಕರಣದಲ್ಲಿ ಅಳವಡಿಸಿಕೊಂಡು ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ದಪಡಿಸುವಾಗ ವಹಿವಾಟುಗಳ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು. ಅಲ್ಲದೆ ಪ್ರಸಕ್ತ ವರ್ಷದಿಂದ ಅನುದಾನ ಸ್ವೀಕೃತಿ ವಿಭಾಗಗಳಿಂದ ವರ್ಷದಲ್ಲಿ ಸ್ವೀಕೃತಿಯಾಗಿರುವ ಅನುದಾನಗಳ ವಿವರಗಳನ್ನು ಪಡೆದು ವಾರ್ಷಿಕ ಲೆಕ್ಕ ಪತ್ರಗಳ ಅಂಕಿ ಅಂಶಗಳೊಂದಿಗೆ ಸಮನ್ವಯ ಮಾಡಿಕೊಂಡು ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ದಪಡಿಸಲಾಗುವುದು.

ಆಕ್ಷೇಪಣೆಗಳು	ಉತ್ತರಗಳು

ಅನುದಾನ ಸಂಸ್ಥೆ	ಸ್ವೀಕೃತ ವಹಿಯಲ್ಲಿ ನಮೂದಿಸಲಾದ ಮೊತ್ತ	ವಾರ್ಷಿಕ ಲೆಕ್ಕಪತ್ರಗಳಲ್ಲಿನ ಮೊತ್ತ	ವ್ಯತ್ಯಾಸ
Dept. of Atomic Energy	6,47,685/-	10,26,000/-	3,79,000/-
Dept. of Science & Technology	3,62,65,000/-	3,04,11,000/-	58,54,000/-
Central Science & Industrial Research	59,74,000/-	9,00,000/-	50,74,000/-

ಈ ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ವಿ.ವಿ.ಯು ತನಗೆ ಸ್ವೀಕೃತವಾಗುವ ಅನುದಾನವನ್ನು ನಿಗದಿತ ಲೆಕ್ಕ ಖಾತೆಗಳಲ್ಲಿ ನಿರ್ವಹಿಸದೇ ಇರುವುದರಿಂದ ಅನುದಾನ ಸ್ವೀಕೃತಿಗಳ ಮೇಲೆ ಗಮನೀಕರಿಸದಿರುವುದು ಇದರಿಂದ ಸ್ಪಷ್ಟವಾಗುತ್ತದೆ.

1.20. ವಿಶ್ವವಿದ್ಯಾಲಯದ ವಿವಿಧ ಮೂಲಗಳಿಂದ ಸ್ವೀಕೃತವಾಗಿರುವ ಶುಲ್ಕಗಳಲ್ಲಿ ಕಂಡುಬಂದಿರುವ ವ್ಯತ್ಯಾಸಗಳು.

ಪ್ರವೇಶ ಶುಲ್ಕ, ಸಂಯೋಜನಾ ಶುಲ್ಕ, ಪರೀಕ್ಷಾ ಶುಲ್ಕ, ಬೋಧನಾ ಶುಲ್ಕ, ಅರ್ಜಿ ಶುಲ್ಕ, ಮತ್ತು ದಂಡಗಳು ವಿಶ್ವವಿದ್ಯಾಲಯ ಪ್ರಮುಖ ರಾಜಸ್ವ ಸ್ವೀಕೃತಿಗಳಾಗಿದ್ದು, ಸ್ವೀಕರಿಸಿರುವ ಶುಲ್ಕಗಳನ್ನು ಆಯಾ ವಿಷಯದ ಶೀರ್ಷಿಕೆಗಳಡಿಯಲ್ಲಿ ವರ್ಗೀಕರಣವಾಗಿರುವುದಿಲ್ಲ. ಮುಂದುವರೆದು, ಆಯಾ ಸಾಲಿನಲ್ಲಿ ಸ್ವೀಕೃತವಾಗಬೇಕಿರುವ ಶುಲ್ಕಗಳಿಗೆ ಡಿ.ಸಿ.ಬಿ. ನಿರ್ವಹಿಸಿರುವುದಿಲ್ಲ. ಇದರಿಂದ ವಿಶ್ವವಿದ್ಯಾಲಯಕ್ಕೆ ಸಂದಾಯವಾಗಬೇಕಿರುವ ರಾಜಸ್ವ ಸ್ವೀಕೃತಿಗಳ ಬಗ್ಗೆ ನಿಖರವಾದ ಮಾಹಿತಿ ಲಭ್ಯವಿರುವುದಿಲ್ಲ. ವಿಶ್ವವಿದ್ಯಾಲಯವು ತನ್ನ ದ್ವಿನಮೂದು ಪದ್ದತಿಯ ಲೆಕ್ಕಪತ್ರಗಳನ್ನು ಸಂಚಯನ ಪದ್ದತಿಯ (Accrual System) ಆಧಾರದ ಮೇಲೆ ನಿರ್ವಹಿಸುತ್ತಿದ್ದು, ಡಿ.ಸಿ.ಬಿ. ನಿರ್ವಹಿಸದೆ ಇರುವ ಕಾರಣ ಆಯಾ ಸಾಲಿನಲ್ಲಿ ಸಂಚಯನಗೊಂಡಿರುವ ಸ್ವೀಕೃತಿಗಳ ಕುರಿತು ಮಾಹಿತಿ ಲಭ್ಯವಾಗುವುದಿಲ್ಲ ಹಾಗೂ ಅಳವಡಿಸಿಕೊಂಡಿರುವ ಲೆಕ್ಕಪತ್ರಗಳ ಪದ್ದತಿ ನಿಯಮಗಳ ವಿರುದ್ಧವಾಗಿದೆ. ಈ ಕಾರಣದಿಂದ ವಾರ್ಷಿಕ ಲೆಕ್ಕಪತ್ರಗಳಲ್ಲಿ ತೋರಿಸಲಾಗಿರುವ ಅಂಕಿ ಅಂಶಗಳನ್ನು ನೈಜವಾಗಿರುವುದೆಂದು ಪರಿಗಣಿಸಲಾಗದು.

ಪರೀಕ್ಷಾರ್ಥವಾಗಿ ಪರಿಶೀಲಿಸಿದ ವಿಶ್ವವಿದ್ಯಾಲಯದ ಕೆಲವು ರಾಜಸ್ವ ಸ್ವೀಕೃತಿಗಳ ಮೊತ್ತಗಳಲ್ಲಿ ವಿಭಾಗದ ಲೆಡ್ಜರ್ ವಹಿಗಳಲ್ಲಿ ದಾಖಲು ಮಾಡಿರುವ ಮೊತ್ತಕ್ಕೂ ವಾರ್ಷಿಕ ಲೆಕ್ಕಪತ್ರಗಳ ಮೊತ್ತಕ್ಕೂ ವ್ಯತ್ಯಾಸ ಕಂಡುಬರುತ್ತಿದ್ದು, ಲೆಕ್ಕಪತ್ರಗಳ ನಿಖರವಾದ ದಾಖಲೆ ಹಾಗೂ ನಿರ್ವಹಣೆಯಾಗದಿರುವುದು ಇದರಿಂದ ಸ್ಪಷ್ಟವಾಗುತ್ತದೆ. ವ್ಯತ್ಯಾಸ ಕಂಡುಬಂದ ವಿವರಗಳು ಕೆಳಕಂಡಂತಿದೆ.

Fees	Amount as per Ledgers of the Units (Unit Audit Reports)	As per Annual Accounts	Difference
Affiliation Fee	1403.16	1467.69	64.53

ಈ ವಿಷಯದ ಕಂಡಿಕೆಯಲ್ಲಿ ತಿಳಿಸಿರುವ ಆಕ್ಷೇಪಣೆ ಅಂಶಗಳನ್ನು ಗಮನದಲ್ಲಿಟ್ಟು ಕಂಡಿಕೆಯನ್ನು FBAS ತಂತ್ರಾಂಶ ಉನ್ನತೀಕರಣದಲ್ಲಿ ಅಳವಡಿಸಿಕೊಂಡು ವಾರ್ಷಿಕ ಲೆಕ್ಕ ಪತ್ರಗಳನ್ನು ಸಿದ್ದಪಡಿಸುವಾಗ ವಹಿವಾಟುಗಳ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತದೆ.

ಅಲ್ಲದೆ ಪ್ರಸಕ್ತ ವರ್ಷದಿಂದ ಪ್ರತಿ ಆದಾಯ ಮೂಲವಿರುವ ವಿಭಾಗಗಳಿಂದ ಕಡ್ಡಾಯವಾಗಿ DCB ತಯಾರಿಸಿ ವರ್ಷಾಂತ್ಯಕ್ಕೆ ವಾರ್ಷಿಕ ಲೆಕ್ಕಪತ್ರಗಳ ಅಂಕಿ ಅಂಶಗಳೊಂದಿಗೆ ಸಂಬಂಧಿಸಿದ ವಿಭಾಗಗಳವರಿಗೆ ಲೆಕ್ಕ ಸಮನ್ವಯಗೊಳಿಸಿ ವರದಿ ಸಲ್ಲಿಸಲು ಸೂಚಿಸಲಾಗಿದೆ.

ಆಕ್ಷೇಪಣೆಗಳು	ಉತ್ತರಗಳು

Admission Fee PG (from affiliation College)	557.32	473.02	84.30
Admission Fee PG (Course run by University)	196.63	424.40	227.77
Admission Fee UG (Affiliated College)	2487.51	2507.67	20.16
Exam Fee (UG-affiliated college)	5522.79	5520.70	2.09
UG Photocopy & Revaluation	285.73	175.67	110.06
PhD Fee	25.68	38.56	12.88
Directorate of Correspondence Course & Distance Education	134.85	140.84	50.99

1.21. ಸಮಾಜ ಕಲ್ಯಾಣ ಇಲಾಖೆಯಿಂದ ಮರುಭರಣವಾದ ಬಾಕಿ ಮೊಬಲಗಿನ ಮೊತ್ತಗಳು ಲೆಕ್ಕಪತ್ರಗಳಲ್ಲಿ ದಾಖಲಿಸದಿರುವುದು

ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಪ್ರವೇಶಾತಿ ಹೊಂದಿದ ಎಸ್.ಸಿ./ಎಸ್.ಟಿ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕ, ಭೋಧನಾ ಶುಲ್ಕ, ಪರೀಕ್ಷಾ ಶುಲ್ಕಗಳಲ್ಲಿ ವಿನಾಯ್ತಿ ನೀಡಲಾಗುತ್ತಿದ್ದು, ಹಾಗೂ ಕಡಿಮೆ ಆದಾಯವಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತಿರುತ್ತದೆ. ಈ ಮೊತ್ತವನ್ನು ವಿಶ್ವವಿದ್ಯಾಲಯವು ಸಮಾಜ ಕಲ್ಯಾಣ ಇಲಾಖೆಯಿಂದ ಮರುಭರಣ ಮಾಡಿಕೊಳ್ಳಬೇಕಾಗಿದ್ದು, 2015–16ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ರೂ.3,12,21,249/–ಸ್ವೀಕೃತವಾಗಿರುತ್ತದೆ. ಈ ಮೊತ್ತದಲ್ಲಿ 2013–14ನೇ ಸಾಲಿನಿಂದ ಸ್ವೀಕೃತವಾಗಬೇಕಾದ ಮೊತ್ತಗಳು ಒಳಗೊಂಡಿರುವುದು ದಾಖಲೆಗಳ ಪರಿಶೀಲನೆಯಿಂದ ಕಂಡುಬಂದಿರುತ್ತದೆ. ಸರ್ಕಾರದಿಂದ ಮರುಭರಣವಾಗಬೇಕಾದ ಲೆಕ್ಕಪತ್ರಗಳ ದಾಖಲಾತಿಗಳ ಕುರಿತು 2013–14 ರಿಂದ 2015–16ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲಿಸಲಾಗಿ, ಸ್ವೀಕೃತವಾಗಬೇಕಿರುವ ಮರುಭರಣ ಮೊತ್ತವನ್ನು ಅಡಾವೆ ಪತ್ರಿಕೆಗಳ ಚರಾಸ್ತಿ ಅಡಿಯಲ್ಲಿನ ಬರಬೇಕಾದ ಸ್ವೀಕೃತಿಗಳಲ್ಲಿ ದಾಖಲಾಗಿರುವುದಿಲ್ಲ. ಆದರೆ ಸರ್ಕಾರದಿಂದ ಬರಬೇಕಾದ ಬಾಕಿ ಮರುಭರಣ ಮೊತ್ತ 2015–16ನೇ ಸಾಲಿನಲ್ಲಿ ವಿಶ್ವವಿದ್ಯಾಲಯಕ್ಕೆ ಸ್ವೀಕೃತವಾಗಿರುತ್ತದೆ. ಬಾಕಿ ಬರಬೇಕಾದ ಮೊತ್ತವನ್ನು ಲೆಕ್ಕಪತ್ರಗಳಲ್ಲಿ ದಾಖಲಿಸದೇ ಇರುವುದರಿಂದ ಲೆಕ್ಕಪತ್ರದ ಅಂಕಿಅಂಶಗಳು ನೈಜತೆಯಿಂದ ಕೂಡಿರುವುದಿಲ್ಲವುದು ಸ್ಪಷ್ಟವಾಗುತ್ತದೆ.

ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಕಡಿಮೆ ಆದಾಯವಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಾಗುತ್ತಿರುತ್ತದೆ. ಈ ಮೊತ್ತವನ್ನು ವಿಶ್ವವಿದ್ಯಾಲಯವು ಸಮಾಜಕಲ್ಯಾಣ ಇಲಾಖೆಯಿಂದ 2015–16ನೇ ಸಾಲಿನಲ್ಲಿ (2013–14ನೇ ಸಾಲಿನಿಂದ ಒಳಗೊಂಡಿರುತ್ತದೆ) ರೂ. 3,12,21,249/–ಗಳಷ್ಟು ಸ್ವೀಕೃತವಾಗಿರುತ್ತದೆಂದು ಆಕ್ಷೇಪಣೆಯಲ್ಲಿ ತಿಳಿಸಲಾಗಿದೆ.

ಅನುಬಂಧದಲ್ಲಿ ತಿಳಿಸಿರುವಂತೆ, ವಾಸ್ತವವಾಗಿ ಸ್ವೀಕೃತಿಯಾದ ರೂ. 3,84,27,101/–ಗಳ ವಿವರಗಳನ್ನು ಒದಗಿಸಲಾಗಿದೆ. **(ಅನುಬಂಧ–97)** (ಪು.ಸಂ.642)

ವಿದ್ಯಾರ್ಥಿ ವೇತನ ಬಾರದಿರುವ ವಿದ್ಯಾರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಿ, ವಿಶ್ವವಿದ್ಯಾಲಯಕ್ಕೆ ಪೂರ್ಣ ಪ್ರಮಾಣದ ಎಲ್ಲಾ ಶುಲ್ಕಗಳನ್ನು ವಿತ್ತಾಧಿಕಾರಿಗಳ ಖಾತೆಗೆ ಪಾವತಿಸುವಂತೆ ವಿದ್ಯಾರ್ಥಿಗಳಿಗೆ ತಿಳಿಸಲು ಹಾಗೂ ಪೂರ್ಣ ಪ್ರಮಾಣದ ಶುಲ್ಕ ಪಾವತಿಸದ ವಿದ್ಯಾರ್ಥಿಗಳ ಅಂಕಪಟ್ಟಿ ಹಾಗೂ ಇನ್ನಿತರ ದಾಖಲಾತಿಗಳನ್ನು ತಡೆ ಹಿಡಿಯಲು ವಿಭಾಗದ ಮುಖ್ಯಸ್ಥರುಗಳಿಗೆ ಸೂಚನಾ ಪತ್ರವನ್ನು ನೀಡಲಾಗಿದೆ.

ಇನ್ನು ಮುಂದೆ, ಆಕ್ಷೇಪಣೆಯಲ್ಲಿ ತಿಳಿಸಿರುವ ಅಂಶವನ್ನು ಗಮನದಲ್ಲಿಟ್ಟುಕೊಂಡು ಬಾಕಿ ಬರಬೇಕಾಗಿರುವ ಮರುಭರಣ ಮೊತ್ತದ ಅಂಕಿ ಅಂಶಗಳನ್ನು ಹಣಕಾಸು ವಿಭಾಗದ ಗಣಕಯಂತ್ರ ವಿಭಾಗಕ್ಕೆ ಒದಗಿಸಲಾಗುವುದು.

2018–19ನೇ ಸಾಲಿನಿಂದ ವಿದ್ಯಾರ್ಥಿ ವೇತನದ ಹಣವು ಸಮಾಜಕಲ್ಯಾಣ ಇಲಾಖೆಯಿಂದ ನೇರವಾಗಿ ಆರ್.ಟಿ.ಜಿ.ಎಸ್. ಮುಖಾಂತರ ವಿತ್ತಾಧಿಯವರ ಖಾತೆಗೆ ಜಮೆಯಾಗುತ್ತಿರುತ್ತದೆ.

1.22. ವಿಶ್ವವಿದ್ಯಾಲಯದ ಅಕಾಡೆಮಿಕ್ ಸ್ಟಾಫ್ ಕಾಲೇಜಿನ ಅಥಿತಿ ಗೃಹ ನಿರ್ಮಾಣಕ್ಕೆ ಭರಿಸಲಾದ ವೆಚ್ಚಗಳನ್ನು ಲೆಕ್ಕಪತ್ರಗಳಲ್ಲಿ ತೋರಿಸದೇ ಇರುವುದು.

ವಿಶ್ವವಿದ್ಯಾಲಯದ ಅಕಾಡಮಿಕ್ ಸ್ಟಾಫ್ ಕಾಲೇಜಿನ ಅತಿಥಿ ಗೃಹ ನಿರ್ಮಾಣಕ್ಕಾಗಿ ಯು.ಜಿ.ಸಿ ವತಿಯಿಂದ ರೂ. 75.00 ಲಕ್ಷಗಳು **ಆದೇಶ ಸಂ: ಎಫ್ 27–5/2008 (ಎಎಸ್ಸಿ)** ದಿನಾಂಕ: 04.03.2008ರಲ್ಲಿ ಮಂಜೂರಾಗಿರುತ್ತದೆ. ಇದರಲ್ಲಿ ಈಗಾಗಲೇ ರೂ.40.00

ಈ ಕಾಮಗಾರಿಗೆ ಸಂಬಂಧಿಸಿದಂತೆ 2010–11ರಲ್ಲಿ ರೂ28.20 ಲಕ್ಷಗಳ ಮುಂಗಡ ಪಾವತಿಸಲಾಗಿದೆ. ನಂತರ 2015–16ರಲ್ಲಿ ರೂ.39.68 ಲಕ್ಷ ಪಾವತಿಯಾಗಿದೆ. 2016–17 ರ ವಾರ್ಷಿಕ ಲೆಕ್ಕಪತ್ರ ವರದಿಯ ರೀತ್ಯ ಸದರಿ ಕಾಮಗಾರಿಗೆ ರೂ.47.22 ಲಕ್ಷ ಪಾವತಿಯಾಗಿದ್ದು, ಈ ಕಾಮಗಾರಿಗೆ

ಆಕ್ಷೇಪಣೆಗಳು	ಉತ್ತರಗಳು
ಲಕ್ಷಗಳನ್ನು ಅತಿಥಿ ಗೃಹದ ನಿರ್ಮಾಣಕ್ಕಾಗಿ ಬಿಡುಗಡೆಯಾಗಿರುತ್ತದೆ. ಅಕಾಡೆಮಿಕ್ ಸ್ಟಾಫ್ ಕಾಲೇಜಿನಿಂದ ಸಲ್ಲಿಸಿರುವ ಬಳಕೆ ಪ್ರಮಾಣ ಪತ್ರದಲ್ಲಿ ಅತಿಥಿ ಗೃಹದ ನಿರ್ಮಾಣಕ್ಕಾಗಿ ರೂ. 1,88,24,801/–ಗಳ ವೆಚ್ಚ ಭರಿಸಿರುವುದಾಗಿಯೂ ಹಾಗೂ ಮಂಜೂರಾದ ಮೊತ್ತದಲ್ಲಿ ಉಳಿಕೆ ಮೊತ್ತ ರೂ. 35.00 ಲಕ್ಷಗಳನ್ನು ಬಿಡುಗಡೆಗೊಳಿಸಲು ಕೋರಿರುತ್ತಾರೆ. ಈ ಕುರಿತು 2015–16ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲಿಸಲಾಗಿ, ಬಂಡವಾಳ ಸ್ವೀಕೃತಿಯಲ್ಲಿ ಯು.ಜಿ.ಸಿ ವತಿಯಿಂದ ರೂ.16,000/–ಗಳು ಮಾತ್ರ ಸ್ವೀಕೃತಿಯಾಗಿರುವುದು ಮಾತ್ರ ದಾಖಲಿಸಲಾಗಿರುತ್ತದೆ. ಹಾಗೂ ಬಂಡವಾಳ ವೆಚ್ಚಗಳಲ್ಲಿ ಅಕಾಡೆಮಿಕ್ ಸ್ಟಾಫ್ ಕಾಲೇಜಿನ ನಿರ್ಮಾಣಕ್ಕಾಗಿ ವೆಚ್ಚ ಭರಿಸಿರುವ ಕುರಿತು 2014–15ನೇ ಸಾಲಿನ ಲೆಕ್ಕಪತ್ರಗಳಲ್ಲಾಗಲಿ ಅಥವಾ 2015–16ನೇ ಸಾಲಿನಲ್ಲಾಗಲೀ ಯಾವುದೇ ದಾಖಲಾತಿಗಳಿರುವುದಿಲ್ಲ. ಅದ್ದರಿಂದ, ಬಳಕೆ ಪ್ರಮಾಣ ಪತ್ರದಲ್ಲಿ ತಿಳಿಸಿದಂತೆ ರೂ. 1,88,24,801/–ಗಳ ವೆಚ್ಚಗಳನ್ನು ಯಾವ ಸಾಲಿನಲ್ಲಿ ಭರಿಸಲಾಗಿದೆಯೆಂದು ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಗೆ ವಿವರಣೆ ಅಗತ್ಯವಿರುತ್ತದೆ.	ಸಂಬಂಧಿಸಿದಂತೆ 2016–17 ಸಾಲಿನ ವರ್ಷಾಂತ್ಯದವರೆಗೆ ರೂ.86.68 ಲಕ್ಷ ಪಾವತಿಯಾಗಿದ್ದು 2016–17 ನೇ ಸಾಲಿನ ವಾರ್ಷಿಕ ಲೆಕ್ಕದಲ್ಲಿ ಬಂಡವಾಳ ಶೀರ್ಷಿಕೆಯಡಿ ರೂ.47.22 ಲಕ್ಷ ವೆಚ್ಚವು ಸೇರಲ್ಪಟ್ಟಿದೆಯೆಂಬ ಅಂಶವನ್ನು ತಮ್ಮ ಗಮನಕ್ಕೆ ತರಲಾಗಿದೆ.
1.23. ವಿಶ್ವವಿದ್ಯಾಲಯದ ಲೆಕ್ಕಪತ್ರಗಳ ಕುರಿತು ಲೆಕ್ಕಪರಿಶೋಧನಾ ವಿಶ್ಲೇಷಣೆ: ನಿಧಿಯಾಧಾರಿತ ಲೆಕ್ಕಪತ್ರ ಪದ್ಧತಿ ಹಾಗೂ ಲಾಭರಹಿತ ಸಂಸ್ಥೆಗಳು ನಿರ್ವಹಿಸುವ ಲೆಕ್ಕಪತ್ರಗಳನ್ನು ವಿಶ್ವವಿದ್ಯಾಲಯವು ತನ್ನದೇ ಆದ ಲೆಕ್ಕಪತ್ರದ ತಂತ್ರಾಂಶವಾದ FBAS ನಲ್ಲಿ ನಿರ್ವಹಿಸುತ್ತಿದ್ದು, ವಾರ್ಷಿಕ ಲೆಕ್ಕಪತ್ರಗಳ ಭಾಗಗಳಾದ ಸ್ವೀಕೃತಿ ಮತ್ತು ಪಾವತಿಗಳ ತಃಖ್ತೆ, ರಾಜಸ್ವ ಮತ್ತು ವೆಚ್ಚಗಳ ತಃಖ್ತೆ ಮತ್ತು ಅಡಾವೆ ಪತ್ರಿಕೆಗಳನ್ನು ಒಳಗೊಂಡಿರುತ್ತದೆ. ಈ ಲೆಕ್ಕಪತ್ರಗಳು ಸುಲಭವಾಗಿ ಅರ್ಥೈಸಿಕೊಳ್ಳಲಾಗದ ರೀತಿಯಲ್ಲಿ ಇದ್ದು, ಈ ಲೆಕ್ಕಪತ್ರಗಳ ನಿರ್ವಹಣೆಯಲ್ಲಿ ಸಾಮಾನ್ಯವಾಗಿ ಅನುಸರಿಸುತ್ತಿರುವ ಲೆಕ್ಕಪತ್ರಗಳ ನಿಯಮಗಳನ್ನು ಪಾಲಿಸದೆ ಕ್ಲಿಷ್ಟಕರವಾಗಿ ರೂಪುಗೊಳಿಸಲಾಗಿರುತ್ತದೆ. ಅಡಾವೆ ಪತ್ರಿಕೆ ಹಾಗೂ ರಾಜಸ್ವ ಮತ್ತು ವೆಚ್ಚಗಳ ತಃಖ್ತೆಯನ್ನು ನಿಧಿಯಾಧಾರಿತವಾಗಿ ವರ್ಗೀಕರಿಸಿ ತೋರಿಸಲಾಗುತ್ತಿದ್ದು, ಸ್ವೀಕೃತಿ ಮತ್ತು ಪಾವತಿಗಳ ತಃಖ್ತೆಯು ಎಲ್ಲಾ ನಿಧಿಗಳ ವಹಿವಾಟುಗಳನ್ನು ಸೇರಿಸಿ ಒಟ್ಟಾಗಿ ತೋರಿಸಲಾಗುತ್ತಿದೆ. ಪ್ರಮುಖವಾಗಿ ಅಡಾವೆ ಪತ್ರಿಕೆ ಹಾಗೂ ರಾಜಸ್ವ ಮತ್ತು ವೆಚ್ಚಗಳ ತಃಖ್ತೆಯಲ್ಲಿ ನಿಧಿಗಳ ವರ್ಗೀಕರಣದ ಅಡಿಯಲ್ಲಿ ಬಹುತೇಕ ಶಿಲ್ಕುಗಳು ಋಣಾತ್ಮಕವಾಗಿದ್ದು, ಮತ್ತಷ್ಟು ಗೊಂದಲಕ್ಕೆ ಅವಕಾಶ ಮಾಡಿಕೊಟ್ಟಿರುತ್ತದೆ. ಲೆಕ್ಕಪತ್ರಗಳ ಒಟ್ಟಾರೆ ಶಿಲ್ಕುಗಳನ್ನು ಪರಿಗಣಿಸಿದರೆ ಯಾವುದೇ ಋಣಾತ್ಮಕ ಶಿಲ್ಕುಗಳು ಕಂಡುಬರುವುದಿಲ್ಲ ಹಾಗೂ ಈ ಶಿಲ್ಕುಗಳು ಬ್ಯಾಂಕ್ ಸಮನ್ವಯ ತಃಖ್ತೆಯಲ್ಲಿ ಸಮನ್ವಯಗೊಂಡಿರುತ್ತದೆ ಎಂದು ವಿಶ್ವವಿದ್ಯಾಲಯವು ತನ್ನ ವಿವರಣೆಯಲ್ಲಿ ತಿಳಿಸುತ್ತದೆ. ನಿಧಿಯಾಧಾರಿತವಾಗಿ	FBAS (Fund Based Accounting System) ತಂತ್ರಾಂಶವನ್ನು 2003–2004 ರಲ್ಲಿ ತಯಾರಿಸಿ ಅಂದಿನ ಅವಶ್ಯಕತೆಗೆ ಅನುಗುಣವಾಗಿ ಅಳವಡಿಸಿಕೊಳ್ಳಲಾಗಿದೆ. ತದನಂತರ ಈ ತಂತ್ರಾಂಶವನ್ನು ಅವಶ್ಯಕತೆಗೆ ಅನುಗುಣವಾಗಿ ಉನ್ನತೀಕರಣ ಮಾಡದಿರುವುದರಿಂದ ಹಲವಾರು ಶಿಲ್ಕುಗಳು ಋಣಾತ್ಮಕವಾಗಿ ತೋರಿಸಲಾಗಿದೆ. ಆದರೆ ಲೆಕ್ಕಪತ್ರಗಳ ಒಟ್ಟಾರೆ ಶಿಲ್ಕುಗಳನ್ನು ಪರಿಗಣಿಸಿದರೆ ಯಾವುದೇ ಋಣಾತ್ಮಕ ಶಿಲ್ಕುಗಳು ಕಂಡುಬರುವುದಿಲ್ಲ ಮತ್ತು ಎಲ್ಲಾ ವಹಿವಾಟುಗಳನ್ನು ಬ್ಯಾಂಕ್ ಸಮನ್ವಯತೆ ಮಾಡಲಾಗಿದೆ. ಈಗಿರುವ FBAS ತಂತ್ರಾಂಶದಲ್ಲಿ ನಿಧಿ ಆಧಾರಿತವಾಗಿ ಲೆಕ್ಕಪತ್ರಗಳನ್ನು ತಯಾರಿಸಲು ಅವಕಾಶವನ್ನು ಒದಗಿಸಿರುವದಿಲ್ಲ. ಆದುದರಿಂದ ನಿಧಿ ಆಧಾರಿತ ಲೆಕ್ಕಪತ್ರಗಳನ್ನು ತಯಾರಿಸಲು ಸಾಧ್ಯವಾಗುವುದಿಲ್ಲ. ಈಗಾಗಲೆ FBAS ತಂತ್ರಾಂಶವನ್ನು ಉನ್ನತಿಕರಿಸಲು ಕ್ರಮಕ್ಕೈಗೊಳ್ಳಲಾಗುತ್ತಿದೆ. ಈ ಉನ್ನತಿಕರಣದಲ್ಲಿ ಸಾಮಾನ್ಯ ಹಣಕಾಸು ನಿಯಮಗಳನ್ನು ಅಳವಡಿಸಿಕೊಂಡು ನಿಧಿ ಆಧಾರಿತ ಲೆಕ್ಕಪತ್ರಗಳನ್ನು ತಯಾರಿಸಲು ಕ್ರಮಕ್ಕೈಗೊಳ್ಳಲಾಗುವುದು.

ಆಕ್ಷೇಪಣೆಗಳು	ಉತ್ತರಗಳು
ವರ್ಗೀಕರಿಸಿ ಲೆಕ್ಕಪತ್ರಗಳನ್ನು ಸಿದ್ಧಪಡಿಸಿ ಮಂಡಿಸಿದಾಗ, ನಿಧಿಗಳ ಅನುಗುಣವಾಗಿ ಲೆಕ್ಕಪರಿಶೋಧನೆಯನ್ನು ಕೈಗೊಳ್ಳದೇ ಒಟ್ಟಾರೆಯಾಗಿ ಶಿಲ್ಕುಗಳನ್ನು ಲೆಕ್ಕಪರಿಶೋಧನೆಯಲ್ಲಿ ಪರಿಗಣಿಸಲು ಕಷ್ಟಸಾಧ್ಯವಾಗುತ್ತದೆ. ಹಾಗೂ ಲೆಕ್ಕಪತ್ರಗಳಲ್ಲಿರುವ ಋಣಾತ್ಮಕ ಶಿಲ್ಕುಗಳ ಕುರಿತು ಲೆಕ್ಕಪರಿಶೋಧನೆಗೆ ಮನವರಿಕೆಯಾಗಬೇಕಾಗುವುದು ಅನಿವಾರ್ಯವಾಗುತ್ತದೆ. ರಾಜಸ್ವ ಮತ್ತು ವೆಚ್ಚಗಳ ತಃಖ್ತೆಯಲ್ಲಿ ಸಾಮಾನ್ಯವಾಗಿ ಆಯಾ ಸಾಲಿನಲ್ಲಿ ಆರ್ಜಿಸಿದ ರಾಜಸ್ವ ಮತ್ತು ಆಯಾ ಸಾಲಿಗೆ ಸಂಬಂಧಿಸಿದ ವೆಚ್ಚಗಳ (ನಗದು+ನಗದು ರಹಿತ ವಹಿವಾಟುಗಳು) ದಾಖಲೆಗಳಿದ್ದು, ಬಂಡವಾಳ ಸ್ವೀಕೃತಿಗಳು ಹಾಗೂ ವೆಚ್ಚಗಳನ್ನು ಅಡಾವೆ ಪತ್ರಿಕೆಯಲ್ಲಿ ದಾಖಲಿಸಿ ಲೆಕ್ಕಿಸಲಾಗುತ್ತದೆ. ಆದರೆ, ವಿಶ್ವವಿದ್ಯಾಲಯದ ರಾಜಸ್ವ ಮತ್ತು ವೆಚ್ಚಗಳ ತಃಖ್ತೆಯಲ್ಲಿ ಬಂಡವಾಳ ಸ್ವೀಕೃತಿಗಳು ಹಾಗೂ ವೆಚ್ಚಗಳನ್ನೂ ಸಹ ದಾಖಲಿಸುವ ರೀತಿ ತಂತ್ರಾಂಶ ಅಭಿವೃದ್ಧಿಪಡಿಸಲಾಗಿರುವ ಹಿನ್ನಲೆಯಲ್ಲಿ ಅಡಾವೆ ಪತ್ರಿಕೆಯಲ್ಲಿ ಗಣನೆಗೆ ತೆಗೆದುಕೊಳ್ಳಲೇಬೇಕಾದ ಬಂಡವಾಳ ಸ್ವೀಕೃತಿಗಳು ಹಾಗೂ ವೆಚ್ಚಗಳನ್ನು ಯಾವ ರೀತಿ ರಾಜಸ್ವ ಮತ್ತು ವೆಚ್ಚಗಳ ತಃಖ್ತೆಯಲ್ಲಿಯೂ ತೋರಿಸಿ ಅಡಾವೆ ಪತ್ರಿಕೆಯಲ್ಲಿಯೂ ತೋರಿಸಲಾಗುತ್ತದೆ ಎಂದು ಲೆಕ್ಕಪರಿಶೋಧನೆಗೆ ತಿಳಿದು ಬರುವುದಿಲ್ಲ. ಸಾಮಾನ್ಯ ಲೆಕ್ಕಪತ್ರ ನಿರ್ವಹಣೆಯ ನಿಯಮಗಳನ್ನು ಅಳವಡಿಸಿಕೊಳ್ಳದೆ ಈ ರೀತಿ ವಿಭಿನ್ನವಾದ ಲೆಕ್ಕಪತ್ರ ನಿರ್ವಹಣಾ ಪದ್ದತಿಯನ್ನು ಅನುಸರಿಸುವ ಕಾರಣಗಳು ತಿಳಿಯದಾಗಿದೆ. ಅಡಾವೆ ಪತ್ರಿಕೆಯಲ್ಲಿರುವ ಹಲವು ಚಾಲ್ತಿ ಋಣ ಶಿಲ್ಕುಗಳು ಹಿಂದಿನ ವರ್ಷಗಳಿಂದಲೂ ತೀರುವಳಿಗೊಳ್ಳದೇ ಹಾಗೆಯೆ ಮುಂದುವರೆದಿರುತ್ತದೆ. ಸಂಚಯನ ಪದ್ದತಿಯನ್ನು ಲೆಕ್ಕಪತ್ರಗಳಲ್ಲಿ ಅಳವಡಿಸಿಕೊಳ್ಳಲಾಗಿದೆಯೆ ಹೊರತು ಸಂಚಯನ ಪದ್ದತಿಯು ಪರಿಪೂರ್ಣವಾಗಿ ಪಾಲನೆಯಾಗುತ್ತಿಲ್ಲ. ವಿಶ್ವವಿದ್ಯಾಲಯದಲ್ಲಿ ಪೂರ್ಣವಾಗಿ ಎಲ್ಲಾ ರೀತಿಯ ಹಣಕಾಸು ವಹಿವಾಟುಗಳನ್ನು ಲೆಕ್ಕಪತ್ರಗಳಲ್ಲಿ ದಾಖಲು ಮಾಡುತ್ತಿಲ್ಲವೆಂದು ಗಮನಿಸಲಾಗಿರುತ್ತದೆ. ಮುಖ್ಯವಾಗಿ ಸ್ವೀಕೃತಿ ಮತ್ತು ಪಾವತಿಗಳ ತಃಖ್ತೆಯಲ್ಲಿ ಪ್ರಾರಂಭಿಕ ಹಾಗೂ ಅಂತಿಮ ಶಿಲ್ಕುಗಳು ತಾಳೆಯಾಗದೇ ಕಂಡುಬಂದಿರುತ್ತಿರುವ ವ್ಯತ್ಯಾಸಗಳು ವಿಶ್ವವಿದ್ಯಾಲಯವು ತನ್ನ ಲೆಕ್ಕಪತ್ರಗಳನ್ನು ವ್ಯವಸ್ಥಿತವಾಗಿ ಮತ್ತು ಸಮರ್ಥವಾಗಿ ನಿರ್ವಹಿಸಲು ವಿಫಲವಾಗಿರುವುದು ಈ ಮೇಲೆ ಚರ್ಚಿಸಲಾದ ಲೆಕ್ಕಪರಿಶೋಧನಾ ಕಂಡಿಕೆಗಳಿಂದ ಸ್ಪಷ್ಟವಾಗುತ್ತದೆ.	

ಆಕ್ಷೇಪಣೆಗಳು	ಉತ್ತರಗಳು
1.24. ಲೆಕ್ಕಪರಿಶೋಧನಾ ಅಭಿಪ್ರಾಯ: ಬೆಂಗಳೂರು ವಿಶ್ವವಿದ್ಯಾಲಯದ ದಿನಾಂಕ: 31.03.2016ರ ಅಂತ್ಯಕ್ಕೆ ಇರುವ ಅಡಾವೆ ಪತ್ರಿಕೆ, ರಾಜಸ್ವ ಮತ್ತು ವೆಚ್ಚಗಳ ತಃಖ್ತೆ ಹಾಗೂ ಸ್ವೀಕೃತಿ ಮತ್ತು ಪಾವತಿಗಳ ತಃಖ್ತೆಗಳನ್ನೊಳಗೊಂಡ ವಾರ್ಷಿಕ ಹಣಕಾಸು ಲೆಕ್ಕಪತ್ರಗಳನ್ನು ವಿಶ್ವವಿದ್ಯಾಲಯವು ಅಳವಡಿಸಿಕೊಂಡಿರುವ ಲೆಕ್ಕಪತ್ರ ನಿರ್ವಹಣಾ ನೀತಿಗಳು ಮತ್ತು ಲೆಕ್ಕಪತ್ರಗಳ ಕುರಿತು ನೀಡಲಾಗಿರುವ ವಿವರಣೆಗಳನ್ನಾಧರಿಸಿ ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲಾಗಿದೆ. ವಿಶ್ವವಿದ್ಯಾಲಯದ ಹಣಕಾಸು ಸ್ಥಿತಿ, ಹಣಕಾಸು ವಹಿವಾಟಿನ ಕಾರ್ಯಕ್ಷಮತೆ ಮತ್ತು ಹಣಕಾಸಿನ ಹರಿವುಗಳ ನೈಜ ಮತ್ತು ನ್ಯಾಯೋಚಿತ ಮಾಹಿತಿಗಳನ್ನೊದಗಿಸುವ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸುವ ಹೊಣೆ ವಿಶ್ವವಿದ್ಯಾಲಯದ ಹಣಕಾಸು ಸಮಿತಿಯದ್ದಾಗಿರುತ್ತದೆ. ಈ ಹೊಣೆ/ಜವಾಬ್ದಾರಿಯಲ್ಲಿ ಲೆಕ್ಕಪತ್ರದ ತಪ್ಪುಗಳು ಅಥವಾ ದುರುಪಯೋಗಗಳ ಮರೆಮಾಚುವಂತಹ ವಿಷಯಗಳಿಂದ ಮುಕ್ತವಾದ ಹಾಗೂ ನೈಜ ಮತ್ತು ನ್ಯಾಯೋಚಿತ ಸ್ಥಿತಿಗಳನ್ನು ತೋರಿಸುವ ವಾರ್ಷಿಕ ಲೆಕ್ಕಪತ್ರಗಳ ಸಿದ್ಧಪಡಿಸುವಿಕೆ ಮತ್ತು ಅದರ ಮಂಡನೆಗೆ ಅಗತ್ಯವಿರುವ ವಿಶ್ವವಿದ್ಯಾಲಯದ ಆಂತರಿಕ ನಿಯಂತ್ರಣಗಳ ವಿನ್ಯಾಸ, ಅನುಷ್ಠಾನ ಮತ್ತು ವ್ಯವಸ್ಥಿತ ನಿರ್ವಹಣೆಗಳನ್ನೊಳಗೊಂಡಿರುತ್ತದೆ. ಲೆಕ್ಕಪರಿಶೋಧನೆಯ ಹೊಣೆಯು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳ ಆಧಾರದ ಮೇಲೆ ವಿಶ್ವವಿದ್ಯಾಲಯದ ಹಣಕಾಸು ಲೆಕ್ಕಪತ್ರಗಳ ಕುರಿತು ಅಭಿಪ್ರಾಯ ವ್ಯಕ್ತಪಡಿಸುವ ಮಿತಿಗೆ ಸೀಮಿತವಾಗಿರುತ್ತದೆ. ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಅನ್ವಯಿಸುವಂತಹ ಕಾಯ್ದೆ, ನಿಯಮಗಳು ಮತ್ತು ಇತರೆ ಶಾಸನಗಳಲ್ಲಿ ಕಲ್ಪಿಸಲಾದ ಅವಕಾಶಗಳು ಹಾಗೂ ಲೆಕ್ಕಪರಿಶೋಧನಾ ವಿಧಾನಗಳ ಅನುಸಾರ ಲೆಕ್ಕಪರಿಶೋಧನೆಯನ್ನು ಕೈಗೊಂಡಿರುತ್ತದೆ. ಈ ಲೆಕ್ಕಪರಿಶೋಧನೆಯಲ್ಲಿ ಪರೀಕ್ಷಾರ್ಥವಾಗಿ ಕೈಗೊಳ್ಳಲಾದ ಹಣಕಾಸು ವಹಿವಾಟುಗಳ ಪರಿಶೀಲನೆ, ತೋರಿಸಲಾಗಿರುವ ಮೊತ್ತಕ್ಕೆ ಆಧಾರವಾಗಿರುವಂತಹ ವೋಚರ್‌ಗಳು ಮತ್ತು ವಾರ್ಷಿಕ ಲೆಕ್ಕಪತ್ರಗಳಲ್ಲಿ ಬಹಿರಂಗಪಡಿಸಲಾದ ಅಂಶಗಳು ಒಳಗೊಂಡಿರುತ್ತದೆ. ವಿಶ್ವವಿದ್ಯಾಲಯದ ಲೆಕ್ಕಪತ್ರಗಳಲ್ಲಿ ಲೆಕ್ಕಪತ್ರ ನಿರ್ವಹಣೆಯ ತತ್ವಗಳ ಅಳವಡಿಕೆ, ವಿಶ್ವವಿದ್ಯಾಲಯದ ಆಡಳಿತದಿಂದ ಮಾಡಲಾದ ಪ್ರಮುಖವಾದ ಅಂದಾಜುಗಳು ಹಾಗೂ ಒಟ್ಟಾರೆಯಾಗಿ ವಾರ್ಷಿಕ ಲೆಕ್ಕಪತ್ರಗಳ ಮಂಡನೆ ಮಾಡಲಾದ ಕುರಿತು ಮೌಲೀಕರಣದ ಅಂಶಗಳೂ ಸಹ ಈ ಲೆಕ್ಕಪರಿಶೋಧನೆಯಲ್ಲಿ ಒಳಗೊಂಡಿರುತ್ತದೆ. ಲೆಕ್ಕಪರಿಶೋಧನಾ ಸಮಯದಲ್ಲಿ ಲಭ್ಯವಿದ್ದ ದಾಖಲೆಗಳ ಆಧಾರದ ಮೇಲೆ ಲೆಕ್ಕಪರಿಶೋಧನಾ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತದೆ. ಲೆಕ್ಕಪರಿಶೋಧನೆಯ ಅಭಿಪ್ರಾಯದಂತೆ ಹಾಗೂ ಲೆಕ್ಕಪರಿಶೋಧನೆಗೆ ದೊರಕಿರುವ ಮಾಹಿತಿಗಳು ಮತ್ತು	ಬೆಂಗಳೂರು ವಿಶ್ವವಿದ್ಯಾಲಯವು ತನ್ನ ಲೆಕ್ಕ ಪತ್ರಗಳನ್ನು 2003–04 ರಿಂದ ನಿಧಿ ಆಧಾರಿತ ಲೆಕ್ಕಪತ್ರಗಳಲ್ಲಿ ನಿರ್ವಹಿಸಲಾಗುತ್ತಿದೆ. ವಾರ್ಷಿಕ ಲೆಕ್ಕ ಪತ್ರಗಳ ಪ್ರಕಾರ Revenue and Expenditure Statement ನಲ್ಲಿ ಬಂದಂತಹ Surplus/ deficit ಮೊತ್ತ ವನ್ನು ಹೊಂದಾಣಿಕೆ ಮಾಡಿದಾಗ Balance Sheet ನಲ್ಲಿ ಸ್ವಲ್ಪ ವ್ಯತ್ಯಾಸವು ಹಿಂದಿನ ವರ್ಷಗಳಿಂದಲೂ ಬಂದಿದ್ದು ಅಂತಹ ವ್ಯತ್ಯಾಸದ ಮೊತ್ತವನ್ನು Surplus ನಲ್ಲಿ ಹೊಂದಾಣಿಕೆ ಮಾಡಿರುತ್ತದೆ. ಅದೇ ರೀತಿ 2015–16ನೇ ಸಾಲಿನಲ್ಲಿಯೂ ಸಹ ಮಾಡಿರುತ್ತದೆ. ಈ ಹೊಸ ತಂತ್ರಾಂಶವನ್ನು ತಯಾರಿಸಿ ಕೊಟ್ಟಂತಹ ಸಂಸ್ಥೆಯೊಂದಿಗೆ ವಿಚಾರಿಸಿದಾಗ ಅವರಿಂದಲೂ ಪರಿಹಾರ ಸಿಕ್ಕಿರುವುದಿಲ್ಲ. ಈ ಹಳೆ ತಂತ್ರಾಂಶವನ್ನು ಉನ್ನತೀಕರಿಸಲು ಕ್ರಮ ಕೈಗೊಂಡಿದ್ದು, ಪ್ರಸಕ್ತ ವರ್ಷದ ವಾರ್ಷಿಕ ಲೆಕ್ಕಪತ್ರ ತಯಾರಿಕೆಯಲ್ಲಿ ಇಂತಹ ನ್ಯೂನತೆಗಳು ಮರುಕಳಿಸದಂತೆ ಎಚ್ಚರಿಕೆ ವಹಿಸಲಾಗುವುದು. ರಾಜ್ಯ ಲೆಕ್ಕ ಪತ್ರ ಇಲಾಖೆಯು ಹೊರ ತಂದಿರುವ " University Audit Manual" ಕಂಡಿಕೆ 143ರ ಪ್ರಕಾರ " A certificate will have to be Recorded at the appropriate place mentioning that the Annual Accounts of the University are generally Correct This will of Course, be Subject to the various observations made in the Audit Report" ಎಂದು ತಿಳಿಸಿರುವುದರಿಂದ ಲೆಕ್ಕ ಪತ್ರಗಳನ್ನು ದೃಢೀಕರಿಸಲು ಮತ್ತೊಮ್ಮೆ ಕೋರಿದೆ.

ಆಕ್ಷೇಪಣೆಗಳು	***ಉತ್ತರಗಳು***
ವಿವರಣೆಗಳನುಸಾರ ಈ ಮೇಲೆ ಪ್ರಸ್ತಾಪಿಸಲಾದ ಕಂಡಿಕೆಗಳಲ್ಲಿರುವ ಅಂಶಗಳನ್ವಯ ಬೆಂಗಳೂರು ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳಲ್ಲಿ ವಿಶ್ವವಿದ್ಯಾಲಯಕ್ಕೆ ಅನ್ವಯಿಸುವ ಕಾಯ್ದೆ, ನಿಯಮಗಳು, ಶಾಸನಗಳಲ್ಲಿರುವ ಅವಕಾಶಗಳು ಮತ್ತು ಲೆಕ್ಕಪತ್ರ ನಿರ್ವಹಣೆಯ ತತ್ವಗಳಲ್ಲಿನ ಅಂಶಗಳು ಪೂರ್ಣವಾಗಿ ಪಾಲಿಸದಿರುವುದು ಸ್ಪಷ್ಟವಾಗುವ ಕಾರಣ ಲೆಕ್ಕಪತ್ರಗಳಲ್ಲಿನ ಅಂಕಿ ಅಂಶಗಳು ನೈಜ ಮತ್ತು ನ್ಯಾಯೋಚಿತವಾಗಿರುವುದೆಂದು ದೃಢಪಡಿಸಲು ಕಷ್ಟಸಾಧ್ಯವಾಗಿರುತ್ತದೆ. ವರದಿಯಲ್ಲಿ ಪ್ರಸ್ತಾಪಿಸಿರುವ ಎಲ್ಲಾ ಕಾರಣಗಳಿಂದ 2015–16ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಯು ಅಂಗೀಕರಿಸಿರುವುದಿಲ್ಲ.	

ಆಕ್ಷೇಪಣೆಗಳು	***ಉತ್ತರಗಳು***

ಹಣಕಾಸು ವಹಿವಾಟುಗಳಲ್ಲಿ ಕಂಡುಬಂದ ಪ್ರಮುಖ ಪ್ರಕರಣಗಳು

2015–16ನೇ ಸಾಲಿನ ಹಣಕಾಸು ವಹಿವಾಟಿಗೆ ಸಂಬಂಧಿಸಿದಂತೆ, ವಿತ್ತಾಧಿಕಾರಿಗಳ ಕಛೇರಿಯಲ್ಲಿ ವೋಚರುಗಳು, ಸಹಾಯಕ ವಿತ್ತಾಧಿಕಾರಿಗಳ ಕಛೇರಿಯಲ್ಲಿ ಪಾವತಿ ಬಿಲ್ಲುಗಳ ಲೆಡ್ಜರ್‌ಗಳು ಹಾಗೂ ಅವುಗಳಿಗೆ ಸಂಬಂಧಿಸಿದಂತೆ ಕುಲಸಚಿವರು(ಆಡಳಿತ), ವಿತ್ತಾಧಿಕಾರಿಗಳು, ಕುಲಸಚಿವರು(ಮೌಲ್ಯಮಾಪನ), ಅಂಚೆ ತೆರಪು ಮತ್ತು ದೂರ ಶಿಕ್ಷಣ ನಿರ್ದೇಶನಾಲಯ, ಅಭಿಯಂತರ ಕಛೇರಿ, ಮುದ್ರಣಾಲಯ, ಪ್ರಸಾರಾಂಗ, ಭೂಗೋಳ ಶಾಸ್ತ್ರ, ಭೂಗರ್ಭ ಶಾಸ್ತ್ರ, ಸಿ.ಬಿ.ಎಸ್.ಎಮ್.ಎಸ್ , ದೈಹಿಕ ಶಿಕ್ಷಣ ನಿರ್ದೇಶನಾಲಯ, ವಾಣಿಜ್ಯ ಶಾಸ್ತ್ರ, ಎನ್.ಎಸ್.ಎಸ್. ಕಛೇರಿ, ಮಹಿಳಾ ಅಧ್ಯಯನ ಕೇಂದ್ರ, ಯು.ವಿ.ಸಿ.ಇ. ಕಾಲೇಜು, ಗ್ರಂಥಾಲಯ, ಸ್ನಾತಕೋತ್ತರ ಕೇಂದ್ರ(ಕೋಲಾರ) ಕಾನೂನು ಕೋಶ ಈ ಕಛೇರಿಗಳಲ್ಲಿ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಪರಿಶೀಲನೆಯಲ್ಲಿ ಕಂಡಬಂದ ಹಣಕಾಸಿನ ನ್ಯೂನತೆಗಳನ್ನು ಮುಂಬರುವ ಕಂಡಿಕೆಗಳಲ್ಲಿ ವಿವರಿಸಲಾಗಿದೆ.	ಈ ಸಂಬಂಧ ಪ್ರತಿ ಕಂಡಿಕೆಗಳಿಗೆ ಅವುಗಳ ಎದುರಾಗಿ ಉತ್ತರಗಳನ್ನು ಒದಗಿಸಲಾಗಿದೆ.

ಪರಿನಿಯಮ ರಚಿಸಿಕೊಳ್ಳದೆ/ಸೇವಾ ನಿಯಮಗಳನ್ನು ಪಾಲಿಸದೆ ಭರಿಸಿರುವ ವೆಚ್ಚಗಳು

2. ಪರಿನಿಯಮಗಳ ಮೂಲಕ ಸ್ಥಾಪನೆಯಾಗದ ವ್ಯಾಸಂಗ ವಿಭಾಗಗಳಿಗೆ ಭರಿಸಿರುವ ವೆಚ್ಚಗಳು ರೂ.4,13,51,000/–. (ಆಕ್ಷೇಪಣೆ)

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 83 ರಲ್ಲಿ ಪರಿನಿಯಮಗಳು, ವಿನಿಯಮಗಳ ಆರ್ಡಿನೆನ್ಸ್ ಇತ್ಯಾದಿಗಳ ಮುಂದುವರಿಕೆಗೆ ಸಂಬಂಧಿಸಿದಂತೆ, ಕ್ರಮ ಸಂಖ್ಯೆ. (1) ರಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 1976ರ ಉಪಬಂಧಗಳ ಅಡಿಯಲ್ಲಿ ಮಾಡಿದ ಹಾಗೂ ಈ ಅಧಿನಿಯಮದ ಪ್ರಾರಂಭದ ನಿಕಟಪೂರ್ವದಲ್ಲಿ ಜಾರಿಯಲ್ಲಿರುವ ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳು ಮತ್ತು ನಿಯಮಗಳ ಉಪಬಂಧಗಳು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರುವಷ್ಟರ ಮಟ್ಟಿಗೆ ರಾಜ್ಯ ಸರ್ಕಾರದ ಮೂಲಕ ಕುಲಾಧಿಪತಿಯವರಿಂದ ಪಡೆದುಕೊಂಡ ಅನುಮೋದನೆಯೋಡನೆ, ಕುಲಪತಿಗಳು ಅದರಲ್ಲಿ ಮಾಡಬಹುದಾದ ಅಂತಹ ಅಳವಡಿಕೆಗಳು ಅಥವಾ ಮಾರ್ಪಾಡುಗಳಿಗೆ ಒಳಪಟ್ಟು ಈ ಅಧಿನಿಯಮದ ಸೂಕ್ತ ಉಪಬಂಧಗಳ ಅಡಿಯಲ್ಲಿ ಮಾಡಿದ ಪರಿನಿಯಮಗಳು, ಆರ್ಡಿನೆನ್ಸ್‌ಗಳು ವಿನಿಯಮಗಳು ಮತ್ತು ನಿಯಮಗಳೆಂದು ಭಾವಿಸತಕ್ಕದೆಂದು ತಿಳಿಸಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ

ಕ್ರ. ಸಂ	ವಿಭಾಗದ ಹೆಸರು	ಒಟ್ಟು ವೆಚ್ಚದ ಮೊಬಲಗು	ವಿವರ
01	ಉಡುಪು ತಂತ್ರ ಜ್ಞಾನ	51,82,000.00	ಉಡುಪು ತಂತ್ರಜ್ಞಾನ ವಿಷಯದಲ್ಲಿ ಅಧ್ಯಯನ ಮಂಡಳಿಯನ್ನು ರಚಿಸಲು ಆರ್ಡಿನೆನ್ಸ್ ಮಾನ್ಯ ಕುಲಾಧಿಪತಿಗಳಿಂದ ದಿನಾಂಕ 19.08.2007 ರಂದು ಅಂಕಿತವಾಗಿರುತ್ತದೆ. ಈ ಬಗ್ಗೆ ಅಧ್ಯಯನ ಮಂಡಳಿಯ ರಚನೆಯ ಬಗ್ಗೆ ಅಧಿಸೂಚನೆಯನ್ನು ಹೊರಡಿಸಲಾಗಿದೆ ಮತ್ತು ಉಡುಪು ತಂತ್ರಜ್ಞಾನ ವಿಭಾಗದ ಸೃಜನೆಗೆ ಪರಿನಿಯಮಾವಳಿಯನ್ನು ರಚಿಸಿ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ದಿನಾಂಕ 28.04.2008 ರಂದು ಕಳುಹಿಸಿಕೊಡಲಾಗಿತ್ತು. ಈ ಬಗ್ಗೆ ಹಲವಾರು ಬಾರಿ ಸರ್ಕಾರದೊಂದಿಗೆ ಪತ್ರ ವ್ಯವಹಾರಗಳನ್ನು ನಡೆಸಲಾಗಿದ್ದು, ದಿನಾಂಕ

ಆಕ್ಷೇಪಣೆಗಳು	ಉತ್ತರಗಳು			
2000ರ ಪ್ರಕರಣ 34(4) ರಲ್ಲಿ ಯಾವುದೇ ಅಧ್ಯಯನ ವಿಭಾಗವನ್ನು ಪರಿನಿಯಮಗಳ ಮೂಲಕ ಸ್ಥಾಪಿಸಬಹುದು ಅಥವಾ ರದ್ದುಗೊಳಿಸಬಹುದೆಂದು ತಿಳಿಸಿರುತ್ತದೆ. ಪ್ರಕರಣ 40(1) (ಎಫ್) ರಲ್ಲಿ ವ್ಯಾಸಂಗ ವಿಭಾಗಗಳು, ವಿಭಾಗಗಳು, ವಿದ್ಯಾರ್ಥಿ ನಿಲಯಗಳು, ಕಾಲೇಜುಗಳು ಮತ್ತು ಸಂಸ್ಥೆಗಳ ಸ್ಥಾಪನೆ, ನಿರ್ವಹಣೆ ಮತ್ತು ಅವುಗಳನ್ನು ರದ್ದುಪಡಿಸುವ ಬಗ್ಗೆ ತಿಳಿಸಿರುತ್ತದೆ. ಪ್ರಕರಣ 46(3) ರಲ್ಲಿ ವಿಶ್ವವಿದ್ಯಾಲಯದ ನಿಧಿಯನ್ನು ಪರಿನಿಯಮಗಳಲ್ಲಿ ನಿಯಮಿಸಿದ ಉದ್ದೇಶಗಳಿಗೆ ವಿನಿಯೋಗಿಸಬಹುದು ಎಂದು ತಿಳಿಸಿರುತ್ತದೆ. ಈ ಕೆಳಕಂಡ ಅಧ್ಯಯನ ವಿಭಾಗಗಳ ಸ್ಥಾಪನೆ ಕುರಿತಂತೆ ರಚಿಸಿಕೊಂಡ ಪರಿನಿಯಮಗಳನ್ನು ಲೆಕ್ಕತನಿಖೆಗೆ ಒದಗಿಸಿರುವುದಿಲ್ಲ. (ಅ) ಉಡುಪು ತಂತ್ರಜ್ಞಾನ ವಿಭಾಗ (Dept of Apperal Technology). (ಆ) ಮಹಿಳಾ ಅಧ್ಯಯನ ವಿಭಾಗ (Dept of Women Studies). (ಇ) ಜೈವಿಕ ತಂತ್ರಜ್ಞಾನ ವಿಭಾಗ (Bio Technology). (ಈ) ಕೆನರಾ ಬ್ಯಾಂಕ್ ವ್ಯವಹಾರ ನಿರ್ವಹಣಾ ಅಧ್ಯಯನ ಕೇಂದ್ರ (Canara Bank School of Management Studies). ಮೇಲೆ ತಿಳಿಸಿದ ನಾಲ್ಕು ಅಧ್ಯಯನ ವಿಭಾಗಗಳನ್ನು ಪರಿನಿಯಮಗಳ ಮೂಲಕ ಸ್ಥಾಪಿಸದೇ, ಅನಧಿಕೃತವಾಗಿ ಸ್ಥಾಪನೆ ಮಾಡಿ ಅಧಿನಿಯಮ 2000ರ ಪ್ರಕರಣ 34(4) ಹಾಗೂ ಈ ಸಂಬಂಧ ವೆಚ್ಚ ಮಾಡುವುದರ ಮೂಲಕ ಪ್ರಕರಣ 46(3) ಪಾಲನೆ ಆಗಿರುವುದಿಲ್ಲ. ಪರಿಣಾಮವಾಗಿ, ಸದರಿ ನಾಲ್ಕು ಅಧ್ಯಯನ ವಿಭಾಗಗಳ ಸಂಬಂಧ ನಿಯಮ ಪಾಲಿಸದೆ ಭರಿಸಲಾದ ವೆಚ್ಚಗಳನ್ನು ನಿಯಮಬಾಹಿರ ವೆಚ್ಚಗಳೆಂದು ಪರಿಗಣಿಸಿ ಆಕ್ಷೇಪಣೆಯಲ್ಲಿಡಲಾಗಿದೆ. ಈ ಅಧ್ಯಯನ ವಿಭಾಗಗಳ ಸಂಬಂಧ 2015–16ನೇ ಸಾಲಿನಲ್ಲಿ ಭರಿಸಲಾದ ವೆಚ್ಚಗಳ ಮೊತ್ತ ರೂ.413.51 ಲಕ್ಷಗಳು ಆಗಿರುತ್ತದೆ. ವಿವರಗಳು ಕೆಳಕಂಡಂತಿದೆ. **ವಿಭಾಗದ ಹೆಸರು** — **ಒಟ್ಟು ವೆಚ್ಚದ ಮೊಬಲಗು (ರೂ. ಲಕ್ಷಗಳಲ್ಲಿ)** ಸಿ.ಬಿ.ಎಸ್.ಎಂ.ಎಸ್. 012 — 98.68 ಉಡುಪು ತಂತ್ರಜ್ಞಾನ 054 — 51.82 ಮಹಿಳಾ ಅಧ್ಯಯನ 143 — 28.74 ಜೈವಿಕ ತಂತ್ರಜ್ಞಾನ 011 — 234.27				12.06.2013 ರ ಸರ್ಕಾರಿ ಪತ್ರದ ನಿರ್ದೇಶನದಂತೆ ಮತ್ತೊಮ್ಮೆ ವಿವಿಧ ಪ್ರಾಧಿಕಾರಗಳ ನುಮೋದನೆ ನಂತರ ದಿನಾಂಕ 17.03.2015 ರಂದು ಕುಲಾಧಿಪತಿಗಳ ಅಂಕಿತಕ್ಕಾಗಿ ಕಳುಹಿಸಿದ್ದ ಪರಿನಿಯಮಗಳ ಬಗ್ಗೆ ಸರ್ಕಾರಿ ಪತ್ರ ದಿನಾಂಕ 29.06.2018 ರ ಮೂಲಕ ಪರಿನಿಯಮದ ಬಗ್ಗೆ ಮತ್ತೊಮ್ಮೆ ಸ್ಪಷ್ಟೀಕರಣವನ್ನು ಕೋರಿದ್ದರ ಮೇರೆಗೆ ಈ ಕಛೇರಿಯ ಪತ್ರದ ದಿನಾಂಕ 27.07.2018 ಮತ್ತು ನೆನಪೋಲೆಯ ದಿನಾಂಕ 15.10.2018 ರ ಮೂಲಕ ಸರ್ಕಾರದಿಂದ ಕೋರಿರುವ ಸ್ಪಷ್ಟೀಕರಣವನ್ನು ಸಂಬಂಧಿಸಿದ ವಿಭಾಗದಿಂದ ಒದಗಿಸಲು ಕೋರಲಾಗಿರುತ್ತದೆ.
	2	ಮಹಿಳಾ ಅಧ್ಯಯನ ಕೇಂದ್ರ (Centre for Women Studies)	28,74,000.00	ಮಹಿಳಾ ಅಧ್ಯಯನ ವಿಷಯದ ಅಧ್ಯಯನ ಮಂಡಳಿಯ ರಚನೆಗೆ ಆರ್ಡಿನೆನ್ಸ್ ಮಾನ್ಯ ಕುಲಾಧಿಪತಿಗಳಿಂದ ದಿನಾಂಕ 19.08.2007 ರಂದು ಅಂಕಿತವಾಗಿರುತ್ತದೆ. ಈ ಬಗ್ಗೆ ಅಧ್ಯಯನ ಮಂಡಳಿಯನ್ನು ರಚಿಸಿ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಮಹಿಳಾ ಅಧ್ಯಯನ ಕೇಂದ್ರಕ್ಕೆ ಸಂಬಂಧಿಸಿದ ಕರಡು ಪರಿನಿಯಮಾವಳಿಯನ್ನು ಮಹಿಳಾ ಅಧ್ಯಯನ ಕೇಂದ್ರದ ಸಮನ್ವಯಾಧಿಕಾರಿಗಳು ರಚಿಸಿ ಮುಂದಿನ ಕ್ರಮಕ್ಕೆ ಸಿಂಡಿಕೇಟ್ ವಿಭಾಗಕ್ಕೆ ಸಲ್ಲಿಸಿದ್ದು, ಸದರಿ ಪರಿನಿಯಮಾವಳಿಯನ್ನು ವಿಶ್ವವಿದ್ಯಾಲಯದ ಹಣಕಾಸು ಸಮಿತಿ, ವಿದ್ಯಾ ವಿಷಯಕ ಪರಿಷತ್ತು ಮತ್ತು ಸಿಂಡಿಕೇಟ್ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಕರ್ನಾಟಕ ಸರ್ಕಾರದ ಘನತೆವೆತ್ತ ರಾಜ್ಯಪಾಲರ ಅನುಮೋದನೆಗೆ

ಆಕ್ಷೇಪಣೆಗಳು	ಉತ್ತರಗಳು

ಒಟ್ಟು ರೂ.	413.51

			ಸಲ್ಲಿಸಲಾಗಿದೆ.
3	ಜೈವಿಕ ತಂತ್ರ ಜ್ಞಾನ ವಿಭಾಗ (Bio Technology)	2,34,27,000.00	ಜೈವಿಕ ತಂತ್ರಜ್ಞಾನ ವಿಷಯವು ಸೂಕ್ಷ್ಮ ಜೀವಶಾಸ್ತ್ರ (Microbiology) ವಿಭಾಗದಲ್ಲಿಯೇ ಒಂದು ಪ್ರತ್ಯೇಕ ಕೋರ್ಸನ್ನು ಪರಿಚಯಿಸಲಾಗಿದೆ. ಪರಿನಿಯಮಾವಳಿಗಳನ್ನು ರಚಿಸಿರುವುದಿಲ್ಲ ಹಾಗೂ ಪ್ರತ್ಯೇಕ ಅಧ್ಯಯನ ವಿಭಾಗವನ್ನು ರಚಿಸಿರುವುದಿಲ್ಲ.
4	ಕೆನರಾ ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೇಜ್ ಮೆಂಟ್ ಸ್ಟಡೀಸ್	98,68,000.00	ಕೆನರಾ ಬ್ಯಾಂಕ್ ವ್ಯವಹಾರ ನಿರ್ವಹಣಾ ಅಧ್ಯಯನ ಕೇಂದ್ರದ ಸೃಜನೆಗೆ ಪರಿನಿಯಮಾವಳಿ 1997 ರಲ್ಲಿ ಅನುಮೋದನೆ ಯಾಗಿದೆ. ಸಂಬಂಧಿಸಿದ ಅಧಿಸೂಚನೆ (ದಿನಾಂಕ 14.05.1997) ಮತ್ತು ವ್ಯವಹಾರ ನಿರ್ವಹಣಾ ಅಧ್ಯಯನ ಮಂಡಳಿ ರಚನೆಗೆ ಆರ್ಡಿನೆನ್ಸ್ ಮಾನ್ಯ ಕುಲಾಧಿಪತಿಗಳಿಂದ ದಿನಾಂಕ 19.07.2007 ರಂದು ಅಂಕಿತವಾಗಿದೆ. ಅಧ್ಯಯನ ಮಂಡಳಿಯನ್ನು ರಚನೆ ಮಾಡಿರುವ ಅಧಿಸೂಚನೆ ಹೊರಡಿಸಲಾಗಿದೆ. **(ಅನುಬಂಧ–92 ಲಗತ್ತಿಸಿದೆ)**

ಮೇಲೆ ತಿಳಿಸಿರುವ ಅಧ್ಯಯನ ವಿಭಾಗದ ಪರಿನಿಯಮಾವಳಿಗಳನ್ನು ರಚಿಸಿಕೊಂಡಿರುವ ಬಗ್ಗೆ ಆದೇಶ ಸಹಿತ ಮಾಹಿತಿ ಒದಗಿಸುವಂತೆ ಸಂಬಂಧಿಸಿದ ವಿಭಾಗಕ್ಕೆ ತಿಳಿಸಲಾಗಿದೆ.

3. ಪ್ರಯಾಣ ಭತ್ಯೆ ಪಾವತಿಸಿರುವ ಮೊತ್ತ: ರೂ.59,830.00 ವಸೂಲಾತಿ:–

ವಿತ್ತಾಧಿಕಾರಿಗಳ ವಿಭಾಗದ 2015–16 ನೇ ಸಾಲಿನ ವೋಚರ್ ಲೆಕ್ಕಪರಿಶೋಧನೆಯಲ್ಲಿ ಪ್ರಯಾಣ ಭತ್ಯೆ ವಹಿ ಹಾಗೂ ವೋಚರ್‌ಗಳನ್ನು ಪರಿಶೀಲಿಸಲಾಗಿದ್ದು, ಸದರಿ ಪ್ರಯಾಣ ಭತ್ಯೆಯನ್ನು ಸಮೂಹ ಮತ್ತು ಅಭಿವೃದ್ಧಿ ಅನುದಾನಗಳನ್ನು ಪಡೆಯುವ ಸಲುವಾಗಿ ಸರ್ಕಾರಿ ಕಛೇರಿಗಳಿಗೆ (ಶಿಕ್ಷಣ ಇಲಾಖೆ, ಇಂಟರ್‌ನಲ್ ಫೈನಾನ್ಷಿಯಲ್ ಅಡ್ವೈಸರ್ ಇಲಾಖೆ, ಯೋಜನಾ ಇಲಾಖೆ, ಹಣಕಾಸು ಇಲಾಖೆ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ ಇತ್ಯಾದಿ ಕಚೇರಿಗಳಿಗೆ) ಹೋಗಿ ಬರಲು

ಬೆಂಗಳೂರು ವಿಶ್ವವಿದ್ಯಾಲಯವು ಕರ್ನಾಟಕ ಸರ್ಕಾರದಿಂದ ಪ್ರತಿ ವರ್ಷವೂ ಸಮೂಹ ಅನುದಾನ, ಅಭಿವೃದ್ಧಿ ಅನುದಾನ ಮತ್ತು ವಿಶೇಷ ಅನುದಾನವನ್ನು ಪಡೆಯಲು ಮೇಲಿಂದ ಮೇಲೆ ಸರ್ಕಾರ ಹಾಗೂ ಖಜಾನೆಗಳಿಗೆ ಹೋಗಬೇಕಾಗುತ್ತದೆ. 2004ನೇ ವರ್ಷದಲ್ಲಿ ಸಮೂಹ ಅನುದಾನ ಹಾಗೂ ಅಭಿವೃದ್ಧಿ ಅನುದಾನದ ಬಿಲ್ಲುಗಳನ್ನು ವಿಶ್ವವಿದ್ಯಾಲಯವು ಭರ್ತಿ ಮಾಡಿ ಶಿಕ್ಷಣ ಇಲಾಖೆಯಿಂದ ಅದೇಶ ಪಡೆದು ನೇರವಾಗಿ ಉಪ ಖಜಾನೆಗೆ ಸಲ್ಲಿಸಿ ಅನುದಾನವನ್ನು ಚೆಕ್‌ಗಳ ಮೂಲಕ ಪಡೆಯುತ್ತಿತ್ತು, ನಂತರದಲ್ಲಿ ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ)

ಆಕ್ಷೇಪಣೆಗಳು	***ಉತ್ತರಗಳು***
ಎಂದು ನಮೂದಿಸಿದ್ದು, ವರ್ಷ ಪೂರ್ತಿ ಪ್ರತಿ ಮಾಹೆಯು 18 ದಿನಗಳು ಸರ್ಕಾರಿ ಕಚೇರಿಗಳಿಗೆ ಹೋಗಿ ಬರುವ ಅವಶ್ಯಕತೆ ಇರುತ್ತದೆಯೇ? ಎಂಬ ಬಗ್ಗೆ ಸ್ಪಷ್ಟೀಕರಣವನ್ನು ಸೂಕ್ತ ದಾಖಲೆ/ಆದೇಶದ ಪ್ರತಿಗಳೊಂದಿಗೆ ಒದಗಿಸದ ಕಾರಣ ವಸೂಲಾತಿಯು ಮುಂದುವರೆದಿದೆ. ಆದೇಶದಲ್ಲಿ 75 ದಿನಗಳಿಗೆ ಮೀರದಂತೆ Conveyance allowances ನಿಗದಿಪಡಿಸಲಾಗಿದ್ದು, 2015–16 ನೇ ಸಾಲಿನಲ್ಲಿ 193 ದಿನಗಳಿಗೆ ರೂ.310 ರಂತೆ ಒಟ್ಟು ರೂ. 59,830.00 ಗಳನ್ನು ಪಾವತಿಸಲಾಗಿರುತ್ತದೆ. **ಕ್ರ.ಸಂ. / ಮಂಜೂರಾತಿ ಆದೇಶ ಸಂ/ದಿನಾಂಕ / ಬಿ.ಆರ್.ಸಂ./ದಿನಾಂಕ / ದಿನಗಳು / ಮೊಬಲಗು (ರೂ.ಗಳಲ್ಲಿ)** 1 / ವಿ.ವಿ.ಆದೇಶ ಸಂ.ಹ.ವಿ7/ಪ್ರಯಾಣಭತ್ಯೆ/ಜಿ.ಆರ್/ಇತರೆ/2014–15/ದಿನಾಂಕ 16.7.2015. / 1009/02.05.2015 / 18 / 5580.00 2 / ವಿ.ವಿ.ಆದೇಶ ಸಂ.ಹ.ವಿ7/ಪ್ರಯಾಣಭತ್ಯೆ/ಜಿ.ಆರ್/ಇತರೆ/20 / 3063/06.07.2015 / 18 / 5580.00 3 / ವಿ.ವಿ.ಆದೇಶ ಸಂ.ಹ.ವಿ7/ಪ್ರಯಾಣಭತ್ಯೆ/ಜಿ.ಆರ್/ಇತರೆ/20 / 3814/.1.08.2015 / 18 / 5580.00 4 / ವಿ.ವಿ.ಆದೇಶ ಸಂ.ಹ.ವಿ7/ಪ್ರಯಾಣಭತ್ಯೆ/ಜಿ.ಆರ್/ಇತರೆ/20 / 6169/28.10.2015 / 31 / 9610.00 5 / ವಿ.ವಿ.ಆದೇಶ ಸಂ.ಹ.ವಿ7/ಪ್ರಯಾಣಭತ್ಯೆ/ಜಿ.ಆರ್/ಇತರೆ/20 / 6727/9.11.215 / 18 / 5580.00 6 / ವಿ.ವಿ.ಆದೇಶ ಸಂ.ಹ.ವಿ7/ಪ್ರಯಾಣಭತ್ಯೆ/ / 8141/12.12.2015 / 18 / 5580.00 7 / ವಿ.ವಿ.ಆದೇಶ ಸಂ.ಹ.ವಿ7/ಪ್ರಯಾಣಭತ್ಯೆ/ / 9604/2.1.2016 / 36 / 5580.00 8 / ವಿ.ವಿ.ಆದೇಶ ಸಂ.ಹ.ವಿ7/ಪ್ರಯಾಣಭತ್ಯೆ/ / 11765/20.0.2.2016 / 18 / 11160.00 ವಿ.ವಿ.ಆದೇಶ ಸಂ.ಹ.ವಿ7/ಪ್ರಯಾಣಭತ್ಯೆ/ / 12900/28.03.2016 / 18 / 5580.00 ಒಟ್ಟು / **59,830.00** ರೂ. 59,830.00 ಗಳನ್ನು ವಸೂಲಾತಿಗೆ ಸೂಚಿಸಿದೆ.	ಇವರು ಆದೇಶ ಹೊರಡಿಸಿ ನಂತರದಲ್ಲಿ ರಾಜ್ಯ ಹುಜೂರ್ ಟ್ರೆಜರಿ ಇವರಿಗೆ ಬಿಲ್ಲನ್ನು ಸಲ್ಲಿಸಿ, ಧನಾದೇಶ ಪಡೆದು ಶಿಕ್ಷಣ ಇಲಾಖೆ ಮುಖಾಂತರ ಧನಾದೇಶ ನೀಡಲಾಗುತ್ತಿತ್ತು. 2009–10ರ ನಂತರದಲ್ಲಿ ಈ ಪ್ರಕ್ರಿಯೆಯಲ್ಲಿ ಬಹಳಷ್ಟು ಬದಲಾವಣೆ ತರಲಾಗಿದ್ದು, ಮೊದಲು ವಿಶ್ವವಿದ್ಯಾಲಯವು ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಇವರಿಗೆ ಅನುದಾನದ ಪತ್ರವನ್ನು ಸಲ್ಲಿಸಿದ ನಂತರ ಸದರಿ ಇಲಾಖೆಯವರು ಆದೇಶ ಹೊರಡಿರುತ್ತಾರೆ. ಸದರಿ ಆದೇಶಕ್ಕೆ ವಿಶ್ವವಿದ್ಯಾಲಯದಲ್ಲಿ Grant-in-aid bill ಸಿದ್ಧಪಡಿಸಿ ಬಿಲ್ಲನ್ನು ಆದೇಶದ ಸಮೇತ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಇವರಿಗೆ ಸಲ್ಲಿಸಬೇಕಾಗುತ್ತದೆ. ನಂತರದಲ್ಲಿ ಸದರಿ ಆದೇಶದನ್ವಯ Grant-in-aid bill ಗೆ ಜಂಟಿ ನಿರ್ದೇಶಕರ ಮೇಲು ಸಹಿ ಪಡೆದ ನಂತರ ಟ್ರೆಜರಿಗೆ (ಹೂಜೂರು ಖಜಾನೆ) ಬಿಲ್ಲನ್ನು ಸಲ್ಲಿಸಿ ಜೊತೆಯಲ್ಲಿ ಒಂದು ಪತ್ರವನ್ನು ಸಿದ್ಧಪಡಿಸಿ ಹಣಕಾಸು ಇಲಾಖೆ (R & M) ಗೆ ನೀಡಿ ಅನುದಾನವನ್ನು NMC ಯಲ್ಲಿ ಬಿಡುಗಡೆ ಮಾಡುವ ಕಾರ್ಯ ಮಾಡಲಾಗುತ್ತದೆ. ನಂತರ ಖಜಾನೆಯಲ್ಲಿ ಸಿದ್ಧವಾದ ಧನಾದೇಶವನ್ನು ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಇವರಿಂದ ಪಡೆದು ವಿಶ್ವವಿದ್ಯಾಲಯದ ನಿಧಿಗೆ ಜಮೆ ಮಾಡಲಾಗುತ್ತದೆ. ಸಮೂಹ ಅನುದಾನ, ಅಭಿವೃದ್ಧಿ ಮತ್ತು ವಿಶೇಷ ಅನುದಾನಗಳಿಗೆ ಪ್ರತ್ಯೇಕವಾಗಿ ಇದೇ ಪ್ರಕ್ರಿಯೆ ಅನುಸರಿಸಬೇಕಾಗುತ್ತದೆ. ಜೊತೆಯಲ್ಲಿ ಪ್ರತಿ ವರ್ಷ ಹಣಕಾಸು ಇಲಾಖೆಗೆ Schedule of Establishment ಪುಸ್ತಕವನ್ನು ಸಲ್ಲಿಸಿ, ನಂತರ ಈ ಪ್ರಕ್ರಿಯೆಯನ್ನು ಅನುಸರಿಸುವ ಕೆಲಸವನ್ನು ಕಛೇರಿ ಕಾರ್ಯಗಳಿಗೆ ಅಡಚಣೆಯಾಗದ ರೀತಿಯಲ್ಲಿ ಕಾರ್ಯನಿರ್ವಹಿಸಲಾಗುತ್ತದೆ. ಈ ಎಲ್ಲಾ ಕಾರ್ಯಗಳಿಗೆ ಮೇಲಿಂದ ಮೇಲೆ ಸರ್ಕಾರ ಮತ್ತು ಖಜಾನೆಗೆ ಭೇಟಿ ನೀಡಬೇಕಾಗುತ್ತದೆ. ಈ ಕೆಲಸದ ಸ್ವರೂಪವನ್ನು ಲೆಕ್ಕ ಹಾಕಿ ಈ ಕಾರ್ಯವನ್ನು ವಹಿಸಿರುವ ಸಿಬ್ಬಂದಿಗೆ ಸಿ.ಎ. ನೀಡಿರುತ್ತದೆ. 2014–15ನೇ ಸಾಲಿನಲ್ಲಿ ಈ ಕಾರ್ಯಗಳನ್ನೆಲ್ಲಾ ಯಶಸ್ವಿಯಾಗಿ ಪೂರೈಸಿರುತ್ತದೆ. 2014–15ನೇ ಸಾಲಿನಲ್ಲಿ ಸಾರಿಗೆ ಭತ್ಯೆ ಪಾವತಿಸಿರುವುದನ್ನು ಮೇಲೆ ತಿಳಿಸಿದ ಅಂಶಗಳನ್ನು ಪರಿಗಣಿಸಿ ಕೊಟ್ಟಿರುವುದರಿಂದ 2015–16ನೇ ಸಾಲಿಗೆ ಸಹ ಸಿ.ಎ. ಮೊತ್ತವನ್ನು ವಸೂಲಾತಿಗೆ ಸೂಚಿಸಿರುವುದು ಸಮಂಜಸವಲ್ಲ. ಆದುದರಿಂದ ವಸೂಲಾತಿಗೆ ಸೂಚಿಸಿರುವ ಮೊತ್ತ ರೂ.59,830.00/–ಗಳನ್ನು ಕೈಬಿಡಲು ಕೋರಿದೆ.
4. ಕಛೇರಿ ಅವಧಿ ನಂತರ ಕಾರ್ಯ ನಿರ್ವಹಿಸಿರುವುದಕ್ಕೆ ಸಂಭಾವನೆ ನೀಡಿರುವ ಬಾಬ್ತು : ರೂ.2,95,872.00 ವಸೂಲಾತಿ.	
ವಿತ್ತಾಧಿಕಾರಿಗಳ ವಿಭಾಗದ 2015–16 ನೇ ಸಾಲಿನ	(1) ರವಾನೆ ಮತ್ತು ಸ್ವೀಕಾರ ವಿಭಾಗದ ನೌಕರರು ಕಛೇರಿ

ಆಕ್ಷೇಪಣೆಗಳು	ಉತ್ತರಗಳು

ವೋಚರ್ ಲೆಕ್ಕಪರಿಶೋಧನೆಯಲ್ಲಿ ವಿಶ್ವವಿದ್ಯಾಲಯದ ಕಾರ್ಯ ನಿರ್ವಹಿಸುತ್ತಿರುವ ನೌಕರರಿಗೆ ಕಛೇರಿ ಅವಧಿಗೆ ಮುನ್ನ ಹಾಗೂ ಕಛೇರಿ ಅವಧಿ ನಂತರ ಕಾರ್ಯ ನಿರ್ವಹಿಸಿರುವುದಕ್ಕೆ ಸಂಭಾವನೆ ನೀಡಿರುವುದು ವೋಚರ್‌ಗಳ ಪರಿಶೀಲನೆಯಿಂದ ತಿಳಿದು ಬಂದಿರುತ್ತದೆ. ಬೆಂ.ವಿ.ವಿ.ಯು ಕರ್ನಾಟಕ ಸರ್ಕಾರ ನಾಗರೀಕ ಸೇವಾ ನಿಯಮಗಳನ್ನು ಅಳವಡಿಸಿಕೊಂಡಿದ್ದು, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ ಇವರ ಸುತ್ತೋಲೆ ಸಂಖ್ಯೆ/ಇ.ಡ/268/ಯು.ಬಿ.ವಿ./96/ಬೆಂ. ದಿನಾಂಕ 23.5.1997 ರಲ್ಲಿ ವಿ.ವಿ. ನೌಕರರುಗಳಿಗೆ ಸೇವಾ ಷರತ್ತು ಮತ್ತು ನಿಬಂಧನೆಗಳು ರಾಜ್ಯ ಸರ್ಕಾರಿ ನೌಕರರುಗಳಿಗೆ ಅನ್ವಯಿಸುವ ಮತ್ತು ಅನುಗುಣವಾಗಿರುವ ರೀತಿಯಲ್ಲಿ ಇರಬೇಕೇ ಹೊರತು ಅವರಿಂದ ವಿಮುಖವಾಗಿರ ಬಾರದೆಂದೂ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯಲ್ಲಿ ಆರ್ಥಿಕ ಸಂಹಿತೆಯಲ್ಲಿ ಹಾಗೂ ಜಾರಿಯಲ್ಲಿರುವ ಯಾವುದೇ ಸ್ಥಾಯೀ ಆದೇಶಗಳಲ್ಲಿ ಹೆಚ್ಚುವರಿ ಭತ್ಯೆ ನೀಡಲು ಅವಕಾಶವಿಲ್ಲವೆಂದೂ ಹಾಗೂ ನೀಡಿದ್ದಲ್ಲಿ ವಸೂಲಿಸತಕ್ಕದೆಂದೂ ತಿಳಿಸಿರುತ್ತಾರೆ

ಶಿಕ್ಷಣ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಇವರ ಪತ್ರ ಸಂಖ್ಯೆ/ಇ.ಡಿ/489/ಯು.ಜಿ.ಏ/2001/ ದಿನಾಂಕ 12.6.2002 ರ ಪತ್ರದನ್ವಯ ಹೆಚ್ಚುವರಿ ಕಾರ್ಯಕ್ಕೆ ಸಂಭಾವನೆ ನೀಡುವುದನ್ನು ನಿಷೇದಿಸಿದ್ದು. ಅನಿವಾರ್ಯವಿದ್ದಲ್ಲಿ ಅನುಶಾಸನ ರಚಿಸಿ ಮಾನ್ಯ ಕುಲಾಧಿಪತಿಗಳ ಅಂಕಿತ ಪಡೆಯುವಂತೆ ಸೂಚಿಸಲಾಗಿದ್ದರೂ, ಪ್ರತಿ ವರ್ಷ ಹೆಚ್ಚುವರಿ ಕಾರ್ಯಕ್ಕೆ ಸಂಭಾವನೆ ಮೊತ್ತವನ್ನು ನೀಡುತ್ತಿರುವ ಪ್ರಕ್ರಿಯೆಯನ್ನು ಈ ಕೂಡಲೇ ನಿಲ್ಲಿಸಿ, ಪಾವತಿಸಲಾದ ಮೊತ್ತ ರೂ.2,95,872.00ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಿ, ವಿವಿ ನಿಧಿಗೆ ಜಮೆ ಮಾಡಿ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲು ಕೋರಿದ್ದು, ದಿನಾಂಕ 11.03.2017 ರಂದು ಸಲ್ಲಿಸಿರುವ ಅನುಸರಣೆಯು ಸಮಂಜಸವಾಗಿಲ್ಲದ ಕಾರಣ ರೂ.2,95,872.00 ಗಳನ್ನು ವಸೂಲಾತಿಗೆ ಸೂಚಿಸಿದೆ.

ಕ್ರ. ಸಂ.	ಮಂಜೂರಾತಿ ಆದೇಶ ಸಂಖ್ಯೆ.	ಮೊಬಲಗು (ರೂ.ಗಳಲ್ಲಿ)
1	ವಿ.ವಿ. ಆದೇಶ ಸಂ. ರವಾನೆ ಮತ್ತು ಸ್ವೀಕೃತಿ ವಿಭಾಗ ಸಿ.ಎ/ಸಂಭಾವನೆ/2015–16 ದಿನಾಂಕ 20.11.2014	1,40,779.00
2	U.O.No:DEV/D4/Remuneration/2014-15, Date:13.04.2015	1,55,093.00
	Total amount	**2,95,872.00**

ವೇಳೆಯನ್ನು ಹೊರತುಪಡಿಸಿ ಈಛೇರಿ ವೇಳಗಿಂತ ಮೊಡಲು ಹಾಗೂ ಕಛೇರಿ ಮುಗಿದ ನಂತರ ವಿಶ್ವವಿದ್ಯಾಲಯದಲ್ಲಿ ನಡೆಯುವ ಸಭೆ ಸಮಾರಂಭಗಳಿಗೆ ಆಹ್ವಾನಿಸುವ ಅಧಿಕಾರಿಗಳಿಗೆ/ವಿಶ್ವವಿದ್ಯಾಲಯದ ಕಾಲೇಜಿನ ಪ್ರಾಂಶುಪಾಲರು ಹಾಗೂ ಸದಸ್ಯರುಗಳಿಗೆ ಅವರವರ ವಿಳಾಸಗಳಿಗೆ ಸುತ್ತೋಲೆಗಳನ್ನು ವಿತರಿಸುವ ಸಲುವಾಗಿ ಕಾರ್ಯನಿರ್ವಹಿಸುವ ನೌಕರರಿಗೆ ಪರಿಹಾರ ಭತ್ಯೆ ನೀಡಲಾಗಿದೆ. ಆದುದರಿಂದ, ಆಕ್ಷೇಪಣೆಯ ಮೊತ್ತ ಕೈಬಿಡುವಂತೆ ವಿನಂತಿಸಿದೆ.

(2) 2014–15ನೇ ಸಾಲಿಗೆ ಸಂಬಂಧಿಸಿದಂತೆ, ಅಭಿವೃದ್ಧಿ ವಿಭಾಗದಲ್ಲಿ ರಾಜೀವ್‌ಗಾಂಧಿ ಶಿಷ್ಯ ವೇತನದ ಫಲಾನುಭವಿ ಸಂಶೋಧನ ವಿದ್ಯಾರ್ಥಿಗಳ ಯು.ಜಿ.ಸಿ. ಅನುದಾನಕ್ಕೆ ಸಂಬಂಧಿಸಿದಂತೆ 2005–06 ರಿಂದ 2010–11 ರವರೆಗೆ ವಿವಿಧ ವಿಭಾಗಗಳಿಂದ ಮತ್ತು ಸಂಶೋಧನ ವಿದ್ಯಾರ್ಥಿಗಳ ಮಾಹಿತಿಯನ್ನು ಕಲೆ ಹಾಕಿ ಯು.ಜಿ.ಸಿ.ಯ ನಿಯಮಾವಳಿಯಂತೆ ನಿಗದಿತ ನಮೂನೆಯಲ್ಲಿ ಒಂದು ಕೋಟಿಗೂ ಹೆಚ್ಚಿನ ಮೊತ್ತದ ಪ್ರಮಾಣದ ಬಳಕೆ ಪ್ರಮಾಣ ಪತ್ರವನ್ನು ತಯಾರಿಸಿ ಯು.ಜಿ.ಸಿ.ಗೆ ಸಲ್ಲಿಸಿರುವ ಕಾರ್ಯದಲ್ಲಿ ಕಛೇರಿಯ ಅವಧಿ ಮೀರಿ ಕಛೇರಿ, ಕಛೇರಿ ಅವಧಿ ನಂತರ ಹಾಗೂ ರಜಾ ದಿನಗಳಲ್ಲಿಯೂ ಕಾರ್ಯ ನಿರ್ವಹಿಸಲಾಗಿತ್ತು.

ಕರ್ನಾಟಕ ಸರ್ಕಾರ ಆಯವ್ಯಯ ಮಂಡಣೆಯಲ್ಲಿ ನೌಕರರಿಗೆ ಮೂಲ ವೇತನದ ಶೇ 20% ಸಂಭಾವನೆ ನೀಡುತ್ತಿದ್ದು, ಅದರಂತೆ, ಬೆಂಗಳೂರು ವಿಶ್ವವಿದ್ಯಾಲಯದ ನೌಕರರಿಗೂ ಹೆಚ್ಚುವರಿ ಕೆಲಸಕಾರ್ಯಕ್ಕೆ ಅನುಗುಣವಾಗಿ ಭತ್ಯೆಯನ್ನು ಪಡೆಯಬಹುದಾಗಿರುತ್ತದೆ ಎಂದು ದಿನಾಂಕ 14.05.2014ರ ಸಿಂಡಿಕೇಟ್ ಸಭೆಯ ಅನುಮೋದನೆಯಂತೆ **(ಅನುಬಂಧ–98)** (ಪು.ಸಂ.644) ಮತ್ತು ದಿನಾಂಕ 09.04.2015 ಹಾಗೂ 13.04.2015ರಲ್ಲಿ ಮಾನ್ಯ ಕುಲಪತಿಗಳ ಒಪ್ಪಿಗೆ ಪಡೆದು, ಅಭಿವೃದ್ಧಿ ವಿಭಾಗದ ಸಿಬ್ಬಂದಿಗೆ ಹೆಚ್ಚುವರಿ ಕೆಲಸ ಕಾರ್ಯಗಳಿಗೆ ಭತ್ಯೆಯನ್ನು ನೀಡಲಾಗಿದೆ. ಆದುದರಿಂದ, ಸದರಿ ಆಕ್ಷೇಪಣೆಯನ್ನು ಕೈಬಿಡುವಂತೆ ಈ ಮೂಲಕ ಕೋರಲಾಗಿದೆ.

ಈ ರೀತಿ ಪಾವತಿಗೆ ಪರಿನಿಯಮ ರಚಿಸಿಕೊಳ್ಳದಿರುವುದರಿಂದ, ವಸೂಲಾತಿಗೆ ಸೂಚಿಸಿರುತ್ತಾರೆ. ಹಾಗಾಗಿ ಪರಿನಿಯಮವನ್ನು ರಚಿಸಿಕೊಂಡು, ಸರ್ಕಾರದಿಂದ ಅನುಮೋದನೆ ಪಡೆಯುವ ಹಿನ್ನೆಲೆಯಲ್ಲಿ, ಒಂದು ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯು ರಚಿಸಿದ "Statute Governing

ಆಕ್ಷೇಪಣೆಗಳು	ಉತ್ತರಗಳು
	Payment of Conveyance Allowance to the Non-Teaching staff of Bangalore University for working beyond office hours & during Government Holidays" ವನ್ನು ಸರ್ಕಾರದ ಅನುಮೋದನೆಗೆ ಕಳುಹಿಸುವ ಮುನ್ನ ದಿನಾಂಕ 14.12.2016ರಂದು ನಡೆದ ಹಣಕಾಸು ಸಮಿತಿ ಸಭೆ ಮತ್ತು ದಿನಾಂಕ 17.05.2017ರಂದು ನಡೆದ ಸಿಂಡಿಕೇಟ್ ಸಭೆಗಳ ಮುಂದೆ ಮಂಡಿಸಿ ಅನುಮೋದನೆ ಪಡೆದು, ಕುಲಾಧಿಪತಿಗಳ ಅನುಮೋದನೆಗಾಗಿ ದಿನಾಂಕ 03.06.2017ರ ಪತ್ರದ ಮೂಲಕ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ: ಇಡಿ/203/ಯುಬಿವಿ/2017, ದಿನಾಂಕ 04.07.2017ರಲ್ಲಿ ಕೆಲವು ಅಂಶಗಳ ಬಗ್ಗೆ ಸ್ಪಷ್ಟೀಕರಣ ಕೋರಿರುತ್ತಾರೆ. ಇದರ ಅನುಸಾರವಾಗಿ ಕರಡು ಪರಿನಿಯಮಾವಳಿಯನ್ನು ಮಾರ್ಪಡಿಸಿ, ದಿನಾಂಕ 27.09.2017ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಭೆಯ ಮುಂದೆ ಮಂಡಿಸಲಾಗಿತ್ತು. ಈಗ ಮಾರ್ಪಾಟು ಮಾಡಿದ ಪರಿನಿಯಮಾವಳಿಯನ್ನು ಕುಲಾಧಿಪತಿಗಳ ಅನುಮೋದನೆ ಪಡೆಯಲು ಪತ್ರ ಸಂಖ್ಯೆ:ಎಸ್.ವೈ.ಎನ್.ಎಸ್–1/ಸ್ಪಾಚ್ಯೂಟ್/2017–18 ದಿನಾಂಕ:10.11.2017 ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಶಿಕ್ಷಣ ಇಲಾಖೆಗೆ (ಉನ್ನತ ಶಿಕ್ಷಣ) ಸಲ್ಲಿಸಲಾಗಿದೆ. ಈ ವಿಚಾರದಲ್ಲಿ ಸರ್ಕಾರ ಕೊಡುವ ತೀರ್ಮಾನದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು. **(ಅನುಬಂಧ–99)**
5. ಮೊಬೈಲ್ ದೂರವಾಣಿ ವೆಚ್ಚದ ಮರುಪಾವತಿ:– ರೂ.41,600.00 (ವಸೂಲಾತಿ)	
ವಿತ್ತಾಧಿಕಾರಿಗಳ ವಿಭಾಗದ 2015–16 ನೇ ಸಾಲಿನ ವೋಚರ್ ಲೆಕ್ಕಪರಿಶೋಧನೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ದೂರವಾಣಿ ವೆಚ್ಚದ ವಹಿಯನ್ನು ಪರಿಶೀಲಿಸಲಾಗಿದ್ದು, ದಿನಾಂಕ 1.12.2007 ರಂದು ನಡೆದ 68 ನೇ ಸಿಂಡಿಕೇಟ್ ಸಭೆಯಲ್ಲಿ ಆದೇಶ ಮಾಡಿಕೊಂಡಿರಲಾಗಿರುವಂತೆ, ಅಧಿಕಾರಿ ವರ್ಗ ಮತ್ತು ಶಿಕ್ಷಕರುಗಳಿಗೆ ಮೊಬೈಲ್ (ದೂರವಾಣಿ) ವೆಚ್ಚದ ಮರುಪಾವತಿ ಮಾಡಲಾಗಿದ್ದು, ವಿವರಗಳು ಕೆಳಕಂಡಂತಿರುತ್ತದೆ. ಈ ಕಂಡಿಕೆಯಲ್ಲಿ (9) ಅಧಿಕಾರಿ ವರ್ಗ ಶಿಕ್ಷಕರುಗಳಿಗೆ ಮೊಬೈಲ್ ವೆಚ್ಚ ಪಾವತಿಯನ್ನು ದಿನಾಂಕ:01.12.2007ರ ಸಿಂಡಿಕೇಟ್ ಸಭೆಯ ಅನುಮೋದನೆಯಂತೆ ಪಾವತಿಸಲಾದ್ದು, ಪ್ರಸ್ತುತ ನಂತರದ ವರ್ಷದಿಂದ ಇಂತಹ ಮೊಬೈಲ್ ವೆಚ್ಚದ ಪಾವತಿಗಳನ್ನು ನಿಲ್ಲಿಸಲಾಗಿದೆ. ಆದುದರಿಂದ ಈಗಾಗಲೇ ಪಾವತಿಸಲಾದ ಮೊತ್ತವನ್ನು ವಸೂಲಾತಿಯಿಂದ ಕೈ ಬಿಡುವಂತೆ ವಿನಂತಿಸಲಾಗಿದೆ.

ಕ್ರ. ಸಂ	ಹೆಸರು	ಪದನಾಮ	ವಿಭಾಗ	ಮೊತ್ತ (ರೂ.ಗಳಲ್ಲಿ)
1	ಲಲಿತಾ	ನಿರ್ದೇಶಕರು	ಮುದ್ರಣಾಲಯ	5000.00

ಆಕ್ಷೇಪಣೆಗಳು	***ಉತ್ತರಗಳು***

	ಅಶ್ವಥ್			
2	ಪ್ರೊ.ಎಂ.ಕೆ. ಶ್ರೀಧರ್	ಡೀನ್	ವಾಣಿಜ್ಯ ಮತ್ತು ನಿರ್ವಹಣಾ ಶಾಸ್ತ್ರ	3450.00
3	ಸಂಘಮಿತ್ರ	ಸಹಾಯಕ ಕುಲಸಚಿವರು	ಮೌಲ್ಯಮಾಪನ	5500.00
4	ಅನಂತ ನಾರಾಯಣ	ನಿರ್ದೇಶಕರು	ಡಿ.ಸಿ.ಸಿ	6000.00
5	ಸುರೇಶ್.ವಿ. ನಾಡಗೌಡರ್	ಪ್ರಾಂಶುಪಾಲರು	ಕಾನೂನು ವಿಭಾಗ	750.00
6	ಪಿ.ಸಿ.ಕೃಷ್ಣಮೂರ್ತಿ	ವಿಶೇಷಾಧಿಕಾರಿಗಳು	ಪ.ಜಾ/ಪ.ಪಂ ವಿಭಾಗ	6000.00
7	ಕೋಮಲವಲ್ಲಿ	ಆಪ್ತ ಸಹಾಯಕರು	ವಿತ್ತಾಧಿಕಾರಿಗಳ ವಿಭಾಗ	8150.00
8	ಸರಸ್ವತಿ	ಡಿ.ಎಫ್.ಒ	ವಿತ್ತಾಧಿಕಾರಿಗಳ ವಿಭಾಗ	3750.00
9	ಈಶ್ವರಾಚಾರಿ	ಕುಲಪತಿಗಳ ಆಪ್ತ ಸಹಾಯಕರು	ವಿತ್ತಾಧಿಕಾರಿಗಳ ವಿಭಾಗ	3000.00
			ಒಟ್ಟು	**41,600**

ಈ ಮೇಲ್ಕಂಡ ಪಾವತಿಗಳಿಗೆ ಸಂಬಂಧಿಸಿದಂತೆ, ಸರ್ಕಾರದ ಆದೇಶ/ಅನುಮತಿಯ ಅವಶ್ಯಕತೆಯಿದ್ದು, ಪ್ರತಿಯನ್ನು ಲೆಕ್ಕಪರಿಶೋಧನೆಗೆ ಸಲ್ಲಿಸದೇ ಇರುವ ಕಾರಣ ರೂ. 41,600.00 ಗಳನ್ನು ವಸೂಲಾತಿಗೆ ಸೂಚಿಸಿದೆ.

6. ಗೃಹ ಪರಿಚಾರಕ ಭತ್ಯೆಯನ್ನು ನೀಡಿರುವುದು: ರೂ.1,53,100.00(ವಸೂಲಾತಿ)

ವಿತ್ತಾಧಿಕಾರಿಗಳ ವಿಭಾಗದ 2015–16 ನೇ ಸಾಲಿನ ವೋಚರ್ ಲೆಕ್ಕಪರಿಶೋಧನೆಯಲ್ಲಿ ಕುಲಸಚಿವರು (ಆಡಳಿತ) ಇವರಿಗೆ ಮಾಹೆಯಾನ ರೂ.6000.00, ಕುಲಸಚಿವರು(ಮೌ) ಇವರಿಗೆ ಮಾಹೆಯಾನ ರೂ.5000.00 ಹಾಗೂ ವಿತ್ತಾಧಿಕಾರಿಗಳಿಗೆ ಮಾಹೆಯಾನ ರೂ.3000.00 ಗಳಂತೆ ಗೃಹ ಪರಿಚಾರಕ ಭತ್ಯೆಯನ್ನು ನೀಡಿರುವುದು ವೌಚರ್‌ಗಳ ಹಾಗೂ ವಹಿಗಳ ಪರಿಶೀಲನೆಯಿಂದ ಕಂಡುಬಂದಿರುತ್ತದೆ.

ಸರ್ಕಾರದ ಆದೇಶ ಸಂ:ಸಿಆಸುಇ 232 ಸಿಸೇನಿ 2011, ಬೆಂಗಳೂರು ದಿನಾಂಕ 22.10.2011 ಆದೇಶದನ್ವಯ ಕುಲಸಚಿವರು (ಆಡಳಿತ), ಕುಲಸಚಿವರು (ಮೌ) ಹಾಗೂ ವಿತ್ತಾಧಿಕಾರಿಗಳು ಇವರಿಗೆ ಗೃಹ ಪರಿಚಾರಕ ಭತ್ಯೆಯನ್ನು ನೀಡಲು ಅವಕಾಶವಿರುವುದಿಲ್ಲವಾದರೂ, ನಿಯಮಗಳನ್ನು ಉಲ್ಲಂಘಿಸಿ ಪಾವತಿಸಿರುವ ಮೊತ್ತ ರೂ.1,53,100.00 ಗಳನ್ನು ವಸೂಲಾತಿಗೆ ಸೂಚಿಸಿದೆ. ಕರ್ನಾಟಕ ವಿಶ್ವವಿದ್ಯಾಲಯ ಅಧಿನಿಯಮಗಳು 2000 ಸೆಕ್ಷನ್ 29(3) ಅನ್ವಯ ಸಿಂಡಿಕೇಟ್‌ಗೆ ಯಾವ ಅಧಿಕಾರಿಗಳ/ನೌಕರರ ವೇತನ ಹಾಗೂ ಇತರೆ ಭತ್ಯೆಗಳ ಪರಿಷ್ಕರಿಸಲು ಅವಕಾಶವಿರುವುದಿಲ್ಲ.

ವಿವರಗಳನ್ನು ಸಲ್ಲಿಸದೇ ಇರುವ ಕಾರಣ ರೂ.1,53,100.00 ಗಳನ್ನು ವಸೂಲಾತಿಗೆ ಸೂಚಿಸಿದೆ.

ಸರ್ಕಾರದ ಆದೇಶ ಸಂ.ಸಿಆಸುಇ232ಸಿಸೇನಿ2011 ಬೆಂಗಳೂರು ದಿನಾಂಕ:22.10.2011ರ ಆದೇಶದನ್ವಯ ಕುಲಸಚಿವರು(ಆಡಳಿತ) ಕುಲಸಚಿವರು(ಮೌ) ಮತ್ತು ವಿತ್ತಾಧಿಕಾರಿಗಳು ಇವರಿಗೆ ಪಾವತಿಸಿರುವ ಗೃಹ ಪರಿಚಾರಿಕೆ ಭತ್ಯೆ ರೂ.153100.00ಗಳನ್ನು ನೀಡಲು ಅವಕಾಶವಿಲ್ಲವೆಂದು ವಸೂಲಾತಿಗೆ ಸೂಚಿಸಲಾಗಿದೆ. ಆದುದರಿಂದ, 2015–16ರ ಸಾಲಿನಲ್ಲಿ ಕಾರ್ಯ ನಿರ್ವಹಿಸಿದ ಕುಲಸಚಿವರು (ಆಡಳಿತ), ಕುಲಸಚಿವರು(ಮೌಲ್ಯಮಾಪನ) ಮತ್ತು ವಿತ್ತಾಧಿಕಾರಿಗಳಿಂದ ರೂ. 1,53,100=00ಗಳನ್ನು ವಸೂಲಾತಿ ಮಾಡಿ ವಿವರ ಒದಗಿಸುವಂತೆ ತಿಳಿಸಿದೆ.

ಆಕ್ಷೇಪಣೆಗಳು	ಉತ್ತರಗಳು

6(1). ವಿತ್ತಾಧಿಕಾರಿಗಳ ವಿಭಾಗದ 2015–16 ನೇ ಸಾಲಿನ ವೋಚರ್ ಲೆಕ್ಕಪರಿಶೋಧನೆಯಲ್ಲಿ ವಿಶ್ವವಿದ್ಯಾಲಯದಲ್ಲಿ ನಡೆದಿರುವ **"ಸಭೆ ಸಮಾರಂಭಗಳಿಗೆ"** ಸಂಪತ್ತಿ ವಿಭಾಗಕ್ಕೆ ವೋಚರ್ ಸಂಖ್ಯೆ. 93 ದಿನಾಂಕ 3.10.2015 ರಲ್ಲಿ ಚೆಕ್ ಸಂಖ್ಯೆ 866076/3.10.2015 ರಲ್ಲಿ **"ಮೆ॥ ಆರಾಧ್ಯ ನ್ಯೂಸ್ ಫೋಟೋಸ್"** ಗೆ ರೂ.71275.00 ಗಳನ್ನು ಪಾವತಿಸಲಾಗಿದೆ. (ವಿಡಿಯೋ ಚಿತ್ರೀಕರಣ/ಭಾವಚಿತ್ರಗಳ ವ್ಯವಸ್ಥೆಗಾಗಿ") ಲೆಕ್ಕಶೀರ್ಷಿಕೆ:04–17–26–078–111–127–2015–16 ರಡಿಯಲ್ಲಿ ಕ್ರ.ಸಂ. FB-VIII ವಿವಿಧ/ಸಭೆ ಸಮಾರಂಭ/01/2015–16/03.10.2015 ರಲ್ಲಿ ಮಂಜೂರು ಮಾಡಿರುವುದು ಕಂಡುಬಂದಿದೆ. ಇದು ಅಧಿಕೃತ ಸಂಸ್ಥೆಯಾಗಿರುವುದಿಲ್ಲ. ಹಾಗೂ ಟಿನ್ ನಂಬರ್ ಸಹಾ ಇರುವುದಿಲ್ಲ. ಆದ ಕಾರಣ ಈ ಕೂಡಲೇ ವಿವರಣೆ ಒದಗಿಸಲು ಕೋರಿದೆ. ವಿವರ ಒದಗಿಸುವವರೆಗೆ ಸದರಿ ಮೊತ್ತ ರೂ. 71,275/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

ಕ್ರ. ಸಂ.	ಬಿಲ್ ಸಂಖ್ಯೆ ದಿನಾಂಕ	ಸಂಸ್ಥೆ ಹೆಸರು ಮತ್ತು ವಿವರ	ಪೊಬಲಗು (ರೂ.ಗಳಲ್ಲಿ)
1	1784/ 5.5.2015	ವಿದೇಶಿಗರು ಭೇಟಿ ಸಂದರ್ಭದಲ್ಲಿ ಭಾವಚಿತ್ರ ತೆಗೆದಿರುವುದು. "ಮೆ॥ ಆರಾಧ್ಯ ನ್ಯೂಸ್ ಫೋಟೋಸ್"	1325.00
2	1503/ 2.7.2015	50ನೇ ಘಟೀಕೋತ್ಸವ (ವಾರ್ಷಿಕ) ಸಂದರ್ಭದಲ್ಲಿ "ಮೆ॥ ಆರಾಧ್ಯ ನ್ಯೂಸ್ ಫೋಟೋಸ್" ಪ್ರದರ್ಶನ ಡಿ.ವಿ.ಡಿ. ತಯಾರಿಕೆ ಎಲ್.ಇ.ಡಿ.ಟಿ.ವಿ ಬಾಡಿಗೆ ಸೇರಿ	69950.00
	ವಾಣಿಜ್ಯ ತೆರಿಗೆ 12.36 ಪ್ರಕಾರ ರೂ.8809.00 ಗಳನ್ನು ಪಾವತಿಸಿಲ್ಲ. ಇದು ಆದಾಯ ತೆರಿಗೆ ನಿಯಮ 194 (ಸಿ) (ಜೆ) ಉಲ್ಲಂಘನೆಯಾಗಿರುತ್ತದೆ.		
			71275.00

6 (1) ಇನ್ನೂ ಮುಂದೆ ನಿಯಮಾನುಸಾರ ದರ ಪಟ್ಟಿಗಳನ್ನು ಕರೆಯುವಾಗಲೇ ಆದಾಯ ತೆರಿಗೆ ಮತ್ತು ಜಿ.ಎಸ್.ಟಿ ನೋಂದಾಯಿತ ಸಂಸ್ಥೆಗಳಿಂದಲೇ ದರಪಟ್ಟಿಗಳನ್ನು ಕರೆದು ಕ್ರಮವಹಿಸುವಂತೆ ಉಪಕುಲಸಚಿವರು ಸಂಪತ್ತಿ ವಿಭಾಗ, ಸಾರಿಗೆ ವಿಭಾಗ, ರವನೆ ಮತ್ತು ಸ್ವೀಕೃತಿ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ ಬೆಂಗಳೂರು ರವರಿಗೆ ಸೂಚಿಸಲಾಗಿದೆ.

ಆದುದರಿಂದ, ರೂ.71,275.00 ಗಳ ಆಕ್ಷೇಪಣೆಯನ್ನು ಕೈ ಬಿಡಲು ಕೊರಿದೆ.

6(2) ನಗರ/ಕ್ಯಾಂಪಸ್ (Electric charges) ರೂ.78,466/– ವಸೂಲಾತಿಯಲ್ಲಿಡಲಾಗಿದೆ:–

ವಿತ್ತಾಧಿಕಾರಿಗಳ ವಿಭಾಗದ 2015–16 ನೇ ಸಾಲಿನ ವೋಚರ್ ಲೆಕ್ಕಪರಿಶೋಧನೆಯಲ್ಲಿ Electric charges ಗಳನ್ನು ಲೆಕ್ಕಶೀರ್ಷಿಕೆ 00215–4–17–26–129–151–127 ರಡಿಯಲ್ಲಿ 2015–16 ರಲ್ಲಿ ಭರಿಸಿರುವುದು ಸರಿಯಷ್ಟೆ ಒಟ್ಟು ಮೊಬಲಗು ರೂ.2,05,62,810.00 ಗಳನ್ನು ವಿ.ವಿ. (1.4.2015 ರಿಂದ 31.3.2016) ರವರೆಗೆ ಪಾವತಿಸಲಾಗಿದೆ. ಇದರಲ್ಲಿ P.F. Penalty ದಂಡ ಪಾವತಿಸಲಾಗಿದೆ ಎಂದು (01–4–15 ರಿಂದ 31.3.2016 ರವರೆಗೆ) ಮತ್ತು ಪಿ.ಎಫ್ ಮೊಬಲಗು ರೂ.78,466.00 ಗಳನ್ನು ದಂಡ

6(2) 2015–16ಸಾಲಿನಲ್ಲಿ ವಿದ್ಯುಚ್ಛಕ್ತಿ ಬಿಲ್ಲುಗಳ ಪಾವತಿಯಲ್ಲಿ ಪಿ.ಎಫ್ ಪೆನಾಲ್ಟಿ ಸೇರಿ ಪಾವತಿಸಿರುವುದಕ್ಕೆ ಸಂಬಂಧಿಸಿದಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು W6 ಉಪವಿಭಾಗ BESCOM ಬ್ಯಾಟರಾಯನಪುರ ಬೆಂಗಳೂರು ಇವರಿಗೆ ದಂಡ ವಿಧಿಸುವುದನ್ನು ತಪ್ಪಿಸಲು ಅನುವಾಗುವಂತೆ ಟ್ರಾನ್ಸ್‌ಫಾರ್ಮರ್ಸ್ ಕೇಂದ್ರಕ್ಕೆ Capacitor ಅಳವಡಿಸಲಾಗಿದೆಯೇ ಹಾಗೂ ಯಾವ ತಿಂಗಳಿನಿಂದ

ಆಕ್ಷೇಪಣೆಗಳು	ಉತ್ತರಗಳು
ಪಾವತಿಸಲಾಗಿದೆ. ಇದು ವಿವಿಗೆ ನಷ್ಟವಾಗುತ್ತದೆ. Due date ಮುಂಚೆಯೇ Electric bill ನ್ನು ಪಾವತಿಸಿದ್ದರೆ ವಿ.ವಿ.ಕ್ಕೆ ಈ ನಷ್ಟ ಉಂಟಾಗುತ್ತಿರಲಿಲ್ಲ ಎಂದು ಲೆಕ್ಕಪರಿಶೋಧನೆಯ ಅಭಿಪ್ರಾಯವಾಗಿರುತ್ತದೆ ಹಾಗೂ ಸದರಿ ಮೊತ್ತ ರೂ. 78,466.00 ಗಳನ್ನು ವಸೂಲಾತಿಯಲ್ಲಿಡಲಾಗಿದೆ.	P.F. Penalty ವಿಧಿಸುತ್ತಿಲ್ಲ ಎಂಬ ಮಾಹಿತಿಯನ್ನು ಒದಗಿಸುವಂತೆ ಸಂಬಂಧಿಸಿದ ವಿಭಾಗದವರಿಗೆ ಸೂಚಿಸಲಾಗಿದೆ.
ಪರಿನಿಯಮ ರಚಿಸಿಕೊಳ್ಳದೆ ಭರಿಸಿರುವ ವೆಚ್ಚಗಳು.	
7. ಅತಿಥಿ ಉಪನ್ಯಾಸಕರಿಗೆ ಪಾವತಿಸಿರುವ ಸಂಭಾವನೆ ಹಾಗೂ ಖಾಯಂ ಉಪನ್ಯಾಸಕರು ಅತಿಥಿ ಉಪನ್ಯಾಸ ಮಾಡಿ ಸಂಭಾವನೆ ಪಡೆದಿರುವ ಕುರಿತು ವಸೂಲಾತಿ ಒಟ್ಟು ರೂ. 14,94,184.00	
ವಿತ್ತಾಧಿಕಾರಿಗಳ ವಿಭಾಗದ 2015–16 ನೇ ಸಾಲಿನ ವೋಚರ್ ಲೆಕ್ಕಪರಿಶೋಧನೆಯಲ್ಲಿ ವಿತ್ತಾಧಿಕಾರಿಗಳ ಕಛೇರಿಯ ಲೆಕ್ಕಪರಿಶೀಲನೆಯಲ್ಲಿ ವಾಣಿಜ್ಯ ವಿಭಾಗ ಹಾಗೂ ವಾಸ್ತುಶಿಲ್ಪ ವಿಭಾಗದಲ್ಲಿ ಖಾಯಂ ಉಪನ್ಯಾಸಕರು ಅತಿಥಿ ಉಪನ್ಯಾಸ ಮಾಡಿ ಸಂಭಾವನೆ ಪಡೆದಿರುವುದು ಸಂಬಂಧಪಟ್ಟ ವಹಿಗಳ ಪರಿಶೀಲನೆಯಲ್ಲಿ ಕಂಡುಬಂದಿರುತ್ತದೆ. ಬೆಂ.ವಿ.ವಿ. ವಿ.ವಿ. ಆದೇಶ ಸಂ. U.O.No.EST:II E3/GF/Commerce:2015-16, b'lore ದಿನಾಂಕ:26.5.2015 ಪ್ರಕಾರ ಕಾಲಂ (ಸಿ) ಯಲ್ಲಿ ಬೆಂ.ವಿ.ವಿ. ಹೊರತುಪಡಿಸಿ ಹೊರಗಿನ ವಿಶೇಷ ಉಪನ್ಯಾಸಕರುಗಳಿಗೆ ರೂ.1,000.00 ರಂತೆ (ಪ್ರತಿ ಗಂಟೆಗೆ), ತಿಂಗಳಿಗೆ ರೂ.16,000.00 ಗಳನ್ನು ಮೀರದಂತೆ ಪಾವತಿಸಲು ಆದೇಶಿಸಲಾಗಿರುತ್ತದೆ. **ಅನುಬಂಧ–4** ರಲ್ಲಿ ವಿವರಿಸಿದಂತೆ ಖಾಯಂ ಉಪನ್ಯಾಸಕರು ಸದರಿ ಮೇಲ್ಕಂಡ ಆದೇಶವನ್ನು ಉಲ್ಲಂಘಿಸಿರುವುದು ಕಂಡುಬಂದಿದ್ದು ವಿವರ ಕೇಳಲಾಗಿ, ಖಾಯಂ ಉಪನ್ಯಾಸಕರುಗಳಿಗೆ ಪಠ್ಯ ಕ್ರಮ ಪೂರ್ಣಗೊಳಿಸಲು ಸಮಯದ ಅಭಾವವಿರುವುದರಿಂದ, ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಲಾಗಿರುತ್ತದೆ ಎಂದು ವಿವರಣೆ ನೀಡಿರುತ್ತಾರೆ. ಆದರೆ, ಖಾಯಂ ಉಪನ್ಯಾಸಕರು ಅತಿಥಿ ಉಪನ್ಯಾಸ ನೀಡಲು ಹೇಗೆ ಸಮಯ ಹೊಂದಾಣಿಕೆಯಾಗುತ್ತದೆ? ಖಾಯಂ ಉಪನ್ಯಾಸಕರ ಕಾರ್ಯಭಾರ (workload) ಕುರಿತು ವಿವರಗಳನ್ನು ಲೆಕ್ಕಪರಿಶೀಲನೆಗೆ ಒದಗಿಸಲು ಸೂಚಿಸಿದೆ. **ಅನುಬಂಧ–5** ರಲ್ಲಿ ಬೆಂ.ವಿ.ವಿ. ಸಿಂಡಿಕೇಟ್ ನಿರ್ಣಯದ ಆದೇಶ ಸಂ. U.O.No.EST: II E5/MBA/ MFA/ MTA/2008-09, b'lore ದಿನಾಂಕ 20.2.2009 ಮತ್ತು U.O.No.EST: II E5/MBA/D/E.REMN:CBSMS:195:98-99 date:4.5.2000 ರಂತೆ ಸಾರಿಗೆ ಭತ್ಯೆ ಮಾಹೆಯಾನ ರೂ.2,000.00 ರಂತೆ ಹಾಗೂ ರೂ.3,700.00 ಗಳನ್ನು ಕ್ರಮವಾಗಿ ಸಂಯೋಜಕರಿಗೆ ಹಾಗೂ ಶಿಕ್ಷಕೇತರ ಸಿಬ್ಬಂದಿಗಳಿಗೆ ಪಾವತಿ ಮಾಡಿದ್ದು, ಸದರಿ ಆದೇಶವು UGC Guidlines	ವಾಣಿಜ್ಯ ವಿಭಾಗದಲ್ಲಿ self-finance course ಗಳಾದ MCom (FA), MCom (IB) ಮತ್ತು MTTM ಗಳಲ್ಲಿ ಪಾಠ ಪ್ರವಚನ ಮಾಡಲು ಹೊರಗಿನಿಂದ ವಿಶೇಷ ವಿಷಯ ಪರಿಣಿತಿ ಹೊಂದಿರುವ ಉಪನ್ಯಾಸಕರನ್ನು ನೇಮಿಸಿಕೊಂಡಿರುವುದರಿಂದ ಮತ್ತು ವಿಭಾಗದಲ್ಲಿನ ಖಾಯಂ ಉಪನ್ಯಾಸಕರು MCom ವಿಭಾಗದಲ್ಲಿ ಕಾರ್ಯ ನಿರ್ವಹಿಸಲು ನೇಮಿಸಿಕೊಂಡಿರುವುದರಿಂದ ಅವರ ದಿನನಿತ್ಯದ ಕಾರ್ಯಬಾರಕ್ಕಿಂತ ಹೆಚ್ಚು ಅವದಿಗಳನ್ನು Self finance Course ಗಳ ಪಾಠ ಪ್ರವಚನಗಳಿಗೆ ವ್ಯಯಿಸುತ್ತಿರುತ್ತಾರೆ. ಮತ್ತು ಖಾಯಂ ಉಪನ್ಯಾಸಕರ ಕೊರತೆ ಕೂಡಾ ವಿಭಾಗದಲ್ಲಿ ಇದೆ. ಆದ್ದರಿಂದ ಖಾಯಂ ಉಪನ್ಯಾಸಕರು ತಮಗೆ ಇರುವುದಕ್ಕಿಂತ ಹೆಚ್ಚಿನ ಕಾರ್ಯಭಾರವನ್ನು ನಿರ್ವಹಿಸಲು ಮತ್ತು ಉಳಿದಿರುವ ಇತರೆ ವಿಷಯಗಳನ್ನು ಭೋದಿಸಲು ವಿಶೇಷ ಪರಿಣಿತಿ ಹೊಂದಿದ ಅತಿಥಿ ಉಪನ್ಯಾಸಕರನ್ನು ನೇಮಿಸಿರುವುದರಿಂದ ಹೆಚ್ಚಿನ ಸಂಭಾವನೆಯನ್ನು ವಾಣಿಜ್ಯ ವಿಭಾಗದಿಂದ ಪಡೆಯಲಾಗಿದೆ. ಖಾಯಂ ಉಪನ್ಯಾಸಕರು ತಮ್ಮ ಕಾರ್ಯಭಾರದ ಜೊತೆ ಹೆಚ್ಚುವರಿ ಕಾರ್ಯ ನಿರ್ವಹಿಸಿದ Work load ವಿವರ ಸಿಬ್ಬಂದಿ–2 ಶಾಖೆಗೆ ಒದಗಿಸುವಂತೆ ತಿಳಿಸಲಾಗಿದೆ. ಮುಂದಿನ ಲೆಕ್ಕಪರಿಶೋಧನಾ ಸಮಯದಲ್ಲಿ ಲೆಕ್ಕಪರಿಶೋಧನೆಗೆ ಮಾಹಿತಿ ಒದಗಿಸುವಂತೆ ತಿಳಿಸಲಾಗಿದೆ. ಪರಿನಿಯಮ ರಚನೆಯ ಬಗ್ಗೆ ಕ್ರಮ ವಹಿಸಲಾಗುತ್ತಿದೆ. ಈ ಹಣವನ್ನು ಯೂನಿವರ್ಸಿಟಿ ಹಣದಿಂದ ಪಡೆದಿರುವುದಿಲ್ಲ MCom (FA), MCom (IB) ಮತ್ತು MTTM course ಗಳಾದ self-finance ಕೋರ್ಸ್‌ಗಳಾಗಿದ್ದು ಈ ಸ್ನಾತಕೋತ್ತರ ಕೋರ್ಸ್‌ಗಳಿಗೆ ಯುಜಿಸಿಯಿಂದಾಗಲೀ ಅಥವಾ ಸರ್ಕಾರದಿಂದಗಲೀ ಮಂಜೂರಾಗಿರುವುದಿಲ್ಲ ವಿದ್ಯಾರ್ಥಿಗಳಿಂದ ಪಡೆದಂತಹ ಹಣದಿಂದ ಮಂಜೂರಾಗಿರುತ್ತದೆ. ವಿವರಗಳನ್ನು ಸಲ್ಲಿಸಿರುತ್ತೇವೆ.

ಆಕ್ಷೇಪಣೆಗಳು	*ಉತ್ತರಗಳು*
/ಪರಿನಿಯಮಗಳಲ್ಲಿ ರಚಿಸಿಕೊಂಡಿರುವುದಿಲ್ಲ. ಆದ್ದರಿಂದ **ಅನುಬಂಧ–4** ಹಾಗೂ **ಅನುಬಂಧ–5** ರಲ್ಲಿ ವಿವರಿಸಿದಂತೆ ರೂ.14,01,784.00 ಗಳು ಹಾಗೂ ರೂ. 92,400.00 ಗಳನ್ನು ಸಂಬಂಧಪಟ್ಟವರಿಂದ ಈ ಕೂಡಲೇ ವಸೂಲಿಸಿ ವಿವಿ ನಿಧಿಗೆ ಜಮೆ ಮಾಡಿ ವಿವರಗಳನ್ನು ಲೆಕ್ಕಪರಿಶೋಧನೆಗೆ ಸಲ್ಲಿಸಲು ಸೂಚಿಸಿದೆ.	ಪರಿನಿಯಮ ರಚನೆಯ ಬಗ್ಗೆ ಕ್ರಮ ವಹಿಸಲಾಗುತ್ತಿದೆ. ರೂ.14,01,784.00 ಮತ್ತು 92,400.00 ಗಳ ವಸೂಲಾತಿ ಕೈ ಬಿಡಲು ಕೋರಿದೆ.
8. ಕಾನೂನು ವಿಭಾಗದ ಸಿಬ್ಬಂದಿಯವರಿಗೆ ಹೆಚ್ಚುವರಿ ಕಾರ್ಯಗಳಿಗಾಗಿ ವಾಹನ ಭತ್ಯೆ ಮಂಜೂರು ಮಾಡಿರುವ ಮೊತ್ತ ರೂ.67,562.00 ಆಕ್ಷೇಪಣೆಯಲ್ಲಿಡಲಾಗಿದೆ:–	
ವಿತ್ತಾಧಿಕಾರಿಗಳ ವಿಭಾಗದ 2015–16 ನೇ ಸಾಲಿನ ವೋಚರ್ ಲೆಕ್ಕಪರಿಶೋಧನೆಯಲ್ಲಿ ಆಗಸ್ಟ್ ಮಾಹೆ ವೋಚರ್ ಸಂಖ್ಯೆ:438, ದಿನಾಂಕ 14.8.2015 ರನ್ನು ಪರಿಶೀಲಿಸಲಾಗಿ, ಬೆಂ.ವಿ.ವಿ ಆದೇಶ ಸಂಖ್ಯೆ: ಕಾನೂನು ವಿಭಾಗ/ವಾಹನ ಭತ್ಯೆ/2014–15, dated 14.7.2015 ರಲ್ಲಿ ಕಾನೂನು ವಿಭಾಗದ ಸಿಬ್ಬಂದಿಯವರಿಗೆ ಹೈಕೋರ್ಟ್ ಹಾಗೂ ಸಿವಿಲ್ ಕೋರ್ಟ್‌ಗಳಲ್ಲಿ ಕೆಲಸ ಶುರುವಾಗುವ ಮುನ್ನ ವಕೀಲರುಗಳಿಗೆ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ವಿಷಯಗಳಿಗೆ ಹಾಗೂ ವಕೀಲರುಗಳ ನೀಡುವ ಆಕ್ಷೇಪಣೆ/ತಕರಾರುಗಳಿಗೆ ಕೋರ್ಟು ಮುಗಿದ ನಂತರ, ಅವನ್ನು ಸಂಬಂಧಪಟ್ಟ ವಿಭಾಗಗಳಿಂದ ಕಛೇರಿಯ ವೇಳೆಯಲ್ಲಿ ತರಿಸಿ, ಅದನ್ನು ತಯಾರಿ ಮಾಡಿ ನಿಗದಿಯಾದ ವೇಳೆಯೊಳಗೆ ನೀಡುತ್ತಾ ಕಾರ್ಯ ನಿರ್ವಹಿಸಿರುವುದಕ್ಕೆ ಸಂಬಂಧಿಸಿದಂತೆ, ಸಿಂಡಿಕೇಟ್ ಸಭೆಯ ನಿರ್ಣಯ ದಿನಾಂಕ 14.5.2014 & 25.6.2014 ರಂತೆ ಈ ಕೆಳಕಂಡ ಸಿಬ್ಬಂದಿಗಳಿಗೆ ಒಟ್ಟು ರೂ.67,562.00 ಗಳನ್ನು ಚೆಕ್ ಸಂಖ್ಯೆ 865106/14.8.2015 ರಲ್ಲಿ ಪಾವತಿಸಲಾಗಿದೆ. ವಿವರ ಕೆಳಕಂಡಂತಿದೆ. **ಕ್ರ. ಸಂ. / ಹೆಸರು/ಹುದ್ದೆ / ಮೊಬಲಗು (ರೂ.ಗಳಲ್ಲಿ)** 1 / ಶ್ರೀಮತಿ. ರಾಜಸುಲೋಚನ ಅಧೀಕ್ಷಕರು / 18909.00 2 / ಶ್ರೀ ಸೀಬಿಕುಮಾರ್ ಸಹಾಯಕರು / 13759.00 3 / ಶ್ರೀ ರಾಮಕೃಷ್ಣ.ಸಿ ಅನುಚರರು / 11052.00 4 / ಶ್ರೀ ಮೋಜೆಸ್ ಡಿ ಗ್ರೂಪ್ ನೌಕರ / 8961.00 5 / ಶ್ರೀಮತಿ ನಾಗರತ್ನ ಸಿ. ಶೀಘ್ರಲಿಪಿಗಾರರು. / 14881.00 **ಒಟ್ಟು ರೂ. / 67,562.00**	ಕಾನೂನು ವಿಭಾಗದ ಸಿಬ್ಬಂದಿಯ ವರಿಗೆ ಹೈಕೋರ್ಟ್ ಹಾಗೂ ಸಿವಿಲ್ ಕೋರ್ಟ್‌ಗಳಲ್ಲಿ 10.00 ಘಂಟೆಗೆ ಮೊದಲು ಮತ್ತು ಸಂಜೆ 5.00 ಘಂಟೆಯ ನಂತರ ಕೆಲಸ ಶುರುವಾಗುವ ಮುನ್ನ ವಕೀಲರುಗಳಿಗೆ ವಿಶ್ವವಿದ್ಯಾಲ ಯಕ್ಕೆ ಸಂಬಂಧಿಸಿದ ವಿಷಯಗಳಿಗೆ ಹಾಗು ವಕೀಲರುಗಳ ನೀಡುವ ಆಕ್ಷೇಪಣೆ/ ತಕರಾರುಗಳಿಗೆ ಕೋರ್ಟ್ ಮುಗಿದ ನಂತರ ಅವನ್ನು ಸಂಬಂಧಪಟ್ಟ ವಿಭಾಗಗಳಿಂದ ಕಛೇರಿಯ ವೇಳೆಯಲ್ಲಿ ತರಿಸಿ, ಅದನ್ನು ತಯಾರಿ ಮಾಡಿ ನಿಗದಿಯಾದ ವೇಳೆಯೊಳಗೆ ನೀಡುತ್ತಾ ಕಾರ್ಯ ನಿರ್ವಹಿಸಿರುವುದಕ್ಕೆ ಹಾಗೂ ರಜಾದಿನಗಳಂದು ಕಾರ್ಯನಿರ್ವಹಿಸಿರುವ ಪ್ರಯುಕ್ತ ಸಿಬ್ಬಂದಿಗಳಿಗೆ ದಿನಾಂಕ:14.05.2014 2015–16ರ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಪಾವತಿಸಲಾಗಿದೆ **(ಅನುಬಂಧ–98).** ರೂ.67,562.00 ಗಳ ಆಕ್ಷೇಪಣೆ ಕೈ ಬಿಡಲು ಕೋರಿದೆ.

ಆಕ್ಷೇಪಣೆಗಳು	ಉತ್ತರಗಳು
ಕ.ರಾ.ವಿಶ್ವವಿದ್ಯಾಲಯಗಳ ಅಧಿನಿಯಮ 2000 ರಲ್ಲಿನ ಕಲಂ 29(3)(2) ನೇ ಉಪ ಪ್ರಕರಣದಲ್ಲಿ ಯಾವುದೇ ನೌಕರರ ವೇತನ ಶ್ರೇಣಿ ಪರಿಷ್ಕರಿಸುವ/ಯಾವುದೇ ಭತ್ಯೆಗಳನ್ನು/ಉಪಲಬ್ಧಗಳನ್ನು ನೀಡುವ ಅಧಿಕಾರವನ್ನು ಸಿಂಡಿಕೇಟ್‌ಗೆ ಪ್ರಧಾನ ಮಾಡಿರುವುದಾಗಿ ಭಾವಿಸತಕ್ಕದ್ದಲ್ಲ ಎಂದಿರುತ್ತದೆ. ಕಾನೂನು ವಿಭಾಗದಲ್ಲಿನ ಕೆಲಸವು ದೈನಂದಿನ ಕೆಲಸವೇ ಆಗಿದ್ದು ಹೆಚ್ಚುವರಿ ಕೆಲಸವೆಂದು ಒಪ್ಪಲು ಸಾಧ್ಯವಾಗಿರುವುದಿಲ್ಲ. ಸದರಿ ಸಿಬ್ಬಂದಿಗಳಿಗೆ ವಹಿಸಿದ ಕೆಲಸ, ಕೆಲಸದ ಹೊರೆ (workload) ಹಾಗೂ ಕೆಲಸ ನಿರ್ವಹಿಸಿದ ಸಮಯ ಎಷ್ಟು? ಯಾವ ನಿಯಮ ಹಾಗೂ ಪರಿನಿಯಮಗಳಡಿ ಹೆಚ್ಚುವರಿ ಸಂಭಾವನೆಯನ್ನು ಪಾವತಿಸಲು ಅವಕಾಶ ಕಲ್ಪಿಸಲಾಗಿದೆ? ಎಂಬ ವಿವರಗಳನ್ನು ಕೂಡಲೇ ಲೆಕ್ಕಪರಿಶೋಧನೆಗೆ ಯಾವುದೇ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲವಾದ್ದರಿಂದ ರೂ. 67,562.00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.	
9. ಹಣಕಾಸು ವಿಭಾಗದ ಸಿಬ್ಬಂಧಿ ವರ್ಗದವರಿಗೆ ಆಯವ್ಯಯ ಅಂದಾಜು ತಯಾರಿಸಲು ಹೆಚ್ಚುವರಿ ಪಾವತಿ	
ವಿತ್ತಾಧಿಕಾರಿಗಳ ವಿಭಾಗದ 2015–16 ನೇ ಸಾಲಿನ ವೋಚರ್ ಲೆಕ್ಕಪರಿಶೋಧನೆಯಲ್ಲಿ ಜುಲೈ ಮಾಹೆಯ ವೋಚರ್ ಸಂಖ್ಯೆ: 1156(ಎ) ದಿನಾಂಕ:30.7.2015 ನ್ನು ಪರಿಶೀಲಿಸಲಾಗಿ ವಿ.ವಿ.ಆದೇಶ ಸಂಖ್ಯೆ: ಹವಿ(8) ಸಂಭಾವನೆ/2015–16 ಬೆಂ.ದಿನಾಂಕ:30.7.2015 ರಲ್ಲಿ ಹಣಕಾಸು ವಿಭಾಗದ ಅಧಿಕಾರಿ ಸಿಬ್ಬಂದಿ ವರ್ಗದವರಿಗೆ 2014–15ನೇ ಸಾಲಿನ ಹಾಗೂ 2015–16 ನೇ ಸಾಲಿನ ಆಯವ್ಯಯ ಅಂದಾಜು ತಯಾರಿಸಲು ಕಛೇರಿಗೆ ವೇಳೆ ಮೀರಿ ಕೆಲಸ ನಿರ್ವಹಿಸಿರುವುದಕ್ಕೆ ಸಂಬಂಧಿಸಿದಂತೆ ಸಿಂಡಿಕೇಟ್ ಸಭೆಯ ನಿರ್ಣಯ ದಿನಾಂಕ 14.5.2014 ಹಾಗೂ 25.6.2014 ರಂತೆ ರೂ.11,77,266.00 ಗಳನ್ನು ಚೆಕ್ ಸಂಖ್ಯೆ:86486 ದಿನಾಂಕ 30.7.2015 ರಲ್ಲಿ ಪಾವತಿಸಲಾಗಿದೆ. ಬಜೆಟ್ ತಯಾರಿಸುವುದು ಕಛೇರಿ ಸಿಬ್ಬಂದಿ, ಅಧಿಕಾರಿಗಳು ನಿರ್ವಹಿಸುವ ಕಛೇರಿ ಕರ್ತವ್ಯದ ಭಾಗವಾಗಿದ್ದು, ಈ ಸಂಬಂಧ ಅಧಿಕ ಕೆಲಸಗಳಿಗೆಂದು, ವೇತನ ಭತ್ಯೆ ಜೊತೆಗೆ ಹೆಚ್ಚುವರಿ ಭತ್ಯೆ ಮೊತ್ತ ನೀಡಲು ಕರ್ನಾಟಕ ಸರ್ಕಾರಿ ಸೇವಾ ನಿಯಮಗಳಲ್ಲಿ ಅಥವಾ ಪರಿನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಆದಾಗ್ಯೂ **ಅನುಬಂಧ–6** ರಲ್ಲಿ ತಿಳಿಸಿರುವಂತೆ ರೂ.11,77,266.00 ಮೊತ್ತ ಪಾವತಿಸಿರುವುದು ನಿಯಮಬಾಹಿರವಾಗಿರುತ್ತದೆ. ಈ ಬಗ್ಗೆ ಅನುಪಾಲನಾ ವರದಿ ಸಲ್ಲಿಸಿದ್ದು ನೀಡಿರುವ ಉತ್ತರವು ಸಮಂಜಸವಾಗಿಲ್ಲದಿರುವುದರಿಂದ ರೂ. 11,77,266.00	ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ವಿವಿಧ ವಿಭಾಗ/ ಕಛೇರಿಗಳಿಂದ ಖರ್ಚು ವೆಚ್ಚ ಮತ್ತು ಸ್ವೀಕೃತಿ ಮಾಹಿತಿಯನ್ನು ಪಡೆಯಲು ಸಭೆಗಳನ್ನು ನಡೆಸಿ ಮಾಹಿತಿಯನ್ನು ಪಡೆದು ಆ ಮಾಹಿತಿಗಳನ್ನು ಕ್ರೋಢೀಕರಿಸಿ ಸಕಾಲದಲ್ಲಿ ಕರಡು ಆಯವ್ಯಯ ಅಂದಾಜುಗಳನ್ನು ತಯಾರಿಸಿ ಸಕ್ಷಮ ಪ್ರಾಧಿಕಾರಗಳಾದ, ಹಣಕಾಸು ಸಮಿತಿ, ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಸಮಿತಿಗಳಲ್ಲಿ ಅನುಮೋದನೆ ಪಡೆದು ಸರ್ಕಾರಕ್ಕೆ ಸಲ್ಲಿಸಬೇಕಾಗುತ್ತದೆ. ಈ ಕಾರ್ಯಕ್ಕಾಗಿ ಕಛೇರಿ ವೇಳೆಯನ್ನು ಹೊರತುಪಡಿಸಿ ಈ ಕಾರ್ಯಕ್ಕಾಗಿ ನಿಯೋಜಿಸಿರುವ ಹಣಕಾಸು ವಿಭಾಗವು ಸಿಬ್ಬಂದಿಯವರು ಕಛೇರಿ ವೇಳೆಗೆ ಮೊದಲು ಹಾಗೂ ನಂತರದ ಸಮಯದಲ್ಲಿ ಮತ್ತು ಸಾರ್ವತ್ರಿಕ ರಜೆ ದಿನಗಳಲ್ಲಿ ಕಾರ್ಯನಿರ್ವಹಿಸುವುದರಿಂದ ಸಾರಿಗೆ ಭತ್ಯೆ (Conveyance Allowances)ಪಾವತಿಸಲಾಗಿದೆ. ಸರ್ಕಾರದ ಆರ್ಥಿಕ ಇಲಾಖೆಯಲ್ಲಿ ಆಯವ್ಯಯ ಅಂದಾಜು ತಯಾರಿಕೆ ಕಾರ್ಯದಲ್ಲಿ ಭಾಗವಹಿಸುವ ಅಧಿಕಾರಿ ಮತ್ತು ಸಿಬ್ಬಂದಿಗೆ ಸಂಭಾವನೆಯಾಗಿ 5 ತಿಂಗಳ ಅವಧಿಯವರೆಗೆ ಮಾರ್ಚ್ ತಿಂಗಳ ಮೂಲ ವೇತನದ ಸಂಭಾವನೆಯನ್ನು ನೀಡಲಾಗುತ್ತಿದೆ. ಐದು ತಿಂಗಳಿಗಿಂತ ಕಡಿಮೆ ಅವಧಿಗೆ ಕಾರ್ಯನಿರ್ವಹಿಸಿದವರಿಗೆ ಪ್ರತಿ ತಿಂಗಳ ಮೂಲ ವೇತನದ **ಶೇ.20%**ರಷ್ಟು ಸಂಭಾವನೆಯನ್ನು ನೀಡಲಾಗುತ್ತಿದೆ. ಈ ರೀತಿಯಾಗಿ ಬೆಂಗಳೂರು ವಿಶ್ವವಿದ್ಯಾಲಯದ ಹಣಕಾಸು ವಿಭಾಗದ ಸಿಬ್ಬಂದಿಗಳಿಗೂ ಪರಿಗಣಿಸಿ ಸಾರಿಗೆ ಭತ್ಯೆಯನ್ನು

ಆಕ್ಷೇಪಣೆಗಳು	ಉತ್ತರಗಳು
ಗಳನ್ನು ವಸೂಲಾತಿಗೆ ಸೂಚಿಸಿದೆ.	ಪಾವತಿಸಿಲಾಗಿದೆ. ಮೇಲೆ ತಿಳಿಸಿರುವ ವಿಭಾಗಗಳಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿ/ಸಿಬ್ಬಂದಿಗೆ, ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆ, ಕರ್ನಾಟಕ ಲೋಕ ಸೇವಾ ಆಯೋಗ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳಿಗೆ ಪಾವತಿಸುವ ರೀತಿಯಲ್ಲಿ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಉನ್ನತ ಪ್ರಾಧಿಕಾರವಾದ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆದು, ಮೇಲೆ ಸೂಚಿಸಿರುವ ವಿಭಾಗದ ಶಿಕ್ಷಕೇತರ ನೌಕರರಿಗೆ ಹೆಚ್ಚುವರಿ ಕಾರ್ಯ ನಿರ್ವಹಿಸುವುದಕ್ಕೆ (ಕಛೇರಿ ಕೆಲಸದ ವೇಳೆಯ ಮುಂಚಿತವಾಗಿ ಮತ್ತು ನಂತರ ಅವಧಿಯ) ಮತ್ತು ಸಾರ್ವಜನಿಕ ರಜಾ ದಿನಗಳಲ್ಲಿ ನಿರ್ವಹಿಸುವುದಕ್ಕೆ ಸಾರಿಗೆ ಭತ್ಯೆಯನ್ನು ಪಾವತಿಸಲಾಗುತ್ತಿದೆ. ಆದರೆ, ಬೆಂಗಳೂರು ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪರಿಶೋಧನಾ ವರದಿಯಲ್ಲಿ ಈ ರೀತಿ ಪಾವತಿಗೆ ಪರಿನಿಯಮ ರಚಿಸಿಕೊಳ್ಳದಿರುವುದರಿಂದ, ವಸೂಲಾತಿಗೆ ಸೂಚಿಸಿರುತ್ತಾರೆ. ಹಾಗಾಗಿ ಪರಿನಿಯಮವನ್ನು ರಚಿಸಿಕೊಂಡು, ಸರ್ಕಾರದಿಂದ ಅನುಮೋದನೆ ಪಡೆಯುವ ಹಿನ್ನೆಲೆಯಲ್ಲಿ, ಒಂದು ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯು ರಚಿಸಿದ "Statute Governing Payment of Conveyance Allowance to the Non-Teaching staff of Bangalore University for working beyond office hours & during Government Holidays" ವನ್ನು ಸರ್ಕಾರದ ಅನುಮೋದನೆಗೆ ಕಳುಹಿಸುವ ಮುನ್ನ ದಿನಾಂಕ 14.12.2016ರಂದು ನಡೆದ ಹಣಕಾಸು ಸಮಿತಿ ಸಭೆ ಮತ್ತು ದಿನಾಂಕ 17.05.2017ರಂದು ನಡೆದ ಸಿಂಡಿಕೇಟ್ ಸಭೆಗಳ ಮುಂದೆ ಮಂಡಿಸಿ ಅನುಮೋದನೆ ಪಡೆದು, ಕುಲಾಧಿಪತಿಗಳ ಅನುಮೋದನೆಗಾಗಿ ದಿನಾಂಕ 03.06.2017ರ ಪತ್ರದ ಮೂಲಕ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ: ಇಡಿ/203/ಯುಬಿವಿ/2017, ದಿನಾಂಕ 04.07.2017ರಲ್ಲಿ ಕೆಲವು ಅಂಶಗಳ ಬಗ್ಗೆ ಸ್ಪಷ್ಟೀಕರಣ ಕೋರಿರುತ್ತಾರೆ. ಇದರ ಅನುಸಾರವಾಗಿ ಕರಡು ಪರಿನಿಯಮಾವಳಿಯನ್ನು ಮಾರ್ಪಡಿಸಿ, ದಿನಾಂಕ 27.09.2017ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಭೆಯ ಮುಂದೆ ಮಂಡಿಸಲಾಗಿತ್ತು. ಈಗ ಮಾರ್ಪಾಟು ಮಾಡಿದ ಪರಿನಿಯಮಾವಳಿಯನ್ನು ಕುಲಾಧಿಪತಿಗಳ ಅನುಮೋದನೆ ಪಡೆಯಲು ಪತ್ರ ಸಂಖ್ಯೆ:ಎಸ್.ವೈ.ಎನ್.ಎಸ್–

ಆಕ್ಷೇಪಣೆಗಳು	***ಉತ್ತರಗಳು***
	1/ಸ್ಟಾಬ್ಯೂಟ್/2017–18 ದಿನಾಂಕ:10.11.2017 ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಶಿಕ್ಷಣ ಇಲಾಖೆಗೆ (ಉನ್ನತ ಶಿಕ್ಷಣ) ಸಲ್ಲಿಸಲಾಗಿದೆ. **(ಅನುಬಂಧ–99)** (ಪು.ಸಂ.645) ಈ ವಿಚಾರದಲ್ಲಿ ಸರ್ಕಾರ ಕೊಡುವ ತೀರ್ಮಾನದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.
10. ನಿವೃತ್ತಿ ಹೊಂದಿದ ನೌಕರರನ್ನು ಪುನರ್ ನೇಮಕಾತಿ ಮಾಡಿರುವುದು.	
10(1). ವಿತ್ತಾಧಿಕಾರಿಗಳ ವಿಭಾಗದ 2015–16 ನೇ ಸಾಲಿನ ವೋಚರ್ ಲೆಕ್ಕಪರಿಶೋಧನೆಯಲ್ಲಿ ಶ್ರೀ ಹೆಚ್.ವಿಶ್ವನಾಥ್. ಪ್ರಥಮ ದರ್ಜೆ ಭೂ ಮಾಪಕ (ನಿವೃತ್ತ) ಇವರು ದಿನಾಂಕ 31.3.2004 ರಲ್ಲಿ ನಿವೃತ್ತಿ ಹೊಂದಿದ್ದು, ಸದರಿಯವರ ಕಡತವನ್ನು ಪರಿಶೀಲಿಸಲಾಗಿ ಸದರಿಯವರನ್ನು ಭೂ ಮಾಪಕರಾಗಿ ಇವರ ಸೇವೆಯನ್ನು 2004–05 ರಿಂದ ಇಲ್ಲಿಯವರೆಗೂ ವಿಸ್ತರಿಸುತ್ತ ಬಂದಿದ್ದು, ಮಾಹೆಯಾನ ರೂ.25,000.00 ರಂತೆ ಕ್ರೂಢೀಕೃತ ವೇತನವನ್ನು ನೀಡುತ್ತಿರುವುದು ಕಂಡುಬಂದಿರುತ್ತದೆ. ಕರ್ನಾಟಕ ಸರ್ಕಾರದ ಸಚಿವಾಲಯ ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಇವರ ಸುತ್ತೋಲೆ ಅಧಿಕೃತ ಜ್ಞಾಪನ ಸಂಖ್ಯೆ ಸಿ.ಆಸು.ಇ2ಎಸ್‌ಡಿಇ 90 ದಿನಾಂಕ 22.02.1990 ಹಾಗೂ ಅಧಿಕೃತ ಜ್ಞಾಪನ ಸಂಖ್ಯೆ ಸಿ.ಆಸು.ಇ 15 ಎಸ್‌ಡಿಇ 94, ದಿನಾಂಕ 23.12.1994 ರನ್ವಯ ನಿವೃತ್ತಿ ಹೊಂದಿದ ನೌಕರರನ್ನು ಪುನರ್ ನೇಮಕ ಮಾಡುವುದಾಗಲೀ ಅಥವಾ ಸೇವೆ ವಿಸ್ತರಣೆ ಮಾಡಕೂಡದೆಂದು ಹಾಗೂ ಒಪ್ಪಂದದ ಆಧಾರದ ಮೇಲೆ, ಮರುನೇಮಕಗೊಂಡು, ಈಗ ಮುಂದುವರೆಯುತ್ತಿರುವ ಅಧಿಕಾರಿಗಳ ಸೇವೆಯನ್ನು ತೆಗೆದು ಹಾಕುವಂತೆ ಆದೇಶಿಸಲಾಗಿದೆ. ಆದಾಗ್ಯೂ ಭೂ ಮಾಪಕರಾಗಿ ಸದರಿ ನಿವೃತ್ತ ಅಧಿಕಾರಿಯವರನ್ನು ಹೊರಗುತ್ತಿಗೆ ಆಧಾರದ ಮೇಲೆ ಮರು ನೇಮಕಾತಿ ಮಾಡಿರುವುದು ಸರ್ಕಾರಿ ನಿಯಮ, ಆದೇಶ ಉಲ್ಲಂಘನೆಯಾಗಿರುತ್ತದೆ. ಅಲ್ಲದೇ ವಿ.ವಿ. ಅಧಿನಿಯಮಗಳು 2000 ಸೆಕ್ಷನ್ 56(2) ರನ್ವಯ ಕುಲಪತಿಗಳು ತಾತ್ಕಾಲಿವಾಗಿ 1 ವರ್ಷದ ಅವಧಿಗೆ ಮಾತ್ರ ಮಂಜೂರಾದ ಹುದ್ದೆಗೆ ನೇಮಕ ಮಾಡಬಹುದಾಗಿದ್ದು, ಆದರೆ ಸದರಿಯವರನ್ನು 2004–05 ನೇ ಸಾಲಿನಿಂದ ಪ್ರಸ್ತುತ ಅವಧಿಯವರೆಗೆ ಮುಂದುವರೆಸಿಕೊಂಡು ಬಂದಿರುವುದು ದಾಖಲಾತಿಗಳ ಪರಿಶೀಲನೆಯಲ್ಲಿ ಕಂಡುಬಂದಿದ್ದು, 2015–16 ನೇ ಸಾಲಿನಲ್ಲಿ ಪಾವತಿಸಲಾಗಿರುವ ಒಟ್ಟು ರೂ.3,00,000.00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಈ ಬಗ್ಗೆ ವಿವರಣೆಯನ್ನು ಯಾವುದೇ	ನಿರ್ದೇಶಕರು, ಭೂಮಾಪಕ ಇಲಾಖೆಗೆ ನಂ. ಇಎಸ್‌ಟಿ/ಇ2/ಇಎನ್‌ಜಿ8/2000, ದಿನಾಂಕ: 07.02.2011ರಂದು ಪತ್ರ ಬರೆದು ನಿಯೋಜನೆ ಮೇರೆಗೆ ಭೂಮಾಪಕರನ್ನು ಕಳುಹಿಸಲು ಕೋರಲಾಗಿತ್ತು. ಆದರೆ, ಉಪನಿರ್ದೇಶಕರು (ಆಡಳಿತ) ಇವರು ದಿನಾಂಕ: 05.04.2011ರಂದು ಪತ್ರ ಬರೆದು ಇಲಾಖೆಯಲ್ಲಿ ಭೂಮಾಪಕರ ಕೊರತೆ ಇರುವುದರಿಂದ ಕಳುಹಿಸಲು ಸಾಧ್ಯವಿಲ್ಲ ಎಂದು ತಿಳಿಸಿರುತ್ತಾರೆ. ಮಾನ್ಯ ಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾಲಯ ಇವರು ದಿನಾಂಕ: 23.12.2015ರಂದು ಆಯುಕ್ತರು, ಭೂಮಾಪನ ಇಲಾಖೆ ಇವರಿಗೆ ಪತ್ರ ಬರೆದು ನಿಯೋಜನೆ ಮೇರೆಗೆ ಭೂಮಾಪಕರನ್ನು ವಿಶ್ವವಿದ್ಯಾಲಯಕ್ಕೆ ಕಳುಹಿಸಲು ಕೋರಿರುತ್ತಾರೆ. ಬೆಂಗಳೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ದಿನಾಂಕ: 17.05.2017ರಂದು ಸರ್ಕಾರದಿಂದ ನಿಯೋಜನೆ ಮೇಲಾಗಲೀ/ನಿವೃತ್ತ ಭೂಮಾಪಕರನ್ನು ನೇಮಿಸುವಂತೆ ಆದೇಶಿಸಿರುತ್ತದೆ. ಅದರಂತೆ, ಸಿಬ್ಬಂದಿ ವಿಭಾಗ ನಿವೃತ್ತ ಭೂಮಾಪಕರ ಸೇವೆಯನ್ನು ಪಡೆಯಲಾಗಿದೆ. ಆದರೆ ಯಾವುದೇ ಭೂಮಾಪಕರು ಬಂದಿರುವುದಿಲ್ಲ. ತಾಂತ್ರಿಕ ಪರಿಣಿತಿ ಹೊಂದಿರುವ ಶ್ರೀ. ಹೆಚ್. ವಿಶ್ವನಾಥ್, ನಿವೃತ್ತ ಭೂಮಾಪಕರನ್ನು ಮುಂದಿನ ಆದೇಶದವರೆಗೆ ಮುಂದುವರಿಸಲಾಗಿದೆ. ಆದುದರಿಂದ, ಆಕ್ಷೇಪಣೆಯನ್ನು ಕೈ ಬಿಡುವಂತೆ ವಿನಂತಿಸಲಾಗಿದೆ.

ಆಕ್ಷೇಪಣೆಗಳು	ಉತ್ತರಗಳು
ಅನುಸರಣೆಯನ್ನು ನೀಡಿಲ್ಲವಾದ್ದರಿಂದ ರೂ. 3,00,000.00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. **10(2)**. 2015–16 ನೇ ಸಾಲಿನ ವಿತ್ತಾಧಿಕಾರಿಗಳ ವಿಭಾಗದ ವೋಚರ್ ಲೆಕ್ಕಪರಿಶೀಲನೆಯಲ್ಲಿ ಶ್ರೀ.ರಾಜಶೇಖರ ಮೂರ್ತಿ. ಸಹಾಯಕ ಕುಲಸಚಿವರು ಇವರು ದಿನಾಂಕ: 31.3.2014 ರಂದು ನಿವೃತ್ತಿ ಹೊಂದಿದ್ದು, ಸದರಿಯವರ ಕಡತ ಪರಿಶೀಲಿಸಲಾಗಿ, ದಿನಾಂಕ 25.3.2014 ಹಾಗೂ 26.3.2014 ರ ಸಿಂಡಿಕೇಟ್ ನಿರ್ಣಯದಂತೆ, ಸದರಿಯವರನ್ನು ಆಂತರಿಕ ಸಲಹೆಗಾರರಾಗಿ ಇವರ ಸೇವೆಯನ್ನು 2014–15 ರಿಂದ 2016–17 ನೇ ಸಾಲಿನವರೆಗೂ ವಿಸ್ತರಿಸುತ್ತ ಬಂದಿದ್ದು, ಮಾಹೆಯಾನ ರೂ.25000.00 ರಂತೆ ಕ್ರೂಢೀಕೃತ ವೇತನವನ್ನು ನೀಡುತ್ತಿರುವುದು ಕಂಡುಬಂದಿರುತ್ತದೆ. ಕರ್ನಾಟಕ ಸರ್ಕಾರದ ಸಚಿವಾಲಯ ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಇವರ ಸುತ್ತೋಲೆ ಅಧಿಕೃತ ಜ್ಞಾಪನ ಸಂಖ್ಯೆ ಸಿ.ಆಸು.ಇ2ಎಸ್‌ಡಿಇ 90 ದಿನಾಂಕ 22.2.90 ಹಾಗೂ ಅಧಿಕೃತ ಜ್ಞಾಪನ ಸಂಖ್ಯೆ ಸಿ.ಆಸು.ಇ 15 ಎಸ್‌ಡಿಇ 94, ದಿನಾಂಕ 23.12.1994 ರನ್ವಯ ನಿವೃತ್ತಿ ಹೊಂದಿದ ನೌಕರರನ್ನು ಪುನರ್ ನೇಮಕ ಮಾಡುವುದಾಗಲೇ ಅಥವಾ ಸೇವೆ ವಿಸ್ತರಣೆ ಮಾಡಕೂಡದೆಂದು ಹಾಗೂ ಒಪ್ಪಂದದ ಆಧಾರದ ಮೇಲೆ, ಮರುನೇಮಕಗೊಂಡು, ಈಗ ಮುಂದುವರೆಯುತ್ತಿರುವ ಅಧಿಕಾರಿಗಳ ಸೇವೆಯನ್ನು ತೆಗೆದು ಹಾಕುವಂತೆ ಆದೇಶಿಸಲಾಗಿದೆ. ಆದಾಗ್ಯೂ ಆಂತರಿಕ ಸಲಹೆಗಾರರಾಗಿ ಸದರಿ ನಿವೃತ್ತ ಅಧಿಕಾರಿಯವರನ್ನು ಹೊರಗುತ್ತಿಗೆ ಆಧಾರದ ಮೇಲೆ ಮರು ನೇಮಕಾತಿ ಮಾಡಿರುವುದು ಸರ್ಕಾರಿ ನಿಯಮ, ಆದೇಶ ಉಲ್ಲಂಘನೆಯಾಗಿರುತ್ತದೆ. ಅಲ್ಲದೇ ವಿ.ವಿ. ಅಧಿನಿಯಮಗಳು 2000 ಸೆಕ್ಷನ್ 56(2) ರನ್ವಯ ಕುಲಪತಿಗಳು ತಾತ್ಕಾಲಿವಾಗಿ 1 ವರ್ಷದ ಅವಧಿಗೆ ಮಾತ್ರ ಮಂಜೂರಾದ ಹುದ್ದೆಗೆ ನೇಮಕ ಮಾಡಬಹುದಾಗಿದ್ದು, ಸದರೀಯವರು ಯಾವುದೇ ಮಂಜೂರಾದ ಹುದ್ದೆಗೆ ನೇಮಕಾತಿಯಾಗಿರುವುದಿಲ್ಲ ಎಂದು ಹಿಂದಿನ ಸಾಲಿನಲ್ಲಿ ಆಕ್ಷೇಪಿಸಲಾಗಿದ್ದರೂ, ಕಡತದಲ್ಲಿನ ವಿವರಗಳನ್ನು ಪರಿಶೀಲಿಸಿದಾಗ ಮಂಜೂರಾಗಿರುವ ಹುದ್ದೆಗೆದುರಾಗಿ ಅನಿವಾರ್ಯ ಕಾರಣಗಳಿಗಾಗಿ, ತಾತ್ಕಲಿಕ ಅವಧಿಗೆ ನೇಮಿಸಿಕೊಂಡಿರುವುದಾಗಿ ತಿಳಿಸಿರುತ್ತಾರೆ. ಆದರೆ ಸದರಿಯವರನ್ನು ಪ್ರಸ್ತುತ ಅವಧಿಯವರೆಗೆ	**10(2).** ವಿತ್ತಾಧಿಕಾರಿಗಳ ಕಛೇರಿಯಲ್ಲಿ ಸಹಾಯಕ ಕುಲಸಚಿವರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ.ರಾಜಶೇಖರ ಮೂರ್ತಿ ಅವರ ಸೇವೆಯನ್ನು ನಿವೃತ್ತಿ ನಂತರವು ಸಂಚಿತ ವೇತನದ ಆಧಾರದ ಮೇಲೆ ಮುಂದುವರೆಸಿರುವುದರ ಬಗ್ಗೆ ಲೆಕ್ಕಪರಿಶೋಧನೆಯಲ್ಲಿ ಆಕ್ಷೇಪಣೆಯಲ್ಲಿಡಲಾಗಿದೆ. ಈ ವಿಷಯದ ಬಗ್ಗೆ ತಿಳಿಸುವುದೇನೆಂದರೆ ಶ್ರೀ.ರಾಜಶೇಖರ ಮೂರ್ತಿಯವರು 31.03.2014 ರಂದು ಸಹಾಯಕ ಕುಲಸಚಿವರಾಗಿ ನಿವೃತ್ತಿ ಹೊಂದಿದ್ದರು. ವಿಶ್ವವಿದ್ಯಾಲಯದ ಶಿಕ್ಷಕೇತರ ನೌಕರರು ಕೆಲವು ಸೇವಾ ತಾರತಮ್ಯಗಳ ಕಾರಣಗಳಿಂದಾಗಿ ನ್ಯಾಯಾಲಯದ ಮೊರೆ ಹೋಗಿದ್ದರಿಂದ 2016ನೇ ಇಸವಿಯವರೆವಿಗೂ ವಿಶ್ವವಿದ್ಯಾಲಯದಲ್ಲಿ ಯಾವುದೇ ಮುಂಬಡ್ತಿಗಳನ್ನು ನೀಡಿರಲಿಲ್ಲ. ಶ್ರೀ ರಾಜಶೇಖರಮೂರ್ತಿಯವರು ಹಣಕಾಸು ವಿಭಾಗದಲ್ಲಿ ಹೆಚ್ಚು ವರ್ಷಗಳ ಕಾಲ ಕರ್ತವ್ಯ ನಿರ್ವಹಿಸಿದ್ದು ಹಣಕಾಸು ವ್ಯವಹಾರಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಪರಿಣಿತರಾಗಿದ್ದರು ಹಾಗೂ ಆದಾಯ ತೆರಿಗೆ, ಸೇವಾ ತೆರಿಗೆಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತೆ, ನ್ಯಾಯಾಲಯಗಳಲ್ಲಿ ಇರುವ ಪ್ರಕರಣಗಳನ್ನು ಚಾರ್ಟರ್ಡ್ ಅಕೌಂಟೆಂಟ್ ರವರ ಮುಖಾಂತರ ಇತ್ಯರ್ಥಪಡಿಸಿಕೊಳ್ಳಲು ಶ್ರಮವಹಿಸಿ ಕೆಲಸ ನಿರ್ವಹಿಸುತ್ತಿರುವರು. ಮುಂದುವರೆದು ವಿಶ್ವವಿದ್ಯಾಲಯದ ನೌಕರರ ಆದಾಯ ತೆರಿಗೆ ಕಟಾವಿನಿಂದ ಹಿಡಿದು ಅವರುಗಳಿಗೆ ಫಾರಂ 16ಎ ವಿತರಿಸುವವರೆಗೆ ಎಲ್ಲಾ ಸಂಪೂರ್ಣ ಕೆಲಸಗಳನ್ನು ಜವಾಬ್ದಾರಿಯಿಂದ ನಿರ್ವಹಿಸುತ್ತಿರುವರು. ಈ ಎಲ್ಲಾ ಕೆಲಸಗಳನ್ನು ನಿರ್ವಹಿಸಲು ಪರಿಣಿತ ನೌಕರರ ಕೊರತೆಯಿದ್ದುದ್ದರಿಂದ ಅವರ ಸೇವೆಯನ್ನು ಮುಂದುವರೆಸಿಕೊಂಡು ಬರಲಾಗಿದೆ. ಈ ಹಿನ್ನಲೆಯಲ್ಲಿ ಶ್ರೀ.ರಾಜಶೇಖರ್ ಮೂರ್ತಿ ಅವರ ಸೇವೆಯನ್ನು ಸಂಚಿತ ವೇತನದ ಆಧಾರದ ಮೇಲೆ ಕೆಲಸ ನಿರ್ವಸುತೀರುವ ಬಗ್ಗೆ ಇರುವ ಆಕ್ಷೇಪಣೆಯ ಮೊತ್ತ ರೂ.3,00,000.00 ಗಳನ್ನು ಕೈಬಿಡಬೇಕೆಂದು ಕೋರಲಾಗಿದೆ.

ಆಕ್ಷೇಪಣೆಗಳು	ಉತ್ತರಗಳು
ಮುಂದುವರೆಸಿಕೊಂಡು ಬಂದಿರುವುದು ದಾಖಿಲಾತಿಗಳ ಪರಿಶೀಲನೆಯಲ್ಲಿ ಕಂಡುಬಂದಿದ್ದು, 2015–16 ನೇ ಸಾಲಿನವರೆಗೆ ಪಾವತಿಸಲಾಗಿರುವ ಒಟ್ಟು ರೂ.3,00,000.00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. **10(3). ಗ್ರಂಥಾಲಯ ಸಲಹೆಗಾರರ ನೇಮಕಾತಿ.** **ವಿತ್ತಾಧಿಕಾರಿಗಳ ವಿಭಾಗದ** 2015–16 ನೇ ಸಾಲಿನ ವೋಚರ್ ಲೆಕ್ಕಪರಿಶೋಧನೆಯಲ್ಲಿ ವೋಚರ್‌ಗಳನ್ನು ಪರಿಶೀಲಿಸಲಾಗಿ Prof. IRN Gowder ಇವರನ್ನು ವಿಶ್ವವಿದ್ಯಾಲಯದ ಆ.ಸಂ: U.O.No:Dev/D1/VF cum LA/Prof.IRNG/2014-15 Bangalore Date: 11.6.2015 ರಲ್ಲಿ ದಿನಾಂಕ 13.5.2015 ರಿಂದ ಒಂದು ವರ್ಷದ ಅವಧಿಗೆ ಬೆಂ.ವಿ.ವಿ. ಗ್ರಂಥಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರು ಹಾಗೂ ಗ್ರಂಥಾಲಯ ಸಲಹೆಗಾರರಾಗಿ, ನೇಮಿಸಿಕೊಂಡಿದ್ದು, ರೂ.65,000.00 ರಂತೆ ಮಾಸಿಕ ಕ್ರೂಢೀಕೃತ ವೇತನ ನೀಡುತ್ತಿರುವುದು ಕಂಡುಬಂದಿದೆ. ಹಾಗೂ ವಿ.ವಿ.ಆದೇಶ ಸಂ: EST1/E7/Lib consultant/2015 date: 23.11.2015 ರಲ್ಲಿ ದಿನಾಂಕ 1.10.2015 ರಿಂದ 12.5.2016 ರವರೆಗೆ Conveyance Allowance ಎಂದು ರೂ.8,000.00 ರಂತೆ ಪಾವತಿಸಲು ಆದೇಶಿಸಲಾಗಿರುತ್ತದೆ. ಕರ್ನಾಟಕ ಸರ್ಕಾರದ ಸಚಿವಾಲಯ ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಇವರ ಸುತ್ತೋಲೆ ಅಧಿಕೃತ ಜ್ಞಾಪನ ಸಂಖ್ಯೆ ಸಿ.ಆಸು.ಇ2ಎಸ್‌ಡಿಇ 90 ದಿನಾಂಕ 22.2.90 ಹಾಗೂ ಅಧಿಕೃತ ಜ್ಞಾಪನ ಸಂಖ್ಯೆ ಸಿ.ಆಸು.ಇ 15 ಎಸ್‌ಡಿಇ 94, ದಿನಾಂಕ 23.12.1994 ರನ್ವಯ ನಿವೃತ್ತಿ ಹೊಂದಿದ ನೌಕರರನ್ನು ಪುನರ್ ನೇಮಕ ಮಾಡುವುದಾಗಲಿ ಅಥವಾ ಸೇವೆ ವಿಸ್ತರಣೆ ಮಾಡಕೂಡದೆಂದು ಹಾಗೂ ಒಪ್ಪಂದದ ಆಧಾರದ ಮೇಲೆ, ಮರುನೇಮಕಗೊಂಡು, ಈಗ ಮುಂದುವರೆಯುತ್ತಿರುವ ಅಧಿಕಾರಿಗಳ ಸೇವೆಯನ್ನು ತೆಗೆದು ಹಾಕುವಂತೆ ಆದೇಶಿಸಲಾಗಿದ್ದರೂ, ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿ, ಶ್ರೀಯುತರನ್ನು ಹೊರಗುತ್ತಿಗೆ ಆಧಾರದ ಮೇಲೆ ಮರು ನೇಮಕಾತಿ ಮಾಡಿರುವುದು ಆಕ್ಷೇಪಣೀಯ, ಅಲ್ಲದೇ ವಿ.ವಿ. ಅಧಿನಿಯಮಗಳು 2000 ಸೆಕ್ಷನ್ 56(2) ರನ್ವಯ ಕುಲಪತಿಗಳು ತಾತ್ಕಾಲಿವಾಗಿ 1 ವರ್ಷದ ಅವಧಿಗೆ ಮಾತ್ರ ಮಂಜೂರಾದ ಹುದ್ದೆಗೆ ನೇಮಕ ಮಾಡಬಹುದಾಗಿದ್ದು, ಸದರಿಯವರು ಯಾವುದೇ ಮಂಜೂರಾದ ಹುದ್ದೆಗೆ ನೇಮಕಾತಿಯಾಗಿರುವುದಿಲ್ಲ. ನಿಯಮ ಉಲ್ಲಂಘಿಸಿ ಪಾವತಿಸಲಾದ ಒಟ್ಟು ಮೊತ್ತ	**10(3).** ಲೈಬ್ರರಿ ಅಡ್ವೈಜರಿ ಕಮಿಟಿ ಶಿಫಾರಸ್ಸಿನ ಮೇರೆಗೆ ದಿನಾಂಕ: 02–12–2013ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಐ.ಆರ್.ಎನ್. ಗೌಡರ್ ಇವರನ್ನು ಲೈಬ್ರರಿ ವಿಭಾಗಕ್ಕೆ ಆಧುನೀಕರಣ ಕೆಲಸಕ್ಕೆ ವಿಸಿಟಿಂಗ್ ಪ್ರೊಫೆಸರ್ ಆಗಿ ನೇಮಿಸಿಕೊಳ್ಳಲು ಮತ್ತು ಸಂಭಾವನೆಯನ್ನು ಯುಜಿಸಿ ಅನ್ ಅಸೈನ್‌ಡ್ ಗ್ರಾಂಟ್ಸ್‌ನಲ್ಲಿ ಭರಿಸಲು ಅನುಮೋದನೆ ಕೊಟ್ಟಿರುತ್ತದೆ. ದಿನಾಂಕ: 25–04–2014ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಲೈಬ್ರರಿ ರಿವ್ಯೂ ಕಮಿಟಿಯ ಶಿಫಾರಸ್ಸುಗಳನ್ನು ಒಪ್ಪಿ ಹಿಂದಿನ ಆದೇಶವನ್ನು ಭಾಗಶಃ ಮಾರ್ಪಡಿಸಿ ಪ್ರೊ।। ಐ.ಆರ್.ಎನ್ ಗೌಡರ್ ಇವರನ್ನು ವಿಸಿಟಿಂಗ್ ಪ್ರೊಫೆಸರ್ ಹಾಗೂ ಲೈಬ್ರರಿ ಅಡ್ವೈಸರ್ ಆಗಿ ನೇಮಿಸಿ ವಿವಿಯ ಲೈಬ್ರರಿಯಲ್ಲಿ ಸುಧಾರಣೆ ತರಲು ಒಪ್ಪಿಗೆ ನೀಡಿರುತ್ತದೆ. ಅದರಂತೆ, ದಿನಾಂಕ: 12–05–2014ರಂದು ಆದೇಶ ನೀಡಿ ಮಾಸಿಕ ರೂ. 65,000/–ಗಳನ್ನು ನೀಡಿರುತ್ತದೆ. ಆದುದರಿಂದ ಪ್ರೋ।। ಐ.ಆರ್.ಎನ್ ಗೌಡರ್‌ರವರನ್ನು ಸಿಂಡಿಕೇಟ್ ಅನುಮೋದನೆ ಪಡೆದು ನೇಮಕಾತಿ ಮಾಡಿರುವುದರಿಂದಲೂ ಹಾಗೂ ಅವರ ಸಂಭಾವನೆಯನ್ನು UGC's Unassigned Grants ನಲ್ಲಿ ಭರಿಸಿರುವುದರಿಂದಲೂ ಈ ಆಕ್ಷೇಪಣೆಯ ಮೊತ್ತ ರೂ. 7,10,735/–ಗಳನ್ನು ಕೈ ಬಿಡಲು ಕೋರಿದೆ.

ಆಕ್ಷೇಪಣೆಗಳು	*ಉತ್ತರಗಳು*
ರೂ.7,10,735.00 ಆಕ್ಷೇಪಣೆಯಲ್ಲಿಡಲಾಗುವುದು. (ಒಟ್ಟು 3,00,000 + 3,00,000 + 7,10,735 = 13,10,735)	
11. ಉಪಕುಲಪತಿರವರು ಹಾಗೂ ಕುಲಸಚಿವರ ಆಪ್ತ ಶಾಖೆಗೆ ಹೆಚ್ಚುವರಿ ಸಾರಿಗೆ ಭತ್ಯೆ ಮತ್ತು ಸ್ಥಳೀಯ ವಿಚಾರಣಾ ಸಮಿತಿಗೆ ಹೆಚ್ಚುವರಿ ಸಂಭಾವನೆಯನ್ನು ಪಾವತಿಸಿರುವುದು. ವಸೂಲಾತಿ ಒಟ್ಟು ಮೊತ್ತ ರೂ. 5,73,691.00:–	
ವಿತ್ತಾಧಿಕಾರಿಗಳ ವಿಭಾಗದ 2015–16 ನೇ ಸಾಲಿನ ವೋಚರ್ ಲೆಕ್ಕಪರಿಶೋಧನೆಯಲ್ಲಿ ಜುಲೈ ಮಾಹೆಯ ವೋಚರ್ ಸಂಖ್ಯೆ–389 ದಿನಾಂಕ 8.7.2015 ನ್ನು ಪರಿಶೀಲಿಸಿದಾಗ ವಿವಿ ಆದೇಶ ಸಂಖ್ಯೆ:RPS/Conveyancy Allowance/2014-15 ದಿನಾಂಕ 3.7.2015 ರಲ್ಲಿ ಉಪಕುಲಪತಿರವರು ಹಾಗೂ ಕುಲಸಚಿವರ ಆಪ್ತ ಶಾಖೆಯ ಅಧಿಕಾರಿ/ಸಿಬ್ಬಂದಿಯವರು ಕಛೇರಿ ವೇಳೆ ಮೀರಿ ಕೆಲಸ ನಿರ್ವಹಿಸಿರುವುದಕ್ಕೆ ಸಾರಿಗೆ ಭತ್ಯೆಯನ್ನು ಸಿಂಡಿಕೇಟ್ ಸಭೆಯ ನಿರ್ಣಯ ದಿನಾಂಕ 14.5.2014 ಹಾಗೂ 25.6.2014 ರಂತೆ ರೂ.4,05,071.00 ಗಳಲ್ಲಿ ಚೆಕ್ ಸಂಖ್ಯೆ 864131 ದಿನಾಂಕ 8.7.2015 ರಲ್ಲಿ ಪಾವತಿಸಲಾಗಿದೆ. ವಿವರ **ಅನುಬಂಧ–7** ರಲ್ಲಿ ಲಗತ್ತಿಸಿದೆ. ಜುಲೈ ಮಾಹೆಯ ವೋಚರ್ ಸಂಖ್ಯೆ:390 ದಿನಾಂಕ 8.7.2015 ಪರಿಶೀಲಿಸಿದಾಗ ವಿವಿ ಆದೇಶ ಸಂಖ್ಯೆ: Aca-III:CA-Rem/LIC/2015-16 ದಿನಾಂಕ 11.6.2015 ರಲ್ಲಿ ಸ್ಥಳೀಯ ವಿಚಾರಣಾ ಸಮಿತಿಯ ಅಧಿಕಾರಿ/ಸಿಬ್ಬಂದಿಯವರು ಕೆಲಸಗಳನ್ನು (ವರದಿ/ಅಜೆಂಡಾ ಸಿದ್ಧಪಡಿಸುವುದು) ಕಚೇರಿ ವೇಳೆ ಮೀರಿ ಕೆಲಸ ನಿರ್ವಹಿಸಿರುವುದಕ್ಕೆ ಹಾಗೂ ರಜಾ ದಿನಗಳಲ್ಲಿ ಕೆಲಸ ನಿರ್ವಹಿಸಿರುವುದಕ್ಕೆ ಹೆಚ್ಚುವರಿ ಸಂಭಾವನೆಯನ್ನು ರೂ.1,68,669.00 ಗಳನ್ನು ಚೆಕ್ ಸಂಖ್ಯೆ 864131 ದಿನಾಂಕ 8.7.2015 ರಲ್ಲಿ ಪಾವತಿಸಲಾಗಿದೆ ವಿವರ ಅನುಬಂಧ–8 ರಲ್ಲಿ ಲಗತ್ತಿಸಿದೆ. ಸದರಿಯವರು ನಿರ್ವಹಿಸಿರುವ ಕೆಲಸ ಕಛೇರಿ ಕರ್ತವ್ಯದ ಭಾಗವಾಗಿದ್ದು, ಹೆಚ್ಚುವರಿ ಕೆಲಸವೆಂದು ಒಪ್ಪಲು ಸಾಧ್ಯವಾಗಿರುವುದಿಲ್ಲ ಅಧಿಕಾರಿ/ಸಿಬ್ಬಂದಿಗಳಿಗೆ ವಹಿಸಿದ ಕೆಲಸ, ಕೆಲಸದ ಹೊರೆ (Workload) ಹಾಗೂ ಕೆಲಸ ನಿರ್ವಹಿಸಿದ ಸಮಯ ಎಷ್ಟು? ಇದರ ಕುರಿತು ಯಾವುದೇ ಮಾಹಿತಿಯು ಕಡತ ಪರಿಶೀಲನೆಯಲ್ಲಿ ಕಂಡುಬಂದಿರುವುದಿಲ್ಲ. ಯಾವ ನಿಯಮ ಹಾಗೂ ಪರಿನಿಯಮಗಳಡಿ ಹೆಚ್ಚುವರಿ ಭತ್ಯೆಯನ್ನು ಪಾವತಿಸಲು ಅವಕಾಶ ಕಲ್ಪಿಸಲಾಗಿದೆ ಸ್ಪಷ್ಟೀಕರಣ ನೀಡಲು ಯಾವುದೇ ಅನುಸರಣೆಯನ್ನು ನೀಡಿಲ್ಲವಾದ್ದರಿಂದ ರೂ.5,73,691.00	ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕಳೆದ 20 ವರ್ಷಗಳಿಂದೀಚೆಗೆ ಯಾವುದೇ ನೇರ ನೇಮಕಾತಿ ನಡೆದಿರುವುದಿಲ್ಲ. (ಬ್ಯಾಕ್ ಲಾಗ್ ಹುದ್ದೆಗಳು ಹೊರತುಪಡಿಸಿ), ಪ್ರತಿ ವರ್ಷ ಸರಿ ಸುಮಾರು 40 ಜನ ಶಿಕ್ಷಕೇತರ ಸಿಬ್ಬಂದಿ ನಿವೃತ್ತಿಯಾಗುತ್ತಿದ್ದಾರೆ. ವಿಶ್ವವಿದ್ಯಾಲಯ ಸಂಯೋಜಿತ ಕಾಲೇಜುಗಳ ಸಂಖ್ಯೆ ಹಾಗೂ ವಿದ್ಯಾರ್ಥಿ ಸಂಖ್ಯೆ ಪ್ರತಿ ವರ್ಷ ಹೆಚ್ಚುತ್ತಿದೆ. ಪ್ರಸ್ತುತ 662 ಸಂಯೋಜಿತ ಕಾಲೇಜುಗಳಿದ್ದು, 3.50 ಲಕ್ಷಗಳಿಗೂ ಹೆಚ್ಚಿನ ವಿದ್ಯಾರ್ಥಿಗಳಿದ್ದಾರೆ. ಯು.ಜಿ.ಸಿ ನಿಮಾವಳಿಗಳಂತೆ 2002 ರಿಂದ ಸೆಮಿಸ್ಟರ್ ಪದ್ಧತಿ ಜಾರಿಗೊಳಿಸಿರುವುದರಿಂದ ವರ್ಷಕ್ಕೆ ಎರಡು ಬಾರಿ ಪರೀಕ್ಷೆ ನಡೆಸುವುದು ಸೇರಿ ಹಾಗೂ ಇತರೆ ಶೈಕ್ಷಣಿಕ ಚಟುವಟಿಕೆಗಳ ದ್ವಿಗುಣಗೊಂಡಿದೆ. ಇವೆಲ್ಲಾ ಕಾರಣಗಳಿಂದ ವಿಶ್ವವಿದ್ಯಾಲಯದ ಕಾರ್ಯ ಚಟುವಟಿಕೆಗಳು ಹೆಚ್ಚುತ್ತಿದ್ದು, ಹೆಚ್ಚುವರಿ ಕಾರ್ಯಭಾರಕ್ಕನುಗುಣವಾಗಿ ವಿಶ್ವವಿದ್ಯಾಲಯದಲ್ಲಿ ಹೆಚ್ಚುವರಿ ಹುದ್ದೆಗಳ ಸೃಜನೆಯಾಗಿಲ್ಲ. ಹಾಗೂ ಖಾಲಿ ಹುದ್ದೆಗಳಿಗೆ ನೇರ ನೇಮಕಾತಿಗೆ ಸಂಬಂಧಿಸಿದ ವಿಶ್ವವಿದ್ಯಾಲಯದ ಪ್ರಸ್ತಾವನೆಗಳಿಗೆ ಸರ್ಕಾರದಿಂದ ಇನ್ನೂ ಅನುಮತಿ ದೊರೆತಿರುವುದಿಲ್ಲ. ವಿಶ್ವವಿದ್ಯಾಲಯದ ಕಾರ್ಯ ಚಟುವಟಿಕೆಗಳು ದ್ವಿಗುಣಗೊಂಡಿರುವುದರಿಂದ, ಪರೀಕ್ಷಾ ಹಾಗೂ ಇತರೆ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಿಗಧಿತ ಅವಧಿಯಲ್ಲಿ ಹಾಗೂ ಕಾಲಕಾಲಕ್ಕೆ ಅವಶ್ಯಕವಾಗಿ ಪೂರ್ಣಗೊಳಿಸಬೇಕಾಗಿರುವುದರಿಂದ ಮತ್ತು ಹೆಚ್ಚುವರಿ ಕೆಲಸ ಕಾರ್ಯನಿಮಿತ್ತ, ಕುಲಪತಿಗಳು ಸೇರಿದಂತೆ ವಿಶ್ವವಿದ್ಯಾಲಯದ ಶಾಸನಬದ್ಧ ಅಧಿಕಾರಿಗಳು ಸುಮಾರು 5–6 ವರ್ಷಗಳಿಂದ ಕರ್ತವ್ಯದ ಅವಧಿ ಮೀರಿ ಸಾಮಾನ್ಯವಾಗಿ ಎಲ್ಲಾ ದಿನಗಳಲ್ಲೂ ರಾತ್ರಿ 09–09.30 ಗಂಟೆಯವೆರೆಗೂ ಹಾಗೂ ರಜಾದಿನಗಳಂದು ನಿರ್ವಹಿಸುವುದು ಅನಿವಾರ್ಯವಾಗಿದೆ. ಈ ಕಾರಣದಿಂದಾಗಿ ಆಪ್ತ ಕಾರ್ಯಾಲಯಗಳ ಸಿಬ್ಬಂದಿಗಳು ಸಹ ಪ್ರತಿನಿತ್ಯ ಕಛೇರಿ ಅವಧಿ ಮೀರಿ ಹಾಗೂ ರಜಾ ದಿನಗಳಲ್ಲಿ ಕೆಲಸ ನಿರ್ವಹಿಸಿರುವುದಕ್ಕೆ ಹಾಗೂ ಸಿಬ್ಬಂದಿ ಕೊರತೆಯಿಂದಾಗಿ ವಿಶ್ವವಿದ್ಯಾಲಯದ ವಿಭಾಗಗಳಲ್ಲಿ ಮಾಡುವ ಕೆಲವೊಂದು ಜರೂರು ಕೆಲಸ ಕಾರ್ಯಗಳನ್ನು ಆಪ್ತ ಕಾರ್ಯಾಲಯಗಳಿಂದಲೇ ಆಗಿಂದಾಗ್ಗೆ ನಿರ್ವಹಿಸುವ ಒತ್ತಡ ಹಾಗೂ ಅನಿವಾರ್ಯತೆ

ಆಕ್ಷೇಪಣೆಗಳು	***ಉತ್ತರಗಳು***
ಗಳನ್ನು ವಸೂಲಾತಿಗೆ ಸೂಚಿಸಿದೆ. (ಅನುಬಂಧ–7 ರಲ್ಲಿ ರೂ.4,05,021.00 + ಅನುಬಂಧ–8 ರಲ್ಲಿನ ರೂ.1,68,670.00) = ಒಟ್ಟು ರೂ.5,73,691.00	ಉಂಟಾಗಿದೆ. ರಜಾ ದಿನಗಳಲ್ಲಿ ಹಾಗೂ ಕಛೇರಿ ವೇಳೆ ಮೀರಿ ಕಛೇರಿ ಕೆಲಸ ಮಾಡುವ ಸಂದರ್ಭದಲ್ಲಿ ಸಿಬ್ಬಂದಿಗಳು ಹೆಚ್ಚುವರಿಯಾಗಿ ಪ್ರಯಾಣ ಭತ್ಯೆ ಹಾಗೂ ಕಾರ್ಯಭತ್ಯೆಗಳನ್ನು ಭರಿಸ ಬೇಕಾಗುತ್ತಿದೆ. ಅನುಬಂಧ–7ರಲ್ಲಿ ತಿಳಿಸಿರುವ ಈ ವಿಭಾಗಗಳ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಕಛೇರಿ ವೇಳೆ ಮೀರಿ ನಿರ್ವಹಿಸಿರುವ ಕೆಲಸಗಳಿಗೆ ಅನ್ವಯವಾಗುವುದು. ವಿಶ್ವವಿದ್ಯಾಲಯದ ಸರ್ವೋಚ್ಚ ಪ್ರಾಧಿಕಾರವಾದ ಸಿಂಡಿಕೇಟ್ ಸಮರ್ಥಿಸುವ ಸಕಾರಣಗಳಿಂದಾಗಿ ದಿನಾಂಕ:14.05.2014 ಮತ್ತು 25.06.2014 ರಲ್ಲಿ ಸಭೆಗಳಲ್ಲಿ ಈ ಸಾರಿಗೆ ಭತ್ಯೆಗೆ ಅನುಮೋದಿಸಿರುತ್ತದೆ. ಈ ಎರಡು ವಿಭಾಗಗಳಿಗೆ ನೀಡಿರುವ ಸಾರಿಗೆ ಭತ್ಯೆಯನ್ನು ಸಂಪೂರ್ಣವಾಗಿ ಸಮರ್ಥಿಸಬಹುದಾಗಿದ್ದು, ರೂ.405021.00ಗಳ ಆಕ್ಷೇಪಣೆಯನ್ನು ಕೈ ಬಿಡುವಂತೆ ವಿನಂತಿಸಿದೆ. ಅನುಬಂಧ–8 ರಲ್ಲಿ ತಿಳಿಸಿರುವ ರೂ.168670.00 ಸಾರಿಗೆ ಭತ್ಯೆ ಪಾವತಿಗೆ ಸಂಬಂಧಿಸಿದಂತೆ, ವಿ.ವಿ. ಆದೇಶ ಸಂಖ್ಯೆ: Aca-III:CA-Rem/LIC/2015-16 ದಿನಂಕ:11–6–2015ರಲ್ಲಿ ಸ್ಥಳೀಯ ವಿಚಾರಣಾ ಸಮಿತಿಯ ಅಧಿಕಾರಿ/ಸಿಬ್ಬಂದಿಯವರು ಕೆಲಗಳನ್ನು (ವರದಿ/ಅಜೆಂಡಾ ಸಿದ್ಧಪಡಿಸುವುದು) ಕಛೇರಿ ವೇಳೆ ಮೀರಿ ಕೆಲಸ ನಿರ್ವಹಿಸಿರುವುದಕ್ಕೆ ಹಾಗೂ ರಜಾ ದಿನಗಳಲ್ಲಿ ಕೆಲಸ ನಿರ್ವಹಿಸಿರುವುದಕ್ಕೆ ಹೆಚ್ಚುವರಿ ಸಂಭಾವನೆಯನ್ನು ರೂ.1,68,669/–ಗಳನ್ನು ಪಡೆದಿರುವುದಕ್ಕೆ ಆಕ್ಷೇಪಣೆ ಈ ಬಗ್ಗೆ ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ 1547 ಖಾಯಂ ಹುದ್ದೆಗಳು ಇದ್ದು, ಇದರಲ್ಲಿ 754 ಹುದ್ದೆಗಳು ಮಾತ್ರ ತುಂಬಲಾಗಿದ್ದು, ಶೇ50%ರಷ್ಟು ಕೆಲಸಗಾರರ ಕೊರತೆಯಿರುತ್ತದೆ. ವಿಶ್ವವಿದ್ಯಾಲಯದಲ್ಲಿ 4ನೇ ದರ್ಜೆ ಕೆಲಸಗಾರರ ಕರ್ತವ್ಯಕ್ಕೆ, ಹೊರಗುತ್ತಿಗೆ ನೌಕರರೂ ಇದ್ದರೂ ಸಹ ಖಾಯಂ ನೌಕರರ ಮೇಲೆ ಕೆಲಸದ ಹೊರೆ ಹೆಚ್ಚಿಗೆ ಇರುತ್ತದೆ. ಪ್ರತಿ ವರ್ಷ ಸಾಕಷ್ಟು ನೌಕರರು ನಿವೃತ್ತಿ ಹೊಂದುತ್ತಿದ್ದರೂ ಆ ಹುದ್ದೆಗಳಿಗೆ ನೇರ ನೇಮಕಾತಿ ಆಗಿರುವುದಿಲ್ಲ. ಆದರೆ, ಕಾಲೇಜುಗಳ ಸಂಖ್ಯೆ ವರ್ಷ ವರ್ಷಕ್ಕೆ ಹೆಚ್ಚಾಗುತ್ತಿದ್ದು, ಪ್ರಸ್ತುತ ಇರುವ ಸಿಬ್ಬಂಧಿಗಳೇ ಹೆಚ್ಚುವರಿ ಕಾರ್ಯ ನಿರ್ವಹಿಸಬೇಕಾಗಿದೆ. ಹೆಚ್ಚುವರಿ ಕಾರ್ಯಭಾರಕ್ಕೆ ಅನುಗುಣವಾಗಿ ಹುದ್ದೆಗಳ ಸೃಜನೆ ಆಗಿಲ್ಲ. ಹೊರಗುತ್ತಿಗೆ ನೌಕರರು ಇದ್ದರೂ ಸಹ ಖಾಯಂ ನೌಕರರ ಮೇಲೆ ಕೆಲಸದ ಹೊರೆ ಹೆಚ್ಚಿಗೆ ಇರುತ್ತದೆ. ವಿಶ್ವವಿದ್ಯಾಲಯದಲ್ಲಿ

ಆಕ್ಷೇಪಣೆಗಳು	ಉತ್ತರಗಳು
	700ಕ್ಕೂ ಹೆಚ್ಚು ಕಾಲೇಜುಗಳು ಇರುತ್ತವೆ ಇವುಗಳ ಸಂಯೋಜನೆ ಕಾರ್ಯಗಳನ್ನು ನಿಗಧಿತ ಅವಧಿಯಲ್ಲಿ ಮುಗಿಸಬೇಕಿರುತ್ತದೆ. ಪ್ರಸ್ತುತ ವಿದ್ಯಾಕಾರ್ಯ ಶಾಖೆ–3ರಲ್ಲಿ ಕೇವಲ ಇಬ್ಬರು ಗ್ರೂಪ್ ಡಿ ನೌಕರರು ಇದ್ದು ಉಳಿದ 6 ಮಂದಿ ಗ್ರೂಪ್ ಸಿ, ಬಿ, ಅಧಿಕಾರಿಗಳು ಇರುತ್ತಾರೆ. ಇವರೇ ಎಲ್ಲಾ ಕಾರ್ಯಗಳನ್ನು ನಿರ್ವಹಿಸಬೇಕಾಗಿರುತ್ತದೆ. ಸಂಯೋಜನಾ ಅರ್ಜಿಯನ್ನು ಸ್ವೀಕರಿಸುವ ವೇಳೆ ಮತ್ತು ಅದನ್ನು ಪರಿಶೀಲಿಸಿ ರಿಜಿಸ್ಟರ್‌ಗಳಲ್ಲಿ ದಾಖಲಿಸಿ, ಪಟ್ಟಿಯನ್ನು ನಿಗಧಿತ ಸಮಯದೊಳಗೆ ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸುವ ಸಲುವಾಗಿ ಅಜೆಂಡಾ ಮಂಡಿಸಲು ಹೆಚ್ಚುವರಿ ಸಮಯ ಹಿಡಿಯುತ್ತದೆ, ಈ ಹೆಚ್ಚುವರಿ ಸಮಯಕ್ಕಾಗಿ ಕೆಲಸದ ವೇಳೆ ಮತ್ತು ರಜಾ ದಿನಗಳಲ್ಲಿ ಕೆಲಸ ನಿರ್ವಹಿಸುವುದು ಅನಿವಾರ್ಯವಾಗಿರುತ್ತದೆ. ಹಾಗೂ ಸ್ಥಳೀಯ ವಿಚಾರಣಾ ಸಮಿತಿಯ ರಚನೆ ನಂತರ, ಕಾಲೇಜುಗಳ ಅರ್ಜಿಗಳ ಬಂಡಲ್‌ಗಳನ್ನು ವಿಂಗಡಿಸುವುದು ಮತ್ತು 26ಕ್ಕೂ ಹೆಚ್ಚಿನ ಸ್ಥಳೀಯ ವಿಚಾರಣಾ ಸಮಿತಿಗಳಿಗೆ ಹಂಚುವುದು ಪ್ರಯಾಸದ ಮತ್ತು ಹೆಚ್ಚಿನ ಸಮಯ ಬೇಕಿರುತ್ತದೆ ಇವುಗಳನ್ನು ನಿರ್ವಹಿಸಲು ಇರುವ ನೌಕರರು ಕೆಲಸದ ವೇಳೆ ಮತ್ತು ರಜಾ ದಿನಗಳಲ್ಲಿ ಕೆಲಸ ನಿರ್ವಹಿಸುವುದು ಅನಿವಾರ್ಯವಾಗಿರುತ್ತದೆ, ಸಮಿತಿಯ ರಚನೆಯ ಅಧಿಸೂಚನೆ ಮತ್ತು ಅರ್ಜಿಗಳ ಬಂಡಲ್‌ಗಳ ವಿಲೇವಾರಿ, ಸಮಿತಿಯ ಸಭೆಗಳಿಗೆ ಮೆಟೀರಿಯಲ್ ತಯಾರಿಸಿಕೊಡುವುದಕ್ಕೂ ಸಹ ಹೆಚ್ಚುವರಿ ಕೆಲಸ ನಿರ್ವಹಿಸುವುದು ಅನಿವಾರ್ಯವಾಗಿರುತ್ತದೆ. ಮುಂದುವರೆದು, ಸ್ಥಳೀಯ ವಿಚಾರಣಾ ಸಮಿತಿಯ ಹಾಗೂ ಪರಿಷ್ಕೃತ ವರದಿಯ ಮಾದರಿ ಪ್ರತಿ ಕಾಲೇಜಿಗೆ 3 ರಿಂದ 6 ಪುಟಗಳಿಗೆ ಏರಿಕೆಯಾಗಿದ್ದು, ಸುಮಾರು 721 ಕಾಲೇಜುಗಳಿಗೆ ಸರಾಸರಿ ಒಟ್ಟು 4500ಕ್ಕೂ ಹೆಚ್ಚಿನ ಪುಟಗಳ ವರದಿಗಳನ್ನು, ಪ್ರತಿ ವರದಿಯನ್ನು 120 ಪ್ರತಿ ಜೆರಾಕ್ಸ್ ಮಾಡಿ, ವಿದ್ಯಾವಿಷಯಕ ಪರಿಷತ್ತಿಗೆ ಮತ್ತು ಸಿಂಡಿಕೇಟಿಗೆ ನಿಗಧಿತ ಅವಧಿಯೊಳಗೆ ತೆಗೆಯುವುದು ಅತ್ಯಾವಶ್ಯಕತೆ ಇರುತ್ತದೆ. ಅಂದರೆ,(4,500 X 120= 5,40,000) ಪ್ರತಿ ಜೆರಾಕ್ಸ್ ಮಾಡುವುದು, ಅವುಗಳ ಜೋಡಣೆ (ವಾಲ್ಯೂಮ್) ಮಾಡುವುದಕ್ಕೆ, ಇತರೇ ವಿಭಾಗಗಳ ನುರಿತ ಕೆಲಸಗಾರರನ್ನು ನಿಯಮಾನುಸಾರ ಪೂರ್ವಾನುಮೋದನೆಯನ್ನು ಪಡೆದು, ಕಛೇರಿ ಆದೇಶದೊಂದಿಗೆ ಕೆಲಸಕ್ಕೆ ನೇಮಿಸಲಾಗಿರುತ್ತದೆ ಹಾಗೂ ಈ ಅವಧಿಯಲ್ಲಿ ಎಲ್ಲಾ ವರದಿಗಳು ಒಂದೇ ಸಮಯದಲ್ಲಿ ಶಾಖೆಗೆ ತಲುಪುವುದಿಲ್ಲ, ಸಮಾಯಾವಕಾಶವನ್ನು ಹೊಂದಾಣಿಕೆ ಮಾಡಲು ಪ್ರತಿ (Xerox) ತೆಗೆಯುವ

ಆಕ್ಷೇಪಣೆಗಳು	***ಉತ್ತರಗಳು***
	ಕಾರ್ಯವನ್ನು ಕಛೇರಿ ವೇಳೆಗೆ ಮೊದಲು ಮತ್ತು ನಂತರ ಪ್ರತಿಗಳನ್ನು ತೆಗೆಯಲು ಏರ್ಪಾಟು ಮಾಡಿಕೊಂಡು ನೌಕರರು ಕೆಲಸನಿರ್ವಹಿಸಿರುತ್ತಾರೆ. ಈ ಹೆಚ್ಚುವರಿ ಕಾಲಾವಧಿ ಹಾಗೂ ರಜೆ ದಿವಸಗಳಲ್ಲಿ ಕೆಲಸ ನಿರ್ವಹಿಸಿರುವುದಕ್ಕೆ ಹಾಜರಾತಿ ಪುಸ್ತಕವನ್ನು ಇರಿಸಿ, ಹಾಜರಾತಿ ಪಡೆದುಕೊಳ್ಳಲಾಗಿದೆ. ಈ ಹೆಚ್ಚುವರಿ ಕಾಲಾವಧಿ ಹಾಗೂ ರಜೆ ದಿನಗಳಲ್ಲಿ ಕಾರ್ಯನಿರ್ವಹಿಸಲು ಸಿಬ್ಬಂದಿಗಳಿಗೆ ಹೆಚ್ಚುವರಿ ಅವಧಿ ಕಾರ್ಯ ನಿರ್ವಹಿಸುವ ಅಗತ್ಯತೆ ಇರುವುದರಿಂದ ಸಾರಿಗೆಭತ್ಯೆಯನ್ನು ಭರಿಸಬೇಕಾಗುತ್ತದೆ. ಮುಂದುವರೆದು, ನಿಗಧಿತ ಅವಧಿಯೊಳಗೆ ಸರ್ಕಾರಕ್ಕೆ ಸಂಯೋಜನಾ ಪ್ರಸ್ತಾವನೆಗಳನ್ನು ಸಲ್ಲಿಸಲು ಕೆಲಸ ವೇಳೆ ಮೀರಿ ಮತ್ತು ರಜಾದಿನಗಳಲ್ಲಿ ಕೆಲಸ ನಿರ್ವಹಿಸಲಾಗಿದೆ. ಲೆಕ್ಕ ಪರಿಶೋಧಕರು ತಿಳಿಸಿರುವಂತೆ ನೌಕರರು ಕಛೇರಿ ವೇಳೆಯಲ್ಲಿ ನಿರ್ವಹಿಸುವ ಕೆಲಸ ಕರ್ತವ್ಯದ ಭಾಗವಾಗುವುದು, ಆಗಿಂದಾಗ್ಗೆ 10 ಅಥವಾ 20 ಪುಟಗಳುಳ್ಳ ವರದಿಗಳ ಜೆರಾಕ್ಸ್ ಪ್ರತಿಗಳನ್ನು ತೆಗೆಯುವುದು ಕಛೇರಿ ಕರ್ತವ್ಯವೆ ಆದರೆ, ಮೇಲೆ ತಿಳಿಸಿದಂತೆ 4,500 ಪುಟಗಳುಳ್ಳ ವರದಿಗಳನ್ನು ಪ್ರತಿ ಪುಟವನ್ನು 120 ಪುಟಗಳಂತೆ ಸುಮಾರು 5,40,000ಕ್ಕೂ ಹೆಚ್ಚಿನ ಪುಟಗಳ ಜೆರಾಕ್ಸ್ ತೆಗೆದು ಆ ವರದಿಗಳನ್ನು ಬುಕ್ ರೂಪದಲ್ಲಿ ಸಿದ್ದಪಡಿಸಿ (ವಿದ್ಯಾವಿಷಯಕ ಪರಿಷತ್ತು, ಸಿಂಡಿಕೇಟ್, ಸರ್ಕಾರ ಹಾಗೂ ಕಾಲೇಜುಗಳಿಗೆ ಕಳುಹಿಸುವುದಕ್ಕಾಗಿ) ಒದಗಿಸುವುದು, ಕಛೇರಿ ಕಾಲಾವಧಿಯಲ್ಲಿ ಕಾರ್ಯ ನಿರ್ವಹಿಸಿದ ನಂತರವೂ ಹೆಚ್ಚಿನ ಕಾರ್ಯ ನಿರ್ವಹಿಸುವುದು ಅಗತ್ಯವಿದೆ. ದಿನಾಂಕ:14–05–2014 ಮತ್ತು 25–06–2014ರ ಸಿಂಡಿಕೇಟ್ ಸಭೆಗಳಲ್ಲಿ ಸರ್ಕಾರದ ಹಣಕಾಸು ಇಲಾಖೆಯಲ್ಲಿರುವಂತೆ 5 ತಿಂಗಳೂ ಮತ್ತು ಅದಕ್ಕೂ ಹೆಚ್ಚಿನ ದಿನಗಳಿಗೆ ಹೆಚ್ಚುವರಿ ಹಾಗೂ ರಜಾ ದಿನಗಳಲ್ಲಿ ಕಾರ್ಯ ನಿರ್ವಹಿಸುವ ಸಿಬ್ಬಂಧಿಗಳಿಗೆ ಒಂದು ತಿಂಗಳ ಮೂಲ ವೇತನ ಮತ್ತು ಐದು ತಿಂಗಳಿಗೂ ಕಡಿಮೆ ಅವಧಿಯಲ್ಲಿ ನಿರ್ವಹಿಸಿರುವ ಸಿಬ್ಬಂಧಿಗಳಿಗೆ ದಿನಗಳಿಗೆ ಅನುಗುಣವಾಗಿ ಸಂಭಾವನೆಯನ್ನು ಮಂಜೂರು ಮಾಡಲು ತೀರ್ಮಾನಿಸಲಾಗಿರುತ್ತದೆ. ಇದರ ಅನುಸಾರ ಸಂಭಾವನೆಯನ್ನು ಪಡೆಯಲು ಸ್ಥಳೀಯ ವಿಚಾರಣಾ ಸಮಿತಿಯ ಕೆಲಸಗಳಿಗೆ ನೇಮಿಸಲಾದ ಸಿಬ್ಬಂದಿಗಳು ಮತ್ತು ವಿದ್ಯಾಕಾರ್ಯಶಾಖೆ–3ರ ಸಿಬ್ಬಂದಿಗಳು ಅರ್ಹರಾದ ಕಾರಣ ಸಂಖ್ಯೆ: Aca-III:CA-Rem/LIC/2015-16 ದಿನಾಂಕ:11–6–2015ರಲ್ಲಿ ಒಟ್ಟು 24 ನೌಕರರಿಗೆ ಒಟ್ಟು ರೂ.1,68,669/–ಗಳನ್ನು ಮೇಲ್ಕಂಡ ಸಿಂಡಿಕೇಟ್ ನಿರ್ಣಯದಂತೆ

ಆಕ್ಷೇಪಣೆಗಳು	***ಉತ್ತರಗಳು***
	ಮಂಜೂರು ಮಾಡಲಾಗಿದೆ. ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ: ಇಡಿ/203/ಯುಬಿವಿ/2017, ದಿನಾಂಕ 04.07.2017ರಲ್ಲಿ ಕೆಲವು ಅಂಶಗಳ ಬಗ್ಗೆ ಸ್ಪಷ್ಟೀಕರಣ ಕೋರಿರುತ್ತಾರೆ. ಇದರ ಅನುಸಾರವಾಗಿ ಕರಡು ಪರಿನಿಯಮಾವಳಿಯನ್ನು ಮಾರ್ಪಡಿಸಿ, ದಿನಾಂಕ 27.09.2017ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಭೆಯ ಮುಂದೆ ಮಂಡಿಸಲಾಗಿತ್ತು. ಈಗ ಮಾರ್ಪಾಟು ಮಾಡಿದ ಪರಿನಿಯಮಾವಳಿಯನ್ನು ಕುಲಾಧಿಪತಿಗಳ ಅನುಮೋದನೆ ಪಡೆಯಲು ಪತ್ರ ಸಂಖ್ಯೆ:ಎಸ್.ವೈ.ಎನ್.ಎಸ್–1/ಸ್ಪಾಚ್ಯೂಟ್/2017–18 ದಿನಾಂಕ:10.11.2017 ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಶಿಕ್ಷಣ ಇಲಾಖೆಗೆ (ಉನ್ನತ ಶಿಕ್ಷಣ) ಸಲ್ಲಿಸಲಾಗಿದೆ. **(ಅನುಬಂಧ–99)** ಈ ವಿಚಾರದಲ್ಲಿ ಸರ್ಕಾರ ಕೊಡುವ ತೀರ್ಮಾನದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.
12. ಮಂಜೂರಾಗದ ಹುದ್ದೆಗೆದುರಾಗಿ ನೇಮಕಾತಿ ಮಾಡಿ ಪಾವತಿಸಿರುವ ಬಾಬ್ತು:–	
ವಿತ್ತಾಧಿಕಾರಿಗಳ ವಿಭಾಗದ 2015–16 ನೇ ಸಾಲಿನ ವೋಚರ್ ಲೆಕ್ಕಪರಿಶೋಧನೆಯಲ್ಲಿ ವಿತ್ತಾಧಿಕಾರಿಗಳ ಕಚೇರಿಯ ಲೆಕ್ಕಪರಿಶೋಧನೆಯಲ್ಲಿ ವೋಚರ್‌ಗಳನ್ನು ಪರಿಶೀಲಿಸಲಾಗಿ ಶ್ರೀಮತಿ ವೀಣಾ.ಆರ್. ಉಪನಿರ್ದೇಶಕರು, ಕರ್ನಾಟಕ ಸಹಕಾರ ಸಂಘಗಳ ಲೆಕ್ಕಪರಿಶೋಧನೆ ಇಲಾಖೆ ಇವರನ್ನು ಸನ್ಮಾನ್ಯ ಸಭಾಪತಿಯವರು ಕರ್ನಾಟಕ ವಿಧಾನ ಪರಿಷತ್ತು ವಿಧಾನ ಸೌಧ, ಬೆಂ. ಇವರು ತಮ್ಮ ಪತ್ರ ಸಂಖ್ಯೆ ಕವಿಕ/ಸಕ:/4477/2014–15 ದಿನಾಂಕ:18.8.2014 ಪತ್ರದಲ್ಲಿ ಬೆಂ.ವಿ.ವಿ., ಸಿಂಡಿಕೇಟ್ ಅನುಮೋದನೆಯೊಂದಿಗೆ ಬೆಂ.ವಿ.ವಿ. ಯಲ್ಲಿ ಉಪವಿತ್ತಾಧಿಕಾರಿಯಾಗಿ ಅಥವಾ ಯಾವುದಾದರೂ ಸಮಾನಂತರ ಹುದ್ದೆಗೆ ನಿಯೋಜನೆ ಮೇರೆಗೆ ಸ್ಥಳ ನಿಯುಕ್ತಿಗೊಳಿಸಲು ತಿಳಿಸಿರುತ್ತಾರೆ. ದಿನಾಂಕ 8.9.2014 ರಂದು ಜರುಗಿದ 114 ನೇ ಸಿಂಡಿಕೇಟ್ ಸಭೆ, ದಿನಾಂಕ 15.9.2014 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆ ಹಾಗೂ ದಿನಾಂಕ 29.9.2014 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಿರ್ಣಯಗಳನುಸಾರ ಶ್ರೀಮತಿ ವೀಣಾ ಅವರನ್ನು ಉಪ ವಿತ್ತಾಧಿಕಾರಿ ಹುದ್ದೆಗೆ ನಿಯೋಜನೆ ಮೇರೆಗೆ ನೇಮಿಸಿರುತ್ತಾರೆ. ಬೆಂ.ವಿ.ವಿ.,ಯಲ್ಲಿ ಒಟ್ಟು 6 ಉಪಕುಲಸಚಿವರು ಹುದ್ದೆಗಳಿದ್ದು, ಉಪನಿರ್ದೇಶಕರ ಹುದ್ದೆ ಸೃಜಿಸಿರುವುದಿಲ್ಲ.	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ರವರು ಅವರ ಪತ್ರದ ಕ್ರಮಾಂಕ:ಇಡಿ303 ಯು.ಬಿ.ವಿ 2014, ದಿನಾಂಕ: 09.12.2016ರ ಪ್ರಕಾರ ಶ್ರೀಮತಿ ಆರ್.ವೀಣಾ, ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರನ್ನು ಬೆಂಗಳೂರು ವಿಶ್ವವಿದ್ಯಾಲಯದ ಉಪ ವಿತ್ತಾಧಿಕಾರಿ ಹುದ್ದೆಗೆ ನಿಯೋಜನೆ ಮೇಲೆ ನೇಮಿಸಿಕೊಳ್ಳುವಂತೆ ನಿರ್ದೇಶಿಸಿದ್ದಾರೆ. ವಿ.ವಿ ಅದೇಶ ದಿನಾಂಕ:30.03.2017ರಲ್ಲಿ ಶ್ರೀಮತಿ ವೀಣಾ ಆರ್. ರವರನ್ನು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ನಿಯೋಜನೆ ಮೇಲೆ ಬಂದು ದಿನಾಂಕ: 10.12.2014 ರಿಂದ ಕರ್ತವ್ಯ ನಿರ್ವಹಿಸುತ್ತಿದ್ದ ಸದರಿಯನ್ನು ದಿನಾಂಕ:31.03.2017ರ ಅಪರಾಹ್ನ ಬೆಂಗಳೂರು ವಿಶ್ವವಿದ್ಯಾಲಯದ ಸೇವೆಯಿಂದ ಬಿಡುಗಡೆಗೊಳಿಸಿ ಅವರ ಮಾತೃ ಇಲಾಖೆಗೆ ಹಿಂದಿರುಗಿಸಲಾಗಿದೆ. ಶ್ರೀಮತಿ ವೀಣಾ.ಆರ್ ರವರ ಸೇವೆಯನ್ನು ಸರ್ಕಾರದ ನಿರ್ದೇಶನದಂತೆ ಬೆಂಗಳೂರು

ಆಕ್ಷೇಪಣೆಗಳು	***ಉತ್ತರಗಳು***
ಅಲ್ಲದೇ 6 ಕುಲಸಚಿವರ ಹುದ್ದೆಗಳು ಭರ್ತಿಯಾಗಿದ್ದು, ಶ್ರೀಮತಿ ವೀಣಾ ಇವರು ದಿನಾಂಕ:10.12.2014 ರಂದು ಬೆಂ.ವಿ.ವಿಯಲ್ಲಿ ಉಪವಿತ್ತಾಧಿಕಾರಿಗಳ ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದು, ಈ ಅವಧಿಯಲ್ಲಿ 6 ಉಪಕುಲಸಚಿವರು ಹುದ್ದೆಗಳು ಭರ್ತಿಯಾಗಿದ್ದರೂ, ಮಂಜೂರಾಗದ ಹುದ್ದೆಗೆದುರಾಗಿ ನೇಮಕಾತಿ ಮಾಡಿರುವುದನ್ನು ಈ ಹಿಂದಿನ ಸಾಲುಗಳಲ್ಲಿ ಅಂದರೆ 2014–15 ನೇ ಸಾಲಿನಲ್ಲಿ ಆಕ್ಷೇಪಿಸಲಾಗಿದೆ. ಆದರೂ ಸಹ 2015–16 ನೇ ಸಾಲಿನಲ್ಲಿ ಸದರಿಯವರನ್ನು ಬೆಂ.ವಿ.ವಿ.ಯಲ್ಲಿ ಮಂಜೂರಾಗದ ಹುದ್ದೆಗೆದುರಾಗಿ ಮುಂದುವರೆಸಿ ಸದರಿ ಸಾಲಿನಲ್ಲಿ ಈ ಕೆಳಕಂಡಂತೆ ವೇತನ ರೂ.7,02,982.00 ಗಳನ್ನು ಪಾವತಿಸಲಾಗಿದೆ. ಈ ಕುರಿತು ಸ್ಪಷ್ಟೀಕರಣವನ್ನು ನೀಡಲು ಲೆಕ್ಕಪರಿಶೀಲನೆಯಲ್ಲಿ ಯಾವುದೇ ವಿವರಗಳನ್ನು ನೀಡದೇ ಇರುವುದರಿಂದ ರೂ.7,02,982.00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. **ಕ್ರ. ಸಂ. / ಮಾಹೆ / ಮೊತ್ತ (ರೂ.ಗಳಲ್ಲಿ)** 1 / ಮಾರ್ಚ್–2015 / 56,955.00 2 / ಏಪ್ರಿಲ್–2015 / 56,956.00 3 / ಮೇ–2015 / 58,226.00 4 / ಜುನ್–2015 / 58,226.00 5 / ಜೂಲೈ–2015 / 58,226.00 6 / ಆಗಸ್ಟ್–2015 / 58,226.00 7 / ಸೆಪ್ಟೆಂಬರ್–2015 / 58,226.00 8 / ಅಕ್ಟೋಬರ್–2015 / 59,588.00 9 / ನವೆಂಬರ್–2015 / 59,588.00 10 / ಡಿಸೆಂಬರ್–2015 / 59,588.00 11 / ಜನವರಿ–2016 / 59,588.00 12 / ಫೆಬ್ರವರಿ–2016 / 59,588.00 **ಒಟ್ಟು ರೂ. / 7,02,982.00**	ವಿಶ್ವವಿದ್ಯಾಲಯದಲ್ಲಿ ಪಡೆದು ಮಂಜೂರಾದ ಅಭಿವೃದ್ಧಿ ಅಧಿಕಾರಿಯ ಹುದ್ದೆಗೆ ಎದುರಾಗಿ ನೇಮಕಾತಿ ಪರಿಗಣಿಸಿ ಉಪ ವಿತ್ತಾಧಿಕಾರಿಗಳ ಕಾರ್ಯಭಾರವನ್ನು ನಿರ್ವಹಿಸಿರುವುದರಿಂದಲೂ ಹಾಗೂ ಈಗಾಗಲೇ ಅವರನ್ನು ಅವರ ಮಾತೃ ಇಲಾಖೆಗೆ ಹಿಂದಿರುಗಿಸಿ ವಿ.ವಿ ಸೇವೆಯಿಂದ ಬಿಡುಗಡೆಗೊಳಿಸಿರುವುದರಿಂದ ಸದರಿಯವರಿಗೆ ಕಾರ್ಯನಿರ್ವಹಿಸಿದ ಅವಧಿಗೆ ಪಾವತಿಸಿರುವ 2015–16ರಲಿ ಪಾವತಿಸಿರುವ ರೂ.6,46,027.00 ಆಕ್ಷೇಪಣೆಯಲ್ಲಿಟ್ಟಿರುವ ಮತ್ತು 2014–15ರಲ್ಲಿನ ಕಂಡಿಕೆ(12)ರಲ್ಲಿ ಈಗಾಗಲೇ ಮಾರ್ಚ್ 2015 ವೇತನ ರೂ.56,955.00 ಸೇರಿದಂತೆ ರೂ.2,11,286.00 ಆಕ್ಷೇಪಣೆಯಲ್ಲಿಟ್ಟಿದು ಇದರಿಂದ ಪುನರಾವರ್ತನೆ ಮೊತ್ತ ರೂ.56,955.00 ಸೇರಿದಂತೆ ಒಟ್ಟು ಆಕ್ಷೇಪಣೆಯಲ್ಲಿಟ್ಟಿರುವ ಮೊತ್ತ ರೂ.7,02,982.00ಗಳನ್ನು ಅಪರ ನಿರ್ದೇಶಕರಿಗೆ ಪತ್ರ ದಿನಾಂಕ: 30.05.2018ರಲ್ಲಿ ಆಕ್ಷೇಪಣೆ ಮೊತ್ತ ಕೈ ಬಿಡುವಂತೆ ಕೋರಲಾಗಿತ್ತು ಈಗ ಮತ್ತೊಮ್ಮೆ ಆಕ್ಷೇಪಣೆ ಮೊತ್ತ ಕೈ ಬಿಡುವಂತೆ ವಿನಂತಿಸಲಾಗಿದೆ.
13. ಹೆಚ್ಚುವರಿ ದಿನಭತ್ಯೆ ಪಾವತಿಸಿರುವ ಬಾಬ್ತು	
ವಿತ್ತಾಧಿಕಾರಿಗಳ ವಿಭಾಗದ 2015–16 ನೇ ಸಾಲಿನ ವೋಚರ್ ಲೆಕ್ಕಪರಿಶೋಧನೆಯಲ್ಲಿ ಬೆಂಗಳೂರಿಗೆ ಹೊರಸ್ಥಳಗಳಿಂದ ಬಂದು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಉತ್ತರ ಪತ್ರಿಕೆಗಳ ಮೌಲ್ಯಮಾಪನ, ಪ್ರಶ್ನೆ ಪತ್ರಿಕೆಗಳ ಸಿದ್ಧಪಡಿಸುವಿಕೆ ಕಾರ್ಯ, ಪ್ರಾಯೋಗಿಕ ಪರೀಕ್ಷೆ, ವೈವಾ–	ಬೆಂಗಳೂರಿಗೆ ಹೊರಸ್ಥಳಗಳಿಂದ ಬಂದು, ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಉತ್ತರ ಪ್ರತಿಕೆಗಳ ಮೌಲ್ಯಮಾಪನ ಕಾರ್ಯಗಳ ಸಲುವಾಗಿ ಬೆಂಗಳೂರುನಲ್ಲಿ ಕೆಲಸದ ನಿಮಿತ್ತ ವಾಸ್ತವ್ಯ ಮಾಡಿದ ಅಧ್ಯಾಪಕರುಗಳಿಗೆ, ದಿನಭತ್ಯೆ ಮೊಬಲಗು, ದಿನಾಂಕ:12.06.2014ರ Re-

ಆಕ್ಷೇಪಣೆಗಳು	ಉತ್ತರಗಳು
ವೋಸ್ ಪರೀಕ್ಷೆ, ಬಿ.ಓ.ಇ ಮೀಟಿಂಗ್ ಇತ್ಯಾದಿ ಕಾರ್ಯಗಳ ಸಲುವಾಗಿ ಬೆಂಗಳೂರಿನಲ್ಲಿ ಕೆಲಸದ ನಿಮಿತ್ತ ವಾಸ್ತವ್ಯ ಮಾಡಿದ ಅಧ್ಯಾಪಕರುಗಳಿಗೆ 'ದಿನಭತ್ಯೆ' ಮೊಬಲಗೆಂದು ಕೆಲವೊಮ್ಮೆ ರೂ.500.00 ಹಾಗೂ ಕೆಲವೊಮ್ಮೆ ರೂ.600.00ಗಳನ್ನು ಉಲ್ಲೇಖಿತ ಆದೇಶದಲ್ಲಿ ನಿಗಧಿಪಡಿಸಿರುವಂತೆ ಎಂದು ಪಾವತಿಸಿರುವುದು 2015–16 ನೇ ಸಾಲುಗಳ ವೋಚರ್‌ಗಳ ಟೆಸ್ಟ್ ಚೆಕ್ ಪರಿಶೀಲನೆಯ ಸಂದರ್ಭದಲ್ಲಿ ಕಂಡುಬಂದಿದೆ. ಕರ್ನಾಟಕ ನಾಗರಿಕ ಸೇವಾ ನಿಯಮ–1958ರ ನಿಯಮ 451ರಲ್ಲಿ ನಿಗಧಿಪಡಿಸಿರುವ ದರಕ್ಕಿಂತ ಹೆಚ್ಚುವರಿ ದಿನಭತ್ಯೆ ಪಾವತಿಸಿರುವ ವಿವರಗಳನ್ನು ಲಗತ್ತಿಸಿರುವ **ಅನುಬಂಧ–9** ರಲ್ಲಿ ನೀಡಿದೆ. ಬೆಂಗಳೂರು ವಿಶ್ವವಿದ್ಯಾಲಯವು ತನ್ನ ನೌಕರರುಗಳಿಗೆ ಸೇವಾ ನಿಯಮಗಳೆಂದು ಕರ್ನಾಟಕ ಸೇವಾ ನಿಯಮಗಳು–1958 ನ್ನು ಅಳವಡಿಸಿಕೊಂಡಿರುವುದಾಗಿ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮದ ನಿಯಮ 26.1 ಮತ್ತು 2ರಲ್ಲಿ ಸ್ಪಷ್ಟಪಡಿಸಿರುತ್ತದೆ. ಕರ್ನಾಟಕ ನಾಗರಿಕ ಸೇವಾ ನಿಯಮ 1958ರ ನಿಯಮ 451 ಹಾಗೂ ಸರ್ಕಾರದ ಆದೇಶ ಸಂಖ್ಯೆ: ಆಇ3 ಸೇನಿಸೇ 212, ಬೆಂಗಳೂರು ದಿನಾಂಕ: 14.06.2012ರಲ್ಲಿ ರೂ.340.00ಗಳನ್ನು ದಿನಭತ್ಯೆಯೆಂದು ನಿಗದಿಪಡಿಸಿರುತ್ತದೆ. ಈ ರೀತಿ ನಿಗದಿಪಡಿಸಿದ ದಿನಭತ್ಯೆ ದರಕ್ಕಿಂತ ಉಲ್ಲೇಖಿತ ಆದೇಶದ ಪ್ರಕಾರ ಹೆಚ್ಚುವರಿ ದಿನಭತ್ಯೆ ದರವನ್ನು ಪಾವತಿಸಿರುವುದು ಕಂಡುಬಂದಿದ್ದು, ಇದು ಆಕ್ಷೇಪಾರ್ಹವಾಗಿದೆ. ಮುಂದುವರೆದು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಇವರ ಸುತೋಲೆ ಸಂಖ್ಯೆ: ಇ.ಡಿ157/ಯು.ಎಸ್.ಇ.2003/ದಿನಾಂಕ: 26.03.2004ರಲ್ಲಿ ರಾಜ್ಯಗಳ ವಿ.ವಿ.ಗಳ ಸಿಂಡಿಕೇಟ್ ಸಭೆಗಳಲ್ಲಿ ವಿ.ವಿ.ಅಧಿನಿಯಮ ಹಾಗೂ ಜಾರಿಯಲ್ಲಿರುವ ನಿಯಮಗಳ ಚೌಕಟ್ಟಿನೊಳಗೆ ನಿರ್ಣಯ ತೆಗೆದುಕೊಳ್ಳಲು, ಒಂದು ಪಕ್ಷ ನಿಯಮಗಳನ್ನು ಉಲ್ಲಂಘಿಸಿ ನಿರ್ಣಯಗಳನ್ನು ತೆಗೆದುಕೊಂಡರೆ ಸಂಬಂಧಿಸಿದ ಕುಲಪತಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದೆಂದು ತಿಳಿಸಲಾಗಿದೆ. ಆದುದರಿಂದ ನಿಗದಿಪಡಿಸಿದ ದಿನಭತ್ಯೆ ದರಕ್ಕಿಂತ ಹೆಚ್ಚುವರಿ ಮೊಬಲಗನ್ನು ಪಾವತಿಸಿರುವ ಸಂಬಂಧ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಕಾಯ್ದೆ–2000ದ ಪ್ರಕರಣ 43ರಲ್ಲಿ ತಿಳಿಸಿರುವಂತೆ, ಪರಿನಿಯಮಗಳನ್ನು ರಚಿಸಿಕೊಂಡಿದ್ದಲ್ಲಿ ಸದರಿ ಪರಿನಿಯಮದ ಪ್ರತಿಯನ್ನು ಲೆಕ್ಕಪರಿಶೋಧನೆಗೆ	modified Notification ನಲ್ಲಿ ದಿನಾಂಕ:16.08.2011 ರಿಂದ ಜಾರಿಗೆ ಬರುವಂತೆ, Out Station UGC Scale ಅಧ್ಯಾಪಕರುಗಳಿಗೆ ದಿನಭತ್ಯೆ ರೂ.850/– ಗಳನ್ನು ನಿಗಧಿಗೊಳಿಸಿದ್ದು ಲೆಕ್ಕಪರಿಶೋಧನಾ ವರದಿ ಕಂಡಿಕೆ 13 ರಲ್ಲಿ ಆಕ್ಷೇಪಣೆ ಮಾಡಿರುವಂತೆ, ರೂ.600.00, 500.00 ದರದಲ್ಲಿ ದಿನಭತ್ಯೆ (ಅನುಬಂಧ–3) ಪಾವತಿಸಿದ್ದು, ನಿಗಧಿಗೊಳಿಸಿದ ದಿನಭತ್ಯೆ ದರ 850.00 ಕ್ಕಿಂತ ಕಡಿಮೆ ದರದಲ್ಲಿ ಪಾವತಿಸಿದ್ದು, ರೂ.5,85,029 ಗಳ ವಸೂಲಾತಿ ಕ್ಕೆ ಬಿಡಲು ಕೋರಿದೆ. ಬೆಂಗಳೂರು ವಿಶ್ವವಿದ್ಯಾಲಯ ಪರೀಕ್ಷಾ ಕಾರ್ಯಗಳಿಗೆ ಅಧಿಸೂಚನೆ ದಿನಾಂಕ:03.12.2010, 16.08.2011, 07.03.2015 ಮತ್ತು 14.11.2016, ಈಗಾಗಲೇ ಪಾವತಿಸಿರುವ ಮತ್ತು ಚಾಲ್ತಿಯಲ್ಲಿರುವ ಸಂಭಾವನೆ ಮತ್ತು ಭತ್ಯೆಗಳ ದರಗಳಿಗೆ ಅನುಮೋದನೆ ನೀಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ ಪ್ರತಿ ಲಗತ್ತಿಸಿದೆ **(ಅನುಬಂಧ–100).**

ಆಕ್ಷೇಪಣೆಗಳು	***ಉತ್ತರಗಳು***
ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. ಆದ್ದರಿಂದ ಪಾವತಿಸಿರುವ ಹೆಚ್ಚುವರಿ ದಿನಭತ್ಯೆ ಮೊಬಲಗನ್ನು ರೂ.5,85,029.00 ವಸೂಲಾತಿಗೆ ಸೂಚಿಸಿದೆ.	
14. ಎಕ್ಸ್‌ಪರ್ಟ್ ಕಮಿಟಿ ಮೀಟಿಂಗ್ ಬಿ.ಓ.ಎ ಮೀಟಿಂಗ್‌ನಲ್ಲಿ ಭಾಗವಹಿಸಿದ ಅಧಿಕಾರಿಗಳಿಗೆ ಪರಿನಿಯಮಗಳನ್ನು ರಚಿಸಿಕೊಳ್ಳದೆ ಪಾವತಿಸಲಾದ ಪ್ರಯಾಣ ಭತ್ಯೆ, ದಿನಭತ್ಯೆಯ ಆಕ್ಷೇಪಣೆಯ ಮೊತ್ತ ರೂ.1,63,810+15,000=1,78,810	
ಸಹಾಯಕ ವಿತ್ತಾಧಿಕಾರಿಗಳ ವಿಭಾಗದ 2015–16 ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ವಿಶ್ವವಿದ್ಯಾಲಯದ ವಿವಿಧ ದಿನಾಂಕಗಳಂದು ನಡೆಸಲಾದ Expert comitte meeting, BOA meeting ಹಾಗೂ CAS ಮೀಟಿಂಗ್‌ನಲ್ಲಿ ಭಾಗವಹಿಸಿದ ಸದಸ್ಯರುಗಳಿಗೆ ಪಾವತಿಸಲಾದ ಪ್ರಯಾಣ ಭತ್ಯೆ ಹಾಗೂ ಸಿಟ್ಟಿಂಗ್ ಫೀ ಪಾವತಿಗೆ ಸಂಬಂದಿಸಿದ ಎನ್‌ಡಿಸಿ ಬಿಲ್ಲುಗಳನ್ನು ಪರಿಶೀಲಿಸಲಾಗಿ ಎಕ್ಸ್‌ಪರ್ಟ್ ಕಮಿಟಿ ಮೀಟಿಂಗ್ ಸದಸ್ಯರುಗಳಿಗೆ ರೂ.15,000.00 ಸಿಟ್ಟಿಂಗ್ ಫೀ ಪಾವತಿಸಿರುವುದು ಹಾಗೂ BOA meeting ಸದಸ್ಯರಿಗೆ ಪಾವತಿಸಲಾದ ಪ್ರಯಾಣ ಭತ್ಯೆಯ ಬಿಲ್ಲುಗಳಲ್ಲಿ ಪ್ರಯಾಣ ದರ ವ್ಯತ್ಯಾಸವಿರುವುದು ಕಂಡುಬಂದಿದ್ದು ಈ ಬಗ್ಗೆ ರಚಿಸಿಕೊಳ್ಳಲಾದ ಪರಿನಿಯಮಗಳು ಹಾಗೂ ವಾಯುಯಾನದ ಪ್ರಯಾಣಕ್ಕೆ ರಚಿಸಿ ಕೊಂಡಿರುವ ಪರಿನಿಯಮಗಳನ್ನು ಒದಗಿಸಲು ಕೋರಿದ್ದು, ವಿವರಗಳನ್ನು ಲೆಕ್ಕತನಿಖೆಗೆ ನೀಡಿರುವುದಿಲ್ಲ. ಅದ್ದರಿಂದ ಪರಿನಿಯಮಗಳನ್ನು ರಚಿಸಿಕೊಳ್ಳದೆ ಪಾವತಿಸಲಾದ ಪ್ರಯಾಣ ಭತ್ಯೆಯ ಮೊತ್ತ ರೂ.1,63,810.00 ಅನ್ನು ಆಕ್ಷೇಪಣೆಯಲ್ಲಿಡಲಾಗಿದೆ (15000+163810=178810.00) ವಿವರಗಳನ್ನು **ಅನುಬಂಧ–10** ರಲ್ಲಿ ಲಗತ್ತಿಸಿದೆ. ಎಕ್ಸ್‌ಪರ್ಟ್ ಕಮಿಟಿ ಮೀಟಿಂಗ್ ಬಿಒಎ ಮೀಟಿಂಗ್‌ನಲ್ಲಿ ಭಾಗವಹಿಸಿದ ಅಧಿಕಾರಿಗಳಿಗೆ 2015–16 ನೇ ಸಾಲಿನಲ್ಲಿ ಪಾವತಿಸಲಾದ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆಯ ವಿವರಗಳು. **ಕ್ರ. ಸಂ** | **ಪ್ರಯಾಣ ಭತ್ಯೆ ಹಾಗೂ ದಿನಭತ್ಯೆ ಸಲುವಾಗಿ ಎ.ಸಿ. ಬಿಲ್ಲಿನ ಮೂಲಕ ಡ್ರಾ ಮಾಡಿದ ಮೊತ್ತ** | **ಪಾವತಿಸಲಾದ ಮೊತ್ತ** | **ಎಸ್‌ಬಿ ಖಾತೆಗೆ ಜಮೆ ಮಾಡಿದ ಮೊತ್ತ** 1 | 4,00,000.00 | 3,65,652.00 | 34,648.00	ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ದಿನಾಂಕಗಳಂದು ನಡೆಸಲಾದ Expert comitte meeting, BOA meeting ಹಾಗೂ CAS ಮೀಟಿಂಗ್‌ನಲ್ಲಿ ಭಾಗವಹಿಸಿದ ಸದಸ್ಯರುಗಳಿಗೆ ಪಾವತಿಸಲಾದ ಪ್ರಯಾಣ ಭತ್ಯೆ ಹಾಗೂ ಸಿಟ್ಟಿಂಗ್ ಫೀಗಳನ್ನು ಸಿಂಡಿಕೇಟ್ ಅನುಮೋದನೆಯ ಅನ್ವಯ ಪಾವತಿಸಲಾಗುತ್ತಿದೆ. ನೀಡಲಾಗುತ್ತಿರುವ ದರಗಳಿಗೆ ಪರಿನಿಯಮಗಳನ್ನು ರಚಿಸಿಕೊಳ್ಳುವ ಬಗ್ಗೆ ಪ್ರಸ್ತಾವನೆ ಸಲ್ಲಿಸುವ ಕ್ರಮವಹಿಸಲಾಗುತ್ತಿದೆ. ಕೆಸಿಎಸ್‌ಆರ್ ನಿಯಮದ ಅನ್ವಯ ಮೂಲ ವೇತನ ಪರಿಗಣಿಸಿ ವಿಮಾನಯಾನದ ಸೌಲಭ್ಯವನ್ನು ನೀಡಲಾಗಿದೆ (**ಅನುಬಂಧ–101)** (ಪು.ಸಂ.671)**.**
15. ಪರೀಕ್ಷಾ ಮೌಲ್ಯಮಾಪಕರುಗಳಿಗೆ ಒಂದೇ ದಿನದಲ್ಲಿ 2 ಬಾರಿ ಸಂಭಾವನೆ ಪಾವತಿಸಿರುವ ಮೊತ್ತ ರೂ.7920.00 ವಸೂಲಾತಿ	
ಸಹಾಯಕ ವಿತ್ತಾಧಿಕಾರಿಗಳ ವಿಭಾಗದ 2015–16 ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಪರೀಕ್ಷಾ ಕಾರ್ಯಗಳ ಸಲುವಾಗಿ ಕರ್ತವ್ಯ ನಿರ್ವಹಿಸಿದ ಪ್ರೊಫೆಸರ್‌ಗಳಿಗೆ ಒಂದೇ ದಿನದಲ್ಲಿ 2 ಬಾರಿ ಸಂಭಾವನೆ ಪಾವತಿಸಿರುವ ವಿವರಣೆ	

ಆಕ್ಷೇಪಣೆಗಳು	ಉತ್ತರಗಳು

ಕೋರಿದ್ದು, ವಿವರಣೆ ನೀಡಿರುವುದಿಲ್ಲ. ಈ ರೀತಿ 2 ಬಾರಿ ಸಂಭಾವನೆ ಪಾವತಿಸಿರುವ ಮೊತ್ತ ರೂ.7920.00 ಅನ್ನು ಸಂಬಂಧಪಟ್ಟವರಿಂದ ವಸೂಲಾತಿ ಮಾಡಿ ವಿಶ್ವವಿದ್ಯಾಲಯದ ನಿಧಿಗೆ ಜಮೆ ಮಾಡುವುದು.

ಕ್ರ. ಸಂ.	ಮೌಲ್ಯಮಾಪಕರ ವಿವರ	ಕರ್ತವ್ಯ ನಿರ್ವಹಿಸಿದ ದಿನಾಂಕಗಳ ವಿವರ	ವೋಚರ್ ಸಂ/ದಿನಾಂಕ	ಪಡೆದ ಸಂಭಾವನೆ
1	ಶ್ರೀನಿವಾಸ ಮೂರ್ತಿ (Dept of ISC) (ಚಿಕ್ಕಬಳ್ಳಾಪುರ) (ಬಿ.ಇ. ಪ್ರಾಕ್ಟಿಕಲ್ ಪರೀಕ್ಷಾ ಕಾರ್ಯಕ್ಕಾಗಿ)	ಜೂನ್ 11, 12, 13 ರವರೆಗೆ	5035/13.6.2015	1260.00
		ಜೂನ್ 11 ರಿಂದ 13 ರವರೆಗೆ	11876/5.8.2015	1260.00 1500.00
				2760.00
2	ಕೆ.ಪಿ ಶೋಭಾ (Dept of electrical Eng) (ಬಿ.ಇ. ಪ್ರಾಕ್ಟಿಕಲ್ ಪರೀಕ್ಷಾ ಕಾರ್ಯಕ್ಕಾಗಿ)	1.7.2015 ರಿಂದ 8.7.2015 ರವರೆಗೆ	11442/28.7.2015	900.00 CA 1050.00 L 120.00
				2070.00
		7.7.2015	12530/14.8.2015	R 420.00
		14.8.2015	12918/27.8.2015	R 250.00
		ಅದೇ ದಿನ ಅಂದರೆ 14.8.2015 ರಿಂದ	14890/10.10.2015	R 400.00
3	ಕೆಂಪೇಗೌಡ.ಎಂ (Dept BE I & II sem V & BEII & IV Sem V)	20, 21 ರಿಂದ 23.7.2015 ರವರೆಗೆ	10767/25.7.2015	R 1290.00 CA 1000.00 L 80.00
				2370.00
		23.7.2015 ರಿಂದ 28.7.2015 ರವರೆಗೆ	11670/30.7.2015	R 4340.00
			ಒಟ್ಟು ರೂ.	**13870.00**

ಈ ಮೇಲಿನ ವಿವರದಲ್ಲಿ ತೋರಿರುವಂತೆ ಒಂದೆ ದಿನದಲ್ಲಿನ ಪರೀಕ್ಷಾ ಮೌಲ್ಯಮಾಪನ ಕಾರ್ಯಕ್ಕಾಗಿ ಎರಡೆರಡು ಸಾರಿ ಪಾವತಿಗಳನ್ನು ಮಾಡಿರುವುದು ಪರಿಶೀಲನೆಯಲ್ಲಿ ಕಂಡುಬಂದಿರುತ್ತದೆ. (ಅಂದರೆ ರೂ.7920.00 ಗಳನ್ನು ಹೆಚ್ಚಿಗೆ ಪಾವತಿಸಿರುವುದು) ಸದರಿ ಪಾವತಿಗಳನ್ನು ಯಾವ ಆಧಾರದ ಮೇಲೆ ಒಂದೇ ದಿನದ ಯಾವ ಯಾವ

1.ಈ ಕಂಡಿಕೆಯ ಕ್ರಮ ಸಂಖ್ಯೆ(1)ರಲ್ಲಿ ಶ್ರೀ ಶ್ರೀನಿವಾಸಮೂರ್ತಿ ಇವರಿಗೆ ಎರಡು ಬಾರಿ ಪಾವತಿಸಲಾಗಿದೆ ಎಂದು ರೂ. 1260=00ಗಳನ್ನು ವಸೂಲಾತಿಗೆ ಸೂಚಿಸಲಾಗಿದೆ. ಬಿ.ಆರ್. ಸಂಖ್ಯೆ 5035/13.06.2015ರಲ್ಲಿ ಪಾವತಿಸಲಾದ ರೂ. 1260=00ಗಳನ್ನು ಬಿ.ಆರ್. ಸಂಖ್ಯೆ 26021/31.03.2017ರಲ್ಲಿ ಒಟ್ಟು ಪಾವತಿಸಬೇಕಾದ ರೂ. 1800=00 ಗಳಲ್ಲಿ ರೂ. 1260=00ಗಳನ್ನು ಕಡಿತ ಮಾಡಿ ರೂ. 540=00ಗಳನ್ನು ಪಾವತಿಸಲಾಗಿದೆ. (ಬಿಲ್‌ನ ಜೆರಾಕ್ಸ್ ಪ್ರತಿಯನ್ನು ಲಗತ್ತಿಸಿದೆ) (ಅನುಬಂಧ–102) ಆದುದರಿಂದ ರೂ. 1260=00ಗಳನ್ನು ವಸೂಲಾತಿಯಿಂದ ಕೈಬಿಡುವಂತೆ ವಿನಂತಿಸಲಾಗಿದೆ.

2. ಈ ಕಂಡಿಕೆಯ ಕ್ರಮ ಸಂಖ್ಯೆ (2) ಶ್ರೀಮತಿ ಕೆ.ಪಿ. ಶೋಭಾ ಇವರಿಗೆ ರೂ.900=00 ಗಳನ್ನು ದಿನಾಂಕ 01.07.2015, 02.07.2015 ಮತ್ತು 08.07.2015 ಮೂರು ದಿನಗಳಿಗೆ ಮಾತ್ರ ರೂ. 900=00ಗಳನ್ನು ಪಾವತಿಸಲಾಗಿದೆ. ಈ ಪಾವತಿಯಲ್ಲಿ ದಿನಾಂಕ 08.07.2015ರ ಸಂಭಾವನೆ ಸೇರಿರುವುದಿಲ್ಲ.

ಬಿ.ಆರ್. ಸಂಖ್ಯೆ 12530/14.08.2015ರಲ್ಲಿ ದಿನಾಂಕ 07.07.2015ಕ್ಕೆ ರೂ.420=00 ಗಳನ್ನು ಪಾವತಿಸಲಾಗಿದೆ. ಈ ಮೊತ್ತವನ್ನು ಎರಡನೆ ಬಾರಿ ಪಾವತಿಸಿರುವುದಿಲ್ಲ. ಆದುದರಿಂದ ರೂ. 420=00ಗಳನ್ನು ವಸೂಲಾತಿಯಿಂದ ಕೈಬಿಡುವಂತೆ ವಿನಂತಿಸಲಾಗಿದೆ. (ಬಿಲ್‌ನ ಜೆರಾಕ್ಸ್ ಪ್ರತಿಯನ್ನು ಲಗತ್ತಿಸಿದೆ.)

ಶ್ರೀಮತಿ ಶೋಭಾ ಇವರಿಗೆ ದಿನಾಂಕ 14.08.2015ರಂದು ಬಿ.ಆರ್. ಸಂಖ್ಯೆ 12918/27.08.2015, ರೂ. 250=00ಗಳನ್ನು Viva-Voce ಪರೀಕ್ಷೆ ಮತ್ತು ಥೀಸಿಸ್ ಮೌಲ್ಯಮಾಪನಕ್ಕೆ ಪಾವತಿಸಲಾಗಿದೆ. ಯಾವುದೇ ದಿನಭತ್ಯೆ ನೀಡಿರುವುದಿಲ್ಲ. ಶ್ರೀಮತಿ ಕೆ.ಪಿ. ಶೋಭಾ ಇವರಿಗೆ 11.08.2015 ರಂದು ಎಂದು ಆಕ್ಷೇಪಣೆಯಲ್ಲಿ ತಿಳಿಸುವ ಬದಲು 14.08.2015 ಎಂದು ತಿಳಿಸಲಾಗಿದ್ದು, ಬಿಲ್ ಪಾಸ್ ಮಾಡಿರುವ ಬಿಲ್ ರಿಜಿಸ್ಟರ್ ಎಕ್ಸ್‌ಟ್ರಾಕ್ಟ್‌ನಲ್ಲಿ ನಮೂದಿಸಿರುವಂತೆ ಬಿ.ಆರ್. ಸಂಖ್ಯೆ 14890/10.10.2015 ರಲ್ಲಿ ದಿನಾಂಕ 11.08.2015ರ ದಿನಕ್ಕೆ ಎಂ.ಇ. ಮೊದಲನೇ ಸೆಮಿಸ್ಟರ್ ಮೌಲ್ಯಮಾಪನಕ್ಕೆ ಸಂಭಾವನೆ ರೂ. 250=00ಗಳನ್ನು ಪಾವತಿಸಲಾಗಿದೆ. ದಿನಭತ್ಯೆ ನೀಡಿರುವುದಿಲ್ಲ. ಆದುದರಿಂದ ರೂ. 400=00 ಗಳನ್ನು ವಸೂಲಾತಿಯಿಂದ ಕೈಬಿಡುವಂತೆ ವಿನಂತಿಸಲಾಗಿದೆ.

3. ಶ್ರೀ ಕೆಂಪೇಗೌಡ ಇವರಿಂದ ದಿನಾಂಕ 23.07.2015ರಂದು ಪಾವತಿಸಲಾದ ಸಂಭಾವನೆ ರೂ. 360=00 ಮತ್ತು ದಿನಭತ್ಯೆ 500=00ಗಳ ಒಟ್ಟು ಮೊತ್ತ ರೂ. 860=00 ಮುರುಗಡೆ

ಆಕ್ಷೇಪಣೆಗಳು	***ಉತ್ತರಗಳು***
ಕಾರ್ಯಗಳಿಗಾಗಿ ಮಾಡಲಾಗಿದೆ ಎಂಬ ಬಗ್ಗೆ ಸೂಕ್ತ ಸಮಜಾಯಿಷಿ ನೀಡಿರುವುದಿಲ್ಲ. ಆದ್ದರಿಂದ ಹೆಚ್ಚುವರಿ ಪಾವತಿಯ ಮೊತ್ತ ರೂ.7920.00 ಗಳನ್ನು ವಸೂಲಾತಿಗಾಗಿ ಸೂಚಿಸಿದೆ.	ವಿವರ ಒದಗಿಸಲಾಗುವುದು. ಮೇಲೆ ತಿಳಿಸಿರುವ ವಿವರದಂತೆ ಎರಡು ಬಾರಿ ಸಂಭಾವನೆ ಪಾವತಿಸಿರುವ ಮೊತ್ತ ಎಂದು ವಸೂಲಾತಿಗೆ ಸೂಚಿಸಲಾಗಿರುವ ಮೊತ್ತ ರೂ. 920=00ಗಳಲ್ಲಿ ಒಟ್ಟು 2790=00ಗಳು ಮಾತ್ರ ವಸೂಲಾತಿ ವ್ಯಾಪ್ತಿಗೆ ಒಳಪಟ್ಟಿದ್ದು, ಈ ಮೊತ್ತದಲ್ಲಿ ರೂ. 670=00ಗಳಿಗೆ ವಿವರಣೆ ನೀಡಿರುವುದರಿಂದ ಕೈಬಿಡಬೇಕಾಗುವುದು ಉಳಿದ ರೂ. 2120=00 ಗಳಲ್ಲಿ ರೂ. 1260=00 ಬಿಲ್‌ನಲ್ಲಿ ಮುರುಗಡೆಯಾಗಿದ್ದು, ಉಳಿದ ರೂ. 860=00 ವಸೂಲಾತಿ ಮಾಡಿ, ವಿವರ ಒದಗಿಸುವಂತೆ ತಿಳಿಸಲಾಗಿದೆ. ಆದುದರಿಂದ ಒಟ್ಟು ವಸೂಲಾತಿ ಮೊತ್ತ ರೂ. 7920=00ಗಳಲ್ಲಿ ರೂ. 2790=00 ಕಳೆದು, ವ್ಯತ್ಯಾಸದ ಮೊತ್ತ ರೂ. 5130=00 ಗಳನ್ನು ಮತ್ತು ರೂ. 1930=00ಗಳ ಒಟ್ಟು ಮೊತ್ತ ರೂ. 7920=00ಗಳನ್ನು ವಸೂಲಾತಿಯಿಂದ ಕೈಬಿಡುವಂತೆ ವಿನಂತಿಸಲಾಗಿದೆ.
16. **ಪರೀಕ್ಷಾ ಕಾರ್ಯ ಮೌಲ್ಯಮಾಪನ, ದತ್ತಾಂಶಗಳ ಸಂಯೋಜನೆ, ಹಾಗೂ ಇತರೆ ಸೇವೆಗಳ ಸಲುವಾಗಿ ಪಾವತಿಸಲಾದ ಸಂಭಾವನೆಯ ಮೊತ್ತ ರೂ.58642321.00 ವಸೂಲಾತಿ ಹಾಗೂ ಡಿ.ಎ ಪಾವತಿಯ ಮೊತ್ತ ರೂ.16472536.00 (ಆಕ್ಷೇಪಣೆ)**	
ಸಹಾಯಕ ವಿತ್ತಾಧಿಕಾರಿಗಳ ವಿಭಾಗದ 2015–16 ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಪರೀಕ್ಷಾ ಕಾರ್ಯಗಳು, ಮೌಲ್ಯಮಾಪನ ಹಾಗೂ ದತ್ತಾಂಶಗಳ ಸಂಯೋಜನೆಯ ಸಲುವಾಗಿ ಪ್ರಾಧ್ಯಾಪಕರುಗಳಿಗೆ ಸಂಭಾವನೆ ಪಾವತಿಸಲಾಗಿದೆ. ಕರ್ನಾಟಕ ಶಿಕ್ಷಣ ಕಾಯ್ದೆ 1983 ರ ಸೆಕ್ಷನ್ 28 ರ ಅನ್ವಯ ಪರೀಕ್ಷಾ ಕಾರ್ಯವು ಅಧ್ಯಾಪಕರುಗಳ ಶೈಕ್ಷಣಿಕ ಕಾರ್ಯದ ಒಂದು ಭಾಗವಾಗಿದ್ದು, ಸಂಭಾವನೆ ಪಡೆಯಲು ಅವಕಾಶವಿರುವುದಿಲ್ಲ ಆದರೆ ಪರೀಕ್ಷಾ ಕಾರ್ಯದ ಸಲುವಾಗಿ ಬೇರೆ ಸ್ಥಳಕ್ಕೆ ನಿಯೋಜನೆಗೊಂಡ ಪ್ರಾಧ್ಯಾಪಕರುಗಳಿಗೆ ಕೆ.ಸಿ.ಎಸ್.ಆರ್ ನಿಯಮಗಳ ಅನ್ವಯ ಪ್ರಯಾಣಭತ್ಯೆ, ದಿನಭತ್ಯೆ ಪಾವತಿಸಲು ಅವಕಾಶವಿರುತ್ತದೆ. ಪರೀಕ್ಷಾ ಕಾರ್ಯವು ಶೈಕ್ಷಣಿಕ ಕಾರ್ಯದ ಒಂದು ಅವಿಭಾಜ್ಯ ಅಂಗವಾಗಿದ್ದು, ಈ ಅಂಶಗಳನ್ನು ಗಣನೆಯಲ್ಲಿ ಇರಿಸಿಕೊಂಡು ಪ್ರಾಧ್ಯಾಪಕರುಗಳಿಗೆ ಅತ್ಯುತ್ತಮವಾದ ಯುಜಿಸಿ ವೇತನ ಶ್ರೇಣಿಗಳನ್ನು ನೀಡಲಾಗುತ್ತಿದೆ. ಅಲ್ಲದೇ ದಿನಾಂಕ: 11.02.2002 ರ ಕರ್ನಾಟಕ ಸರ್ಕಾರದ ಆದೇಶದ ಅನ್ವಯ ಯುಜಿಸಿ ಹಾಗೂ ಎಐಸಿಟಿಇ ವೇತನ ಶ್ರೇಣಿ ಪಡೆಯುವ ಪ್ರಾಧ್ಯಾಪಕರುಗಳು ಸಂಭಾವನೆ ಪಡೆಯಲು ಅವಕಾಶವಿರುವುದಿಲ್ಲ. ದಿನಭತ್ಯೆ ಪಾವತಿಗೆ ಸಂಬಂಧಿಸಿದಂತೆ ಕೆಸಿಎಸ್‌ಆರ್ ನಿಯಮಗಳ ಅನ್ವಯ ಮಾತ್ರ ದಿನಭತ್ಯೆ ಪಾವತಿಸಲು ಅವಕಾಶವಿರುತ್ತದೆ. ಆದರೆ ಪ್ರಾಧ್ಯಾಪಕರುಗಳಿಗೆ ಪ್ರತಿದಿನ ರೂ. 600/–, ಹಾಗೂ 800/–ರಂತೆ ದಿನಭತ್ಯೆ	ಪರೀಕ್ಷಾ ಕಾರ್ಯಗಳಿಗೆ ಸಂಭಾವನೆ/ ಗೌರವಧನ/ಭತ್ಯೆ ಗಳು/ಶುಲ್ಕಗಳು ಇತ್ಯಾದಿ ನೀಡಲು Examination ordinance 2011ಕ್ಕೆ ಬೆಂಗಳೂರು ವಿಶ್ವವಿದ್ಯಾಲಯದ ಅಧಿಸೂಚನೆಯನ್ನು ಸಂಖ್ಯೆ SYN-SI-ORD-2011, ದಿನಾಂಕ 29.03.2011ಕ್ಕೆ ಮಾನ್ಯ ಕುಲಾಧಿಪತಿಗಳಿಂದ ಪತ್ರ ಸಂಖ್ಯೆ GS6BUM-2011, ದಿನಾಂಕ 06.04.2011ರಲ್ಲಿ ಅನುಮೋದನೆ ಪಡೆಯಲಾಗಿದೆ. ಅದೇ ನಿಯಮದಲ್ಲಿ ಪರೀಕ್ಷಾ ಕಾರ್ಯಗಳಿಗೆ ಕೊಡಬೇಕಾದ ದರಗಳ ಬಗ್ಗೆ ವಿಶ್ವವಿದ್ಯಾಲಯದ ಪ್ರಾಧಿಕಾರವು ಕಾಲ ಕಾಲಕ್ಕೆ ನಿಗಧಿಪಡಿಸುವ ದರಗಳೆಂದು ತಿಳಿಸಿರುತ್ತದೆ. "XXIX Examination Honorarium/ Allowances" ರ ಜೆರಾಕ್ಸ್ ಪ್ರತಿಯನ್ನು ಲಗತ್ತಿಸಲಾಗಿದೆ. ಈ ನಿಯಮದಂತೆ ಪರೀಕ್ಷಾ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವ ಯುಜಿಸಿ ವೇತನ ಪಡೆಯುವ ಬೋಧಕರು ಸೇರಿದಂತೆ ಎಲ್ಲಾ ಮೌಲ್ಯಮಾಪಕರಿಗೆ ಸಂಭಾವನೆ ಮತ್ತು ಭತ್ಯೆಗಳನ್ನು ಪಾವತಿ ಮಾಡಿರುತ್ತದೆ. ವಿವಿಧ ಪರೀಕ್ಷಾ ಕಾರ್ಯಗಳಿಗೆ ನೀಡಬೇಕಾದ ದರಗಳನ್ನು ಕುಲಸಚಿವರು ಮೌಲ್ಯಮಾಪನರವರ ಪತ್ರ ಸಂಖ್ಯೆ EX-REVN-Allow/REMN/MISC-

ಆಕ್ಷೇಪಣೆಗಳು	***ಉತ್ತರಗಳು***
ಪಾವತಿಸಿರುವುದು ಕೆಸಿಎಸ್ಆರ್ ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ದಿನಭತ್ಯೆ ಪಾವತಿಯ ಸಲುವಾಗಿ ರಚಿಸಿಕೊಂಡಿರುವ ಪರಿನಿಯಮಗಳನ್ನು ಕೋರಿದ್ದು ಯಾವುದೇ ವಿವರಣೆ ನೀಡಿರುವುದಿಲ್ಲ. 2015–16 ನೇ ಸಾಲಿನಲ್ಲಿ ಪರೀಕ್ಷಾ ಕಾರ್ಯಗಳ ಸಂಭಾವನೆ, ರಿಪ್ರೆಶ್‌ಮೆಂಟ್, ಡಿಎ, ಸಿಎ, ಸಲುವಾಗಿ ಪಾವತಿಸಿರುವ ಮೊತ್ತ ರೂ. 8,72,04,014.00 ಕರ್ನಾಟಕ ಶಿಕ್ಷಣ ಕಾಯ್ದೆ 1983 ರ ಸೆಕ್ಷನ್ 28ರ ಅನ್ವಯ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಪರೀಕ್ಷಾ ಕಾರ್ಯಗಳ ಸಂಭಾವನೆ ಸಲುವಾಗಿ ಪಾವತಿಸಲಾದ ಮೊತ್ತ ರೂ.5,86,42,321.00 ವಸೂಲಾತಿಗಾಗಿ ಸೂಚಿಸಿ ಹಾಗೂ ಕೆ.ಸಿ.ಎಸ್.ಆರ್ ನಿಯಮಗಳಿಗಿಂತ, ಹೆಚ್ಚುವರಿಯಾಗಿ ದಿನಭತ್ಯೆ ಪಾವತಿಸಿರುವುದರಿಂದ ಈ ಬಗ್ಗೆ ರಚಿಸಿಕೊಳ್ಳಲಾದ ಪರಿನಿಯಮಗಳು ಹಾಗೂ ವಿವರಣೆ ನೀಡುವವರೆವಿಗೆ ರೂ.1,64,72,536.00 ಆಕ್ಷೇಪಣೆಯಲ್ಲಿಡಲಾಗಿದೆ.	2011-12 ದಿನಾಂಕ 16.08.2011 ರ ಅಧಿಸೂಚನೆಯಲ್ಲಿ ಸಿಂಡಿಕೇಟ್ ಅನುಮೋದನೆ ಪಡೆದು ನಿಗಧಿಪಡಿಸಲಾಗಿದೆ. ಅಲ್ಲದೆ, ಈ ದರಗಳನ್ನು Examination ordinance 2011ರಲ್ಲಿ ತಿಳಿಸಿರುವಂತೆ ದರಗಳ ಪರಿಷ್ಕರಣೆಯನ್ನು ಬೆಂಗಳೂರು ವಿಶ್ವವಿದ್ಯಾಲಯದ ಅತ್ಯುನ್ನತ ಪ್ರಾಧಿಕಾರವಾದ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆದು, ಪಾವತಿಸಿರುವುದರಿಂದ ಪರೀಕ್ಷಾ ಕಾರ್ಯಗಳ ಸಂಭಾವನೆ ಸಲುವಾಗಿ ಪಾವತಿಸಿರುವ ರೂ. **5,86,42,321=00**ಗಳನ್ನು ವಸೂಲಾತಿಯಿಂದ ಹಾಗೂ ಕೆ.ಸಿ.ಎಸ್.ಆರ್. ನಿಯಮಗಳಿಗಿಂತ ಹೆಚ್ಚುವರಿಯಾಗಿ ದಿನಭತ್ಯೆ ಪಾವತಿಸಿರುವುದಕ್ಕೆ ಪರಿನಿಯಮ ಹಾಗೂ ವಿವರಣೆ ನೀಡುವವರೆಗೆ ಆಕ್ಷೇಪಣೆಯಲ್ಲಿಟ್ಟಿರುವ ರೂ. **1,64,72,536=00**ಗಳನ್ನು ಮಾನ್ಯ ಕುಲಾಧಿಪತಿಗಳ Examination ordinance 2011ಕ್ಕೆ ಅನುಮೋದನೆ ಪಡೆದು, ಅದರನ್ವಯ ಪಾವತಿಸಿರುವುದನ್ನು ಪರಿಗಣಿಸಿ, ಕೈಬಿಡಲು ವಿನಂತಿಸಲಾಗಿದೆ. ಬೆಂಗಳೂರು ವಿಶ್ವವಿದ್ಯಾಲಯ ಪರೀಕ್ಷಾ ಕಾರ್ಯಗಳಿಗೆ ನೀಡಿರುವ ಸಂಭಾವನೆ ಮತ್ತು ಭತ್ಯೆಗಳ ದರಗಳಿಗೆ ಸರ್ಕಾರದ ಅನುಮೊದನೆ ಪಡೆಯಲು, ದಿನಾಂಕ:06.02.2018ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ರವರಿಗೆ ಪತ್ರ ಬರೆಯಲಾಗಿದೆ. ಪ್ರತಿಯನ್ನು ಲಗತ್ತಿಸಿದೆ **(ಅನುಬಂಧ–106)** (ಪು.ಸಂ.694 ರಿಂದ 710)**.**
17. ಅತಿಥಿ ಉಪನ್ಯಾಸಕರ ನೇಮಕಾತಿ ವಿವರ: ರೂ.21,35,489.00 (ಆಕ್ಷೇಪಣೆ)	
1. ಸರ್ಕಾರಿ ಆದೇಶ ಸಂ.ED 37 UNE 2009 ದಿನಾಂಕ 24.12.2009 ರಲ್ಲಿ ಕಾರ್ಯದರ್ಶಿ, ವಿ.ವಿ. ಧನ ಸಹಾಯ ಆಯೋಗ ನವದೆಹಲಿ ಇವರ ಪತ್ರ ಸಂಖ್ಯೆ: ಈ–3–1/2009 (PS) ದಿನಾಂಕ 23.9.2009 ರಲ್ಲಿ ಯುಜಿಸಿ ವೇತನ ಶ್ರೇಣಿಯಲ್ಲಿ ವೇತನ ಪಡೆಯುವ ವಿಶ್ವವಿದ್ಯಾಲಯ/ ಕಾಲೇಜುಗಳಲ್ಲಿನ ಪೂರ್ಣಕಾಲಿಕ ಭೋಧಕರು ಶೈಕ್ಷಣಿಕ ವರ್ಷದಲ್ಲಿ ಬೋಧನೆ ಮಾಡಬೇಕಿರುವ ಅವಧಿಯನ್ನು ಮಾರ್ಗಸೂಚಿಯಲ್ಲಿನ ಕ್ರ.ಸಂ.15.1 ರಿಂದ 15.2 ರಲ್ಲಿ ನಿಗಧಿಪಡಿಸಿದ್ದು, 2006–07 ರಿಂದ 2015–16ನೇ ಸಾಲಿನ **ಭೂಗೋಳ ಶಾಸ್ತ್ರ ವಿಭಾಗ,** ಬೆಂಗಳೂರು ವಿಶ್ವವಿದ್ಯಾಲಯ, ಅತಿಥಿ	ಅತಿಥಿ ಉಪನ್ಯಾಸಕರ ನೇಮಕಾತಿ ಪ್ರಸ್ತಾವನೆಯನ್ನು ಸಂಬಂಧಪಟ್ಟ ವಿಭಾಗದವರು ಆಯಾ ವಿಭಾಗದಲ್ಲಿರುವ ಕಾರ್ಯಭಾರ (Work load) ಮಾಹಿತಿಯನ್ನು ಕೊಟ್ಟ ನಂತರ, ಕುಲಸಚಿವರ ಕಛೇರಿಯಲ್ಲಿ ಕೂಲಂಕುಷವಾಗಿ ಪರಿಶೀಲನೆ ಮಾಡಿ, ಹಾಲಿ ಇರುವ ಉಪನ್ಯಾಸಕರ ಕಾರ್ಯಭಾರವನ್ನು ಕಳೆದು, ಉಳಿದ ಕಾರ್ಯಭಾರಕ್ಕೆ ಮಾತ್ರ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲಾಗುತ್ತಿದೆ. ಆದರೆ, 2010–11 ರಿಂದ 2012–13ರವರೆಗಿನ ಸಾಲುಗಳ ಲೆಕ್ಕಪರಿಶೋಧನಾ ವರದಿಗಳಲ್ಲಿ ಅತಿಥಿ

ಆಕ್ಷೇಪಣೆಗಳು	ಉತ್ತರಗಳು

ಉಪನ್ಯಾಸಕರು ಬೋಧನೆ ಮಾಡುತ್ತಿದ್ದ ಪೂರ್ಣಕಾಲಿಕ ಬೋಧಕರ ವಿವರ, ಬೋಧನೆ ಕಾಲಾವಧಿ, ಪ್ರತಿ ನಿಕಾಯದಲ್ಲಿನ ಪ್ರಮಾಣ (work load) ಮುಂತಾದ ವಿವರಗಳನ್ನು ನೀಡಿರುವುದಿಲ್ಲ. ಹಣಕಾಸು ವಿಭಾಗದಲ್ಲಿನ ಅತಿಥಿ ಉಪನ್ಯಾಸಕರ ಸಂಭಾವನೆ ಪಾವತಿ ವಹಿ ಪ್ರಕಾರ ಸಂಭಾವನೆ ವೆಚ್ಚ ರೂ.21,35,489.00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರ ಕೆಳಕಂಡಂತಿದೆ.

ಕ್ರ.ಸಂ.	ಅವಧಿ	ಅತಿಥಿ ಉಪನ್ಯಾಸಕರ ಸಂಖ್ಯೆ	ಸಂಭಾವನೆ ವೆಚ್ಚದ ಮೊಬಲಗು (ರೂ.ಗಳಲ್ಲಿ)
1	2008–09	3	170000.00
2	2009–10	3	157000.00
3	2010–11	4	516894.00
4	2011–12	6	514595.00
5	2012–13	4	777000.00
		ಒಟ್ಟು ರೂ.	**21,35,489.00**

2. ಸರ್ಕಾರಿ ಆದೇಶ ಸಂ.ಇಆ 37 UNE 2009 ದಿನಾಂಕ 24.12.2009 ರಲ್ಲಿ ಕಾರ್ಯದರ್ಶಿ, ವಿ.ವಿ. ಧನ ಸಹಾಯ ಆಯೋಗ ನವದೆಹಲಿ ಇವರ ಪತ್ರ ಸಂಖ್ಯೆ: ಈ–3–1/2009 (PS) ದಿನಾಂಕ 23.9.2009 ರಲ್ಲಿ ಯುಜಿಸಿ ವೇತನ ಶ್ರೇಣಿಯಲ್ಲಿ ವೇತನ ಪಡೆಯುವ ವಿಶ್ವವಿದ್ಯಾಲಯ/ ಕಾಲೇಜುಗಳಲ್ಲಿನ ಪೂರ್ಣಕಾಲಿಕ ಭೋಧಕರು ಶೈಕ್ಷಣಿಕ ವರ್ಷದಲ್ಲಿ ಬೋಧನೆ ಮಾಡಬೇಕಿರುವ ಅವಧಿಯನ್ನು ಮಾರ್ಗಸೂಚಿಯಲ್ಲಿನ ಕ್ರ.ಸಂ.15.1 ರಿಂದ 15.2 ರಲ್ಲಿ ನಿಗಧಿಪಡಿಸಿದ್ದು, 2006–07 ರಿಂದ 2015–16ನೇ ಸಾಲಿನ **ಭೂಗರ್ಭ ಶಾಸ್ತ್ರ ವಿಭಾಗ,** ಬೆಂಗಳೂರು ವಿಶ್ವವಿದ್ಯಾಲಯ, ಅತಿಥಿ ಉಪನ್ಯಾಸಕರು ಬೋಧನೆ ಮಾಡುತ್ತಿದ್ದ ಪೂರ್ಣಕಾಲಿಕ ಬೋಧಕರ ವಿವರ, ಬೋಧನೆ ಕಾಲಾವಧಿ, ಪ್ರತಿ ನಿಕಾಯದಲ್ಲಿನ ಬೋಧನಾ ಕೆಲಸದ ಪ್ರಮಾಣ (work load) ಮುಂತಾದ ವಿವರಗಳನ್ನು ನಮೂನೆಯಲ್ಲಿ ಒದಗಿಸಲು ಸೂಚಿಸಿದ್ದು, ಲೆಕ್ಕವಿಚಾರಣಾ ಪತ್ರ ಸಂಖ್ಯೆ: 10 ದಿನಾಂಕ: 04.11.2016 ರಲ್ಲಿ ನೀಡಲಾಗಿದ್ದು, ಈ ವಿವರಗಳಿಗೆ ಯಾವುದೇ ಪ್ರತ್ಯುತ್ತರವನ್ನು ನೀಡಿರುವುದಿಲ್ಲ. ಹಣಕಾಸು ವಿಭಾಗದಲ್ಲಿನ ಅತಿಥಿ ಉಪನ್ಯಾಸಕರ ಸಂಭಾವನೆ ಪಾವತಿ ವಹಿ ಪ್ರಕಾರ ಸಂಭಾವನೆ ವೆಚ್ಚ ರೂ. 4,29,850.00ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರ ಕೆಳಕಂಡಂತ್ತಿದೆ. ದಿನಾಂಕ:03.02.2017 ರಲ್ಲಿ ನೀಡಿರುವ ಅನುಸರಣೆಯು 2014–15 ನೇ ಸಾಲಿನ work load ಗೆ ಸಂಬಂಧಿಸಿದ್ದು, ಕೆಳಕಂಡಂತೆ ತೋರಿಸಿರುವ ಮೊತ್ತದಲ್ಲಿ ಗಣನೆಗೆ ತೆಗೆದುಕೊಂಡಿಲ್ಲವಾದ್ದರಿಂದ ಆಕ್ಷೇಪಣೆ ಯಥವತ್ತಾಗಿ ಮುಂದುವರೆಯುತ್ತದೆ.

ಉಪನ್ಯಾಕರ ಒಟ್ಟು ವೆಚ್ಚವನ್ನು ಈಗಾಗಲೇ ಆಕ್ಷೇಪಣೆಯಲ್ಲಿಟ್ಟಿದ್ದು, ಅವುಗಳಿಗೆ ಉತ್ತರಗಳನ್ನು ಸಹ ಸಲ್ಲಿಸಲಾಗಿದೆ. ಆ ಒಟ್ಟು ವೆಚ್ಚದಲ್ಲಿ ಎಲ್ಲಾ ವಿಭಾಗಗಳ ಅತಿಥಿ ಉಪನ್ಯಾಸಕರ ನೇಮಕಾತಿ ವೆಚ್ಚವು ಸೇರಿರುವುದರಿಂದ, ಈ ಕೆಳಕಂಡ ವೆಚ್ಚಗಳನ್ನು ಆಕ್ಷೇಪಣೆಯಲ್ಲಿಟ್ಟರೆ ಒಂದೇ ವೆಚ್ಚವನ್ನು ಎರಡು ಸಲ ಆಕ್ಷೇಪಣೆಯಲ್ಲಿಟ್ಟಂತೆ ಆಗುತ್ತದೆ.

ಕ್ರಮ ಸಂಖ್ಯೆ	ವರ್ಷ	ಸಂಭಾವನೆಯ ಮೊತ್ತ	ಆಯಾ ವರ್ಷದ ಲೆಕ್ಕಪರಿಶೋಧನಾ ವರದಿಯಲ್ಲಿ ಆಕ್ಷೇಪಣೆಯಲಿಟ್ಟಿರುವ ಕಂಡಿಕೆ ಸಂಖ್ಯೆ
1)	2010–11	516894=00	2.2.1.1.15
2)	2011–12	514595=00	2.2.1.1.2
3)	2012–13	777000=00	24
ಒಟ್ಟು ಮೊತ್ತ		**1808489.00**	

ಆದಕಾರಣ, ಎರಡನೇ ಸಲ ಪುನರಾವರ್ತನೆಯಾಗಿರುವ ಮೊತ್ತ ರೂ.18,08,489=00 ಗಳನ್ನು ಆಕ್ಷೇಪಣೆಯಿಂದ ಕೈಬಿಡಲು ಕೋರಿದೆ. ಇದರ ಜೊತೆಗೆ 2008–09 ಮತ್ತು 2009–10ನೇ ಸಾಲುಗಳಲ್ಲಿ ವಾರ್ಷಿಕ ಲೆಕ್ಕಪರಿಶೋಧನಾ ವರದಿ ಗಳಲ್ಲಿ ಆಕ್ಷೇಪಣೆಯಲ್ಲಿ ಇಲ್ಲದಿರುವುದನ್ನು ಗಮನಿಸಿದಾಗ, ಆ ಅವಧಿಯಲ್ಲಿ ಲೆಕ್ಕಪರಿಶೋಧನೆ ಯಲ್ಲಿ ಕೇಳಿರುವ ಮಾಹಿತಿಯನ್ನು ಒದಗಿಸಿರುವ ಸಂಭವವಿರುವುದರಿಂದ ಆಕ್ಷೇಪಣೆಯ ಮೊತ್ತ ರೂ. 21,35,489/–ಗಳನ್ನು ಕೈಬಿಡಲು ಕೋರಿದೆ.

2. ಅದೇ ರೀತಿ ಭೂಗರ್ಭಶಾಸ್ತ್ರ ವಿಭಾಗದಲ್ಲಿ ಕಾರ್ಯಭಾರದ (Work load) ಮಾಹಿತಿಯನ್ನು ನೀಡಿಲ್ಲವೆಂದು ತಿಳಿಸಿ, ಅತಿಥಿ ಉಪನ್ಯಾಸಕರ ಸಂಭಾವನೆ ವೆಚ್ಚ ರೂ. 4,29,850=00ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಈಗಾಗಲೇ ಮೇಲೆ ತಿಳಿಸಿರುಂತೆ, 2010–11 ರಿಂದ 2012–13ರವರೆಗೆ ವಿತ್ತಾಧಿಕಾರಿಗಳ ಕಛೇರಿಯಲ್ಲಿ ಪಾವತಿಯಾಗಿರುವ ಅತಿಥಿ ಉಪನ್ಯಾಸಕರ ಸಂಭಾವನೆ ಮೊತ್ತವನ್ನು ಪೂರ್ಣವಾಗಿ ಆಕ್ಷೇಪಣೆಯಲ್ಲಿ ಇಟ್ಟಿರುವುದರಿಂದ, ಈ ಆಕ್ಷೇಪಣೆಯ ಮೊತ್ತವು ಸೇರಿರುವುದರಿಂದ, ಮತ್ತೆ ಆಕ್ಷೇಪಣೆಯಲ್ಲಿಡುವುದರಿಂದ ಎರಡನೇ ಸಲ

ಆಕ್ಷೇಪಣೆಗಳು	ಉತ್ತರಗಳು

Sl. no	Month	Name	Voucher No/ Date	Amount
1	April-2010	Mahabaleshwar.B	1112/ 10.5.2010	15000.00
	May-2010		1746/1.6.2010	15000.00
	June-2010		2805/5.7.2010	15000.00
	July-2010		4643/1.9.2010	15000.00
	August-2010		7991/ 15.12.2010	9850
	Sep-2010		7992/ 15.12.2010	25000.00
	Oct-2010		7992/15.12.2010	25000.00
	Nov-2010		7992/ 15.12.2010	25000.00
	Dec-2010		8324/ 31.12.2010	25000.00
	Jan-2011		9350/ 31.1.2011	25000.00
	Feb-2011			
	March-2012		24/2.4.2012	25000.00
	April-2012		1359/ 10.5.2012	25000.00
	May-2012		2224/4.6.2012	25000.00
	June-2012		3582/3.7.2012	25000.00
		Jagadeesh M Kattimani		
	Oct-2011		9673/2.1.2012	15000.00
	Nov-2011		9674/2.1.2012	15000.00
	Dec-2011		9675/2.1.2012	15000.00
	Jan-2012		10890/ 1.2.2012	15000.00
	Feb-2012		12253/6.3.2012	15000.00
	March-2012		359/7.4.2012	15000.00
	April-2012		12.5.2012	15000.00
	May-2012		3679/4.7.2012	15000.00
	June-2012		3678/4.7.2012	15000.00
				429850.00

ಇಟ್ಟಂತಾಗುತ್ತದೆ. ಆದುದರಿಂದ, ರೂ.4,29,850=00 ಗಳನ್ನು ಆಕ್ಷೇಪಣೆಯಿಂದ ಕೈಬಿಡಲು ಕೋರಿದೆ.

18. ವಾಣಿಜ್ಯ ವಿಭಾಗದಲ್ಲಿ ಅತಿಥಿ ಉಪನ್ಯಾಸಕರ ನೇಮಕಾತಿ ವಿವರ:

ಸರ್ಕಾರಿ ಆದೇಶ ಸಂ.ಇ D 37 UNE 2009 ದಿನಾಂಕ 24.12.2009 ರಲ್ಲಿ ಕಾರ್ಯದರ್ಶಿ, ವಿ.ವಿ. ಧನ ಸಹಾಯ ಆಯೋಗ ನವದೆಹಲಿ ಇವರ ಪತ್ರ ಸಂಖ್ಯೆ: ಈ–3–1/2009 (PS) ದಿನಾಂಕ 23.9.2009 ರಲ್ಲಿ ಯುಜಿಸಿ ವೇತನ ಶ್ರೇಣಿಯಲ್ಲಿ ವೇತನ ಪಡೆಯುವ ವಿಶ್ವವಿದ್ಯಾಲಯ/ ಕಾಲೇಜುಗಳಲ್ಲಿನ ಪೂರ್ಣಕಾಲಿಕ ಭೋಧಕರು ಶೈಕ್ಷಣಿಕ ವರ್ಷದಲ್ಲಿ ಬೋಧನೆ ಮಾಡಬೇಕಿರುವ ಅವಧಿಯನ್ನು ಮಾರ್ಗಸೂಚಿಯಲ್ಲಿನ ಕ್ರ.ಸಂ.15.1 ರಿಂದ 15.2 ರಲ್ಲಿ ನಿಗಧಿಪಡಿಸಿದ್ದು, 2007–08 ರಿಂದ 2015–16ನೇ ಸಾಲಿನ **ವಾಣಿಜ್ಯ ವಿಭಾಗ,** ಬೆಂಗಳೂರು ವಿಶ್ವವಿದ್ಯಾಲಯ,

ವಾಣಿಜ್ಯ ವಿಭಾಗದಲ್ಲಿ self-finance course ಗಳಾದ MCom (FA), MCom (IB) ಮತ್ತು MTTM ಗಳಲ್ಲಿ ಪಾಠ ಪ್ರವಚನ ಮಾಡಲು ಹೊರಗಿನಿಂದ ವಿಶೇಷ ವಿಷಯ ಪರಿಣಿತಿ ಹೊಂದಿರುವ ಉಪನ್ಯಾಸಕರನ್ನು ನೇಮಿಸಿಕೊಂಡಿರುವುದರಿಂದ ಮತ್ತು ವಿಭಾಗದಲ್ಲಿನ ಖಾಯಂ ಉಪನ್ಯಾಸಕರು MCom ವಿಭಾಗದಲ್ಲಿ ಕಾರ್ಯ ನಿರ್ವಹಿಸಲು ನೇಮಿಸಿಕೊಂಡಿರುವುದರಿಂದ ಅವರ ದಿನನಿತ್ಯದ ಕಾರ್ಯಬಾರಕ್ಕಿಂತ ಹೆಚ್ಚು ಅವದಿಗಳನ್ನು Self finance Course ಗಳ ಪಾಠ ಪ್ರವಚನಗಳಿಗೆ ವ್ಯಯಿಸುತ್ತಿರುತ್ತಾರೆ. ಮತ್ತು ಖಾಯಂ ಉಪನ್ಯಾಸಕರ ಕೊರತೆ ಕೂಡಾ ವಿಭಾಗದಲ್ಲಿ ಇದೆ. ಆದ್ದರಿಂದ ಖಾಯಂ ಉಪನ್ಯಾಸಕರು ತಮ್ಮ ಇರುವುದಕ್ಕಿಂತ ಹೆಚ್ಚಿನ ಕಾರ್ಯಭಾರವನ್ನು ನಿರ್ವಹಿಸಲು

ಆಕ್ಷೇಪಣೆಗಳು	***ಉತ್ತರಗಳು***
ಬೆಂಗಳೂರು ಇಲ್ಲಿನ ಅತಿಥಿ ಉಪನ್ಯಾಸಕರು ಬೋಧನೆ ಮಾಡುತ್ತಿದ್ದ ಪೂರ್ಣಕಾಲಿಕ ಬೋಧಕರ ವಿವರ, ಬೋಧನೆ ಕಾಲಾವಧಿ, ಪ್ರತಿ ನಿಕಾಯದಲ್ಲಿನ ಪ್ರಮಾಣ (work load) ಮುಂತಾದ ವಿವರಗಳನ್ನು ಒದಗಿಸಲು ಸೂಚಿಸಿದ್ದು, ಯಾವುದೇ ಪ್ರತ್ಯುತ್ತರವನ್ನು ನೀಡಿರುವುದಿಲ್ಲ. ಹಣಕಾಸು ವಿಭಾಗದಲ್ಲಿನ ಅತಿಥಿ ಉಪನ್ಯಾಸಕರ ಸಂಭಾವನೆ ಪಾವತಿ ವಹಿ ಪ್ರಕಾರ ಸಂಭಾವನೆ ವೆಚ್ಚ ರೂ.62,42,444.00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.	ಮತ್ತು ಉಳಿದಿರುವ ಇತರೆ ವಿಷಯಗಳನ್ನು ಬೋಧಿಸಲು ವಿಶೇಷ ಪರಿಣಿತಿ ಹೊಂದಿದ ಅತಿಥಿ ಉಪನ್ಯಾಸಕರನ್ನು ನೇಮಿಸಿರುವುದರಿಂದ ಹೆಚ್ಚಿನ ಸಂಭಾವನೆಯನ್ನು ವಾಣಿಜ್ಯ ವಿಭಾಗದಿಂದ ಪಡೆಯಲಾಗಿದೆ. ಈ ಹಣವನ್ನು ಯೂನಿವರ್ಸಿಟಿ ಹಣದಿಂದ ಪಡೆದಿರುವುದಿಲ್ಲ MCom (FA), MCom (IB) ಮತ್ತು MTTM course ಗಳಾದ self-finance ಕೋರ್ಸ್‌ಗಳಾಗಿದ್ದು ಈ ಸ್ನಾತಕೋತ್ತರ ಕೋರ್ಸ್‌ಗಳಿಗೆ ಯುಜಿಸಿಯಿಂದಾಗಲೀ ಅಥವಾ ಸರ್ಕಾರದಿಂದಗಲೀ ಮಂಜೂರಾಗಿರುವುದಿಲ್ಲ ವಿದ್ಯಾರ್ಥಿಗಳಿಂದ ಪಡೆದಂತಹ ಪ್ರವೇಶ ಶುಲ್ಕದ ಹಣದಿಂದ ಮಂಜೂರಾಗಿರುತ್ತದೆ. ಪರಿನಿಯಮ ರಚನೆಯ ಬಗ್ಗೆ ಕ್ರಮ ವಹಿಸಲಾಗುತ್ತಿದೆ. ರೂ.62,42,444.00 ಗಳ ಸಂಭಾವನೆ ವೆಚ್ಚ ಆಕ್ಷೇಪಣೆಯಿಂದ ಕೈಬಿಡಲು ಕೋರಿದೆ.

19. ವಿ.ವಿ.ಖರೀದಿ ನಿಯಮಗಳನ್ನು ಉಲ್ಲಂಘಿಸಿ ಡಿ.ಟಿ.ಪಿ ವೆಚ್ಚ ಪಾವತಿಸಿರುವುದು:

ಪ್ರಸಾರಂಗ ವಿಭಾಗದಲ್ಲಿ 2014–15 ನೇ ಹಾಗೂ 2015–16 ನೇ ಸಾಲಿಗೆ ಡಿ.ಟಿ.ಪಿ ವೆಚ್ಚದ ಕಡತಗಳನ್ನು ಪರಿಶೀಲಿಸಿದಾಗ ವಿವಿಧ ವಿಭಾಗದವರು ಪಠ್ಯಪುಸ್ತಕಗಳ ಡಿ.ಟಿ.ಪಿ ಕಾರ್ಯಗಳನ್ನು ಖಾಸಗಿ ಸಂಸ್ಥೆಗಳಿಂದ ಮಾಡಿಸಿರುವುದು ಕಂಡುಬಂದಿರುತ್ತದೆ.

2014–15 ಡಿ.ಟಿ.ಪಿ.ವೆಚ್ಚದ ವಿವರ.

ಕ್ರ.ಸಂ.	ಸಂಸ್ಥೆಯ ಹೆಸರು	ಬಿಲ್ ಸಂಖ್ಯೆ/ದಿನಾಂಕ	ಮೊತ್ತ (ರೂ. ಗಳಲ್ಲಿ)	ಷರಾ
1	ಪದ್ಮ ಡಿ.ಟಿ.ಪಿ ಕೇಂದ್ರ	178/29.5.2014	7600.00	ಹಿಂದಿ ವಿಭಾಗ
2	ಓಂ ಶಕ್ತಿ ಎಂಟರ್ ಪ್ರೈಸಸ್	225/7.8.2014	2650.00	ಹಿಂದಿ ವಿಭಾಗ
3	ಯಶ್ ಕ್ರಿಯೇಷನ್ಸ	04/22.8.2014	56530.00	ಕನ್ನಡ ವಿಭಾಗ
4	ಸಚಿನ್ ರೀಪ್ರೋಗ್ರಫಿಕ್ಸ್	1032/ 28.9.2013	7350.00	ಸಂಸ್ಕೃತ
5	ಸಚಿನ್ ರೀಪ್ರೋಗ್ರಫಿಕ್ಸ್	1034/ 28.9.2013	4440.00	ಸಂಸ್ಕೃತ
6	ಸಚಿನ್ ರೀಪ್ರೋಗ್ರಫಿಕ್ಸ್	1532/ 28.9.2013	4770.00	ಸಂಸ್ಕೃತ
7	ರಾಮಮೂರ್ತಿ ಎ.ಎಸ್.	123/18.6.2014	2730.00	ಸಂಸ್ಕೃತ
8	ರಾಮಮೂರ್ತಿ ಎ.ಎಸ್.	124/18.6.2014	4800.00	ಸಂಸ್ಕೃತ
9	ರಾಮಮೂರ್ತಿ ಎ.ಎಸ್.	125/18.6.2014	4080.00	ಸಂಸ್ಕೃತ
10	ಸಚಿನ್ ರೀಪ್ರೋಗ್ರಫಿಕ್ಸ್	1324/ 15.12.2014	6990.00	ಸಂಸ್ಕೃತ
11	ಓಂಕಾರ್ ಹೈ ಪ್ರಿಂಟ್ಸ್	017/10.11.2014	4680.00	ಸಂಸ್ಕೃತ
12	ರಾಜಣ್ಣ ಕೆ.ಎಸ್.	290/21.1.2015	2970.00	ಸಂಸ್ಕೃತ
13	ರಾಜಣ್ಣ ಕೆ.ಎಸ್.	291/21.1.2015	495.00	ಸಂಸ್ಕೃತ
		ಒಟ್ಟು ರೂ.	**110085.00**	
2015–16 ಡಿ.ಟಿ.ಪಿ.ವೆಚ್ಚದ ವಿವರ.				
1	ಯಶ್ ಕ್ರಿಯೇಷನ್ಸ್	033/15.7.2015	49200.00	ಕನ್ನಡ ವಿಭಾಗ
2	ಯಶ್ ಕ್ರಿಯೇಷನ್ಸ್	034/15.7.2015	28380.00	ಕನ್ನಡ ವಿಭಾಗ
3	ಶಾಂತ.ಆರ್.ಅಂಬಲಿ	/22.4.2015	10380.00	ಸಂಸ್ಕೃತ

2015–16ನೇ ಸಾಲಿನಲ್ಲಿ ಒದಗಿಸಲಾದ ಸಂಸ್ಕೃತ ಪಠ್ಯಪುಸ್ತಕಗಳನ್ನು ಡಿ.ಟಿ.ಪಿ. ಮಾಡಿಸಿರುವ ಬಗ್ಗೆ ಆಕ್ಷೇಪಣೆ ಬಂದಿದ್ದು, ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗದಲ್ಲಿ ಪಠ್ಯಪುಸ್ತಕಗಳನ್ನು ಹಾಗೂ ಇತರೆ ಪುಸ್ತಕಗಳನ್ನು ಡಿ.ಟಿ.ಪಿ. ಮಾಡಲು ಸಿಬ್ಬಂದಿಯ ಹುದ್ದೆ ಮಂಜೂರು ಆಗಿರುವುದಿಲ್ಲ.ಮುದ್ರಣಾಲಯಕ್ಕೆ ಬೇಕಾದ ಫಾರಂಗಳನ್ನು ಪೇಜ್ ಮೇಕರ್‌ಗಳನ್ನು ಮಾಡಿ ಕೊಳ್ಳಲು ನಮ್ಮದೇ ಇಬ್ಬರು ಗ್ರೂಪ್–ಡಿ (ಅನುಚರ) ಮತ್ತು ಗ್ರೂಪ್–ಸಿ (ಅಚ್ಚು ಮೊಳೆ ಜೋಡಿಸುವವರು) ಸಿಬ್ಬಂದಿಗಳನ್ನು ನಿಯೋಜಿಸಿದ್ದೇವೆ. ಹಾಗೂ ಸಿಂಡಿಕೇಟ್ 1999ರಲ್ಲಿ ಅನುಮೋದಿಸಿರುವ ಬೆಲೆಗಳನ್ನು ಖಾಸಗಿ ಡಿ.ಟಿ.ಪಿ. ಮುದ್ರಣಕ್ಕೆ ನೀಡಲಾಗುತ್ತಿದೆ. ಈ ಬೆಲೆಗಳು ಇಂದಿನ ಮಾರುಕಟ್ಟೆ ದರಗಳಿಗಿಂತ ಬಹಳ ಕಡಿಮೆಯಾಗಿರುತ್ತದೆ. ಕಡಿಮೆ ಬೆಲೆಗಳನ್ನು ಒಪ್ಪಿ ಡಿ.ಟಿ.ಪಿ. ಮಾಡಿಕೊಡುತ್ತಿದ್ದಾರೆ. ಇದರಿಂದ ವಿಶ್ವವಿದ್ಯಾಲಯಕ್ಕೆ ಆರ್ಥಿಕವಾಗಿ ನಷ್ಟ ಉಂಟಾಗುತ್ತಿಲ್ಲ. ಆದ್ದರಿಂದ ಈ ಮೊತ್ತವನ್ನು ರೂ. 2,23,175/– ದರ ರೂ.30/– ಒಂದು ಪುಟಕ್ಕೆ ನಿಗದಿಪಡಿಸಲಾಗಿದ್ದು ಅದರಂತೆ, ಖಾಸಗಿ ಸಂಸ್ಥೆಯವರು ಡಿ.ಟಿ.ಪಿ. ಕೆಲಸವನ್ನು ಮಾಡಿಕೊಟ್ಟಿರುತ್ತಾರೆ. ಆದ್ದರಿಂದ ರೂ.2,23,175.00 ಗಳನ್ನು ಆಕ್ಷೇಪಣೆಯಿಂದ ಕೈ ಬಿಡಲು ಕೋರಲಾಗಿದೆ**(ಅನುಬಂಧ–103).**

ಆಕ್ಷೇಪಣೆಗಳು	***ಉತ್ತರಗಳು***

4	ರಾಜಣ್ಣ ಕೆ.ಎಸ್.	153/9.6.2015	3570.00	ಸಂಸ್ಕೃತ
5	ರಾಜಣ್ಣ ಕೆ.ಎಸ್.	154/9.6.2015	595.00	ಸಂಸ್ಕೃತ
6	ಓಂಕಾರ್ ಪೈ ಪ್ರಿಂಟ್ಸ್	121/20.11.2015	10675.00	ಸಂಸ್ಕೃತ
7	ಶರವಣ ಡಿ.ಟಿ.ಪಿ ಸೆಂಟರ್	/11.1.2016	10290.00	ಸಂಸ್ಕೃತ
		ಒಟ್ಟು ರೂ.	**1,13,090.00**	

ಬೆಂ.ವಿ.ವಿ.ಯು ತನ್ನದೇ ಆದ ಡಿ.ಟಿ.ಪಿ. ವಿಭಾಗ ಹೊಂದಿದ್ದರೂ ಹೊರಗಿನ ಸಂಸ್ಥೆಗಳಿಂದ ಡಿ.ಟಿ.ಪಿ ಕಾರ್ಯವನ್ನು ಮಾಡಿಸುವುದರ ಅವಶ್ಯಕವೇನಿತ್ತು? ಈ ಬಗ್ಗೆ ಸ್ಪಷ್ಟೀಕರಣ ನೀಡುವುದು ಹಾಗೂ ಸಂಬಂಧಿಸಿದ ಕಡತಗಳನ್ನು ಪರಿಶೀಲಿಸಲಾಗಿ, 28.10.1999ರ ಅಧಿಸೂಚನೆಯಂತೆ ಇಲ್ಲಿಯವರೆಗೂ ಅದೇ ದರಗಳನ್ನು ನಿಗಧಿಗೊಳಿಸಿ ವೆಚ್ಚವನ್ನು ಪಾವತಿಸುತ್ತಿರುವುದು ಕಂಡುಬಂದಿರುತ್ತದೆ. ಡಿ.ಟಿ.ಪಿ ಕೆಲಸವನ್ನು ಖಾಸಗಿ ಸಂಸ್ಥೆಗಳಿಂದ ಮಾಡಿಸಬೇಕಾದ ಅವಶ್ಯಕತೆಯಿದ್ದಲ್ಲಿ ಹೊಸದಾಗಿ ದರಪಟ್ಟಿ ಕರೆದು ಸದರಿ ಸಂಸ್ಥೆಯಿಂದ ಡಿ.ಟಿ.ಪಿ ಕೆಲಸವನ್ನು ಮಾಡಿಸಲು ಈಗಾಗಲೇ 2013–14 ನೇ ಸಾಲಿನಲ್ಲಿಯೇ ತಿಳಿಸಿದ್ದರೂ, ಇದುವರೆವಿಗೂ ಯಾವುದೇ ಸಂಸ್ಥೆಯಿಂದ ದರಪಟ್ಟಿಯನ್ನು ಪಡೆದಿರುವುದಿಲ್ಲ.

ಡಿ.ಟಿ.ಪಿ ಕೆಲಸವನ್ನು ಖಾಸಗಿ ಸಂಸ್ಥೆಯವರಿಂದ ಮಾಡಿಸಲು ಸಂಬಂಧಿಸಿದ ಆದೇಶವಿದ್ದಲ್ಲಿ ಸಲ್ಲಿಸುವುದು ಹಾಗೂ ಖಾಸಗಿಯವರಿಂದ ಮಾಡಿಸಬೇಕಾದ ಅವಶ್ಯಕತೆಯಿದ್ದಲ್ಲಿ ದರಪಟ್ಟಿ ಪಡೆದು ಮಾಡಿಸುವುದು ಸೂಕ್ತವಾದ ಕ್ರಮವಾಗಿರುತ್ತದೆ. ಈ ಬಗ್ಗೆ ಸ್ಪಷ್ಟೀಕರಣವನ್ನು ಕೋರಿದ್ದು, ಯಾವುದೇ ಅನುಸರಣೆಯನ್ನು ಸಲ್ಲಿಸಿಲ್ಲವಾದ್ದರಿಂದ ಡಿ.ಟಿ.ಪಿ ಕಾರ್ಯಕ್ಕೆ ವೆಚ್ಚ ಮಾಡಿರುವ ಮೊತ್ತ 2014–15 ನೇ ಸಾಲಿಗೆ' ರೂ.**1,10,085.00** ಗಳನ್ನು ಹಾಗೂ 2015–16 ನೇ ಸಾಲಿಗೆ ಮೊತ್ತ ರೂ.1,13,090.00 ಗಳನ್ನು ಆಕ್ಷೇಪಣೆಯಲ್ಲಿರಿಸಿದೆ.

20. ಸಿಬ್ಬಂದಿಗಳಿಗೆ ಉಪಹಾರ ಭತ್ಯೆ ಪಾವತಿಸಿರುವುದು.

2015–16 ನೇ ಸಾಲಿನ ಬೆಂ.ವಿ.ವಿ **ಮುದ್ರಣಾಲಯ ವಿಭಾಗದ** ಸಿಬ್ಬಂದಿಗಳಿಗೆ ಉಪಹಾರ ಭತ್ಯೆ ಪಾವತಿಸಿರುವ ಕುರಿತಂತೆ, ಕಡತ ಸಂ.BUP/Lunch allowance/Dec-2009 ರಲ್ಲಿನ ವಿವರಗಳನ್ನು ಪರಿಶೀಲಿಸಲಾಗಿ, ಮುದ್ರಣಾಲಯ ವಿಭಾಗದ ಸಿಬ್ಬಂದಿಗಳಿಗೆ ಉಪಹಾರ ಭತ್ಯೆ ಎಂದು ಸದರಿ ಸಾಲಿಗೆ ಒಟ್ಟು ರೂ.2,35,550.00 ಗಳನ್ನು ಪಾವತಿಸಿರುವುದು ಕಂಡುಬಂದಿರುತ್ತದೆ. ವಿವರ **ಅನುಬಂಧ–11** ರಲ್ಲಿ ಲಗತ್ತಿಸಿದೆ.

ಸರ್ಕಾರದ ಆದೇಶ ಸಂ. ಇ.ಡಿ.471 ಇ.ಎಸ್.ಡಬ್ಲೂ–2009 ಬೆಂ. ದಿನಾಂಕ 19.4.2010 ರಲ್ಲಿ

ಸರ್ಕಾರಿ ಆದೇಶದ ಪ್ರಕಾರ ಮುದ್ರಣ ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಯ ಕೈಗಾರಿಕಾ ನೌಕರರಿಗೆ ಉಪಹಾರ ಭತ್ಯೆ ರೂ.25/–ನ್ನು ಪ್ರತಿ ದಿನಕ್ಕೆ ನೀಡಲು ಆದೇಶವಿದೆ. ಪ್ರತಿಯನ್ನು ಲಗತ್ತಿಸಿದೆ. ಅದರಂತೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕುಲಪತಿಯವರ ಅನುಮೋದನೆ ಪಡೆದು ವಿ.ವಿ. ಮುದ್ರಣಾಲಯದ ನೌಕರರಿಗೂ ವಿಸ್ತರಣೆ ಮಾಡಿಕೊಂಡು ಬಂದಿರುತ್ತದೆ ಪ್ರತಿಯನ್ನು ಲಗತ್ತಿಸಿದೆ.

ಹಾಲಿ ವಿಶ್ವವಿದ್ಯಾಲಯದ ಮುದ್ರಣಾಲಯ ನೌಕರರಿಗೆ ಯಾವುದೇ ಓವರ್ ಟೈಮ್ ಭತ್ಯೆ ನೀಡುತ್ತಿಲ್ಲ. ಉಪಹಾರ

ಆಕ್ಷೇಪಣೆಗಳು	***ಉತ್ತರಗಳು***
ಮುದ್ರಣ ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಯ ಕೈಗಾರಿಕಾ ನೌಕರರಿಗೆ ನೀಡುತ್ತಿರುವ ಉಪಹಾರ ಭತ್ಯೆಯನ್ನು ಪ್ರತಿ ದಿನದ ಕೆಲಸಕ್ಕೆ ರೂ. 16/– ರಿಂದ 25/– ಕ್ಕೆ ಹೆಚ್ಚಿಸಿ ಪರಿಷ್ಕರಿಸಲು ಅನುಮತಿ ನೀಡಿದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ಅಧಿನಿಯಮ 2000 ಪ್ರಕರಣ 46(3) ರನ್ವಯ ನಿಧಿಯನ್ನು ವಿ.ವಿ.ಯ ಉದ್ದೇಶಕ್ಕಾಗಿ ಪರಿನಿಯಮಗಳ ಮೂಲಕ ವಿನಿಯೋಗಿಸಬೇಕಿರುತ್ತದೆ. ಈ ಕುರಿತು ಪ್ರಕರಣ 40(3) ಮತ್ತು 41(3) ರಂತೆ ವಿ.ವಿ. ಉಪಹಾರ ಭತ್ಯೆ ಪರಿಷ್ಕರಿಸಲು ರಚಿಸಿಕೊಂಡಿರುವ ಪರಿನಿಯಮಗಳ ವಿವರವನ್ನು ಲೆಕ್ಕಪರಿಶೋಧನೆಗೆ ಒದಗಿಸಲು ಕೋರಿದ್ದು ಯಾವುದೇ ಅನುಸರಣೆ ವರದಿ ನೀಡಿರುವುದಿಲ್ಲ. ಆದ್ದರಿಂದ ರೂ. 2,35,550.00ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.	ಭತ್ಯೆಯನ್ನು ನೀಡುತ್ತಿದ್ದು, ಇದನ್ನು ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಅನುಮತಿ ಅನುಮೋದನೆ ಪಡೆದು ಪಾವತಿಸಲಾಗಿದೆ. **(ಅನುಬಂಧ–104)** (ಪು.ಸಂ.690) ಪರಿನಿಯಮ ರಚಿಸಿಕೊಡಲು ಸಂಬಂಧಿಸಿದವರೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆದುದರಿಂದ ರೂ.2,35,550/– ಗಳ ಆಕ್ಷೇಪಣೆ ಮೊತ್ತ ಕೈ ಬಿಡಲು ಕೋರಿದೆ.
21. ಗ್ಲಾಸ್ ಕ್ಲೀನಿಂಗ್ ವೆಚ್ಚಕ್ಕೆ ಸಂಬಂಧಿತ ಮಾಹಿತಿ ಹಾಗೂ ಯು.ಜಿ.ಸಿ. ಸಪ್ಲಿಮೆಂಟರಿ ಪರೀಕ್ಷೆ ವೆಚ್ಚದ ಮಾಹಿತಿ ಲಭ್ಯವಿಲ್ಲದಿರುವುದು ವಸೂಲಾತಿ ಮೊತ್ತ ರೂ. 44,240.00:–	
2015–16ನೇ ಸಾಲಿನ **ಅಂಚೆ ತೆರಪು ಮತ್ತು ದೂರ ಶಿಕ್ಷಣ** ವಿಭಾಗದ ಈ ಕೆಳಕಂಡ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳನ್ನು ಲೆಕ್ಕಪರಿಶೋಧನೆ ಮಾಡಲಾಗಿ ಗ್ಲಾಸ್ ಕ್ಲೀನಿಂಗ್‌ಗಾಗಿ ಈ ಕೆಳಗಿನಂತೆ ವೆಚ್ಚ ಮಾಡಿರುವುದು ಕಂಡುಬಂದಿರುತ್ತದೆ. ಆದರೆ ಈ ಸಂಬಂಧ ಯಾವ ಸಂಸ್ಥೆಯಿಂದ ಸದರಿ ಕೆಲಸ ಮಾಡಿಸಲಾಗಿದೆ ಎಂಬುದನ್ನು ತಿಳಿಯಲು ಸಂಬಂಧಿಸಿದ cash/credit bill ವೋಚರ್ ಲಭ್ಯವಿರುವುದಿಲ್ಲ. ಹಾಗೂ ಬೆಂಗಳೂರು ವಿಶ್ವವಿದ್ಯಾಲಯ, ಖರೀದಿ ನಿಯಮ 2000 ನಿಯಮ 9 ರಂತೆ ದರಪಟ್ಟಿ ಕರೆದಿರುವ ಬಗ್ಗೆಯೂ ಯಾವುದೇ ಮಾಹಿತಿ ಲಭ್ಯವಿರುವುದಿಲ್ಲ. ಆದ್ದರಿಂದ ಒಟ್ಟು ಮೊತ್ತ ರೂ. 31,240.00 ಗಳಿಗೆ ಸಂಬಂಧಿಸಿದ **ಅನುಬಂಧ–12** ರಲ್ಲಿನ ವೋಚರ್‌ಗಳನ್ನು/ದಾಖಲೆಗಳನ್ನು ಹಾಗೂ ಎ. ಸಿ. ಬಿಲ್ಲು ಸಂಖ್ಯೆ U.O.No.DCC&DE/Advance-Exams/2015-16 Bangalore. Dated:23.12.2015 ರೂ. 1.00 ಲಕ್ಷ ಬಿಲ್ಲಿನಲ್ಲಿ ದಿ:11.01.2016 ರಿಂದ ದಿ:29.01.2016ವರೆಗೆ ನಡೆದ ಯು.ಜಿ.ಸಿ ಸಪ್ಲಿಮೆಂಟರಿ ಪರೀಕ್ಷೆ ಸಂಬಂಧ Travelling Expenses ಅಡಿ ಒಟ್ಟು ರೂ. 13,000.00 ಗಳನ್ನು ವೆಚ್ಚ ಮಾಡಿರುವ (ವಿವರ ಅನುಬಂಧ–01 ರಲ್ಲಿ ನೀಡಿದೆ) ಸಂಬಂಧ ಯಾವ ಟ್ರಾವೆಲ್ಸ್ ಅಡಿ ಸದರಿ ಕಾರ್ಯ ನಿರ್ವಹಿಸಲಾಗಿರುತ್ತದೆ ಎಂಬ ಬಗ್ಗೆ ಸಂಬಂಧಿಸಿದ Cash/Credit bill ವೋಚರ್ ಲಭ್ಯವಿರುವುದಿಲ್ಲ. ಹಾಗೂ ಬೆಂಗಳೂರು ವಿಶ್ವವಿದ್ಯಾಲಯ, ಖರೀದಿ ನಿಯಮ 2000 ನಿಯಮ 9 ರಂತೆ ದರಪಟ್ಟಿ	2015–16 ನೇ ಸಾಲಿನಲ್ಲಿ ಅಂಚೆ ತೆರಪು ಹಾಗೂ ದೂರ ಶಿಕ್ಷಣ ನಿರ್ದೇಶನಾಲಯವು ತುರ್ತು ಕಾರಣಗಳಿಂದ ನಗರ ಶಾಖೆಯಿಂದ ಜ್ಞಾನಭಾರತಿಯಲ್ಲಿರುವ ಒಂದು ಕಟ್ಟಡಕ್ಕೆ ವರ್ಗಾಯಿಸಲಾಯಿತು. ಆದ್ದರಿಂದ ಆ ಹಳೆಯ ಕಟ್ಟಡದ ಗ್ಲಾಸ್‌ಗಳನ್ನು ಕ್ಲೀನ್ ಮಾಡಲು ತುರ್ತಾಗಿ ಕೂಲಿಯವರು ಬೇಕಾಗಿದ್ದರಿಂದ ಸ್ವಲ್ಪ ದಿನದ ಮಟ್ಟಿಗೆ ನಿರ್ದೇಶಕರ ಮೌಖಿಕ ಆದೇಶದಂತೆ ದಿನಗೂಲಿ ನೌಕರರನ್ನು ಕರೆತಂದು ಕೆಲಸ ಮಾಡಬೇಕಾದ ಪರಿಸ್ಥಿತಿ ಉಂಟಾಯಿತು. ಆ ಕೆಲಸವನ್ನು ತುರ್ತಾಗಿ ನಿರ್ವಹಿಸಿರುವುದರಿಂದ ಯಾವುದೇ ಸಂಸ್ಥೆಗಳಿಗೆ ನೀಡಲು ಸಾಧ್ಯವಾಗದೇ ಇರುವುದರಿಂದ ಈ ರೀತಿ ಮಾಡ ಲಾಯಿತು, ಹಾಗೂ ಯು.ಜಿ.ಸಿಯ ನ್ಯಾಕ್ ಕಮಿಟಿಯು ದೂರ ಶಿಕ್ಷಣ ನಿರ್ದೇಶನಾಲಯಕ್ಕೆ ಭೇಟಿ ನೀಡಲು ಬರುವುದ ರಿಂದ ತುರ್ತು ಕಾರ್ಯಗಳನ್ನು ಜರೂರಾಗಿ ಮಾಡಬೇಕಾಗಿದ್ದರಿಂದ ಈ ರೀತಿ ಕಾರ್ಯ ನಿರ್ವಹಿಸ ’ಬೇಕಾಯಿತು ಮತ್ತು ದಿನಾಂಕ: 11/01/2016ರಿಂದ29/01/2016ರವರೆಗೆ ನಡೆದ ಸಪ್ಲಿಮೆಂಟರಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ನೌಕರರನ್ನು ನೇಮಕ ಮಾಡಿ ರೂ 1000/– ಗಳನ್ನು ನೀಡಲಾಯಿತು ಇದು ಸರ್ಕಾರಿ (ಬಿ.ಎಂ.ಟಿ.ಸಿ) ನಗರ ಸಾರಿಗೆಯ ಮಾಸಿಕ ಪಾಸ್‌ಗಿಂತ (ರೂ 1050/–) ಕಡಿಮೆ ಇರುವುದರಿಂದ ನಿರ್ದೇಶಕರ ಸಮ್ಮುಖದಲ್ಲಿ ಅಂತಿಮ ತೀರ್ಮಾನವಾಗಿ ಅವರ ಅನುಮತಿಯಂತೆ ನೇಮಕಗೊಂಡ ಪ್ರತಿಯೊಬ್ಬರಿಗೂ ರೂ 1000/–ಗಳನ್ನು ನೀಡಲಾಯಿತು ಆದುದರಿಂದ ರೂ.44,240.00ಗಳ ವಸೂಲಾತಿ ಕೈ ಬಿಡಬೇಕಾಗಿ ಈ ಮೂಲಕ ಕೋರಲಾಗಿದೆ.

ಆಕ್ಷೇಪಣೆಗಳು	ಉತ್ತರಗಳು
ಕರೆದಿರುವ ಬಗ್ಗೆಯೂ ಯಾವುದೇ ಮಾಹಿತಿ ಲಭ್ಯವಿರುವುದಿಲ್ಲ. ಆದ್ದರಿಂದ ಕೂಡಲೇ ಒಟ್ಟು ಮೊತ್ತ ರೂ. 13,000.00 ಗಳಿಗೆ ಸಂಬಂಧಿಸಿದ ವೋಚರ್‌ಗಳನ್ನು/ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲು ಕೋರಲಾಗಿತ್ತು. ಆದರೆ ಸದರಿ ಸಂಬಂಧಿತ ಮಾಹಿತಿಯನ್ನು ಪರಿಶೀಲನೆಗೆ ಒದಗಿಸದಿರುವ ಕಾರಣ ಸದರಿ ಮೊತ್ತವು ನಿಯಮ ಬಾಹಿರ ವೆಚ್ಚವೆಂದು ಬಾವಿಸಲಾಗಿದೆ, ಆದಕಾರಣ ಸದರಿ ಮೊತ್ತ ರೂ.31,240 ಗಳನ್ನು & 13000ರೂ ಗಳನ್ನು ಸೇರಿ ಒಟ್ಟು ರೂ.44,240 ಗಳನ್ನು ಸಂಬಂಧಪಟ್ಟವರಿಂದ ವಸೂಲಿ ಮಾಡಲು ಹಾಗೂ ಸದರಿ ವಸೂಲು ಮಾಡಿರುವ ಬಗ್ಗೆ ಲೆಕ್ಕ ತನಿಖಾ ತಂಡಕ್ಕೆ ವರದಿ ಸಲ್ಲಿಸಲು ಸೂಚಿಸಿದೆ.	
22. ನಗದು ಪುಸ್ತಕ ನಿರ್ವಹಿಸದಿರುವ ಬಗ್ಗೆ	
ಬೆಂಗಳೂರು ವಿಶ್ವವಿದ್ಯಾಲಯದ ಹಣಕಾಸು ವಿಭಾಗದಿಂದ, ಪಡೆದ ವಿವರ ಪ್ರಕಾರ **ಅಂಚೆ ತೆರಪು ಮತ್ತು ದೂರ ಶಿಕ್ಷಣ ವಿಭಾಗದಲ್ಲಿ** ವೇತನ ಬಾಬ್ತು ರೂ 86,30.000 ಮತ್ತು ಇತರೆ ವೆಚ್ಚ ರೂ 85.32.621 ಗಳು ವೆಚ್ಚವಿರುವುದು ಜಿ.ಎಲ್ ಪರಿಶೀಲನೆಯಿಂದ ತಿಳಿದು ಬಂದಿದೆ. ಆದರೆ ಈ ಬಗ್ಗೆ ನಗದು ಪುಸ್ತಕವನ್ನು ನಿರ್ವಹಿಸದಿರುವುದಿಲ್ಲ. ಕರ್ನಾಟಕ ಆರ್ಥಿಕ ಸಂಹಿತೆ ಆರ್ಟಿಕಲ್ 329 ರ ಪ್ರಕಾರ ನಗದು/ಚೆಕ್ ವಿನಿಮಯ ಮಾಡುವ ಪ್ರತಿಯೊಬ್ಬ ಸರ್ಕಾರಿ/ಅರೆ ಸರ್ಕಾರಿ/ಸಂಸ್ಥೆ ಅಧಿಕಾರಿಗಳು ಕಡ್ಡಾಯವಾಗಿ ನಗದು ಪುಸ್ತಕ ನಿರ್ವಹಿಸಬೇಕಿದ್ದರೂ, ಬೆಂಗಳೂರು ವಿಶ್ವವಿದ್ಯಾಲಯ ಹಣಕಾಸು ಅಧಿಕಾರಿಗಳಿಂದ ಪಡೆದ Open Cheque ಗಳನ್ನು ಪಡೆದು ನೇರವಾಗಿ ನಗದು ಮಾಡಿಸಲಾಗಿದೆ. ಇದರಿಂದ ಬೆಂಗಳೂರು ವಿಶ್ವವಿದ್ಯಾಲಯ ಅಂಚೆ ತೆರಪು ಮತ್ತು ದೂರ ಶಿಕ್ಷಣ ವಿಭಾಗದಲ್ಲಿ ಸ್ವೀಕೃತಿಯಾದ ಮತ್ತು ವೆಚ್ಚವಾಗಿರುವ ಪೂರ್ಣ ಆರ್ಥಿಕ ವಿವರ ಸರಿಯಾಗಿ ಪರಿಶೀಲನೆಗೆ ದೊರಕುವುದಿಲ್ಲ. ಇನ್ನು ಈ ಬಗ್ಗೆ ಚೆಕ್ ಸ್ವೀಕೃತಿ ಮತ್ತು ಜಮಾ ವಹಿ ನಿರ್ವಹಿಸಿರುವುದಿಲ್ಲ. ಆದಕಾರಣ, ನಿಯಮಾನುಸಾರ ಸರಿಯಾಗಿ ನಿರ್ವಹಿಸದಿರುವ ಕಛೇರಿ ಮುಖ್ಯಸ್ಥರು ಈ ಎಲ್ಲಾ ಆರ್ಥಿಕ ಹೊಣೆಗಾರಿಕೆಯ ವೈಪಲ್ಯಗಳಿಗೆ ಜವದ್ದಾರಾಗಿರುತ್ತಾರೆ. ಆದುದರಿಂದ, ಸದರಿ ಬಗ್ಗೆ ಸೂಕ್ಷ್ಮ ಗಮನ ಹರಿಸಿ ನಗದು ಪುಸ್ತಕ ನಿರ್ವಹಿಸಿ ಮುಂದಿನ ಲೆಕ್ಕಪರಿಶೀಲನೆಗೆ ಒದಗಿಸುವವರೆಗೆ ಜಿ.ಎಲ್. ನ ಪ್ರಕಾರ **ಅನುಬಂಧ–13ರ** ಪ್ರಕಾರ ವೆಚ್ಚದ ಒಟ್ಟು ಮೊತ್ತ 1,71,62,000.00 ಗಳನ್ನು	ಈ ಕಂಡಿಕೆಯ ಅಕ್ಷೇಪಣೆ ಮೊತ್ತವನ್ನು 2015–16ರ ಸಾಲಿನ ಕಂಡಿಕೆ 137 ಕ್ರಮ ಸಂಖ್ಯೆ (2) (3) ರಲ್ಲಿ ಕೈ ಬಿಡಲಾಗಿದೆ.

ಆಕ್ಷೇಪಣೆಗಳು	*ಉತ್ತರಗಳು*
ಆಕ್ಷೇಪಣೆಯಲ್ಲಿಡಲಾಗಿದೆ.	
23. ವಿಶ್ವವಿದ್ಯಾಲಯದ ನೌಕರರ ಮಕ್ಕಳಿಗೆ ಪ್ರವೇಶ ಶುಲ್ಕದಲ್ಲಿ ವಿನಾಯಿತಿ ನೀಡಿರುವ ಬಗ್ಗೆ.	
ಯು.ವಿ.ಸಿ.ಇ ಕಾಲೇಜು ಮತ್ತು ಗ್ರಂಥಾಲಯ ವಿಭಾಗದ 2014–15 ಮತ್ತು 2015–16ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ನೌಕರರ ಮಕ್ಕಳಿಗೆ ಪ್ರವೇಶ ಶುಲ್ಕದಲ್ಲಿ ವಿನಾಯಿತಿಯನ್ನು ವಿಶ್ವವಿದ್ಯಾಲಯದ ಆದೇಶ ಸಂಖ್ಯೆ.University vide Notification No.SYN:S1:Misc:24:90-91 dt:19-03-1991ರಂತೆ ವಿಶ್ವವಿದ್ಯಾಲಯದ ಭೋದಕ ಮತ್ತು ಭೋದಕೇತರರ ವರ್ಗದಲ್ಲಿರುವ ಮಕ್ಕಳಿಗೆ ತಾಂತ್ರಿಕ ವಿಭಾಗಗಳಲ್ಲಿ ವ್ಯಾಸಂಗಕ್ಕೆ ಪ್ರವೇಶಾತಿ ಪಡೆದರೆ ಅಂತಹವರಿಗೆ ಟ್ಯೂಷನ್ ಫೀ/ಲ್ಯಾಬ್/ಡೆವಲಪ್‌ಮೆಂಟ್ ಫೀ ಗಳಿಗೆ ವಿನಾಯಿತಿ ನೀಡಲಾಗಿದ್ದು, ಒಟ್ಟು ಪ್ರವೇಶ ಶುಲ್ಕ ರೂ.24430.00ಗಳಾಗಿದ್ದು ರೂ.4430.00ಮಾತ್ರ ವಿ.ವಿ ನಿಧಿಗೆ ಪಾವತಿಸಿರುವುದು ಕಂಡು ಬಂದಿದೆ. ಈ ರೀತಿ ವಿಶ್ವವಿದ್ಯಾಲಯದ ನೌಕರರ ಮಕ್ಕಳಿಗೆ ವಿನಾಯಿತಿ ಮಾಡಿಕೊಂಡಿರುವ ಬಗ್ಗೆ ವಿಶ್ವವಿದ್ಯಾಲಯವು ಅಳವಡಿಸಿಕೊಂಡಿರುವ ಅಧಿನಿಯಮ(Statutes) ವನ್ನು ಲೆಕ್ಕಪರಿಶೋಧನೆಗೆ ಒದಗಿಸುವಂತೆ ಸೂಚಿಸಲಾಗಿತ್ತು. ಈ ಸಂಬಂಧ ಯಾವುದೇ ಉತ್ತರ ನೀಡಿರುವುದಿಲ್ಲವಾದ್ದರಿಂದ ಈ ಕೆಳಕಂಡ ವಿದ್ಯಾರ್ಥಿಗಳಿಂದ ಪ್ರತಿ ವಿದ್ಯಾರ್ಥಿಗೆ ರೂ. 20,000.00 ರಂತೆ ಒಟ್ಟು ರೂ. 80,000.00ಗಳನ್ನು ವಸೂಲಿಸಿ ವಿಶ್ವವಿದ್ಯಾಲಯ ನಿಧಿಗೆ ಜಮೆ ಮಾಡಲು ಸೂಚಿಸಿದೆ. **2014–15** 1. Sri.Krishna 7th sem, Information Science Rs.4430.00 CF:17383 2. Sanjay BV, Vth sem, Mechanical :Rs.4430.00 CF:18200 **2015-16** 3. Sanjay, vth sem, Mechanical Rs.4430.00 CF:19139 Madhushree, 3rd sem, Information Science :Rs.4430.00 –	2014–15 ಮತ್ತು 2015–16ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ನೌಕರರ ಮಕ್ಕಳಿಗೆ ವಿದ್ಯಾಭ್ಯಾಸಕ್ಕಾಗಿ ವಿನಾಯಿತಿಯನ್ನು ವಿಶ್ವವಿದ್ಯಾಲಯದ ಕುಲಸಚಿವರ ಆದೇಶ ಸಂಖೆ University Vide Notification No. SYN:S1:Misc:24-90-91 dt. 19-3-1991 ಮೇರೆಗೆ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕ ವಿನಾಯತಿ ನೀಡಲಾಗಿದೆ. ಸಂಬಂದಪಟ್ಟ ಪ್ರತಿಗಳನ್ನು ಲಗತ್ತಿಸಿದೆ. ಕುಲಸಚಿವರ ಆದೇಶದ ಪ್ರಕಾರ ವಿಶ್ವವಿದ್ಯಾಲಯದ ನೌಕರರ ಮಕ್ಕಳಿಗೆ ಈ ಕೆಳಕಂಡಂತೆ ಪ್ರವೇಶ ಶುಲ್ಕ ವಿನಾಯತಿ ನೀಡಿರುವ ವಿವರ. ವಿದ್ಯಾರ್ಥಿ ಹೆಸರು | ಒಟ್ಟು ಪ್ರವೇಶ ಶುಲ್ಕ | ಪ್ರವೇಶ ಶುಲ್ಕ ವಿನಾಯಿತಿ | ಅಭಿವೃದ್ಧಿ ಶುಲ್ಕ ವಿನಾಯಿತಿ | ಒಟ್ಟು | ಬಾಕಿ ಜಾಮ ಮಾಡಿರುವುದು Krishna, | 24,430 | 15,000 | 5,000 | 20,000 | 4,430 Sanjay B V | 24,430 | 15,000 | 5,000 | 20,000 | 4,430 Sanjay | 24,430 | 15,000 | 5,000 | 20,000 | 4,430 Madhushree | 24,430 | 15,000 | 5,000 | 20,000 | 4,430 ಅದ್ದರಿಂದ ಕುಲಸಚಿವರು ವಿನಾಯತಿ ನೀಡಿರುವುದರಿಂದ 80,000/–ಗಳನ್ನು ವಸೂಲಾತಿಯಿಂದ ಕೈಬಿಡಲುಕೋರಿದೆ **(ಅನುಬಂಧ–105)**.
24. ಮಂಜೂರಾತಿ ಆದೇಶವಿಲ್ಲದೇ ಪರೀಕ್ಷಾ ವಿಭಾಗಕ್ಕೆ ಹೊರಗುತ್ತಿಗೆ ಆಧಾರದಲ್ಲಿ ಸಿಬ್ಬಂದಿಯನ್ನು ನೇಮಿಸಿಕೊಂಡು ಪಾವತಿಸಿರುವ ಮೊತ್ತ ರೂ.48,48,514.00 ಆಕ್ಷೇಪಣೆ.	
ಕುಲಸಚಿವರು ಮೌಲ್ಯಮಾಪನ ವಿಭಾಗದಲ್ಲಿ 2015–16 ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ದಿನಾಂಕ 7.4.2015 ರಿಂದ 30.9.2015 ರ ಅವಧಿಯವರೆಗೆ 51 ಜನರ ಹೊರಗುತ್ತಿಗೆಯ ಆಧಾರದ ಸೇವೆಯನ್ನು ಮುಂದುವರಿಸಿರುವ ಬಗ್ಗೆ ಕಡತಗಳಲ್ಲಿ ಮಾಹಿತಿಗಳು ಲಭ್ಯವಿಲ್ಲದ ಕಾರಣ ಹಾಗೂ ಖಾಯಂ ಹುದ್ದೆಗೆ ಎದುರಾಗಿ ನೇಮಿಸಿಕೊಂಡಿರುವ ನೇಮಕಾತಿ ವಿವರದ ದಾಖಲೆಗಳು	ವಿಶ್ವವಿದ್ಯಾಲಯ ಕಛೇರಿ ಟಿಪ್ಪಣಿ ಸಂಖ್ಯೆ:ಇ.ಎಸ್.ಟಿ–1/ಸಿ1/ಹೊಗು/2013, ದಿನಾಂಕ:17.06.2015ರ ಪ್ರಕಾರ ಪರೀಕ್ಷಾ ವಿಭಾಗಕ್ಕೆ 07.04.2015 ರಿಂದ 6 ತಿಂಗಳ ಅವಧಿಗೆ (30.09.2015) ರವರೆಗೆ ಒಟ್ಟು 51 ವಿವಿಧ ಹೊರಗುತ್ತಿಗೆ ನೌಕರರ ಸೇವೆಯನ್ನು ಪಡೆಯಲು ಕುಲಸಚಿವರು ಅನುಮೋದನೆ ನೀಡಿರುತ್ತಾರೆ. ಈ ಆದೇಶದಂತೆ 51 ಹೊರಗುತ್ತಿಗೆ ನೌಕರರಿಗೆ 07.04.2015 ರಿಂದ 30.09.2015 ರವರೆಗೆ ವೇತನ

ಆಕ್ಷೇಪಣೆಗಳು	***ಉತ್ತರಗಳು***
ಹಾಗೂ ಸಿಬ್ಬಂದಿಯ ಅವಶ್ಯಕತೆಯ ಮಾಹಿತಿಗಳನ್ನು ನೀಡದ ಕಾರಣ ಮಂಜೂರಾತಿ ಆದೇಶವಿಲ್ಲದೆ ಪಾವತಿಸಿರುವ ಮೊತ್ತ ರೂ.48,48,514.00 ಗಳನ್ನು ಆಕ್ಷೇಪಣೆಯಲಿಡಲಾಗಿದೆ.	ಪಾವತಿಮಾಡಲಾಗಿದೆ. ಕುಲಸಚಿವರಿಂದ ಅನುಮೋದಿಸಲ್ಪಟ್ಟಿರುವ ಕಛೇರಿಯ ಟಿಪ್ಪಣಿಯ ಪ್ರತಿ ಲಗತ್ತಿಸಿದೆ. ಖಾಲಿ ಹುದ್ದೆಗಳನ್ನು ಪರಿಗಣಿಸಿ ಹೊರಗುತ್ತಿಗೆ ಮೇಲೆ ಸೇವೆ ಪಡೆಯಲಾಗಿತಿದ್ದು, ಮೌಲ್ಯಮಾಪನ ವಿಭಾಗದ ಕೆಲಸಗಳು ಕಾಲಪರಿಮಿತಿಗೆ ಒಳಪಟ್ಟಿದ್ದು ತ್ವರಿತವಾಗಿ ಹಾಗೂ ಸುಗಮವಾಗಿ ಕಾರ್ಯ ನಿರ್ವಹಿಸಬೇಕಾಗಿದ್ದು ಖಾಯಂ ನೌಕರರ ನಿವೃತ್ತಿ ಮತ್ತು ಹೊಸ ನೇಮಕಾತಿಗಳು ಆಗುತ್ತಿಲ್ಲವಾದುದರಿಂದ ತಾತ್ಕಾಲಿಕವಾಗಿ ಹೊರಗುತ್ತಿಗೆ ಸೇವೆ ಪಡೆಯಲಾಗಿದೆ. ವಿಶ್ವವಿದ್ಯಾಲಯ ಅದೇಶ ದಿನಾಂಕ:17.06.2015 ಹಾಗೂ 04.12.2015ರ ಪ್ರಕಾರ ಪರೀಕ್ಷಾ ವಿಭಾಗಕ್ಕೆ 51 ಹೊರಗುತ್ತಿಗೆ ನೌಕರರ ಸೇವೆಯನ್ನು ಪಡೆಯಲು ಅನುಮತಿ ನೀಡಿರುವಂತೆ, ಮಂಜೂರಾದ ಹೊರಗುತ್ತಿಗೆ ನೌಕರರ ಧೃಢೀಕೃತ ಪ್ರತಿಯನ್ನು ಒದಗಿಸಲಾಗಿದೆ **(ಅನುಬಂಧ–106)** (ಪು.ಸಂ.694) ಆದುದ್ದರಿಂದ ಆಕ್ಷೇಪಣೆ ಮೊತ್ತ ರೂ.48,48,514.00 ಗಳನ್ನು ಕೈ ಬಿಡುವಂತೆ ಕೋರಲಾಗಿದೆ.

ಆಕ್ಷೇಪಣೆಗಳು	*ಉತ್ತರಗಳು*

25. ಪರೀಕ್ಷಾ ಕಾರ್ಯದ ಸಲುವಾಗಿ ಅವಶ್ಯಕತೆಗಿಂತ ಹೆಚ್ಚುವರಿ ಮೌಲ್ಯಮಾಪಕರು / ದಿನಗೂಲಿ ನೌಕರರುಗಳನ್ನು ನೇಮಿಸಿಕೊಂಡು ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತ ರೂ.1,42,250.00 ವಸೂಲಾತಿ ಹಾಗೂ ರೂ.1,25,000.00(ಆಕ್ಷೇಪಣೆ)

ಕುಲಸಚಿವರು (ಮೌಲ್ಯಮಾಪನ), ಬೆಂಗಳೂರು ವಿಶ್ವವಿದ್ಯಾಲಯ ಇವರ ಆದೇಶ ಸಂ:U O NO:EX-1/APT/ VAL/ REVN of REMN/MISC/2010-11 Dated; 3–12–2010 & 25–3–2011 ಸೂಚನಾ ಪತ್ರ ದಿನಾಂಕ 16–08–2011 & 7–3–2015 ಕ್ಕೆ ಸಂಭಂದಿಸಿದಂತೆ ಮತ್ತು 2015–16 ನೇ ಸಾಲಿನಲ್ಲಿ ಯು.ಜಿ / ಪಿ.ಜಿ ಪರೀಕ್ಷಾ ಉತ್ತರ ಪತ್ರಿಕೆ ಮೌಲ್ಯಮಾಪನ ಘಟಕಗಳಿಗೆ ಸಂಬಂಧಿಸಿದಂತೆ ಕಡತಗಳನ್ನು ಪರಿಶೀಲಿಸಿದಾಗ ನಿಯಮಗಳಿಗೆ ವಿರುದ್ಧವಾಗಿ ಪಾವತಿಸಿರುವುದು ಕಂಡು ಬಂದಿರುತ್ತದೆ.

ಮೌಲ್ಯಮಾಪನ ಸಂಭಾವನೆಗೆ ಸಂಬಂಧಿಸಿದಂತೆ, ಬೆಂಗಳೂರು ವಿವಿ ನಿಯಮಗಳಲ್ಲಿ ನಿರ್ಧರಿಸಿದಕ್ಕಿಂತ "ಹೆಚ್ಚುವರಿ ಮೌಲ್ಯಮಾಪಕರು/ದಿನಗೂಲಿ ನೌಕರರನ್ನು ಹೆಚ್ಚುವರಿಯಾಗಿ ನೇಮಿಸಿದ್ದು, ಹಾಗೂ ದಿನಗಳಿಗಿಂತ ಹೆಚ್ಚು ಸಂಭಾವನೆ ನೀಡಿರುವುದು ಮತ್ತು ಹೆಚ್ಚುವರಿ ಮುಂಗಡ ನೀಡಿರುವುದರ ಬಗ್ಗೆ ಸಂಬಂಧಪಟ್ಟ ಪಾವತಿಗೆ ಅಧಿಕೃತ ಆದೇಶ, ಅನುಮೋದನೆಗಳೇನಾದರೂ ಇದ್ದರೆ ಪರಿಶೀಲನೆಗೆ ನೀಡಲು, ಇಲ್ಲವೆ ಈ ರೀತಿ ಹೆಚ್ಚುವರಿ ಪಾವತಿ ಬಗ್ಗೆ ತಮ್ಮ ಸಮರ್ಥನೆಯನ್ನು ನೀಡದಿರುವ ಕಾರಣ ಹೆಚ್ಚುವರಿಯಾಗಿ ಪಾವತಿಯಾದ ಕ್ರ.ಸಂ. 1 ರಿಂದ 3 ವರೆಗಿನ ಮೊತ್ತ ರೂ.1,42,250.00 ಗಳನ್ನು ವಸೂಲಾತಿಗೆ ಹಾಗೂ ಎ.ಸಿ.ಮುಂಗಡದ ಕ್ರ.ಸಂ. 4ರ ಮೊತ್ತ ರೂ. 1,25,000.00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳು ಈ ರೀತಿ ಇರುತ್ತವೆ.

ಕ್ರ. ಸಂ.	ಕಡತ ಸಂ & ಉತ್ತರ ಪತ್ರಿಕೆ ಸಂಖ್ಯೆ	ಮುಖ್ಯ ಮೌಲ್ಯಮಾಪಕರ ಹೆಸರು	ನೇಮಿಸಿರುವ ಹೆಚ್ಚುವರಿ ಸೌಕರರ ಹೆಸರು ಮತ್ತು ಹೆಚ್ಚುವರಿ ದಿನಗಳ ವಿವರ	ಹೆಚ್ಚುವರಿ ಪಾವತಿ ಮೊತ್ತ	ಷರಾ	ಉತ್ತರ
1	907/S3501	ಡಾ॥ಜ್ಯೋತಿ ವಿಶ್ವನಾಥ	ಡಾ॥ಜ್ಯೋತಿವಿಶ್ವನಾಥ (ಮುಖ್ಯ ಮೌಲ್ಯಮಾಪಕರು)	23x750 =17250.00	ಸದರಿ ಸ್ಕ್ರೀಪ್ಟ್‌ಗೆ 25 ದಿನಕ್ಕೆ ಬದಲಾಗಿ 48 ದಿನ ತೆಗೆದುಕೊಳ್ಳಲಾಗಿದೆ.	(1) ಕ್ರಮ ಸಂಖ್ಯೆ (1)ರ ಡಾಜ್ಯೋತಿ ವಿಶ್ವನಾಥ್ ಇವರು 25 ದಿನಗಳಿಗೆ ಬದಲಾಗಿ 48 ದಿನಗಳು ತೆಗೆದುಕೊಳ್ಳಲಾಗಿದೆ ಎಂದು ಆಕ್ಷೇಪಿಸಲಾಗಿದೆ. ಕುಲಸಚಿವರು (ಮೌಲ್ಯಮಾಪನ) ಇವರ ಪ್ರಕಟಣೆ ಸಂಖ್ಯೆ Ecx-1/RECN/ALLo/ REMN/ MISC/2011-12 ದಿನಾಂಕ:16.08.2011ರ ಪುಟ ಸಂಖ್ಯೆ (10)ರ ಕ್ರಮ ಸಂಖ್ಯೆ (2)ರಲ್ಲಿ ತಿಳಿಸಿರುವಂತೆ ಮೌಲ್ಯಮಾಪನ ಘಟಕದಲ್ಲಿ ಪೂರ್ವ ಸಿದ್ದತೆಗೆ 10 ದಿನಗಳು ಮತ್ತು ಮೌಲ್ಯ ಮಾಪನದ ಅವಧಿ ಒಟ್ಟು 20 ದಿನಗಳು 18 ದಿನಗಳ ಸ್ವೀಕೃತಿ ದಿನಗಳು ಸೇರಿ ಒಟ್ಟು 48 ದಿನಗಳು ಮೌಲ್ಯಮಾಪನ ಘಟಕಕ್ಕೆ ಬಳಸಿಕೊಂಡಿರುವುದು ಸರಿಯಾಗಿದೆ. ಅವಧಿ ಕ್ರಮಬದ್ಧವಾಗಿದೆ ಹಾಗೂ

ಆಕ್ಷೇಪಣೆಗಳು						***ಉತ್ತರಗಳು***
ಕ್ರ. ಸಂ.	ಕಡತ ಸಂ & ಉತ್ತರ ಪತ್ರಿಕೆ ಸಂಖ್ಯೆ	ಮುಖ್ಯ ಮೌಲ್ಯಮಾಪಕರ ಹೆಸರು	ನೇಮಿಸಿರುವ ಹೆಚ್ಚುವರಿ ಸೌಕರರ ಹೆಸರು ಮತ್ತು ಹೆಚ್ಚುವರಿ ದಿನಗಳ ವಿವರ	ಹೆಚ್ಚುವರಿ ಪಾವತಿ ವೊತ್ತ	ಷರಾ	ಉತ್ತರ
						ಇಬ್ಬರು ದಿನಗೂಲಿ ನೌಕರರನ್ನು (ಪುಟ ಸಂಖ್ಯೆ 9) ನೇಮಿಸಿಕೊಳ್ಳಬಹುದಾಗಿದೆ. ಆದುದರಿಂದ ರೂ.35250.00 ಗಳನ್ನು ವಸೂಲಾತಿಯಿಂದ ಕೈ ಬಿಡುವಂತೆ ಕೋರಲಾಗಿದೆ. **(ಅನುಬಂಧ–107)** (ಪು.ಸಂ.711)
			ಶ್ರೀಮತಿ.ಶೋಭ.ಕೆ (ಸಹಾಯಕ ಮೌಲ್ಯಮಾಪಕರು)	12x750=9000.00	ಸಹಾಯಕ ಮೌಲ್ಯ ಮಾಪಕರು ರವರಿಗೆ 25 ದಿನಕ್ಕೆ ಬದಲಾಗಿ 37 ದಿನಕ್ಕೆ ಪಾವತಿಸಿದೆ.	ಪರೀಕ್ಷಾ ಪ್ರಕರಣೆ Ex-1/REVN/REMN/ MISC/2011-12___ದಿನಾಂಕ: 16.08.2011 ರ ಅಂಶ XIರ ಪ್ರಕಾರ ಟಿಪ್ಪಣಿ (1)ರಲ್ಲಿ ತಿಳಿಸಿರುವಂತೆ ಉತ್ತರ ಪ್ರತಿಕೆಗಳ ಪ್ರಮಾಣ 40.000.00 ಮೀರಿದಲ್ಲಿ ಕುಲಸಚಿವರು (ಮೌ) ರವರ ಅನುಮೋದನೆ ಪಡೆದು, ಒಂದು ಹೆಚ್ಚುವರಿ ಕಸ್ಟೋಡಿಯನ್ ಉಪಯೋಗಿಸಿ ಕೊಳ್ಳುವ ಅವಕಾಶವಿರುವುದರಿಂದ ಅದರಂತೆ ಕುಲಸಚಿವರು (ಮೌ) ಇವರ ಅನುಮೋದನೆ ಪಡೆದು ಈ ಕಂಡೀಕೆಯ ಕ್ರಮ ಸಂಖ್ಯೆ(2)ರಲ್ಲಿ ತಿಳಿಸಿರುವ ಶ್ರೀ ಪಾರ್ಥ ಸಾರಥಿ (ಸಹಾಯಕ ಮೌಲ್ಯಮಾಪಕರು) ಇವರನ್ನು ಹೆಚ್ಚುವರಿ ಸಹಾಯಕ ಮೌಲ್ಯಮಾಪಕರನ್ನು ನೇಮಿಸಿ ಕೊಂಡು ಅವರಿಗೆ ಪಾವತಿಸಲಾಗಿದೆ. ಆದುದರಿಂದ ರೂ.30,000.00ಗಳನ್ನು ವಸೂಲಾತಿಯಿಂದ ಕೈಬಿಡಲು ವಿನಂತಿಸಲಾಗಿದೆ.

ಆಕ್ಷೇಪಣೆಗಳು						ಉತ್ತರಗಳು
ಕ್ರ. ಸಂ.	ಕಡತ ಸಂ & ಉತ್ತರ ಪತ್ರಿಕೆ ಸಂಖ್ಯೆ	ಮುಖ್ಯ ಮೌಲ್ಯಮಾಪಕರ ಹೆಸರು	ನೇಮಿಸಿರುವ ಹೆಚ್ಚುವರಿ ನೌಕರರ ಹೆಸರು ಮತ್ತು ಹೆಚ್ಚುವರಿ ದಿನಗಳ ವಿವರ	ಹೆಚ್ಚುವರಿ ಪಾವತಿ ಮೊತ್ತ	ಷರಾ	ಉತ್ತರ
			ಶ್ರೀಮತಿ ನಾಗರತ್ನಮ್ಮ (ಸ್ವೀಪರ್)	30x300=9000.00	ಸಹಾಯಕ ಮೌಲ್ಯ ಮಾಪಕರು ರವರಿಗೆ 25 ದಿನಕ್ಕೆ ಬದಲಾಗಿ 37 ದಿನಕ್ಕೆ ಪಾವತಿಸಿದೆ.	LLB ಮೌಲ್ಯಮಾಪನ ಕಾರ್ಯ Centralized ಆಗಿದ್ದು ಡಾ॥ ಜ್ಯೋತಿ ವಿಶ್ವನಾಥ್ (ಕಸ್ಟೋಡಿಯನ್) ಶ್ರೀಮತಿ ಶೋಭ ಕೆ. (ಸಹಾಯಕ ಕಸ್ಟೋಡಿಯನ್) ಮತ್ತು ನಾಗರತ್ನಮ್ಮ (ಸ್ವೀಪರ್) ರವರಿಗೆ ಅಧಿಸೂಚನೆ ದಿನಾಂಕ: 16.08.2011ರ ಮತ್ತು EX-1/UG.PG/DC REV.REMN/2016-17 ದಿನಾಂಕ:14.11.2016 ಪ್ರಕಾರ ಸಂಭಾವನೆಯನ್ನು ಮಂಜೂರು ಮಾಡಲಾಗಿದ್ದು, ಈ ಅಧಿಸೂಚನೆಯ ಪ್ರಕಾರ ಕಸ್ಟೋಡಿಯನ್ ಮತ್ತು ಸಹಾಯಕ ಕಸ್ಟೋಡಿಯನ್ ರವರಿಗೆ ಎಷ್ಟು ದಿನಗಳು ಸಂಭಾವನೆಯನ್ನು ನೀಡಬೇಕೆಂದು ನಿಗಧಿಪಡಿಸಿರುತ್ತಾರೆ. ಆದರೆ ದಿನಗೂಲಿ ನೌಕರಾರಿಗೆ ಎಷ್ಟು ದಿನಗಳು ಘಟಕ ಕಾರ್ಯನಿರ್ವಹಿಸಿರುತ್ತಾರೋ ಅಷ್ಟು ದಿನಗಳು ದಿನಗೂಲಿ ನೌಕರರಿಗೆ ಸಂಭಾವನೆಯನ್ನು ನೀಡಬಹುದು. ಈ ಘಟಕದಲ್ಲಿ ಇಬ್ಬರೂ ದಿನಗೂಲಿ ನೌಕರರು ಸೇವೆಯನ್ನು ಉಪಯೋಗಿಸಿಕೊಂಡು ಸಂಭಾವನೆಯನ್ನು ನೀಡಿರುತ್ತಾರೆ. ಆದುದರಿಂದ ಈ ಆಕ್ಷೇಪನೆಯನ್ನು ಕೈ ಬಿಡಲು ಕೋರಲಾಗಿದೆ.

ಆಕ್ಷೇಪಣೆಗಳು						ಉತ್ತರಗಳು
ಕ್ರ. ಸಂ.	ಕಡತ ಸಂ & ಉತ್ತರ ಪತ್ರಿಕೆ ಸಂಖ್ಯೆ	ಮುಖ್ಯ ಮೌಲ್ಯಮಾಪಕರ ಹೆಸರು	ನೇಮಿಸಿರುವ ಹೆಚ್ಚುವರಿ ಸೌಕರರ ಹೆಸರು ಮತ್ತು ಹೆಚ್ಚುವರಿ ದಿನಗಳ ವಿವರ	ಹೆಚ್ಚುವರಿ ಪಾವತಿ ಮೊತ್ತ	ಷರಾ	ಉತ್ತರ
2	902/S53490	ಶ್ರೀ.ನಾಗರಾಜು.ಎಂ	ಶ್ರೀ.ಪಾರ್ಥಸಾರಥಿ (ಸಹಾಯಕ ಮೌಲ್ಯಮಾಪಕರು)	40x750=30000.00	ಸಹಾಯಕ ಮೌಲ್ಯಮಾಪಕರು ಇಬ್ಬರು ಮಾತ್ರ ಇರಬೇಕಿದ್ದರೂಇಲ್ಲಿ 3ಜನಕ್ಕೆ ನೇಮಿಸಲಾಗಿದೆ.	ಶ್ರೀ ನಾಗರಾಜು ಎಂ. ಇವರು B.Ed ಪರೀಕ್ಷೆಗೆ (ಕಸ್ಟೋಡಿಯನ್) ಕಾರ್ಯನಿರ್ವಹಿಸಿದ್ದು ಶ್ರೀ.ಪಾರ್ಥಸಾರಥಿ ರವರು ಸಹಾಯಕ ಕಸ್ಟೋಡಿಯನ್ ಆಗಿ ಕಾರ್ಯನಿರ್ವಗಿಸಿದ್ದು, ಅಧಿಸೂಚನೆ ದಿನಾಂಕ:16.08.2011ರ ಪ್ರಕಾರ ಒಟ್ಟು ಉತ್ತರ ಪ್ರತ್ರಿಕೆಗಳು 40,000 ಕ್ಕಿಂತ ಅಧಿಕವಿದ್ದರೇ ಮೌಲ್ಯಮಾಪನಕ್ಕೆ ಒಂದು ಹೆಚ್ಚುವರಿ ಸಹಾಯಕ ಕಸ್ಟೋಡಿಯನ್ ಸೇವೆಯನ್ನು ಉಪಯೋಗಿಸಿಕೊಳ್ಳುವ ಅವಕಾಶವಿದ್ದ ಕಾರಣ ಶ್ರೀ ನಾಗರಾಜು ಎಂ. (ಕಸ್ಟೋಡಿಯನ್) ರವರು ಕೋರಿರುವ ಪತ್ರದ ಮೇರೆಗೆ ಕುಲಸಚಿವರು(ಮೌ) ಅನುಮೋದನೆ ಪಡೆದು ಶ್ರೀ.ಪಾರ್ಥಸಾರಥಿಯವರನ್ನು ಹೆಚ್ಚುವರಿ ಸಹಾಯಕ ಕಸ್ಟೋಡಿಯನ್‌ನಾಗಿ ನೇಮಕಾತಿ ಮಾಡಲಾಗಿದೆ.
3	1822/ S2997	ಶ್ರೀ.ಎಂ.ರಾಮಚಂದ್ರಗೌಡ	ಶ್ರೀ.ರಾಮಚಂದ್ರಗೌಡ (ಮುಖ್ಯ ಮೌಲ್ಯಮಾಪಕರು) ಶ್ರೀ.ಕಾರ್ತಿಕ್.ಎಸ್ (ಉಪ ಮ್ಯೌಲ್ಯಮಾಪಕರು) ಶ್ರೀಮತಿ.ಶೃತಿ.ಬಿ (ಸಹಾಯಕ ಮೌಲ್ಯಮಾಪಕರು)	10x3400=34000.00 10x2400=24000.00 10x1900=19000.00	30 ದಿನಕ್ಕೆ ಮಾತ್ರ ಸಂಭಾವನೆ ನೀಡಬೇಕಿರುತ್ತದೆ ಆದರೆ ಇಲ್ಲಿ 40 ದಿನಕ್ಕೆ ಸಂಭಾವನೆ ನೀಡಿದೆ ಹೆಚ್ಚುವರಿ 10 ದಿನಗಳು.	(3) ಈ ಕಂಡಿಕೆಯ ಕ್ರಮ ಸಂಖ್ಯೆ (3)ರಲ್ಲಿ ತಿಳಿಸಿರುವ ಶ್ರೀ. ರಾಮಚಂದ್ರಗೌಡ (ಮುಖ್ಯ ಮೌಲ್ಯಮಾಪಕರು) ಶ್ರೀ ಕಾರ್ತಿಕ್ ಎಸ್ (ಉಪ ಮೌಲ್ಯಮಾಪಕರು) ಶ್ರೀಮತಿ ಶೃತಿ ಬಿ (ಸಹಾಯಕ ಮೌಲ್ಯ ಮಾಪಕರು) ಇವರುಗಳಿಗೆ ಅಧಿಸೂಚನೆ ದಿನಾಂಕ: 07.03.2015 ರ ಪ್ರಾಕರ

ಆಕ್ಷೇಪಣೆಗಳು						ಉತ್ತರಗಳು
ಕ್ರ. ಸಂ.	ಕಡತ ಸಂ & ಉತ್ತರ ಪತ್ರಿಕೆ ಸಂಖ್ಯೆ	ಮುಖ್ಯ ಮೌಲ್ಯಮಾಪಕರ ಹೆಸರು	ನೇಮಿಸಿರುವ ಹೆಚ್ಚುವರಿ ಸೌಕರರ ಹೆಸರು ಮತ್ತು ಹೆಚ್ಚುವರಿ ದಿನಗಳ ವಿವರ	ಹೆಚ್ಚುವರಿ ಪಾವತಿ ಮೊತ್ತ	ಷರಾ	ಉತ್ತರ
						40 ದಿನಗಳ ಸಂಭಾವನೆ ಮಂಜೂರು ಮಾಡಬಹುದಾಗಿದೆ. ಉತ್ತರ ಪ್ರತಿಕೆಗಳು 5000 ರಿಂದ 10,000 ಗಳಿದ್ದರೆ 40 ದಿನಗಳು ಸಂಭಾವನೆ ನೀಡಬಹುಗಿದೆ. ಆಕ್ಷೇಪಣೆಯಲ್ಲಿ ತಿಳಿಸಿರುವಂತೆ 10 ಹೆಚ್ಚುವರಿ ದಿನಗಳ ಸಂಭಾವನೆ ಪಾವತಿಯಾಗಿರುವುದಿಲ್ಲ. ಆದುದರಿಂದ ವಸೂಲಾತಿಗೆ ಸೂಚಿಸಿರುವ ರೂ.77000.00 ಗಳನ್ನು ವಸೂಲಾತಿಯಿಂದ ಕೈ ಬಿಡುವಂತೆ ವಿನಂತಿಸಲಾಗಿದೆ. **(ಅನುಬಂಧ–107)** (ಪು.ಸಂ.711)
4	CN8442/ S221707	ಪ್ರೊ॥ ಆಶಾಗಣೇಶ್			ಸದರಿಯವರು ಮೌಲ್ಯಮಾಪನ ಕಾರ್ಯಕ್ಕೆ ಸಾದಿಲ್ವಾರು ಮುಂಗಡ ರೂ.80,000.00 ಗಳನ್ನು ಮಾತ್ರ ಪಡೆಯಬೇಕಿದ್ದರೂ, ಇಲ್ಲಿ ರೂ.1,25,000.00 ಗಳನ್ನು ನೀಡಿದೆ ಅಂದರೆ	4. UG/ADV/Nov/Dec-2015 Exams Bangalore Dated: 03.11.2015 ರೂ. 1,00,000.00ಗಳನ್ನು ಮತ್ತು ದಿನಾಂಕ: 28.01.2016 ರಲ್ಲಿ ರೂ.25,000/– ಮಂಜೂರಾತಿ ಮಾಡಿ ಒಟ್ಟು ರೂ.1,25,000.00 ಗಳನ್ನು ಪಡೆಯಲಾಗಿದೆ ಆದುದರಿಂದ ಆಕ್ಷೇಪಣೆಯಲ್ಲಿಟ್ಟಿರುವ ಮೊತ್ತ ಕೈ ಬಿಡುವಂತೆ ವಿನಂತಿಸಲಾಗಿದೆ. **(ಅನುಬಂಧ–107)**
				ಒಟ್ಟು ಮೊತ್ತ ರೂ.	**1,42,250.00**	

ಆಕ್ಷೇಪಣೆಗಳು	*ಉತ್ತರಗಳು*
26. ಅಂತರ್ ವಿಶ್ವವಿದ್ಯಾಲಯ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಹೋಗಿ ಬಂದ ಮ್ಯಾನೇಜರ್/ಕೋಚ್‌ಗಳಿಗೆ ಕ್ರೀಡಾ ಪಾಲಿಸಿ ನಿಯಮಗಳಲ್ಲಿ ಅವಕಾಶ ಮಾಡಿಕೊಳ್ಳದೆ ಹಾಗೂ 3 ಎಸಿ ಪ್ರಥಮ ದರ್ಜೆ ರೈಲು ಪ್ರಯಾಣ ಮಾಡದೆ ಸದರಿ ಪ್ರಯಾಣಕ್ಕೆ ದರ ಪಡೆದ ಬಗ್ಗೆ:– ವಸೂಲಾತಿ ಮೊತ್ತ ರೂ. 1,34,615/–	
ದೈಹಿಕ ಶಿಕ್ಷಣ ನಿರ್ದೇಶನಾಲಯ ವಿಭಾಗದಲ್ಲಿ 2014–15 ಮತ್ತು 2015–16ನೇ ಸಾಲಿನ ಅಂತರ್ ವಿಶ್ವವಿದ್ಯಾಲಯ ಕ್ರೀಡಾ ಕೂಟದಲ್ಲಿ ಭಾಗವಹಿಸಿದ ಮ್ಯಾನೇಜರ್/ಕೋಚ್‌ಗಳಿಗೆ ಅವರ ವೇತನಕ್ಕೆ ಸಂಬಂಧಪಟ್ಟ ವರ್ಗೀಕರಣ ಪ್ರಕಾರ ಪ್ರಯಾಣ ಮಾಡಬೇಕಾಗಿರುತ್ತದೆ. ಆದರೆ ವೇತನ ಹಾಗೂ ವರ್ಗೀಕರಣದ ವಿವರ ನೀಡದೆಯಿರುವ ಹಾಗೂ 3 ಎಸಿ ಪ್ರಥಮ ದರ್ಜೆ ರೈಲು ಪ್ರಯಾಣ ಮಾಡುವ ಬಗ್ಗೆ ಟಿಕೇಟ್ ಕೂಡ ಸಲ್ಲಿಸದೇ ಹಾಗೂ ರೈಲು ಪ್ರಯಾಣ ಮಾಡದೆ ಬಸ್ಸಿನಲ್ಲಿ ಪ್ರಯಾಣ ಮಾಡಿದ್ದರೂ ಪ್ರಯಾಣ ಮಾಡದೆ ಕ್ಲೈಮು ಮಾಡಿರುವ ಪ್ರಥಮ ದರ್ಜೆ ರೈಲು ಟಿಕೇಟ್ ದರವನ್ನು **ಅನುಬಂಧ–14ರ**ಲ್ಲಿ ತೋರಿರುವ ಟಿಕೇಟ್ ಇಲ್ಲದ ವ್ಯತ್ಯಾಸದ ಮೊತ್ತ ರೂ. **1,34,615**/– ಗಳನ್ನು ವಸೂಲಾತಿಗೆ ಸೂಚಿಸಿದೆ.	ಅಂತರ ವಿಶ್ವವಿದ್ಯಾಲಯ ಕ್ರೀಡಾಕೂಟಗಳಲ್ಲಿ ಭಾಗವಹಿಸಿರುವ ತರಬೇತುದಾರರು ಮತ್ತು ಮ್ಯಾನೇಜರ್‌ರವರಿಗೆ ಅವರ ವೇತನಕ್ಕೆ ಸಂಬಂಧಿಸಿದಂತೆ ಕೆಲವು ಕ್ರೀಡಾ ಉಪಾಧ್ಯಾಯರುಗಳಿಗೆ ಅವರ ವೇತನದ ವರ್ಗೀಕರಣ ಪ್ರಕಾರ ನೀಡಲಾಗಿದೆ ಹಾಗೂ ಕೆಲವರಿಗೆ 3 ಏ.ಸಿ ಪ್ರಕಾರ ನೀಡಲಾಗಿದೆ. ಈಗಾಗಲೇ ಎಲ್ಲಾ ಕ್ರೀಡೆಗಳು ಕೆಲವು ವಿಶ್ವವಿದ್ಯಾಲಯಗಳಲ್ಲಿ ನಡೆಯುತ್ತವೆ. ಕೆಲವು ವಿಶ್ವವಿದ್ಯಾಲಯಗಳು ಅನ್ವಯ ಮಾಡಿಕೊಂಡು ಬೇರೆ ಬೇರೆ ಕಾಲೇಜುಗಳಲ್ಲಿ ನಡೆಸಿರುತ್ತಾರೆ. (ಉದಾ: ಚೆನ್ನೈನಲ್ಲಿಯೇ ನಡೆಯುವುದಿಲ್ಲಾ ಇನ್ನೂ 10–15 ಕಿ.ಮೀ. ದೂರ ನಡೆಯುತ್ತವೆ ಕ್ರೀಡಾ ಟೋರ್ನಮೆಂಟ್‌ಗಳು) ಬೇರೆ ಕಾಲೇಜುಗಳಲ್ಲಿ ಪಂದ್ಯಾವಳಿಗಳು ನಡೆಯುತ್ತವೆ. ಕ್ರೀಡಾ ಸಮಿತಿ ಸಭೆಯಲ್ಲಿ ಚರ್ಚಿಸಿರುವ ಪ್ರತಿಯನ್ನು ಒದಗಿಸಲು ಸೂಚಿಸಲಾಗಿದೆ. ಅನುಬಂಧ 14ರಲ್ಲಿ ತಿಳಿಸಿರುವಂತೆ ತಾವುಗಳು ವಸೂಲಾತಿಗೆ ಇಟ್ಟಿರುವ ರೂ.1,34,615/–ಈ ಹಿಂದೆ ಕ್ರೀಡಾ ಸಮಿತಿ ಸಭೆಯಲ್ಲಿ ಅನುಮೋಧನೆ ಪಡೆದಿರುವ ಪ್ರತಿಯನ್ನು **(ಅನುಬಂಧ–108)** (ಪು.ಸಂ.723) ಲಗತ್ತಿಸಲಾಗಿದೆ. 2014–15ನೇ ಸಾಲಿನ ಅಂತರ ವಿಶ್ವವಿದ್ಯಾಲಯ ಕ್ರೀಡಾಕೂಟಗಳಿಗೆ ಹೋಗಿಬಂದಿರುವ ತರಬೇತುದಾರರು ಮತ್ತು ಮ್ಯಾನೇಜರ್‌ರವರಿಗೆ ಕ್ರಮ ಸಂಖ್ಯೆ 1ರಿಂದ 36 ವರೆಗೆ ನೀಡಿರುವ ಟಿ.ಎ ಭತ್ಯೆಯನ್ನು ಹೆಚ್ಚುವರಿಯಾಗಿ ನೀಡಿರುತ್ತಿರಾ ಎಂದು ಹೇಳಿರುತ್ತಾರೆ. 14 ಜನ ಕ್ರೀಡಾ ನಿರ್ದೆಶಕರು ವರ್ಗಾವಣೆಯಾಗಿರುತ್ತಾರೆ ಮತ್ತು ಟೆನಿಸ್, ಆರ್ಚರಿ ತಂಡದಲ್ಲಿ ಹೋಗಿದ್ದವರು ಜಯರಾಮೇಗೌಡ, ವಿ.ವಿ.ಪುರಂ ಕಾಲೇಜಿನವರು ತೀರಿಕೊಂಡಿರುತ್ತಾರೆ. ಎಂ.ಎ. ಬೇಗ್ ಮತ್ತು ಡಾ.ಪಟೇಲ್ ಮೊಹಮ್ಮದ್ ಇಲಿಯಾಸ್‌ರವರು 2014–15 & 2015–16ನೇ ಸಾಲಿನ ಹಾಕಿ ಪಂದ್ಯಾವಳಿಗಳನ್ನು ನಡೆಸಿರುತ್ತಾರೆ. ಎಂ.ಎ.ಬೇಗ್‌ರವರು ಎಸ್.ಎ.ಐ. ಪುಟ್‌ಬಾಲ್ ತರಬೇತಿದಾರರು ಪುಟ್‌ಬಾಲ್ 2014–15 & 2015–16ನೇ ಸಾಲಿನ ತರಬೇತಿದಾರರಾಗಿರುತ್ತಾರೆ. ಬ್ಯಾಟ್‌ಮಿಂಟನ್, ಟೆನಿಸ್ ತಂಡದ ಜೊತೆಗೆ ಹೋಗಿದ್ದು ಈ ಇಬ್ಬರೂ ನಿವೃತ್ತಿಯಾಗಿರುತ್ತಾರೆ.

ಆಕ್ಷೇಪಣೆಗಳು	***ಉತ್ತರಗಳು***
	ನಾಲ್ಕು ಜನ SAI ಸಂಸ್ಥೆಗೆ ವರ್ಗಾವಣೆಗೊಂಡಿರುತ್ತಾರೆ ಹಾಗೂ ವಿಶ್ವವಿದ್ಯಾಲಯದ ಕ್ರೀಡಾ ಸಮಿತಿ ಸಭೆಯಲ್ಲಿ ದಿನಾಂಕ:16.02.2009ರಂದು ನಡೆದ ಸಭೆಯಲ್ಲಿ ಟಿ.ಎ ಭತ್ಯೆಯನ್ನು ನೀಡಲು ಅನುಮೊದನೆ ಮಾಡಿರುತ್ತಾರೆ. ದಿನಾಂಕ: 12.03.2012ರಂದು ನಡೆದ ಕ್ರೀಡಾ ಸಮಿತಿ ಸಭೆಯಲ್ಲಿ ಈ ವಿಷಯವಾಗಿ ಚರ್ಚಿಸಲಾಗಿದೆ. ದಿನಾಂಕ:22.02.2016ರಂದು ನಡೆದ ಕ್ರೀಡಾ ಸಮಿತಿ ಸಭೆಯಲ್ಲಿ ಅಂತರ ವಿಶ್ವವಿದ್ಯಾಲಯಗಳಿಗೆ ಹೋಗಿರುವ ತರಬೇತಿದಾರರಿಗೆ ಮತ್ತು ಮ್ಯಾನೇಜರ್‌ರವರಿಗೆ 3 ಏ.ಸಿ ದರದಲ್ಲಿ ನೀಡುತ್ತಿದ್ದಿರಾ. 3 ಏ.ಸಿ ಯಿಂದ 2 ಏ.ಸಿಗೆ ಮಾರ್ಪಡು ಮಾಡಿ ಎಂದು ಆದೇಶ ನೀಡಿರುವುದರಿಂದ ಹಾಗೂ ದಿನಾಂಕ:12.05.2016 ರಂದು ನಡೆದ 128ನೇ ಸಿಂಡಿಕೇಟ್ ಸಭೆಯ ನಡಾವಳಿಗಳ ಕರ್ನಾಟಕ ನಾಗರೀಕ ಸೇವಾ ನಿಯಮಾಗಳಿಗೆ 2 ಏ.ಸಿ ಗೆ ಮಾರ್ಪಡು ಮಾಡಿ ಎಂದು ಆದೇಶ ನೀಡಿರುವ ಪ್ರತಿಯನ್ನು ಲಗತ್ತಿಸಲಾಗಿದೆ **(ಅನುಬಂಧ–101)** (ಪು.ಸಂ.671). ಬಸ್ಸಿನಲ್ಲಿ ಪ್ರಮಾಣಮಾಡಿದರೂ ಪ್ರಥಮ ದರ್ಜೆ ರೈಲು ಪ್ರಯಾಣ ದರದಂತೆ ಅರ್ಹತೆಯ ಆಧಾರ ಪಾವತಿಸಿರುವಂತಹ ಮೊತ್ತಗಳಿಗೆ ಅಂತಹ ವರಿಂದ ವಾಸ್ತವವಾಗಿ ಬಸ್ ಮೂಲಕ ಪ್ರಮಾಣ ಕೈಗೊಂಡ ಪ್ರಕರಣಗಳಿಗೆ ಬಸ್ ಮೊತ್ತಕ್ಕೆ ಮಿತಿಗೊಳಿಸಿ ಅರ್ಹತೆಯ ಆಧಾರ ಪಾವತಿಸಿರುವ ದರದ ವ್ಯತ್ಯಾಸದ ಮೊತ್ತ ವಸೂಲಾತಿ ಮಾಡಿ ವಿವರ ಒದಗಿಸುವಂತೆ ತಿಳಿಸಲಾಗಿದೆ. ಈ ಬಗ್ಗೆ ಪರಿನಿಯಮ ರಚನೆಗೆ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. 2015–16ನೇ ಸಾಲಿನ ರೂ.1,34,615/–ರೂಗಳ ಟಿ.ಎ ಭತ್ಯೆಯನ್ನು ವಸೂಲಾತಿಯಿಂದ ಕೈಬಿಡಲು ಕೋರಿದೆ.
27. ಕ್ರೀಡಾ ತೀರ್ಪುಗಾರರಿಗೆ ತುಟಿಭತ್ಯೆ , ದಿನಭತ್ಯೆ ಪಾವತಿಸಿರುವ ಬಗ್ಗೆ. ಆಕ್ಷೇಪಣೆ ಮೊತ್ತ ರೂ. 8,82,501/–	
ದೈಹಿಕ ಶಿಕ್ಷಣ ನಿರ್ದೇಶನಾಲಯ ವಿಭಾಗದಲ್ಲಿ 2014–15 & 2015–16 ನೇ ಸಾಲುಗಳಲ್ಲಿ "ಕ್ರೀಡಾ ನಿರ್ಣಯಕಾರ (ತೀರ್ಪುಗಾರ) ರವರುಗಳಿಗೆ ಸಂಬಂಧಪಟ್ಟಂತೆ ಕ್ರೀಡಾ ತೀರ್ಪುಗಾರರು ಹಾಗೂ ಕ್ರೀಡಾ ಪರಿಣಿತ ತೀಪುಗಾರರು ರವರುಗಳನ್ನು ಕಳಿಸುವ ಸಂಸ್ಥೆಗಳು ನಿರ್ಣಯಿಸಿದಂತೆ/ಕೋರಿರುವಂತೆ ಸದರಿ ಆಯಾ ಕ್ರೀಡೆಗಳಿಗೆ ಸಂಬಂಧಪಟ್ಟ ಸಂಸ್ಥೆಗಳಿಂದ (ಉದಾಹರಣೆಗಳಾದ B R Tennis Academy B,lore, C M R Institution of management Studies for Ko Ko team, Karnataka volley ball Association, Karnatak Ball Badminton Referee Board(R) , Karnataka	ಕ್ರೀಡಾ ತೀರ್ಪುಗಾರರಿಗೆ ತುಟ್ಟಿ ಭತ್ಯೆ, ದಿನ ಭತ್ಯೆ, ಪಾವತಿಸಿರುವ ಆಕ್ಷೇಪಣಾ ಮೊತ್ತಕ್ಕೆ ಸಂಬಂಧಿಸಿದಂತೆ ಸುಮಾರು ಈ ಹಿಂದಿನ ಪದ್ದತಿಯಂತೆ ಕ್ರೀಡಾ ಪರಿಣಿತರಿಗೆ ಟಿ.ಎ ಮತ್ತು ಡಿ.ಎ ಕೆಲವು ಉಪಾಧ್ಯಾಯರುಗಳು ಕೋಲಾರ, ಮುಳುಬಾಗಿಲು, ಕೆ.ಜಿ.ಎಫ್, ಚಿಂತಾಮಣಿ, ಮಾಲೂರು ಕಾಲೇಜುಗಳಿಂದ ಕ್ರೀಡಾ ಉಪಾಧ್ಯಾಯರು, ಕ್ರೀಡಾ ಪರಿಣಿತರು ವಿದ್ಯಾರ್ಥಿಗಳು ಬಂದಿರುತ್ತಾರೆ. ಅಲ್ಲಿನವರಿಗೆ ಊಟದ ವ್ಯವಸ್ಥೆ, ಪ್ರಯಾಣಭತ್ಯೆ ಮತ್ತು

ಆಕ್ಷೇಪಣೆಗಳು	***ಉತ್ತರಗಳು***
Amateur body builders Association Karntaka state Cricket Association & etc) ಬಂದ ತೀರ್ಪುಗಾರರ ದಿನಭತ್ಯೆಗಳನ್ನು, ಪ್ರಯಾಣಭತ್ಯಗಳನ್ನು ಪಾವತಿಸಿರುವುದು ಪರಿಶೀಲನೆಯಿಂದ ತಿಳಿದುಬಂದಿರುತ್ತದೆ .ಈ ಸಂಬಂದ ಬೆಂಗಳೂರು ವಿಶ್ವವಿದ್ಯಾಲಯದಿಂದ ಪಾವತಿಸಬೇಕಾದ ದಿನಭತ್ಯೆ, ಪ್ರಯಾಣ ಭತ್ಯೆ, ಹಾಗೂ ಇನ್ನಿತರೆ ವೆಚ್ಚಗಳ ವಿವರಗಳಿಗೆ ಸಂಬಂಧಿಸಿದಂತೆ ಕ್ರೀಡಾಪಾಲಿಸಿಗಳ ನಿಯಮಗಳು, ಪರಿಷ್ಕೃತ ನಿಯಮಗಳು, ಅಧಿಕೃತ ಅನುಮೋಧನೆಗಳಿದ್ದರೆ ಹಾಗೂ ಏನಾದರೂ ಪರಿ ನಿಯಮಗಳನ್ನು ರಚಿಸಿಕೊಂಡು ಸರ್ಕಾರದಿಂದ ಅನುಮೋದನೆ ಪಡೆದಿದ್ದರೆ ಅದನ್ನು ಪರಿಶೀಲನೆಗೆ ನೀಡಲು ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ 7 ರಲ್ಲಿ ಕೋರಲಾಗಿತ್ತು. ಆದರೆ ಸದರಿ ಸಂಬಂಧ ಪ್ರತ್ಯುತ್ತರಿಸಿರುವುದಿಲ್ಲವಾದ ಕಾರಣ ಹಾಗೂ ಸದರಿ ಕ್ರೀಡಾತೀರ್ಪಗಾರರಿಗೆ ಪಾವತಿಯಾದ ದಿನಭತ್ಯೆ/ಪ್ರಯಾಣಭತ್ಯೆಯ ಕೆಲವು ಬಿಲ್ಲುಗಳಲ್ಲಿ ಎಷ್ಟು ದಿನಕ್ಕೆ.? ಎಷ್ಟು ದಿನಭತ್ಯೆ? ಎಂಬ ಬಗ್ಗೆ ವಿವರಗಳಿರುವುದಿಲ್ಲ, ಆದರೆ ಒಟ್ಟು ಪಾವತಿಯಾದ ಮೊತ್ತ ಮಾತ್ರ ತೋರಿದೆ ಹಾಗೂ ಕೆಲವು ಬಿಲ್ಲುಗಳಲ್ಲಿ ಯಾರಿಗೆ ಪಾವತಿಸಿದೆ ಅವರ ಹೆಸರಾಗಲೀ, ವಿವರಗಳಾಗಲಿ ಇರುವುದಿಲ್ಲಾ ಆದಕಾರಣ ಸದರಿ ಪಾವತಿ ಅನುಮಾನಕ್ಕೆ ದಾರಿಮಾಡಿಕೊಡುವುದರಿಂದ Inter collegiate tournament & All India inter University championship ಗೆ ಸಂಬಂಧಪಟ್ಟ ಕ್ರೀಡಾ ನಿರ್ಣಯಕಾರರಿಗೆ ಪಾವತಿಸಿದ ಪೂರ್ಣ ಮಾಹಿತಿಯೊಂದಿಗೆ ವಿಚಾರಣೆಯಲ್ಲಿ ಕೋರಿರುವ ವಿವರಗಳನ್ನು ನೀಡುವವರೆಗೆ **ಅನುಬಂಧ–15** ರಲ್ಲಿನ ಮೊತ್ತ ರೂ 8,82,501/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.	ದಿನಭತ್ಯೆ ಇವುಗಳನ್ನು ನೋಡಿಕೊಂಡು ಕರ್ನಾಟಕ ಅಮೇಚರ್ ಆಸೋಸಿಯೇಷನ್‌ರವರ ಪ್ರಕಾರ ತಪಾಸಣೆ ಮಾಡಿ ಕ್ರೀಡೆಗಳ ಬಗ್ಗೆ ಪರೀಶಿಲಿಸಿ ನಂತರ ಈ ಎಲ್ಲಾ ನೂನ್ಯತೆಗಳನ್ನು ಸರಿಪಡಿಸಿಕೊಂಡು ಅವರುಗಳಿಗೆ ಟಿ.ಎ, ಡಿ.ಎ ಭತ್ಯೆಗಳನ್ನು ನೀಡಲಾಗಿದೆ. ವಿವಿಧ ಕ್ರೀಡೆಗಳ ಆದೇಶಕ್ಕೆ ಅನುಸಾರವಾಗಿ 3 ದಿನ, 2 ದಿನ, ವ್ಯವಸ್ಥೆಗಳಿಗೆ ಅನುಸಾರವಾಗಿ ತಾವುಗಳು ಅನುಬಂಧ 15ರಲ್ಲಿ ನೀಡಿರುವುದರಿಂದ ಇನ್ನೂ ಮುಂದಿನ ಸಾಲಿನ ಕ್ರೀಡಾಸಮಿತಿ ಸಭೆಯಲ್ಲಿ ಚರ್ಚಿಸಿ ಪರಿನಿಯಮ ರಚನೆಗೆ ಕ್ರಮ ವಹಿಸಲಾಗುವುದು ಮತ್ತು ಆಕ್ಷೇಪಣೆಯಲ್ಲಿ ಇಟ್ಟಿರುವ ರೂ.8,82,501/– (ಎಂಟು ಲಕ್ಷದ ಎಂಭತ್ತೆರಡು ಸಾವಿರದ ಐದು ನೂರು ಒಂದು ರೂಪಾಯಿಗಳು) ರೂಗಳ ಆಕ್ಷೇಪಣೆಯಿಂದ ಕೈಬಿಡಲು ಕೋರಿದೆ.
28. ಕ್ರೀಡಾ ಮ್ಯಾನೇಜರ್/ ಕೋಚ್‌ಗಳಿಗೆ ದಿನಭತ್ಯೆ, ಪ್ರಯಾಣಭತ್ಯೆ ಪಾವತಿಸಿರುವ ಬಗ್ಗೆ. ಆಕ್ಷೇಪಣೆ ಮೊತ್ತ ರೂ. 3,33,180/–	
ದೈಹಿಕ ಶಿಕ್ಷಣ ನಿರ್ದೇಶನಾಲಯ ವಿಭಾಗದಲ್ಲಿ 2014–15 & 2015–16 ನೇ ಸಾಲುಗಳಲ್ಲಿ "ಕ್ರೀಡಾ ಮ್ಯಾನೇಜರ್‌ಗಳಿಗೆ/ಕೋಚ್‌ಗಳಿಗೆ, ಸಂಬಂಧಪಟ್ಟಂತೆ ಪಾವತಿಸಬೇಕಾದ ದಿನಬತ್ಯೆ, ಪ್ರಯಾಣ ಭತ್ಯೆ, ಹಾಗೂ ಇನ್ನಿತರೆ ವೆಚ್ಚಗಳ ವಿವರಗಳಿಗೆ ಸಂಬಂಧಿಸಿದಂತೆ ಕ್ರೀಡಾ ಪಾಲಿಸಿಗಳ ನಿಯಮಗಳು, ಪರಿಷ್ಕೃತ ನಿಯಮಗಳು, ಅಧಿಕೃತ ಅನುಮೋಧನೆಗಳಿದ್ದರೆ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದಿಂದ ಏನಾದರೂ ಪರಿನಿಯಮಗಳನ್ನು ರಚಿಸಿಕೊಂಡು ಸರ್ಕಾರದಿಂದ ಅನುಮೋದನೆ ಪಡೆದಿದ್ದರೆ ಅದನ್ನು ಲೆಕ್ಕಪರಿಶೀಲನೆಗೆ ನೀಡಲು ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ 7 ರಲ್ಲಿ ಕೋರಲಾಗಿತ್ತು. ಆದರೆ ಸದರಿ ಸಂಬಂಧ ಪ್ರತ್ಯುತ್ತರಿಸಿರುವುದಿಲ್ಲವಾದ ಕಾರಣ ಹಾಗೂ ಸದರಿ ಮ್ಯಾನೇಜರ್/ಕೋಚ್‌ಗಳಿಗೆ ಪಾವತಿಯಾದ ದಿನಭತ್ಯೆ/ಪ್ರಯಾಣ ಭತ್ಯೆಯ ಕೆಲವು ಬಿಲ್ಲುಗಳಲ್ಲಿ ಎಷ್ಟು ದಿನಕ್ಕೆ ? ಎಷ್ಟು ದಿನಭತ್ಯೆ ? ಎಂಬ ಬಗ್ಗೆ ವಿವರಗಳಿರುವುದಿಲ್ಲ, ಆದರೆ ಒಟ್ಟು ಪಾವತಿಯಾದ ಮೊತ್ತ	ಕ್ರೀಡಾ ಮ್ಯಾನೇಜರ್ / ಕೋಚ್‌ಗಳಿಗೆ, ದಿನಭತ್ಯೆ, ಪ್ರಯಾಣ ಭತ್ಯೆ, ಕ್ರೀಡಾ ಪಾಲಿಸಿಯ ಅನುಮೋದನೆಯಂತೆ ದಿನಭತ್ಯೆ, ಪ್ರಯಾಣ ಭತ್ಯೆ ನೀಡಬೇಕಾಗಿರುತ್ತದೆ. ಒಂದೊಂದು ಕ್ರೀಡೆಗಳು ಕಬ್ಬಡಿ, ವಾಲಿಬಾಲ್, ಥ್ರೋಬಾಲ್, ಟೆನಿಕಾಯಿಟ್, ಅಥ್ಲೇಟಿಕ್ಸ್, ಬಾಕ್ಸಿಂಗ್, ಕುಸ್ತಿ, ಪೆನ್ಸಿಗ್, ಆರ್ಚರಿ, ಈಗೆ 74 ಕ್ರೀಡೆಗಳು ಒಂದೊಂದು ರೀತಿಯಲ್ಲಿರುತ್ತವೆ. ಕೆಲವು ಕ್ರೀಡೆಗಳು ಈಜುಸ್ಪರ್ಧೆ, ಸೈಕ್ಲಿಂಗ್, ಇ.ಟಿ.ಸಿ ಕ್ರೀಡೆಗಳು ಸ್ವೇಡಿಯಂನಲ್ಲಿ ನಡೆಸಬೇಕಾಗಿದ್ದರಿಂದ ಮತ್ತು ಎರಡು ದಿನ, ಮೂರು ದಿನ. ಈ ರೀತಿಯ ಕ್ರೀಡೆಗಳು ನಡೆಸುವುದರಿಂದ ಕ್ರೀಡಾಪರಿಣಿತರಿಗೆ ಅವರುಗಳ ಅರ್ಹತೆ ಆಧಾರದ ಮೇಲೆ ಸಂಭಾವನೆಗಳನ್ನು ನೀಡಬೇಕಾಗಿರುತ್ತದೆ. ರೂ.3,33,180.00 ಆಕ್ಷೇಪಣೆಯಿಂದ ಕೈ ಬಿಡಲು

ಆಕ್ಷೇಪಣೆಗಳು	***ಉತ್ತರಗಳು***
ಮಾತ್ರ ತೋರಿದೆ ಹಾಗೂ ಕೆಲವು ಬಿಲ್ಲುಗಳಲ್ಲಿ ಯಾರಿಗೆ ಪಾವತಿಸಿದೆ, ಎಂಬ ಬಗ್ಗೆ ಅವರ ಹೆಸರಾಗಲೀ, ವಿವರಗಳಾಗಲಿ, ಇರುವುದಿಲ್ಲಾ ಆದಕಾರಣ ಸದರಿ ಪಾವತಿ ಅನುಮಾನಕ್ಕೆ ದಾರಿಮಾಡಿ ಕೊಡುವುದರಿಂದ Inter collegiate tournament & All India inter University championship ಗೆ ಸಂಬಂಧಪಟ್ಟ ಕ್ರೀಡಾ ಮ್ಯಾನೇಜರ್/ ಕೋಚ್‌ಗಳಿಗೆ ಪಾವತಿಸಿರುವ ಬಗ್ಗೆ ಮಾಡಿಕೊಂಡಿರುವ ಪರಿನಿಯಮಗಳೇನಾದರೂ ಇದ್ದರೆ ಅದು ಹಾಗೂ ಪಾವತಿಯ ಪೂರ್ಣ ಮಾಹಿತಿಯೊಂದಿಗೆ ವಿವರಗಳನ್ನು ನೀಡುವವರೆಗೆ **ಅನುಬಂಧ–16** ರಲ್ಲಿನ ಮೊತ್ತ ರೂ.3,33,180.00/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.	ಕೋರಿದೆ. ಇನ್ನೂ ಮುಂದೆ ಕ್ರೀಡಾ ಪರಿಣಿತರಿಗೆ ದಿನ ಭತ್ಯೆ, ಪ್ರಯಾಣ ಭತ್ಯೆ ಇವುಗಳನ್ನು ಕ್ರೀಡಾ ಸಮಿತಿಯ ಸಭೆಯಲ್ಲಿ ಚರ್ಚಿಸಿ ಪರಿನಿಯಮ ರಚಿಸಿಕೊಂಡು ಕ್ರೀಡಾ ಪಾಲಿಸಿಯ ಅನುಮೊದನೆಯಂತೆ ನೀಡಲಾಗುವುದು. ಕರ್ನಾಟಕ ಕ್ರೀಡಾ ಪ್ರಾಧಿಕಾರದ ಪ್ರತಿಯನ್ನು ಲಗತ್ತಿಸಲಾಗಿದೆ **(ಅನುಬಂಧ–109)** (ಪು.ಸಂ.737)**.**

ಆಕ್ಷೇಪಣೆಗಳು	*ಉತ್ತರಗಳು*

ಸರಕು ಮತ್ತು ಸೇವೆಗಳ ಸಂಗ್ರಹಣೆಯಲ್ಲಿ ಕರ್ನಾಟಕ ಪಾರದರ್ಶಕ ನಿಯಮಗಳನ್ನು ಉಲ್ಲಂಘಿಸಿರುವ ಬಾಬ್ತು

29. ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ಹಾಗೂ 2000 ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಖರೀದಿ ನಿಯಮಗಳು 2003 ರನ್ನು ಉಲ್ಲಂಘಿಸಿ ಸರಕು ಮತ್ತು ಸೇವೆಗಳ ಸಂಗ್ರಹಣೆ ಪಡೆದು ಪಾವತಿಸಿರುವ ವೆಚ್ಚ. ರೂ.7,31,82,044.00 (ಆಕ್ಷೇಪಣೆ) ಹಾಗೂ ರೂ.10,09,083.00 (ವಸೂಲಾತಿ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮಾವಳಿಗಳು 2000 ರ ನಿಯಮ 7 ಮತ್ತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999ರ ಪ್ರಕರಣ 5ರನ್ವಯ ಮತ್ತು ಬೆಂಗಳೂರು ವಿಶ್ವವಿದ್ಯಾಲಯ ಖರೀದಿ ನಿಯಮಗಳು 2003ರ ಕಂಡಿಕೆ 10 ರನ್ವಯ ಬೆಂಗಳೂರು ವಿಶ್ವವಿದ್ಯಾಲಯವು ಟೆಂಡರ್ ಮೂಲಕವಲ್ಲದೆ, ವಾರ್ಷಿಕ ಸಂಗ್ರಹಣೆ ಮೌಲ್ಯ ರೂ1.00 ಲಕ್ಷ ಮೀರಿದ ಸರಕು ಮತ್ತು ಸೇವೆಗಳ ಸಂಗ್ರಹಣೆ ಮಾಡತಕ್ಕದಲ್ಲ. ನಿಯಮಾವಳಿಗಳು 2000 ನಿಯಮ 12.5 ರಲ್ಲಿ ಒಚಿದು ಟೆಂಡರ್‌ನಲ್ಲಿ ಖರೀದಿಸಲು ಉದ್ದೇಶಿಸಲಾದ ಪರಿಮಾಣದ ಮೇಲೆ ಶೇ.25 ಕ್ಕೆ ಮೀರದಂತೆ ಹೆಚ್ಚಿನ ಪರಿಮಾಣದ ಸರಕು ಮತ್ತು ಸೇವೆಗಳನ್ನು ಸಂಗ್ರಹಿಸಲು ಅವಕಾಶವಿರುತ್ತದೆ. ಶೇ.25 ರಷ್ಟು ಪರಿಮಾಣ ಮಿರಿದಲ್ಲಿ ಹೊಸದಾಗಿ ಟೆಂಡರ್ ಮಾಡತಕ್ಕದ್ದಾಗಿರುತ್ತದೆ.

ಸರ್ಕಾರಿ ಸುತ್ತೋಲೆ ಸಂ. ಇಡಿ 157 ಯುಎನ್‌ಇ 2003, ದಿ: 26.03.2004ರ ಅನುಸಾರ, "ಕರ್ನಾಟಕ ವಿಧಾನ ಮಂಡಲದ ಅಧೀನ ಶಾಸನ ರಚನಾ ಸಮಿತಿಯು ತನ್ನ 27ನೇ ವರದಿಯಲ್ಲಿ ರಾಜ್ಯದ ವಿಶ್ವವಿದ್ಯಾಲಯಗಳ ಸಿಂಡಿಕೇಟ್ ಸಭೆಗಳಲ್ಲಿ ನಿರ್ಣಯವನ್ನು ತೆಗೆದುಕೊಳ್ಳವಾಗ ವಿಶ್ವವಿದ್ಯಾಲಯಗಳ ಅಧಿನಿಯಮ ಹಾಗು ಜಾರಿಯಲ್ಲಿರುವ ನಿಯಮಗಳ ಚೌಕಟ್ಟಿನೊಳಗೆ ನಿರ್ಣಯಗಳನ್ನು ತೆಗೆದುಕೊಳ್ಳಲು, ಒದು ಪಕ್ಷ ನಿಯಮಗಳನ್ನು ಉಲ್ಲಂಘಿಸಿ, ನಿರ್ಣಯಗಳನ್ನು ತೆಗೆದುಕೊಂಡರೆ ಅದಕ್ಕೆ ಸಂಬಂಧಿಸಿದ ಕುಲಪತಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವ್ಯದೆಂದು ತಿಳಿಸಲಾಗಿದೆ"

ಕ್ರ. ಸಂ.	ವಿಭಾಗ*	ಖರೀದಿಯ ವಿವರ	ವಿವಿ ಆದೇಶ ಸಂಖ್ಯೆ/ಬಿಲ್ ಸಂಖ್ಯೆ ಮತ್ತು ದಿನಾಂಕ	ಮೊಬಲಗು (ರೂಗಳಲ್ಲಿ)		
				ಆಕ್ಷೇಪಣೆ	ವಸೂಲಾತಿ	
*(Procurement Authority/ Tender Inviting Authority As per rule 6.1 (a) & (b) of Bangalore University Purchase Rules 2003)						
1	ಕುಲಸಚಿವರು ಮೌಲ್ಯಮಾಪನ (ಕಂ. ಸಂ.08)	ಮೆ॥ ಆಟ್ರಿಸ್ ಟೆಕ್ನಾಲಜಿಸ್ ಸಂಸ್ಥೆಯಿಂದ ಖರೀದಿಸಲಾದ ಉತ್ತರ ಪತ್ರಿಕೆಗಳ ಬಾಬ್ತು	ವಿ.ವಿ.ಆ.ಸಂ/ಪ3/ಆಟ್ರಿಸ್/ಏಪ್ರಿಲ್/ಮೇ 2015 ಉ.ಪ ವೆಚ್ಚ ಬೆಂಗಳೂರು ದಿನಾಂಕ 29.6.2015 U.O.No.Ex.III/Payment-Answer Booklets PTG & Supply 2015-16 Dt:14.1.2016 U.O.No.Ex.III/Payment-Answer Booklets PTG & Supply 2015-16 Dt:26.02.2016	2,08,94,700		ಸರ್ಕಾರದ ಅಧಿಸೂಚನೆ ಸಮಖ್ಯೆ: **ED1397 Expenditure – 12** ದಿನಾಂಕ: 13.01.2010ರಲ್ಲಿ ಆರ್ಥಿಕ ಇಲಖೆಯವರು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಉತ್ತರ ಪತ್ರಿಕೆಗಳನ್ನು ಖರೀದಿ ಮಾಡಲು ಕೆ.ಟಿ.ಪಿ.ಪಿ **Act 1999 under** ಕಲಂ 4(G) ಅಡಿಯಲ್ಲಿ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿರುತ್ತಾರೆ. ಆದಾಗಿಯೂ ಉತ್ತರ ಪತ್ರಿಕೆಗಳನ್ನು ಸ್ಪರ್ದಾತ್ಮಕ ಬೆಲೆಯಲ್ಲಿ ಪಡೆದು ವೆಚ್ಚ ಕಡಿಮೆ ಮಾಡುವ ಸಲುವಾಗಿ 02.05.2013ರಲ್ಲಿ ಟೆಂಡರ್ ಕರೆಯಲಾಗಿತ್ತು. ಟೆಂಡರ್‌ನಲ್ಲಿ ಒಂದು ಉತ್ತರ ಪುಸ್ತಕಕ್ಕೆ ಅತೀ ಕಡಿಮೆ ದರ ನಮೂದಿಸಿರುವ

ಆಕ್ಷೇಪಣೆಗಳು						***ಉತ್ತರಗಳು***
ಕ್ರ. ಸಂ.	ವಿಭಾಗ*	ಖರೀದಿಯ ವಿವರ	ವಿವಿ ಆದೇಶ ಸಂಖ್ಯೆ/ಬಿಲ್ ಸಂಖ್ಯೆ ಮತ್ತು ದಿನಾಂಕ	ಮೊಬಲಗು (ರೂಗಳಲ್ಲಿ)		
				ಆಕ್ಷೇಪಣೆ	ವಸೂಲಾತಿ	
*(Procurement Authority/ Tender Inviting Authority As per rule 6.1 (a) & (b) of Bangalore University Purchase Rules 2003)						
						ರೂ. 8.50 ಎಂದು ನಮೂದಿಸಿದ್ದ ಮೆ॥ ಆಟ್ರಿಸ್ ಟೆಕ್ನಾಲಜೀಸ್ ಪ್ರೈ. ಲಿ., ಬೆಂಗಳೂರುರವರಿಂದಲೇ ಉತ್ತರ ಪತ್ರಿಕೆಗಳನ್ನು ಖರೀದಿ ಮಾಡಲಾಗಿರುತ್ತದೆ. 2016–17ನೇ ಸಾಲಿನಲ್ಲಿ ಹೊಸದಾಗಿ ಟೆಂಡರ್ ಕರೆಯಲಾಗಿದೆ. ಈ ರೀತಿ ಆಗದಂತೆ ಎಚ್ಚರಿಕೆ ವಹಿಸಲು ಕ್ರಮ ತೆಗೆದುಕೊಳ್ಳಲಾಗಿದ್ದು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಆರ್ಥಿಕ ಇಲಾಖೆಯವರು ಉತ್ತರ ಪತ್ರಿಕೆಗಳನ್ನು ಖರೀದಿ ಮಾಡಲು ಪಾರದರ್ಶಕತೆ ಕಾಯಿದೆಯಿಂದ ವಿನಾಯಿತಿ ನೀಡಿರುವುದರಿಂದ ಹಾಗೂ ಅತೀ ಕಡಿಮೆ ಸ್ಪರ್ಧಾತ್ಮಕ ದರದಲ್ಲೇ ಉತ್ತರ ಪತ್ರಿಕೆಗಳನ್ನು ಖರೀದಿ ಮಾಡಿರುವುದರಿಂದ ಆಕ್ಷೇಪಣೆಯಲ್ಲಿಟ್ಟಿರುವ ಮೊತ್ತ ರೂ.2,08,94,700/–ಗಳನ್ನು ಕೈಬಿಡುವಂತೆ ಕೋರಲಾಗಿದೆ **(ಆರ್ಥಿಕ ಇಲಾಖೆಯ ಅಧಿಸೂಚನೆಲಗತ್ತಿಸಲಾಗಿದೆ)(ಅನುಬಂಧ–110)** (ಪು.ಸಂ.742).
2	ಕುಲಸಚಿವರು ಮೌಲ್ಯಮಾಪನ (ಕಂ. ಸಂ.09)	ಮೆ॥ ಆಟ್ರಿಸ್ ಟೆಕ್ನಾಲಜಿಸ್ ಇವರಿಗೆ ಮುದ್ರಣ ಕಾರ್ಯ ಹಾಗೂ ಘಟಿಕೋತ್ಸವ ಸೇವಾಗಳಿಗಾಗಿ ಪಾವತಿಸಿರುವ ವೆಚ್ಚ	ವಿ.ವಿ.ಆದೇಶ ಸಂಖ್ಯೆ/ಪ3/ಆಟ್ರಿಸ್/ಪ.ಕಾ/ ವೆಚ್ಚ/2015–15 ಬೆಂಗಳೂರು/ ದಿನಾಂಕ 31.3.2015	1,43,64,611		2013–14ನೇ ಸಾಲಿನಲ್ಲಿ ಉತ್ತರ ಪುಸ್ತಕಗಳ ಮುದ್ರಣ ಓ.ಎಂ.ಆರ್ ಹಾಳೆ ಸ್ಕ್ಯಾನಿಂಗ್ ಇನ್ನಿತರೆ 11 ಪರೀಕ್ಷಾ ಸೇವೆಗಳಿಗೆ ಸಂಬಂದಿಸಿದಂತೆ 02.05.2013ರಲ್ಲಿ ಟೆಂಡರ್ ಕರೆಯಲಾಯಿತು. ಕರಾರು ಆದೇಶದಲ್ಲಿ ಇದನ್ನು ಒಂದು ಪ್ರಾಜೆಕ್ಟ್ ಎಂದು ಪರಿಗಣಿಸಿ 02.05.2013 ರಿಂದ 27.04.2016ರವರೆಗೆ 03 ವರ್ಷಕ್ಕೆ ಒಪ್ಪಂದ ಮಾಡಿಕೊಳ್ಳಲಾಗಿದೆ. ವರ್ಷದಲ್ಲಿ 02 ಬಾರಿ ಪರೀಕ್ಷೆ ನಡೆಯಲಿದ್ದು ಪ್ರತಿ ವರ್ಷ ಬೇರೆ ಬೇರೆ ಹೊರಗುತ್ತಿಗೆ ಕಂಪನಿಗೆ ಪರೀಕ್ಷಾ ಸೇವೆಗಳನ್ನು ಹೊರಗುತ್ತಿಗೆ ನೀಡುವುದರಿಂದ ವಿದ್ಯಾರ್ಥಿಗಳಿಗೆ ಫಲಿತಾಂಶ ಹಾಗೂ ಅಂಕಪಟ್ಟಿಗಳನ್ನು ನೀಡಲು ವಿಳಂಬವಾಗುತ್ತಿದ್ದದರಿಂದ, ಇದನ್ನು ಪರೀಕ್ಷಾ ಸೇವೆಯೆಂದು ಪರಿಗಣಿಸಿ 03ವರ್ಷಕ್ಕೆ ಒಪ್ಪಂದ

ಆಕ್ಷೇಪಣೆಗಳು						***ಉತ್ತರಗಳು***
ಕ್ರ. ಸಂ.	ವಿಭಾಗ*	ಖರೀದಿಯ ವಿವರ	ವಿವಿ ಆದೇಶ ಸಂಖ್ಯೆ/ಬಿಲ್ ಸಂಖ್ಯೆ ಮತ್ತು ದಿನಾಂಕ	ಮೊಬಲಗು (ರೂಗಳಲ್ಲಿ)		
				ಆಕ್ಷೇಪಣೆ	ವಸೂಲಾತಿ	
*(Procurement Authority/ Tender Inviting Authority As per rule 6.1 (a) & (b) of Bangalore University Purchase Rules 2003)						
						ಮಾಡಿಕೊಳ್ಳಲಾಗಿದೆ, ಈ ಬಗ್ಗೆ ಲೆಕ್ಕ ಪರಿಶೋಧಕರು ಆಕ್ಷೇಪಣೆ ವ್ಯಕ್ತಪಡಿಸಿದ ನಂತರ ಈ ಕಂಪನಿಯ ಹೊರಗುತ್ತಿಗೆಯನ್ನು ದಿನಾಂಕ: 11.01.2016ರಲ್ಲಿ ರದ್ದುಗೊಳಿಸಲಾಗಿದೆ. 2016 – 17ನೇ ಸಾಲಿನಿಂದ ಪ್ರತಿ ವರ್ಷ ಟೆಂಡರ್ ಕರೆಯುವ ಪ್ರಕ್ರಿಯೆಯನ್ನು ಕೈಗೊಳ್ಳಲಾಗುತ್ತಿದೆ. ಓ.ಎಂ.ಆರ್ ಶೀಟುಗಳ ಮುದ್ರಣಕ್ಕೆ ಸಂಬಂಧಿಸಿದಂತೆ ಪ್ಯಾಕೆಟ್‌ನಲ್ಲಿ 18 ಉತ್ತರ ಪುಸ್ತಕಗಳನ್ನು ಹಾಕಿ ಈ ಉತ್ತರ ಪುಸ್ತಕಗಳ ನೊಂದಣಿ ಸಂಖ್ಯೆ ಡಮ್ಮಿ ನಂಬರನ್ನು ಒಂದು ಓ.ಎಂ.ಆರ್ ಹಾಳೆಯಲ್ಲಿ ಮುದ್ರಣ ಮಾಡಲಾಗುತ್ತಿದೆ. ಆದರೆ ಪನಾರಾವರ್ತಿತ ವಿದ್ಯಾರ್ಥಿಗಳಿಗೆ (Repeaters) ಸಂಬಂಧಿಸಿದಂತೆ 01 ಪ್ಯಾಕೆಟ್‌ನಲ್ಲಿ 18 ಉತ್ತರ ಪುಸ್ತಕಗಳ ಬದಲು ಆ ವಿಷಯಕ್ಕೆ ಸಂಬಂಧಿಸಿದಂತೆ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ಅನುಗುಣವಾಗಿ ಉತ್ತರ ಪುಸ್ತಕಗಳನ್ನು ಪ್ಯಾಕೆಟ್ ಮಾಡಲಾಗುತ್ತಿದೆ. ಈ ರೀತಿ ಮಾಡಿದಾಗ 01 ಅಥವಾ 02 ಉತ್ತರ ಪುಸ್ತಕಗಳಿಗೂ ಒಂದೊಂದು ಓ.ಎಂ.ಆರ್ ಬಳಸಲಾಗುತ್ತದೆ. ಆದುದರಿಂದ ಸ್ಕ್ಯಾನಿಂಗ್ ಮಾಡಿದ ವಿವರದೊಂದಿಗೆ ಮುದ್ರಿಸಿರುವ ಓ.ಎಂ.ಆರ್ ಗಳನ್ನು ಭಾಗಿಸಿದಾಗ ಬರುವುದನ್ನು ತೆಗೆದುಕೊಂಡು ಮುದ್ರಿಸಬೇಕಾಗಿದ್ದು ಓ.ಎಂ.ಆರ್ ಹಾಳೆಗಳ ಲೆಕ್ಕಚಾರ ಮಾಡಿದಲ್ಲಿ ಈ ರೀತಿಯ ವ್ಯತ್ಯಾಸವಾಗಿರುತ್ತದೆ. ಆದುದರಿಂದ, ಆಕ್ಷೇಪಣೆಯಲ್ಲಿಟ್ಟಿರುವ ಮೊತ್ತ ರೂ 1,43,64,611/–ನ್ನು ಕೈಬಿಡುವಂತೆ ಕೋರಲಾಗಿದೆ. ಒಪ್ಪಂದದ ಕರಾರು ಪತ್ರದ (**Agreement Copy) ಪ್ರತಿಯನ್ನು ಲಗತ್ತಿಸಲಾಗಿದೆ) (ಅನುಬಂಧ–111)** (ಪು.ಸಂ. 743)

ಆಕ್ಷೇಪಣೆಗಳು						ಉತ್ತರಗಳು
ಕ್ರ. ಸಂ.	ವಿಭಾಗ*	ಖರೀದಿಯ ವಿವರ	ವಿವಿ ಆದೇಶ ಸಂಖ್ಯೆ/ಬಿಲ್ ಸಂಖ್ಯೆ ಮತ್ತು ದಿನಾಂಕ	ಮೊಬಲಗು (ರೂಗಳಲ್ಲಿ)		
				ಆಕ್ಷೇಪಣೆ	ವಸೂಲಾತಿ	
*(Procurement Authority/ Tender Inviting Authority As per rule 6.1 (a) & (b) of Bangalore University Purchase Rules 2003)						
3	ವಿತ್ತಾಧಿಕಾರಿಗಳ ವಿಭಾಗ ವೋಚರ್ (ಕಂಡಿಕೆ–10)	ಮೆ॥ 4 SPL Technologies India Pvt Ltd. ಈ ಸಂಸ್ಥೆಗೆ 2014–15 ನೇ ಸಾಲಿನ ಎ.ಎಂ.ಸಿ ಸಂಬಂಧಿಸಿದಂತೆ ಒಟ್ಟು ರೂ.1,41,570.00 ಗಳನ್ನು ಪಾವತಿಸಿರುವುದು		1,41,570		ಈ ಕಂಡಿಕೆಯಲ್ಲಿ 2014–15ನೇ ಸಾಲಿನ ಎ.ಎಂ.ಸಿ ಸಂಬಂಧಿಸಿದಂತೆ ರೂ.1,41,570.00 4 SPL Techn -ologies India Pvt Ltd. ಸಂಸ್ಥೆಗೆ ಪಾವತಿಸಿರುವುದನ್ನು ಖರೀದಿ ನಿಯಮವನ್ನು ಪಾಲಿಸದಿರುವದರ ಬಗ್ಗೆ ಆಕ್ಷೇಪಣೆಯಲ್ಲಿಡಲಾಗಿದೆ. ಆದರೆ ವಿತ್ತಾಧಿಕಾರಿಗಳ ವಿಭಾಗದ ವರದಿಯ ಕಂಡಿಕೆ ಸಂಖ್ಯೆ 10 ರಲ್ಲಿ ಡಿಸಿ ಬಿಲ್ಲು ದಿನಾಂಕ ಮತ್ತು ಮಾಹೆ ಮತ್ತು ಪಾವತಿಸಿರುವ ಮೊತ್ತಗಳನ್ನು ಮಾತ್ರ ಒದಗಿಸಿದ್ದು, ಈ ಪಾವತಿಗಳ ಬಿ.ಆರ್ ಸಂಖ್ಯೆ/ ಓಚರ್ ಸಂಖ್ಯೆ/ಚೆಕ್ ಸಂಖ್ಯೆ ವಿಭಾಗದ ವಿವರ ಒದಗಿಸಿರುವುದಿಲ್ಲ. ಆದುದರಿಂದ, ಈ ವಿವರಗಳನ್ನು ಒದಗಿಸಿದಲ್ಲಿ ಪರಿಶೀಲಿಸಿ ಉತ್ತರ ಒದಗಿಸಲಾಗುವುದು.
4	ವಿತ್ತಾಧಿಕಾರಿಗಳ ವಿಭಾಗ ವೋಚರ್ (ಕಂಡಿಕೆ–11)	**ಅನುಬಂಧ–17** ರಲ್ಲಿ ವಿವರಿಸಿದಂತೆ ವಿವಿಧ ಸಭೆ ಸಮಾರಂಭ ಗಳಿಗೆ ಉಪಹಾರ ಹಾಗೂ ಊಟೋಪಚಾರ ವ್ಯವಸ್ಥೆಯನ್ನು ವಿವಿಧ ಹೋಟೆಲ್/ಕ್ಯಾಟರರ್ಸ್‌ರವರಿಂದ ಪಡೆಯಲಾಗಿರುವುದು.	ವೋಚರ್ ಸಂ.178, 179 ಹಾಗೂ 841	18,57,475	3,13,170	ಗುಣಮಟ್ಟದ ಮೆನುಗಳು ಮತ್ತು ಸಮಯದ ಅಭಾವದಿಂದ ಟೆಂಡರ್ ಆಹ್ವಾನಿಸಲು ಸಾಧ್ಯವಾಗಲಿಲ್ಲ, ಊಟೋಪಚಾರದ ವಿಷಯದಲ್ಲಿ ಶುಚಿ, ರುಚಿ, ಮತ್ತು ಪ್ರಮಾಣ ಹಾಗೂ ಸೇವೆಯ ಬಗ್ಗೆ ಸರಬರಾಜುದಾರರ ಹಿನ್ನಲೆ ಅರಿತು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಕೇವಲ ಕನಿಷ್ಠ ದರಪಟ್ಟಿಗೆ ಅನುಗುಣವಾಗಿ ಕ್ರಮ ತೆಗೆದುಕೊಂಡರೆ ಅವರಿಂದ ಉತ್ತಮ ಸೇವೆ ಆಪೇಕ್ಷಿಸಲಾಗದು, ಆದರೂ ಸಹ ಲೆಕ್ಕ ಪರಿಶೋಧಕರ ಆಕ್ಷೇಪಣೆಗಳ ಮೇರೆಗೆ ಇತ್ತೀಚೆಗೆ ಎಲ್ಲಾ ಸಭೆ – ಸಮಾರಂಭಗಳಿಗೂ ಅನ್ವಯಿಸುವಂತೆ 3 ಬಾರಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಲಾಗಿತ್ತು. (27.03.2015, 24.09.2015 , 23.11.2015, 13.02.2017, 28.4.2017 ಮತ್ತು 26.7.2017) ಆದರೆ ಯಾರು ಇದಕ್ಕೆ ಸ್ಪಂದಿಸಲಿಲ್ಲ. ಇದರ ಜೊತೆಗೆ ನುರಿತ ಸರಬರಾಜುದಾರರಿಂದ ದರಪಟ್ಟಿಗಳನ್ನು ಪಡೆದು ವಿವಿಧ ಮೆನುಗಳಿಗೆ ದರ ನಿಗಧಿಪಡಿಸುವ ವ್ಯವಸ್ಥೆಯನ್ನು ಜಾರಿಗೊಳಿಸಲು ಸಹ ಕೆಲವು ಸರಬರಾಜುದಾರರಿಂದ ದರಪಟ್ಟಿಗಳನ್ನು ಪಡೆದು

ಆಕ್ಷೇಪಣೆಗಳು						***ಉತ್ತರಗಳು***
ಕ್ರ. ಸಂ.	ವಿಭಾಗ*	ಖರೀದಿಯ ವಿವರ	ವಿವಿ ಆದೇಶ ಸಂಖ್ಯೆ/ಬಿಲ್ ಸಂಖ್ಯೆ ಮತ್ತು ದಿನಾಂಕ	ಮೊಬಲಗು (ರೂಗಳಲ್ಲಿ)		
				ಆಕ್ಷೇಪಣೆ	ವಸೂಲಾತಿ	
*(Procurement Authority/ Tender Inviting Authority As per rule 6.1 (a) & (b) of Bangalore University Purchase Rules 2003)						
						ಕಡಿಮೆ ದರ ನಮೂದಿಸಿದವರಿಂದ ಅಥವಾ ಅದೇ ದರಗಳಿಗೆ ಅನುಗುಣವಾಗಿ ಸರಬರಾಜು ಮಾಡುವವರಿಂದ ಸೇವೆ ಪಡೆಯಲಾಗುತ್ತಿದೆ. ಎರಡನೇದಾಗಿ ಔಟೋಪಚಾರದ ಬಿಲ್‌ಗಳಲ್ಲಿ ಸರಬರಾಜುದಾರರು ಸೇವಾ ತೆರಿಗೆ / ವ್ಯಾಟ್ ಮೊತ್ತವನ್ನು ನಮೂದಿಸಿ ಬಿಲ್ ನೀಡಿದರೆ ಮಾತ್ರ ಒಟ್ಟು ಮೊತ್ತಕ್ಕೆ ಮಂಜೂರಾತಿ ಆದೇಶವನ್ನು ನೀಡಿ ಹಣ ಪಾವತಿ ಮಾಡಲಾಗಿದೆ. ಸೇವಾ ತೆರಿಗೆಗಳನ್ನು ಆಯಾ ಸಂಸ್ಥೆಗಳವರೆ ಸೇವಾತೆರಿಗೆಯನ್ನು ಸೇವಾ ತೆರಿಗೆ ಇಲಾಖೆಗೆ ಪಾವತಿಸುವುದರಿಂದ ಬಿಲ್ಲಿನಲ್ಲಿ ಮುರುಗಡೆ ಮಾಡಿರುವುದಿಲ್ಲ. ಮುಂದುವರೆದು ಆದಾಯ ತೆರಿಗೆ ಪಾವತಿ ವಿವರ ಒದಗಿಸುವಂತೆ ಸೂಚನೆ ನೀಡಲಾಗಿದೆ. ಆದ್ದರಿಂದ ಮೇಲ್ಕಂಡ ಈ ಎರಡೂ ಅಂಶಗಳನ್ನು ಪರಿಶೀಲಿಸಿ ಆಕ್ಷೇಪಣೆಯಿಂದ ಮುಕ್ತಗೊಳಿಸಲು ಕೋರಲಾಗಿದೆ.
5	ವಿತ್ತಾಧಿಕಾರಿಗಳ ವಿಭಾಗ ವೋಚರ್ (ಕಂಡಿಕೆ–12)	ಮೆ॥ಟೋಟಲ್ ಸೆಲ್ಯೂಷನ್ಸ್ ಬೆಂ.ರವರಿಗೆ ಬೆಂ.ವಿ.ವಿ. ಜ್ಞಾನಭಾರತಿ ಆವರಣ/ಸೆಂಟ್ರಲ್ ಕಾಲೇಜ್ ಆವರಣಗಳ ವಿವಿಧ ವಿಭಾಗಗಳ/ಕಛೇರಿಗಳ ದಿನನಿತ್ಯದ ಸ್ವಚ್ಛತಾ ಕಾರ್ಯಕ್ಕಾಗಿ ಹಾಗೂ ಜ್ಞಾನಭಾರತಿ ಆವರಣದ ವಿದ್ಯಾರ್ಥಿನಿಲಯಗಳ ಶೌಚಾಲಯಗಳ ಸ್ವಚ್ಛತೆ ಮತ್ತು ನಿರ್ವಹಣೆಗಾಗಿ,	ವೋಚರ್ ಸಂ.593/14.5.2015	35,34,483	5,95,913	1. ನೂತನವಾಗಿ ಟೆಂಟರ್‌ಗಳನ್ನು ಅಹ್ವಾನಿಸಲಾಯಿತು ಆದರೆ ವಿಶ್ವವಿದ್ಯಾಲಯಕ್ಕೆ ಕರ್ನಾಟಕ ಸರ್ಕಾರದ ಸಫಾಯಿ ಕರ್ಮಚಾರಿಗಳ ಆಯೋಗ ಭೇಟಿ ನೀಡಿ ಸ್ವಚ್ಛತಾ ಕಾರ್ಯದ ನೌಕರರಿಗೆ ಒದಗಿಸಿರುವ ಸವಲತ್ತುಗಳನ್ನು ಪರಿಶೀಲಿಸಿತು. ಆ ಪರಿಶೀಲನಾ ಸಭೆಯಲ್ಲಿ ಮಾನ್ಯ ಕುಲಪತಿಗಳು, ಕುಲಸಚಿವರು ಭಾಗವಹಿಸಿದ್ದರು. ಈ ಸಭೆಯಲ್ಲಿ ಪ್ರಮುಖವಾಗಿ ಸ್ವಚ್ಛತಾ ನೌಕರರಿಗೆ 2015–16ನೇ ಸಾಲಿನಿಂದ ಸರ್ಕಾರದ ಕನಿಷ್ಠ ವೇತನದ ಅಡಿಯಲ್ಲಿ ವೇತನ ನೀಡುತ್ತಿದ್ದರೂ ಸಹ ಪ್ರತಿ ವರ್ಷ ವಿ.ಡಿ.ಎ. ಮೊತ್ತವನ್ನು ಪಾವತಿಸದೆ ಇರುವ ಬಗ್ಗೆ ಮತ್ತು ನಾವು ಮಾಡಿಕೊಂಡಿರುವ ಕರಾರು ಪತ್ರದಲ್ಲಿ ಈ

ಆಕ್ಷೇಪಣೆಗಳು						***ಉತ್ತರಗಳು***
ಕ್ರ. ಸಂ.	ವಿಭಾಗ*	ಖರೀದಿಯ ವಿವರ	ವಿವಿ ಆದೇಶ ಸಂಖ್ಯೆ/ಬಿಲ್ ಸಂಖ್ಯೆ ಮತ್ತು ದಿನಾಂಕ	ಮೊಬಲಗು (ರೂಗಳಲ್ಲಿ)		
				ಆಕ್ಷೇಪಣೆ	ವಸೂಲಾತಿ	
*(Procurement Authority/ Tender Inviting Authority As per rule 6.1 (a) & (b) of Bangalore University Purchase Rules 2003)						
		2015–16 ನೇ ಸಾಲಿನಲ್ಲಿ **ಅನುಬಂಧ–18** ರಲ್ಲಿ ವಿವರಿಸಿದಂತೆ ಪಾವತಿಸಿರುವುದು.				ವಿಷಯವನ್ನು ಆಳವಡಿಸದಿರುವ ಬಗ್ಗೆ ತೀವ್ರವಾದ ಆಕ್ಷೇಪ ವ್ಯಕ್ತ ಪಡಿಸಿ ಕೊಡಲೆ ಬಾಕಿ ಇರುವ ವಿ.ಡಿ.ಎ. ಮೊತ್ತವನ್ನು ನೌಕರರಿಗೆ ವಿತರಿಸುವ ತನಕ ಆಹ್ವಾನಿಸಿರುವ ನೂತನ ಟೆಂಡರ್‌ಗಳನ್ನು ರದ್ದು ಪಡಿಸುವಂತೆ ಪತ್ರದ ಮೂಲಕವೂ ತಿಳಿಸಿರುತ್ತಾರೆ. 2. ಪ್ರಸ್ತುತ ವಿಶ್ವವಿದ್ಯಾಲಯವು ತ್ರಿವಿಭಜನೆಯಾಗಿದ್ದು ಈ ಮಧ್ಯೆ ನೂತನ ಟೆಂಟರ್ ಕರೆಯುವುದು ವಾಸ್ತವವಾಗಿ ಸಧ್ಯಕ್ಕೆ ಸಾಧ್ಯವಾಗದ ಕಾರಣದಿಂದ ಟೆಂಡರನ್ನು ಆಹ್ವಾನಿಸದೇ ಇವರ ಸೇವೆಯನ್ನು ಮುಂದುವರೆಸಲಾಗಿರುತ್ತದೆ. 3. ಮೆ: ಟೋಟಲ್ ಸೆಲ್ಯೂಷನ್ಸ್ ಅವರ ಗುತ್ತಿಗೆ ಅವಧಿ ದಿನಾಂಕ: 01.09.2015 ರಿಂದ 31.08.2016ಕ್ಕೆ ಒಂದು ವರ್ಷಗಳ ಅವಧಿಗೆ ಒಳಪಟ್ಟಿತ್ತು. ಆದರೆ ನೂತನ ಟೆಂಡರ್ ಪ್ರಕ್ರಿಯೆಗಳು ಪೂರ್ಣಗೊಳ್ಳದ ಸಲುವಾಗಿ ಕಛೇರಿಗಳ ಸ್ವಚ್ಚತೆಯ ಹಿತದೃಷ್ಠಯಿಂದ ಈ ಹಿಂದೆ ಕಾರಾರಿನಲ್ಲಿದ್ದ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಸಿಂಡಿಕೇಟ್‌ನ ಅನುಮೋದನೆಯ ಮೇರೆಗೆ ತಾತ್ಕಾಲಿಕವಾಗಿ ಮುಂದುವರೆಸಲಾಗಿದೆ. 4. ಆದೇಶದಲ್ಲಿ "ಪ್ರಸ್ತುತ ಜಾರಿಯಲ್ಲಿರುವ ನಿಯಮಗಳಿಗೆ ಒಳಪಟ್ಟು "ಎಂದು ಸ್ಪಷ್ಠವಾಗಿ ನಮೂದಿಸಿರು ವುದರಿಂದ ನೂತನವಾಗಿ ಕರಾರು ಪತ್ರವನ್ನು ಪಡೆದಿರುವುದಿಲ್ಲ ಕಾರಣ ನಿಯಮಗಳು ಯಾವುದೇ ಬದಲಾವಣೆಗೆ ಒಳಪಟ್ಟಿಲ್ಲ.

ಆಕ್ಷೇಪಣೆಗಳು						ಉತ್ತರಗಳು
ಕ್ರ. ಸಂ.	ವಿಭಾಗ*	ಖರೀದಿಯ ವಿವರ	ವಿವಿ ಆದೇಶ ಸಂಖ್ಯೆ/ಬಿಲ್ ಸಂಖ್ಯೆ ಮತ್ತು ದಿನಾಂಕ	ಮೊಬಲಗು (ರೂಗಳಲ್ಲಿ)		
				ಆಕ್ಷೇಪಣೆ	ವಸೂಲಾತಿ	
*(Procurement Authority/ Tender Inviting Authority As per rule 6.1 (a) & (b) of Bangalore University Purchase Rules 2003)						
						5. ಇಂಥಹ ಸನ್ನಿವೇಶಗಳಲ್ಲಿ ಇನ್ನು ಮುಂದೆ ತಮ್ಮ ಆಪೇಕ್ಷೆಯಂತೆ ಕ್ರಮ ತೆಗೆದು ಕೊಳ್ಳಲಾಗುವುದು. ಆದ್ದರಿಂದ ಈ ಪ್ರಕರಣವನ್ನು ಆಕ್ಷೇಪಣೆಯಿಂದ ಮುಕ್ತ ಗೊಳಿಸಲು ಕೋರಲಾಗಿದೆ.
6	ವಿತ್ತಾಧಿಕಾರಿಗಳ ವಿಭಾಗ ವೋಚರ್ (ಕಂಡಿಕೆ–13)	ಜೀವ ವಿಜ್ಞಾನ ಶಾಸ್ತ್ರ ಹಾಗೂ ರಾಸಾಯನ ಶಾಸ್ತ್ರ ವಿಭಾಗಕ್ಕೆ ಉಪಕರಣಗಳನ್ನು ಖರೀದಿಸಿರುವುದು	FBVII/Pur/Dr.HPP/UGC BS/CPC/Equip/2014-15 date:23.1.2015 FBVII/PUR/Dr.SK CSIR/Chem/VPC 2015-16/9.11.2015	16,84,625		ಜೀವವಿಜ್ಞಾನಶಾಸ್ತ್ರ ವಿಭಾಗದವರು ವಿಶ್ವವಿದ್ಯಾಲಯದ ಆದಶ ಸಂಖ್ಯೆ: FB-VI/Pur/Dr.HPP/ UGC/ BS/ CPC/Equip/2014-15, dt:23.01.2015 “RT-PCR Model Applied Bio System Step on Plus (4376599)” ಈ ಉಪಕರಣದ ಖರೀದಿಯನ್ನು ರೂ.13,60,000=00 ಗಳಿಗೆ ಆದಿ ಲ್ಯಾಬ್ ಟೆಕ್‌ನಿಂದ ಟೆಂಡರ್ ಪ್ರಕ್ರಿಯೆ ಮೂಲಕ (ತಾಂತ್ರಿಕ ಮೌಲ್ಯಮಾಪನ ಸಮಿತಿಯು ದಿನಾಂಕ 20.10.2014ರಲ್ಲಿ ಉಪಕರಣದ Specifications ಪರಿಶೀಲಿಸಿ, ತಾಂತ್ರಿಕ Specifications ಪೂರೈಸಿದ (2)ಸಂಸ್ಥೆಗಳ ಹಣಕಾಸಿನ ಬಿಡ್‌ಗಳನ್ನು ತೆರೆದು M/s Adi Lab Tech ಸಂಸ್ಥೆಯಿಂದ) ಖರೀದಿಸಲಾಗಿದೆ. ಮೇಲೆ ತಿಳಿಸಿರುವ ವಿವರಣೆಯನ್ನು ಪರಿಗಣಿಸಿ, ಸರಕು ಮತ್ತು ಸೇವೆಗಳ ಸಂಗ್ರಹಣೆಯಲ್ಲಿ ಕರ್ನಾಟಕ ಪಾರದರ್ಶಕ ನಿಯಮ ಪಾಲಿಸಿಲ್ಲವೆಂಬ ಕಾರಣಕ್ಕೆ ಈ ಉಪಕರಣ ಖರೀದಿ ಮೊತ್ತ ರೂ. 13,60,000=00 ಆಕ್ಷೇಪಣೆಯಲ್ಲಿಡಲಾದ ಮೊತ್ತವನ್ನು ಟೆಂಡರ್ ಪ್ರಕ್ರಿಯೆ ಮೂಲಕ ಸಿಪಿಪಿ ಮತ್ತು ಸಿಂಡಿಕೇಟ್ ಅನುಮೋದನೆ ಪಡೆದು ಖರೀದಿಸಿರುವುದರಿಂದ ಈ ಮೊತ್ತವನ್ನು ಆಕ್ಷೇಪಣೆಯಿಂದ ಕೈಬಿಡುವಂತೆ ವಿನಂತಿಸಿದೆ. ಉಳಿದ ರಸಾಯನಿಕ ವಿಭಾಗದ ಖರೀದಿಗೆ ಮಾಹಿತಿಯನ್ನು ಪತ್ರ ಸಂ. ಹವಿ/ಆಡಿಟ್ & ಆಯವ್ಯಯ ವಿಭಾಗ/2015–

ಆಕ್ಷೇಪಣೆಗಳು						***ಉತ್ತರಗಳು***
ಕ್ರ. ಸಂ.	ವಿಭಾಗ*	ಖರೀದಿಯ ವಿವರ	ವಿವಿ ಆದೇಶ ಸಂಖ್ಯೆ/ಬಿಲ್ ಸಂಖ್ಯೆ ಮತ್ತು ದಿನಾಂಕ	ಮೊಬಲಗು (ರೂಗಳಲ್ಲಿ)		
				ಆಕ್ಷೇಪಣೆ	ವಸೂಲಾತಿ	
*(Procurement Authority/ Tender Inviting Authority As per rule 6.1 (a) & (b) of Bangalore University Purchase Rules 2003)						
						16/ವಾಕ ವರದಿ, ದಿನಾಂಕ 31.05.2018ರಲ್ಲಿ ಉತ್ತರ ಸಲ್ಲಿಸಿ, ರೂ. 3,24,625=00ಗಳನ್ನು ಆಕ್ಷೇಪಣೆಯಿಂದ ಕೈಬಿಡುವಂತೆ ಕೋರಲಾಗಿದೆ. ಆದುದರಿಂದ, ಈ ಕಂಡಿಕೆಯ ಒಟ್ಟು ಮೊತ್ತ ರೂ. 16,84,625=00 ಗಳನ್ನು ಆಕ್ಷೇಪಣೆಯಿಂದ ಕೈಬಿಡುವಂತೆ ವಿನಂತಿಸಿದೆ.
7	ವಿತ್ತಾಧಿಕಾರಿಗಳ ವಿಭಾಗ ವೋಚರ್ (ಕಂಡಿಕೆ–14(1))	ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ನಿಕಾಯಗಳಿಗೆ ಪ್ರಯೋಗಾಲಯ ಸಾಮಗ್ರಿಗಳು /ರಾಸಾಯನಿಕಗಳು /ಕಂಪ್ಯೂಟರ್ ಖರೀದಿ /ಸೇವೆ ಪೀಠೋಪಕರಣಗಳನ್ನು ಖರೀದಿ ಮಾಡಲಾಗಿರುತ್ತದೆ.		59,09,854		ಈ ಕಂಡಿಕೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ನಿಕಾಯಗಳಿಗೆ ಎಂದು ತಿಳಿಸಿ ಪ್ರಯೋಗಾಲಯದ ಸಾಮಾಗ್ರಿಗಳು ರಸಾಯನಿಕಗಳು/ ಕಂಪ್ಯೂಟರ್ ಖರೀದಿ/ಸೇವೆ ಪೀಠೋಪಕರಣಗಳ ಖರೀದಿ ಎಂದು 2015–16ನೇ ಸಾಲಿಗೆ ವಿತ್ತಾಧಿಕಾರಿಗಳ ಓಚರ್ ಲೆಕ್ಕಪರಿಶೋಧನೆಯಲ್ಲಿ ಖರೀದಿ ನಿಯಮ ಪಾಲಿಸಿಲ್ಲ ವೆಂದು ರೂ.59,09,854.00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.ಈ ಖರೀದಿಗಳು ವಿವಿಧ ವಿಭಾಗಗಳಿಗೆ ಮತ್ತು ಬೇರೆ ಬೇರೆ ಮಾಹೆಗಳಲ್ಲಿನ ಖರೀದಿಗಳಿದ್ದು ಅವುಗಳನ್ನು ಸಂಸ್ಥೆವಾರು ಖರೀದಿ ಮೊತ್ತಗಳನ್ನು ಕ್ರೋಢೀಕರಿಸಿ ಆಕ್ಷೇಪಣೆಯಲ್ಲಿಡಲಾಗಿದೆ. ಆಕ್ಷೇಪಣೆಯಲ್ಲಿಟ್ಟಿರುವ ರೂ.59,09,854.00ಗಳಲ್ಲಿ ಖರೀದಿಸಿದ ವಿಭಾಗಗಳು/ ಓಚರ್ ಸಂಖ್ಯೆ ವಿವರ ಒದಗಿಸಿದಲ್ಲಿ ಪರಿಶೀಲಿಸಿ ಟೆಂಡರ್ ವಿವರ, ಸಿಂಡಿಕೇಟ್ ಅನುಮೋಧನೆ, ಕೇಂದ್ರ ಖರೀದಿ ಸಮಿತಿಯ ಅನುಮೋಧನೆ ವಿವರದೊಂದಿಗೆ ಉತ್ತರ ಸಲ್ಲಿಸಲಾಗುವುದು.

ಆಕ್ಷೇಪಣೆಗಳು						ಉತ್ತರಗಳು
ಕ್ರ. ಸಂ.	ವಿಭಾಗ*	ಖರೀದಿಯ ವಿವರ	ವಿವಿ ಆದೇಶ ಸಂಖ್ಯೆ/ಬಿಲ್ ಸಂಖ್ಯೆ ಮತ್ತು ದಿನಾಂಕ	ಮೊಬಲಗು (ರೂಗಳಲ್ಲಿ)		
				ಆಕ್ಷೇಪಣೆ	ವಸೂಲಾತಿ	
*(Procurement Authority/ Tender Inviting Authority As per rule 6.1 (a) & (b) of Bangalore University Purchase Rules 2003)						
8	ವಿತ್ತಾಧಿಕಾರಿಗಳ ವಿಭಾಗ ವೋಚರ್ (ಕಂಡಿಕೆ–16)	ಮೆ॥ ಕೆನಾನ್ ಡಿಟೆಕ್ಟೀವ್ ಏಜೆನ್ಸಿ ಇವರಿಂದ ಭದ್ರತಾ ಸೇವೆಯನ್ನು ಪಡೆದು		75,90,863		ಕೆ.ಟಿ.ಪಿ.ಪಿ ನಿಯಾಮನುಸಾರ ಇ ಪ್ರಕ್ಯೂರ್ ಮೆಂಟ್ ಮೂಲಕ ಟೆಂಡರ್ ಕರೆದು ಮಾಡಿಕೊಂಡಿರುವ 1. ಒಪ್ಪಂದ ಕರಾರು ಪತ್ರ 2. ಸಿಂಡಿಕೇಟ್ ಸಭೆಯ ಕಾರ್ಯಸೂಚಿ ಟಿಪ್ಪಣಿ ಹಾಗೂ ನಡಾವಳಿ 3. ಮಂಜೂರಾತಿ ಆದೇಶ 4. ಕೆನಾನ್ ಸಂಸ್ಥೆಯು ನೀಡಿರುವ ಒಂದು ದಾಖಲೆ ಪತ್ರಗಳನ್ನು **ಅನುಬಂಧ–117** ರಲ್ಲಿ ಲಗತ್ತಿಸಿದೆ. ಕಡತದೊಂದಿಗೆ ಮುಂದಿನ ಲೆಕ್ಕಪರಿಶೋಧನೆಗೆ ಒದಗಿಸಲು ಉಪಕುಲಸಚಿವರು ಸಾಮಾನ್ಯ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯರವರಿಗೆ ಸೂಚಿಸಿದೆ.
9	ವಿತ್ತಾಧಿಕಾರಿಗಳ ವಿಭಾಗ ವೋಚರ್ (ಕಂಡಿಕೆ–17)	ಸೆಂಟ್ರಲ್ ಕಾಲೇಜು ಆವರಣದಿಂದ ಜ್ಞಾನಭಾರತಿ ಆವರಣ ಇಲ್ಲಿಂದ ಬೇರೆ ಬೇರೆ ವಿಭಾಗಗಳಿಗೆ ಕಡತಗಳು, ಪೀಠೋಪಕರಣಗಳು, ಗಣಕಯಂತ್ರಗಳು, ಪ್ರಯೋಗ ಶಾಲೆಯ ಸಾಮಗ್ರಿಗಳು ಸೇರಿದಂತೆ ಇನ್ನಿತರ ಸಾಮಗ್ರಿಗಳನ್ನು ಜ್ಞಾನಭಾರತಿ ಆವರಣಕ್ಕೆ ಸಾಗಿಸಲು ಮೆ: ಮಹಮ್ಮದ್ ಆಲಿ ಅಂಡ್ ಕಂಪೆನಿ,	ಸಾಮಾನ್ಯ/ಜ್ಞಾ.ಜ್ಞಾ/ವಿಭಾಗ ಸ್ಥಳಾಂತರ/2015–16. ದಿ:14.09.2015 ಸಾಮಾನ್ಯ/ನ.ಜ್ಞಾ/ಸ್ನಾತಕೋತ್ತರ ವಿಭಾಗ ಸ್ಥಳಾಂತರ/2015–16. ದಿ:11.11.2015 ಸಾಮಾನ್ಯ/ನ.ಜ್ಞಾ/ಸ್ನಾತ ಕೋತ್ತರ ವಿಭಾಗ ಸ್ಥಳಾಂತರ/2015–16. ದಿ:21.12.2015 ಸಾಮಾನ್ಯ/ನಗರಶಾಖೆ/ ಆರೋಗ್ಯ ಕೇಂದ್ರ/	2,60,500		ಸೆಂಟ್ರಲ್ ಕಾಲೇಜು ಆವರಣದಿಂದ ಜ್ಞಾನಭಾರತಿ ಆವರಣ ಇಲ್ಲಿಂದ ಬೇರೆ ಬೇರೆ ವಿಭಾಗಗಳಿಗೆ ಕಡತಗಳು, ಪೀಠೋಪಕರಣಗಳು, ಗಣಕಯಂತ್ರಗಳು, ಪ್ರಯೋಗ ಶಾಲೆಯ ಸಾಮಗ್ರಿಗಳು ಸೇರಿದಂತೆ ಇನ್ನಿತರ ಸಾಮಗ್ರಿಗಳನ್ನು ಜ್ಞಾನಭಾರತಿ ಆವರಣಕ್ಕೆ ಸಾಗಿಸಲು ಮೆ: ಮಹಮ್ಮದ್ ಆಲಿ ಅಂಡ್ ಕಂಪೆನಿ, ನಂ.31/32, ಹರ್ಷ ಕಾಂಪ್ಲೆಕ್ಸ್, ಬೆಂಗಳೂರು–53 ರವರಿಂದ ಸೇವೆಯನ್ನು ಪಡೆದಿರುವುದಕ್ಕೆ ಸಂಬಂಧಿಸಿದಂತೆ, ನಾಲ್ಕು ಸಂಸ್ಥೆಗಳಿಂದ ದರಪಟ್ಟಿ ಪಡೆದು ಕಡಿಮೆದರ ನಮೂದಿಸಿದ ಮೆ: ಮಹಮ್ಮದ್ ಆಲಿ ಸಂಸ್ಥೆಗೆ ನೀಡಲಾಗಿದೆ. ಆದುದರಿಂದ ಆಕ್ಷೇಪಣೆಯಲ್ಲಿಟ್ಟಿರುವ ಮೊತ್ತ ರೂ.2,60,500.00ಗಳನ್ನು

ಆಕ್ಷೇಪಣೆಗಳು						ಉತ್ತರಗಳು
ಕ್ರ. ಸಂ.	ವಿಭಾಗ*	ಖರೀದಿಯ ವಿವರ	ವಿವಿ ಆದೇಶ ಸಂಖ್ಯೆ/ಬಿಲ್ ಸಂಖ್ಯೆ ಮತ್ತು ದಿನಾಂಕ	ಮೊಬಲಗು (ರೂಗಳಲ್ಲಿ)		
				ಆಕ್ಷೇಪಣೆ	ವಸೂಲಾತಿ	
*(Procurement Authority/ Tender Inviting Authority As per rule 6.1 (a) & (b) of Bangalore University Purchase Rules 2003)						
		ನಂ.31/32, ಹರ್ಷ ಕಾಂಪ್ಲೆಕ್ಸ್, ಬೆಂಗಳೂರು–53 ರವರಿಂದ ಸೇವೆಯನ್ನು ಪಡೆದಿರುವುದು	ಸ್ಥಳಾಂತರ/2015–16. ದಿ:19.01.2016 ಆದೇಶ ಲಭ್ಯವಿರುವುದಿಲ್ಲ.			ನೀದಿರುವ ವಿವರಣೆಗಳನ್ನು ಪರಿಗಣಿಸಿ ಆಕ್ಷೇಪಣೆ ಮೊತ್ತ ರೂ.2,60,500.00 ಗಳನ್ನು ಆಕ್ಷೇಪಣೆಯಿಂದ ಕೈ ಬಿಡಲು ವಿನಂತಿಸಿದೆ. **(ಅನುಬಂಧ–116)** (ಪು.ಸಂ.764)
10	ವಿತ್ತಾಧಿಕಾರಿಗಳ ವಿಭಾಗ ವೋಚರ್ (ಕಂಡಿಕೆ–22)	ಆದಾಯ ತೆರಿಗೆಯನ್ನು ಕಟಾಯಿಸಿ ಪಾವತಿಸಲು ದರಪಟ್ಟಿ ಮೂಲಕ ಸಂಸ್ಥೆಗಳನ್ನು 2014–15 ನೇ ಸಾಲಿಗೆ ಆಹ್ವಾನಿಸಿದ್ದು, ಅದರಲ್ಲಿ ಐ1 ಆಗಿರುವ ಮೆ॥ ಶೀಲ ಅರವಿಂದ್ & ಕೋ ಸಂಸ್ಥೆಯವರಿಗೆ ನೀಡಿದ್ದು, ಇದೇ ಸಂಸ್ಥೆಯ 2015–16 ನೇ ಸಾಲಿನಲ್ಲಿಯೂ ಮುಂದುವರೆಸಿರುವುದು.		4,37.072		2014–15ನೇ ಸಾಲಿನಲ್ಲಿ ದರಪಟ್ಟಿಯನ್ನು ಕರೆದು ಕನಿಷ್ಠ ದರಗಳನ್ನು ಕೊಟ್ಟಿದ್ದಂತಹ ಮೆ.ಕೊಮನ್‌ದೂರ್ ಮತ್ತು ಕಂಪನಿಯ ಸಂಸ್ಥೆಗೆ ತದನಂತರ ಮೆ.ಶೀಲಾ ಅರವಿಂದ ಮತ್ತು ಕೊ ಎಂದು ಮರು ನಾಮಕರಣ ಕೊಂಡ ಸಂಸ್ಥೆಗೆ ವಹಿಸಿಕೊಟ್ಟಿರುತ್ತದೆ. ಆ ಸಂಸ್ಥೆಯವರು ಈ ಕೆಳಕಂಡ ಕಾರ್ಯಗಳನ್ನು ಮಾಡಿರುತ್ತಾರೆ. 1. Preparation of filing of quarterly returns. 2. Annual returns. 3. Verification of I.T statements. 4. Generating of Printing From-16. 5. Generating of Printing From-16-A. 6. Uploading data. 7. Filing of Pan Errors, Mismatch etc. ಈ ಎಲ್ಲಾ ಕಾರ್ಯಗಳನ್ನು ಆದಾಯ ತೆರಿಗೆ ಇಲಾಖೆಗೆ ತೃಪ್ತಿಯಾಗುವ ರೀತಿಯಲ್ಲಿ ಸಲ್ಲಿಸಬೇಕಾಗಿರುವುದರಿಂದ ಮೇಲಿನ ಸಂಸ್ಥೆಯವರು ಕೆಲಸ ಕಾರ್ಯವನ್ನು ತೃಪ್ತಿಕರವಾಗಿ 2014–15ನೇ ಸಾಲಿನಲ್ಲಿ ನಿರ್ವಹಿಸಿರುವರು. ಮೇಲಿನ ಸಂಸ್ಥೆಯವರ ಕಾರ್ಯವು ತೃಪ್ತಿಕರವಾಗಿರುವುದನ್ನು ಮನಗಂಡು ಹಿಂದಿನ ಸಾಲಿನ

ಆಕ್ಷೇಪಣೆಗಳು						***ಉತ್ತರಗಳು***
ಕ್ರ. ಸಂ.	ವಿಭಾಗ*	ಖರೀದಿಯ ವಿವರ	ವಿವಿ ಆದೇಶ ಸಂಖ್ಯೆ/ಬಿಲ್ ಸಂಖ್ಯೆ ಮತ್ತು ದಿನಾಂಕ	ಮೊಬಲಗು (ರೂಗಳಲ್ಲಿ)		
				ಆಕ್ಷೇಪಣೆ	ವಸೂಲಾತಿ	
*(Procurement Authority/ Tender Inviting Authority As per rule 6.1 (a) & (b) of Bangalore University Purchase Rules 2003)						
						ದರಯಲ್ಲಿಯೆ 2015–16ನೇ ಸಾಲಿಗೆ ಆ ಸಂಸ್ಥೆಯ ಸೇವೆಯನ್ನು ಮುಂದುವರೆಸಿರುತ್ತದೆ. 2014–15ನೇ ಸಾಲಿನಲ್ಲಿ ಮೇಲಿನ ಸಂಸ್ಥೆಯವರು ಮೇಲಿನ ಕೆಲಸ ಕಾರ್ಯಗಳ ಜೊತೆಗೆ ಈ ಕೆಳಕಂಡ ಕಾರ್ಯವನ್ನು ತುರ್ತಾಗಿ ಮಾದಿರುತ್ತಾರೆ. 1. Filing of B.U I T returns every Year. 2. Filing of Appeals. 3. Obtaining the Income Tax exemption order. 4. Reply for the Notices issued by the Income Tax Department and appearing before the Income Tax authorities. ಆಯುಕ್ತರು, ಆದಾಯ ತೆರಿಗೆ ವಿಭಾಗ(ಅಪೀಲ್ಸ್) ಬೆಂಗಳೂರು ಇವರಲ್ಲಿ ಅಪೀಲ್ ಮಾಡುವ ಕೆಲಸವು ಅತ್ಯಂತ ಮಹತ್ವದ್ದು, ಆದುದರಿಂದ ಮೇಲಿನ ಸಂಸ್ಥೆಯವರನ್ನು ಮುಂದುವರೆಸುವುದು ವಿಶ್ವವಿದ್ಯಾಲಯದ ದೃಷ್ಟಿಯಿಂದ ಅನಿವಾರ್ಯವಾಗಿರುತ್ತದೆ. 2015–16ನೇ ಸಾಲಿನಲ್ಲಿ ಪರಿಣಿತಿ ಹೊಂದಿರುವ ಮೆ.ಶೀಲಾ ಅರವಿಂದ ಮತ್ತು ಕೊ. ಸಂಸ್ಥೆಯವರು ಬೆಂಗಳೂರು ಇವರಿಗೆ ವಹಿಸಿದ್ದ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿರುವುದರಿಂದ ಆಕ್ಷೇಪಣೆ ಮೊತ್ತ ರೂ.437072.00 ಗಳನ್ನು ಆಕ್ಷೇಪಣೆಯಿಂದ ಕೈಬಿಡಲು ಆಪರ ನಿರ್ದೇಶಕರನ್ನು ಪತ್ರ ದಿನಾಂಕ: 28.07.2018ರಲ್ಲಿ ಕೋರಲಾಗಿತ್ತು. ಈಗ ಮತ್ತೊಮ್ಮೆ ನೀಡಿರುವ ಉತ್ತರವನ್ನು ಪರಿಗಣಿಸಿ ಆಕ್ಷೇಪಣೆ ಮೊತ್ತ ಕೈ ಬಿಡುವಂತೆ ವಿನಂತಿಸಲಾಗಿದೆ.

ಆಕ್ಷೇಪಣೆಗಳು						ಉತ್ತರಗಳು
ಕ್ರ. ಸಂ.	ವಿಭಾಗ*	ಖರೀದಿಯ ವಿವರ	ವಿವಿ ಆದೇಶ ಸಂಖ್ಯೆ/ಬಿಲ್ ಸಂಖ್ಯೆ ಮತ್ತು ದಿನಾಂಕ	ಮೊಬಲಗು (ರೂಗಳಲ್ಲಿ)		
				ಆಕ್ಷೇಪಣೆ	ವಸೂಲಾತಿ	
*(Procurement Authority/ Tender Inviting Authority As per rule 6.1 (a) & (b) of Bangalore University Purchase Rules 2003)						
11	ದೈಹಿಕ ಶಿಕ್ಷಣ ನಿರ್ದೇಶಕನಾಲಯ (ಕಂ. ಸಂ. ಬಿ.6)	ಸಕ್ಷಮ ಮಂಜೂರಾತಿ ಇಲ್ಲದೆ ಸಾಮಗ್ರಿ ಖರೀದಿ	ವಿತ್ತಾಧಿಕಾರಿಗಳ ಆದೇಶ ಸಂಖ್ಯೆ. FBVII/Pur/phy Edu.track suits/ cpc/ 2015-16 Bangalore Dt: 06.11.2015	13,32,034		ಈ ಖರೀದಿಗಳಿಗೆ (ಇ–ಪ್ರಕ್ಯೂರ್ ಮೆಂಟ್ ಪದ್ದತಿಯ ಮುಖಾಂತರ) ಜೂನ್ 19, 2014 ರ ಪತ್ರಿಕಾ ಪ್ರಕಟಣೆಯ ಮೂಲಕ ಟೆಂಡರ್ ಕರೆಯಲಾಗಿದೆ. **(ಅನುಬಂಧ–114)** **(ಪು.ಸಂ.759)** ರೂ.13,32,034.00ಗಳ ಬ್ಲೇಜರ್, ಮೆಡಲ್ಸ್, ಟ್ರಾಕ್‌ಸ್ಯೂಟ್, ಟ್ರೋಫೀಸ್ ಇತ್ಯಾದಿ ಖರೀದಿಗೆ ದಿನಾಂಕ:06.11.2015ರೆ ಆದೇಶದಲ್ಲಿ ತಿಳಿಸಿರುವಂತೆ ಕೇಂದ್ರ ಖರೀದಿ ಸಮಿತಿ ದಿನಾಂಕ:24.09.2015ರ ಅನುಮೋದನೆ ಮತ್ತು ಸಿಂಡಿಕೇಟ್ ಅನುಮೋದನೆ ದಿನಾಂಕ:13.10.2015ರಲ್ಲಿ ಪಡೆಯಲಾಗಿದೆ. ಆದುದರಿಂದ ಆಕ್ಷೇಪಣೆಯಲ್ಲಿಟ್ಟಿರುವ ಮೊತ್ತ ರೂ.13,32,034.00 ಕೈ ಬಿಡುವಂತೆ ವಿನಂತಿಸಲಾಗಿದೆ (ಅನುಬಂಧ–115) **(ಪು.ಸಂ.760).**
12	ದೈಹಿಕ ಶಿಕ್ಷಣ ನಿರ್ದೇಶಕನಾಲಯ (ಕಂ. ಸಂ. ಬಿ7)	ಸ್ಪರ್ಧಾತ್ಮಕ ಆರ್ಥಿಕ ಮಿತವ್ಯಯ ನಿಯಮಗಳಿಗೆ ವಿರುದ್ಧವಾಗಿ ಸಾಮಗ್ರಿಗಳ ಖರೀದಿ	ವಿತ್ತಾಧಿಕಾರಿಗಳ ಆದೇಶ ಸಂಖ್ಯೆ. UO.No. FB.VII/ Pur/CPC/DR.RMR/Phy /Edn/Sports Materials/ 2014-15 Bangalore Dt. 14.11.2014	10,30,508		ಈ ಖರೀದಿಗಳಿಗೆ (ಇ–ಪ್ರಕ್ಯೂರ್ ಮೆಂಟ್ ಪದ್ದತಿಯ ಮುಖಾಂತರ) ಜೂನ್ 19, 2014 ರ ಪತ್ರಿಕಾ ಪ್ರಕತಣೆಯ ಮೂಲಕ ಟೆಂಡರ್ ಕರೆಯಲಾಗಿದೆ(**ಅನುಬಂಧ–114**) (ಪು.ಸಂ. 759). ರೂ.10,30,508.00 ಗಳ ಬ್ಲೇಜರ್, ಮೆಡಲ್ಸ್, ಟ್ರಾಕ್‌ಸ್ಯೂಟ್, ಟ್ರೋಫೀಸ್ ಇತ್ಯಾದಿ ಖರೀದಿಗೆ ದಿನಾಂಕ:14.11.2014ರ ಆದೇಶ ದಲ್ಲಿ ತಿಳಿಸಿರುವಂತೆ ಕೇಂದ್ರ ಖರೀದಿ ಸಮಿತಿ ದಿನಾಂಕ:16.10.2014 ಮತ್ತು 21.10.2014 ಅನು ಮೋದನೆ ಮತ್ತು ಸಿಂಡಿಕೇಟ್ ಅನುಮೋದನೆ ದಿನಾಂಕ:21.10.2014ರಲ್ಲಿ ಪಡೆಯ ಲಾಗಿದೆ. ಆದುದ ರಿಂದ ಆಕ್ಷೇಪಣೆಯಲ್ಲಿಟ್ಟಿರುವ ಮೊತ್ತ ರೂ.10,30,508.00 ಕೈ ಬಿಡುವಂತೆ ವಿನಂತಿಸಲಾಗಿದೆ.
13	ಮುದ್ರಣಾಲಯ ವಿಭಾಗ (ಕಂ.	ಮೆ॥ ಕರ್ನಾಟಕ ಸ್ಟೇಟ್ ಕೋ–ಆಪರೇಟಿವ್		15,33,412	1,00,000	ಬೆಂ.ವಿ.ವಿ ಮುದ್ರಣಾಲಯದಿಂದ ಕೆ.ಎಸ್.ಪಿ.ಸಿ. ಸಂಸ್ಥೆಯವರೊಂದಿಗೆ ಕರಾರು ಪತ್ರವು ಮಾಡಿ

ಆಕ್ಷೇಪಣೆಗಳು						ಉತ್ತರಗಳು
ಕ್ರ. ಸಂ.	ವಿಭಾಗ*	ಖರೀದಿಯ ವಿವರ	ವಿವಿ ಆದೇಶ ಸಂಖ್ಯೆ/ಬಿಲ್ ಸಂಖ್ಯೆ ಮತ್ತು ದಿನಾಂಕ	ಮೊಬಲಗು (ರೂಗಳಲ್ಲಿ)		
				ಆಕ್ಷೇಪಣೆ	ವಸೂಲಾತಿ	
*(Procurement Authority/ Tender Inviting Authority As per rule 6.1 (a) & (b) of Bangalore University Purchase Rules 2003)						
	ಸಂ. 5)	ಸಂಸ್ಥೆಯಿಂದ ಮುದ್ರಣ ಕಾರ್ಯಕ್ಕೆ ಸಂಬಂಧಿಸಿದಂತೆ ದಿನಬಳಕೆ ವಸ್ತು ಖರೀದಿ				ಕೊಂಡಿದ್ದು, ಅದರಂತೆ ದಿನಾಂಕ: 26.03.2015 ರಿಂದ 25.03.2016 ರವರೆಗೆ ಈ ಕರರು ಒಪ್ಪಂದ ಜಾರಿಯಲ್ಲಿರುತ್ತದೆ. ಪ್ರತಿಯನ್ನು ಲಗತ್ತಿಸಿದೆ. ಆದರೆ ಮುದ್ರಣಾಲಯದಿಂದ ಕರಾರು ದಿನಾಂಕ 25.03.2016ರಳೊಗೆ ದಿನಬಳಕೆ ವಸ್ತುಗಳು ಖರೀದಿಸಲು ಸರಬರಾಜು ಆದೇಶವನ್ನು ನೀಡಲಾಗಿರುತ್ತದೆ. ಭದ್ರತಾ ಠೇವಣಿ ಪಡೆದ ರೂ. 50,000/– ಹಿಂತಿರುಗಿಸಲಾಗಿದೆ. ನಿಯಮ ಪಾಲಿಸುವಂತೆ ಸೂಚನೆ ನೀಡಲಾಗಿದೆ. ಆದುದರಿಂದ ವಸೂಲಾತಿ ರೂ. ಮೊತ್ತ ೧ ಲಕ್ಷ ಕೈಬಿಡುವಂತೆ ವಿನಂತಿಸಿದೆ. (ಪ್ರತಿಯನ್ನು ಲಗತ್ತಿಸಿದೆ ಅನುಬಂಧ–113) (ಪು.ಸಂ. 754). ಪಾರಾದರ್ಶಕ ಅಧಿನಿಯಮ 1999ನೇ ನಿಯಮಾನುಸಾರ ಟೆಂಡರ್ ಕರೆಯಲಾಗಿದೆ.
14	ಸಹಾಯಕ ವಿತ್ತಾಧಿಕಾರಿಗಳ ವಿಭಾಗ (ಕಂ. ಸಂ.8)	ಶ್ರೀ ಪಂಚಮುಖಿ ಟ್ರಾವಲ್ಸ್ ಬೆಂಗಳೂರು ಇವರಿಂದ ಪರೀಕ್ಷಾ ಕಾರ್ಯಗಳಿಗೆ ವಾಹನಗಳನ್ನು ಬಾಡಿಗೆ ಪಡೆದಿರುವ ಮೊತ್ತ	ವಿ.ವಿ ಆದೇಶ ಸಂಖ್ಯೆ. ವಿ.3/ವಾಹನ ಬಾಡಿಗೆ/ 2014–15 ದಿನಾಂಕ 20.10.2010	20,02,947		ದಿನಾಂಕ: 13.01.2015ರ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಮಾನ್ಯ ಕುಲಪತಿಗಳು ದಿನಾಂಕ: 31.10.2015ರಲ್ಲಿ ಪರೀಕ್ಷಾ ಕಾರ್ಯ ಹಾಗೂ ಇದಕ್ಕೆ ಸಂಬಂಧಪಟ್ಟ ಇತರೆ ಕಾರ್ಯಗಳಿಗೆ ವಾಹನಗಳನ್ನು ಬಾಡಿಗೆಗೆ ಪಡೆಯಲು ಆದೇಶ ದಿನಾಂಕ: 25.04.2015ರಲ್ಲಿ ಸೂಚಿಸಿರುವ ದರಕ್ಕಿಂತ 8%ರಂತೆ ಪರಿಷ್ಕೃತ ಧರ ಹೆಚ್ಚಿಸಿ ಸರಬರಾಜು ಮಾಡುವಂತೆ ಆದೇಶಿಸಿರುತ್ತಾರೆ ಸದರಿ ಆದೇಶದನ್ವಯ ಶ್ರೀ ಪಂಚಮುಖಿ ಟ್ರಾವೆಲ್ಸ್, ಬೆಂಗಳೂರು ರವರಿಗೆ ಸರಬರಾಜು ಆದೇಶ ನೀಡಲಾಗಿದೆ.(ಆದೇಶದ ಜೆರಾಕ್ಸ್ ಪ್ರತಿಯನ್ನು ಲಗತ್ತಿಸಲಾಗಿದೆ) **(ಅನುಬಂಧ–112)** (ಪು.ಸಂ. 752).

ಆಕ್ಷೇಪಣೆಗಳು						***ಉತ್ತರಗಳು***
ಕ್ರ. ಸಂ.	ವಿಭಾಗ*	ಖರೀದಿಯ ವಿವರ	ವಿವಿ ಆದೇಶ ಸಂಖ್ಯೆ/ಬಿಲ್ ಸಂಖ್ಯೆ ಮತ್ತು ದಿನಾಂಕ	ಮೊಬಲಗು (ರೂಗಳಲ್ಲಿ)		
				ಆಕ್ಷೇಪಣೆ	ವಸೂಲಾತಿ	
*(Procurement Authority/ Tender Inviting Authority As per rule 6.1 (a) & (b) of Bangalore University Purchase Rules 2003)						
15	ಸಹಾಯಕ ವಿತ್ತಾಧಿಕಾರಿಗಳ ವಿಭಾಗ (ಕಂ. ಸಂ.13(3))	ಮೆ॥ ಕರ್ನಾಟಕ ಸ್ಟೇಟ್ ಪ್ರಿಂಟರ್ಸ್ ಇವರಿಂದ ಲೇಖನ ಸಾಮಗ್ರಿ ಮತ್ತು ಮುದ್ರಣ ವೆಚ್ಚ		38,94,145		ಬೆಂಗಳೂರು ವಿಶ್ವವಿದ್ಯಾಲಯದ ವಿಭಾಗಗಳಿಗೆ ಬೇಕಾಗುವ ಲೇಖನ ಸಾಮಗ್ರಿಗಳಿಗೆ ಪ್ರತಿ ವರ್ಷ ಸಾಮಾನ್ಯ ವಿಭಾಗದವರು ಟೆಂಡರ್ ಅಹ್ವಾನಿಸಿ ಲೇಖನ ಸಾಮಾಗ್ರಿಗಳನ್ನು ಖರೀದಿಸಿ ಎಲ್ಲಾ ವಿಭಾಗಗಳಿಗೆ ಹಂಚಿಕೆ ಮಾಡುತ್ತಾರೆ. ಇದರಲ್ಲಿ ಪರೀಕ್ಷಾ ವಿಭಾಗ ಸೇರ್ಪಡೆಯಾಗಿರುವುದಿಲ್ಲ. ಪರೀಕ್ಷಾ ವಿಭಾಗವು ವಿಶ್ವವಿದ್ಯಾಲಯದ ಒಂದು ಭಾಗವಾಗಿರುವುದರಿಂದ ಅವರು ಅಹ್ವಾನಿಸಿದ ಟೆಂಡರ್ ದರದ ಪಟ್ಟಿಯನ್ನು ಪಡೆದು LI ಆದಿರುವ ಕೆ.ಎಸ್.ಪಿ.ಸಿ.ಎಸ್ ಸಂಸ್ಥೆಯಿಂದ ಲೇಖನ ಸಾಮಾಗ್ರಿಗಳನ್ನು ಖರೀದಿ ಮಾಡಲಾಗಿರುತ್ತದೆ. 2014–15ರಲ್ಲಿ ಆಡಿಟ್ ಆಕ್ಷೇಪಣೆಯಾದ ನಂತರದಲ್ಲಿ 2016–17ನೇ ಸಾಲಿನಿಂದ ಪರೀಕ್ಷಾ ವಿಭಾಗಕ್ಕೆ ಬೇಕಾಗಿರುವ ಲೇಖನ ಸಾಮಾಗ್ರಿಗಳಿಗೆ ಪರೀಕ್ಷಾ ವಿಭಾಗದಿಂದಲೇ ನೇರವಾಗಿ ಇ–ಪ್ರಕ್ಯೂರ್ ಮೆಂಟ್‌ನಲ್ಲಿ ಟೆಂಡರ್ ಅಹ್ವಾನಿಸಿ ಲೇಖನ ಸಾಮಾಗ್ರಿಗಳನ್ನು ಖರೀದಿ ಮಾಡಲಾಗುತ್ತಿದೆ. ಆದುದರಿಂದ ಆಕ್ಷೇಪಿಸಿರುವ ಮೊತ್ತ ರೂ.2,16,313.00 ನ್ನು ಕೈ ಬಿಡುವಂತೆ ಕೋರಿದೆ. ಕ್ರ.ಸಂ (3) ಹಾಗೂ (4)ರ ಇನ್‌ವಾಯ್ಸ್‌ನಲ್ಲಿ ಖರೀದಿಮಾಡಿರುವ ರೂ.46,418.00 ಹಾಗೂ 49,643.00 ಲೇಖನ ಸಾಮಾಗ್ರಿಗಳ ಬಗ್ಗೆ ಮೇಲಾಧಿಕಾರಿಗಳು ಬೇಕೆಂದು ಸ್ಪಷ್ಟೀಕರಣ ಮೌಖಿಕವಾಗಿ ಕೇಳಿದ ಹಿನ್ನಲೆಯಲ್ಲಿ ಇದನ್ನು ದಾಸ್ತಾನಿಗೆ ತೆಗೆದುಕೊಂಡಿರುವುದಿಲ್ಲ ಹಾಗೂ ಕೆ.ಸಿ.ಪಿ.ಸಿ.ಎಸ್

ಆಕ್ಷೇಪಣೆಗಳು						***ಉತ್ತರಗಳು***
ಕ್ರ. ಸಂ.	ವಿಭಾಗ*	ಖರೀದಿಯ ವಿವರ	ವಿವಿ ಆದೇಶ ಸಂಖ್ಯೆ/ಬಿಲ್ ಸಂಖ್ಯೆ ಮತ್ತು ದಿನಾಂಕ	ಮೊಬಲಗು (ರೂಗಳಲ್ಲಿ)		
				ಆಕ್ಷೇಪಣೆ	ವಸೂಲಾತಿ	
*(Procurement Authority/ Tender Inviting Authority As per rule 6.1 (a) & (b) of Bangalore University Purchase Rules 2003)						
						ರವರಿಗೆ ಮೇಲ್ಕಂಡ ಸರಬರಾಜಿಗೆ ಇದುವರೆವಿಗೂ ಹಣ ಸಹ ಪವತಿ ಮಾಡಿರುವುದಿಲ್ಲ ಆದುದರಿಂದ ಇದನ್ನು ಪರಿಶೀಲಿಸಿ ಆಕ್ಷೇಪಣೆ ಕೈ ಬಿಡುವಂತೆ ಕೋರಿದೆ.
16	ಕುಲಸಚಿವರು (ಆಡಳಿತ) ವಿಭಾಗ (ಕಂ. ಸಂ. 6)	ಬೆಂ.ವಿ.ವಿ ಆವರಣದಲ್ಲಿ ಪಹರೆ ಕರ್ತವ್ಯಕ್ಕೆ ಭದ್ರತಾ ಸಿಬ್ಬಂದಿಯನ್ನು ಮೆ॥ ಕೆನಾನ್ ಡಿಟೆಕ್ಟಿವ್ ಸೆಕ್ಯೂರಿಟಿ ಸರ್ವಿಸ್ಸ್ ಇವರಿಂದ ಪಡೆದಿರುವುದು	ಕಡತ ಸಂಖ್ಯೆ ಜಿಇಎನ್/ಸೆಕ್ಯೂರಿಟಿ/ 2015–16	65,85,738		ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸೆಕ್ಯೂರಿಟಿ ಗಾರ್ಡ್‌ಗಳನ್ನು ನಿಯೋಜಿಸುವ ಬಗೆಗೆ ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆದು ಇದರಲ್ಲಿ ಕಡಿಮೆ ಬೆಲೆ ನಮೂದಿಸಿರುವ ಮೆ. ಕೆನಾನ್ ಡಿಟೆಕ್ಟೀವ್ ಏಜನ್ಸಿ, ನಂ.282/1,2ನೇ ಮೇನ್,ಗಿರಿನಗರ 1ನೇಹಂತ, ಬೆಂಗಳೂರು ರವರಿಂದ ಒಬ್ಬ ಸೆಕ್ಯೂರಿಟಿ ಗಾರ್ಡ್‌ಗೆ 1 ತಿಂಗಳಿಗೆ ರೂ.7,737.57/–ರಂತೆ ಹಾಗೂ ಒಬ್ಬ ಸೂಪರ್‌ವೈಸರ್‌ಗೆ 1 ತಿಂಗಳಿಗೆ ರೂ.8,763.65/–ರಂತೆ ಇ.ಎಸ್.ಐ. ಮತ್ತು ಪಿ.ಎಪ್. ಸೇರಿ ದಂತೆ ನಿಯೋಜಿಸಿಕೊಳ್ಳಲು ಅನುಮತಿ ಕೋರಿದರು. ಸಂಸ್ಥೆಯವರು ಸೇವಾ ಶುಲ್ಕವನ್ನು ನಮೂದಿಸಿದ್ದು, ವಿಶ್ವವಿದ್ಯಾಲಯವು ನಮೂದಿಸಿದ್ದ ವಿವರಣೆಗಳಿಗೆ ಮಾಹಿತಿ ನೀಡಿರುವ ಹಿನ್ನೆಲೆಯಲ್ಲಿ ಸಭೆಯು L-2 ಸಂಸ್ಥೆಯಾದ ಮೆ. ಕೆನಾನ್ ಡಿಟೆಕ್ಟೀವ್ ಏಜನ್ಸಿ ನಂ. 282/1, 2ನೇ ಮೇನ್, ಗಿರಿನಗರ 1ನೇ ಹಂತ, ಬೆಂಗಳೂರು ರವರಿಂದ ಒಬ್ಬ ಸೆಕ್ಯೂರಿಟಿ ಗಾರ್ಡ್‌ಗೆ ಒಂದು ತಿಂಗಳಿಗೆ ರೂ.7,737.57/– ರಂತೆ ಹಾಗೂ ಒಬ್ಬ ಸೂಪರ್‌ವೈಸರ್‌ಗೆ ಒಂದು ತಿಂಗಳಿಗೆ ರೂ.8,763.65/–ರಂತೆ ಇ.ಎಸ್.ಐ. ಮತ್ತು ಪಿ.ಎಪ್. ಸೇರಿದಂತೆ ನಿಯೋಜಿಸಿಕೊಳ್ಳಲು ಸರ್ವಾನುಮತದಿಂದ ಅನುಮೋದಿಸಿತು. ಈ ಕೆಳಕಂಡ ದಾಖಲೆಗಳನ್ನು ಲಗತ್ತಿಸಿದೆ (**ಅನುಬಂಧ–117**) (ಪು.ಸಂ.767).

ಆಕ್ಷೇಪಣೆಗಳು						ಉತ್ತರಗಳು
ಕ್ರ. ಸಂ.	ವಿಭಾಗ*	ಖರೀದಿಯ ವಿವರ	ವಿವಿ ಆದೇಶ ಸಂಖ್ಯೆ/ಬಿಲ್ ಸಂಖ್ಯೆ ಮತ್ತು ದಿನಾಂಕ	ಮೊಬಲಗು (ರೂಗಳಲ್ಲಿ)		
				ಆಕ್ಷೇಪಣೆ	ವಸೂಲಾತಿ	
*(Procurement Authority/ Tender Inviting Authority As per rule 6.1 (a) & (b) of Bangalore University Purchase Rules 2003)						
						1. ಸಿಂಡಿಕೇಟ್ ಸಭೆಯ ಕಾರ್ಯಸೂಚಿ ಟಿಪ್ಪಣಿ ಹಾಗೂ ನಡಾವಳಿ 2. ಮಂಜೂರಾತಿ ಆದೇಶ 3. ಕೆನಾನ್ ಸಂಸ್ಥೆಯು ನೀಡಿರುವ ಒಂದು ದಾಖಲೆ ಪತ್ರ.
17	ಮುದ್ರಣಾಲಯ (ಕಂಡಿಕೆ ಸಂಖ್ಯೆ. 2(1)	ಮೆ॥ ಪಿಕಾಕ್ ಅಡ್ವರ್ಟೈಸ್‌ಮೆಂಟ್ ಇವರಿಂದ ಮುದ್ರಣ ಮಾಡಿಸಿರುವುದು		1,27,327		2015–16ನೇ ಸಾಲಿನಲ್ಲಿ M/s. Peacok Advertisement ರವರಿಂದ ಸಮಯಕ್ಕೆ ಮತ್ತು ಸಂಧರ್ಭಕ್ಕೆ ತಕ್ಕಂತೆ ಬೇರೆ ಬೇರೆ ಕೆಲಸಗಳಿಗೆ ಅಂದರೆ ಮಾನ್ಯ ಕುಲಸಚಿವರ ಹಾಗೂ ಮಾನ್ಯ ಕುಲಪತಿಗಳ ಮತ್ತು ಪರೀಕ್ಷಾ ವಿಭಾಗದ ಕುಲಸಚಿವರಿಗೆ 2016ನೇ ವರ್ಷದ ಗ್ರೀಂಟಿಂಗ್ ಕಾರ್ಡ್ ಮತ್ತು ಕವರ್ ಗಳು ಹಾಗೂ ಘಟಿಕೋತ್ಸವಕ್ಕೆ ಬೇಕಾದ ವಾರ್ಷಿಕ ವರದಿಯನ್ನು ಮಾಡಸಲಾಗಿದೆ. ಬೇರೆ ಬೇರೆ ದಿನಾಂಕಗಳಲ್ಲಿ ಹಲವಾರು ಮುದ್ರಣಗಳನ್ನು ಮಾಡಿಸಿರಲಾಗುತ್ತದೆ. ಅನುಬಂಧ–1 ರಲ್ಲಿ ನೀವು ತಿಳಿಸಿರುವ ಲೆಕ್ಕ ಪರಿಶೋಧನೆಯ ವರದಿ ಪ್ರಕಾರ ಕ್ರಮ ಸಂಖ್ಯೆ : 1 ರಿಂದ 12ರವರಗೆ ಮಾಡಿದ ವೆಚ್ಚ ಸಾದಿಲ್ವಾರು ಮುಂಗಡದಲ್ಲಿ ಬೇರೆ ಬೇರೆ ದಿನಾಂಕಗಳಂದು ಆಗಿಂದಾಗೆ ಅವಶ್ಯಕತೆಗೆ ಅನುಕೂಲವಾಗಿ ವಹಿಸದೆ ಮುದ್ರಣ ಕೆಲಸದ ಬಾಬ್ತು ಟೆಂಡರ್ ವ್ಯಾಪ್ತಿಗೆ ಒಳಪಡುವುದಿಲ್ಲ. ಒಟ್ಟು ಮೊತ್ತಗಳನ್ನು ತೆಗೆದುಕೊಂಡರು ಒಂದು ಲಕ್ಷ ಮೀರಿರುವುದಿಲ್ಲ. ಹಾಗೆ ಕ್ರಮ ಸಂಖ್ಯೆ 13 ರಿಂದ 15 ರವರೆಗೆ ಮೂರು ಸಂಸ್ಥೆಗಳಿಂದ ಕೋಟೇಶನ್ ಪಡೆದು ಇವರಲ್ಲಿ ಕಡಮೆ ದರ ನಮೂದಿಸಿರುವ M/s. Peacok Advertisement ಇವರಿಗೆ ಮುದ್ರಣ ಮಾಡಲು ಆದೇಶ ನೀಡಲಾಗಿದೆ. ಪ್ರತಿಗಳನ್ನು ಲಗತ್ತಿಸಲಾಗಿದೆ. ಆದ್ದರಿಂದ ಈ ಆಕ್ಷೇಪಣೆಯ ಮೊತ್ತ ರೂ. 15,33,412/– ಮತ್ತು ವಸೂಲಾತಿಗೆ ಸೂಚಿಸಿರುವ 1,00,000/–ರೂಗಳನ್ನು ಕೈ ಬಿಡಲು ಕೋರಿದೆ.
			ಒಟ್ಟು ಮೊತ್ತ	**7318044**	**1009083**	

ಆಕ್ಷೇಪಣೆಗಳು						***ಉತ್ತರಗಳು***
ಕ್ರ. ಸಂ.	ವಿಭಾಗ*	ಖರೀದಿಯ ವಿವರ	ವಿವಿ ಆದೇಶ ಸಂಖ್ಯೆ/ಬಿಲ್ ಸಂಖ್ಯೆ ಮತ್ತು ದಿನಾಂಕ	ಮೊಬಲಗು (ರೂಗಳಲ್ಲಿ)		
				ಆಕ್ಷೇಪಣೆ	ವಸೂಲಾತಿ	
*(Procurement Authority/ Tender Inviting Authority As per rule 6.1 (a) & (b) of Bangalore University Purchase Rules 2003)						

30. ಬೆಂಗಳೂರು ವಿ.ವಿ. ಯ ಖರೀದಿ ನಿಯಮಗಳು 2003 ನಿಯಮ–9.0 ಯನ್ನು ಉಲ್ಲಂಘಿಸಿ ರೂ. 1,00,000.00 ಮಿತಿಯೊಳಗಿನ ಮೌಲ್ಯದ ಸರಕುಗಳನ್ನು ಖರೀದಿಸಿರುವ ವಿವರಗಳು

1	ದೈಹಿಕ ಶಿಕ್ಷಣ ನಿರ್ದೇಶನಾಲಯ (ಕಂ. ಸಂ.ಬಿ(3)	ಕ್ರೀಡಾ ಸಾಮಗ್ರಿ, ಊಟ, ಟ್ರೋಫಿ,		7,174 45,760 24,291 47,259		2014–15ನೇ ಸಾಲಿನಲ್ಲಿ ನಗದು ಬಹುಮಾನ ನೀಡಲು ಕ್ರೀಡಾ ವಿದ್ಯಾರ್ಥಿಗಳು ಅಂತರ ವಿಶ್ವವಿದ್ಯಾಲಯ / ದಕ್ಷಿಣವಲಯ ಅಂತರ ವಿಶ್ರವವಿದ್ಯಾಲಯದ ಕ್ರೀಡೆಯಲ್ಲಿ ಭಾಗವಹಿಸಿ ಬಹುಮಾನ ಪಡೆದಂತ ಕ್ರೀಡಾಪಟುಗಳಿಗೆ ನಗದು ಬಹುಮಾನ ನೀಡಲು ಮಾನ್ಯ ಕುಲಸಚಿವರು, ಮಾನ್ಯ ಕುಲಪತಿಗಳು ದಿನಾಂಕವನ್ನು ನಿಗದಿ ಪಡಿಸಿ ಅತಿ ಜರೂರಾಗಿ ಬಹುಮಾನ ವಿತರಣೆ ಮಾಡ ಬೇಕಾಗಿರುವುದರಿಂದ ಕ್ರೀಡಾ ಸಾಮಗ್ರಿಗಳನ್ನು ಖರೀದಿಸುವ, ಊಟ ತಿಂಡಿ ಸರಬರಾಜು ಸಂಬಂಧ ದರಪಟ್ಟಿ ತೆಗೆದುಕೊಳ್ಳಲು ಸಾಧ್ಯವಾಗದ ಕಾರಣ ವಿವಿಧ ಸಂಸ್ಥೆಗಳ ದರ ಹೋಲಿಕೆ ಮಾಡಿ ಖರೀದಿಸಲಾಗಿದೆ. ಇನ್ನು ಮುಂದೆ ಈ ರೀತಿ ಆಗದಂತೆ ಅಗತ್ಯ ಕ್ರಮ ವಹಿಸಿ ಖರೀದಿ ನಿಯಮದಂತೆ, ದರಪಟ್ಟಿಯನ್ನು ಕರೆದು ಖರೀದಿಸಲಾಗುವುದು ಎಂದು ತಿಳಿಸಿರುತ್ತಾರೆ ಹಾಗೂ ಖರೀದಿ ನಿಯಮ ತಪ್ಪದೆ ಪಾಲಿಸುವಂತೆ ಸೂಚನೆ ನೀಡಲಾಗಿದೆ. ಕ್ರೀಡಾ ಕಾರ್ಯಕ್ರಮದಲ್ಲಿನ ಊಟದ ವ್ಯವಸ್ಥೆಯಲ್ಲಿನ ಬೆಳಗಿನ ತಿಂಡಿ ರೂ.7,174.00.00 & ಮಧ್ಯಾಹ್ನದ ಊಟ ರೂ.45,760.00 ಟ್ರೋಫಿ ರೂ.24,291.00 ಇತರೆ ವ್ಯವಸ್ಥೆಗೆ ರೂ.47,259.00. ಇವುಗಳ ಒಟ್ಟು ಮೊತ್ತ ರೂ.1,24,484.00ರೂಗಳ ಆಕ್ಷೇಪಣೆಯಿಂದ ಕೈಬಿಡಲು ಕೋರಿದೆ.
2	ದೈಹಿಕ ಶಿಕ್ಷಣ	ಮಹಾಲಕ್ಷ್ಮಿ ಸ್ನಾಕ್ಸ್ ಬಾರ್,		89,591		2015–16ನೇ ಸಾಲಿನಲ್ಲಿ ನಗದು ಬಹುಮಾನ ನೀಡಲು

ಆಕ್ಷೇಪಣೆಗಳು						ಉತ್ತರಗಳು
ಕ್ರ. ಸಂ.	ವಿಭಾಗ*	ಖರೀದಿಯ ವಿವರ	ವಿವಿ ಆದೇಶ ಸಂಖ್ಯೆ/ಬಿಲ್ ಸಂಖ್ಯೆ ಮತ್ತು ದಿನಾಂಕ	ಮೊಬಲಗು (ರೂಗಳಲ್ಲಿ)		
				ಆಕ್ಷೇಪಣೆ	ವಸೂಲಾತಿ	
*(Procurement Authority/ Tender Inviting Authority As per rule 6.1 (a) & (b) of Bangalore University Purchase Rules 2003)						
	ನಿರ್ದೇಶನಾಲಯ (ಕಂ. ಸಂ.ಬಿ(5)	ಗಾಂಧಿ ನಗರ, ಬೆಂಗಳೂರು ಇವರಿಂದ ಊಟ ತಿಂಡಿ ಖರೀದಿ				ಕ್ರೀಡಾ ವಿದ್ಯಾರ್ಥಿಗಳು ಅಂತರ ವಿಶ್ವವಿದ್ಯಾಲಯ / ದಕ್ಷಿಣ ವಲಯ ಅಂತರ ವಿಶ್ರವವಿದ್ಯಾಲಯದ ಕ್ರೀಡೆಯಲ್ಲಿ ಭಾಗವಹಿಸಿ ಬಹುಮಾನ ಪಡೆದಂತ ಕ್ರೀಡಾಪಟುಗಳಿಗೆ ಮತ್ತು ಇತರರಿಗೆ ಊಟ ತಿಂಡಿಗಳ ವ್ಯವಸ್ಥೆ ಮಾಡಬೇಕಾದ್ದರಿಂದ ಸಮಯದ ಅಭಾವದಿಂದ ಮಾನ್ಯ ಕುಲಸಚಿವರು ಹಾಗೂ ಮಾನ್ಯ ಕುಲಪತಿಗಳು ನಿಗದಿ ಪಡಿಸಿದ ದಿನಾಂಕದಂದು ಈ ವ್ಯವಸ್ಥೆಗಳನ್ನು ಮಾಡಬೇಕಾದುದರಿಂದ, ಊಟದ ವ್ಯವಸ್ಥೆಗೆ ಸಂಸ್ಥೆಗಳಿಂದ ದರಪಟ್ಟಿ ಕರೆಯಲು ಸಾಧ್ಯವಾಗಲಿಲ್ಲ. ವಿವಿಧ ಸಂಸ್ಥೆಗಳ ದರ ಹೋಲಿಕೆ ಮಾಡಿ, ಕಡಿಮೆ ದರ ತಿಳಿಸಿದ ಮಹಾಲಕ್ಷ್ಮಿ ಸ್ನ್ಯಾಕ್ಸ್, ಗಾಂಧಿನಗರ ಇವರಿಂದ ಸೇವೆ ಪಡೆಯಲಾಗಿದೆ. ಇನ್ನು ಮುಂದೆ ಆಕ್ಷೇಪಣೆಯ ಅಂಶವನ್ನು ಗಮನದಲ್ಲಿಟ್ಟು ಖರೀದಿ ನಿಯಮ ಪಾಲಿಸುವಂತೆ ಸೂಚನೆ ನೀಡಲಾಗಿದೆ. 2015–16ನೇ ಸಾಲಿನ ಮಹಾಲಕ್ಷ್ಮಿ ಸ್ನಾಕ್ಸ್ ಬಾರ್, ಗಾಂಧಿನಗರ ಇವರುಗಳಿಂದ ಊಟ ತಿಂಡಿ ಖರೀದಿ ಮಾಡಿರುವ ರೂ.89,591.00 ಗಳನ್ನು ಆಕ್ಷೇಪಣೆಯಿಂದ ಕೈಬಿಡಲು ಕೋರಿದೆ.
3	ಅಂಚೆ ತೆರಪು ಮತ್ತು ದೂರ ಶಿಕ್ಷಣ ನಿರ್ದೇಶನಾಲಯ (ಕಂ.ಸಂ. 3)	ಕಛೇರಿ ಉಪಯೋಗಿತ ಸಾಮಗ್ರಿ ಖರೀದಿ		97,718		ಅಂಚೆ ತೆರಪು ಮತ್ತು ದೂರ ಶಿಕ್ಷಣ ನಿರ್ದೇಶನಾಲಯವನ್ನು ನಗರ ಶಾಖೆಯಿಂದ ಸರ್ಕಾರದ ಆದೇಶದಂತೆ ಮತ್ತು ಕುಲಪತಿಯವರ ಆದೇಶದಂತೆ ತುರ್ತಾಗಿ ಜ್ಞಾನಭಾರತಿಯಲ್ಲಿರುವ ಒಂದು ಕಟ್ಟಡಕ್ಕೆ ವರ್ಗಾಯಿಸಿರುವುದರಿಂದ ಹಾಗೂ ಯು.ಜಿ.ಸಿಯ ನ್ಯಾಕ್ ಕಮಿಟಿಯು ದೂರ ಶಿಕ್ಷಣ ನಿರ್ದೇಶನಾಲಯಕ್ಕೆ ಭೇಟಿ ನೀಡಲು ಬರುವುದರಿಂದ ತುರ್ತು ಕಾರ್ಯಗಳನ್ನು ಜರೂರಾಗಿ ಮಾಡಬೇಕಾಗಿದ್ದರಿಂದ ಈ ರೀತಿ ಕಾರ್ಯ ನಿರ್ವಹಿಸಬೇಕಾಯಿತು ಆಗಿನ ಮುಖ್ಯಸ್ಥರ ಆದೇಶದಂತೆ

ಆಕ್ಷೇಪಣೆಗಳು						ಉತ್ತರಗಳು
ಕ್ರ. ಸಂ.	ವಿಭಾಗ*	ಖರೀದಿಯ ವಿವರ	ವಿವಿ ಆದೇಶ ಸಂಖ್ಯೆ/ಬಿಲ್ ಸಂಖ್ಯೆ ಮತ್ತು ದಿನಾಂಕ	ಮೊಬಲಗು (ರೂಗಳಲ್ಲಿ)		
				ಆಕ್ಷೇಪಣೆ	ವಸೂಲಾತಿ	
*(Procurement Authority/ Tender Inviting Authority As per rule 6.1 (a) & (b) of Bangalore University Purchase Rules 2003)						
						ತುರ್ತಾಗಿ ಈ ರೀತಿಯ ಕೆಲವು ಕೆಲಸಗಳನ್ನು ಮಾಡಬೇಕಾಗಿ ಬಂದುದ್ದರಿಂದ ಈ ರೀತಿಯ ಲೋಪದೋಷವು ಕಂಡುಬಂದಿರುತ್ತದೆ ಇನ್ನು ಮುಂದೆ ಈ ರೀತಿ ಆಗದಂತೆ ಸೂಕ್ತ ಕ್ರಮವನ್ನು ಕೈಗೊಳ್ಳಲಾಗುವುದು. ಮತ್ತು ಸದರಿ ದಾಸ್ತಾನು ಸಾಮಗ್ರಿಗಳನ್ನು ದಾಸ್ತಾನು ಪುಸ್ತಕದಲ್ಲಿ ತೆಗೆದುಕೊಂಡು ಮೇಲಾಧಿಕಾರಿಗಳಿಂದ ದೃಢಿಪಡಿಸಲಾಗಿದೆ. ಈ ಸಂಬಂಧ ಮುಂದಿನ ಲೆಕ್ಕಪರಿಶೋಧನೆ ಸಮಯದಲ್ಲಿ ದಾಖಲೆ ಒದಗಿಸುವಂತೆ ಸೂಚಿಸಲಾಗಿದೆ. ಆದುದರಿಂದ, ಆಕ್ಷೇಪಣೆ ಮೊತ್ತ ಕೈಬಿಡುವಂತೆ ವಿನಂತಿಸಿದೆ.
4	ಅಂಚೆ ತೆರಪು ಮತ್ತು ದೂರ ಶಿಕ್ಷಣ ನಿರ್ದೇಶನಾಲಯ (ಕಂ.ಸಂ. 5)	ಕಛೇರಿ ಸಾಮಗ್ರಿ ಖರೀದಿ		93,049		ಅಂಚೆ ತೆರಪು ಮತ್ತು ದೂರ ಶಿಕ್ಷಣ ನಿರ್ದೇಶನಾಲಯವನ್ನು ನಗರ ಶಾಖೆಯಿಂದ ಸರ್ಕಾರದ ಆದೇಶದಂತೆ ಮತ್ತು ಕುಲಪತಿಯವರ ಆದೇಶದಂತೆ ತುರ್ತಾಗಿ ಜ್ಞಾನಭಾರತಿಯಲ್ಲಿರುವ ಒಂದು ಕಟ್ಟಡಕ್ಕೆ ವರ್ಗಾಯಿಸಿರುವುದರಿಂದ ಹಾಗೂ ಯು.ಜಿ.ಸಿಯ ನ್ಯಾಕ್ ಕಮಿಟಿಯು ದೂರ ಶಿಕ್ಷಣ ನಿರ್ದೇಶನಾಲಯಕ್ಕೆ ಭೇಟಿ ನೀಡಲು ಬರುವುದರಿಂದ ತುರ್ತು ಕಾರ್ಯಗಳನ್ನು ಜರೂರಾಗಿ ಮಾಡಬೇಕಾಗಿ ದ್ದರಿಂದ ಈ ರೀತಿ ಕಾರ್ಯ ನಿರ್ವಹಿಸಬೇಕಾ ಯಿತು ಆಗಿನ ಮುಖ್ಯಸ್ಥರ ಆದೇಶದಂತೆ ತುರ್ತಾಗಿ ಈ ರೀತಿಯ ಕೆಲವು ಕೆಲಸಗಳನ್ನು ಮಾಡಬೇಕಾಗಿ ಬಂದುದ್ದರಿಂದ ಈ ರೀತಿಯ ವ್ಯತ್ಯಾಸ ಉಂಟಾಗಿರುತ್ತದೆ. ಇನ್ನು ಮುಂದೆ ಈ ರೀತಿ ಆಗದಂತೆ ಸೂಕ್ತ ಕ್ರಮವನ್ನು ಕೈಗೊಳ್ಳಲಾಗುವುದು. ಮತ್ತು ಸದರಿ ದಾಸ್ತಾನು

ಆಕ್ಷೇಪಣೆಗಳು						ಉತ್ತರಗಳು
ಕ್ರ. ಸಂ.	ವಿಭಾಗ*	ಖರೀದಿಯ ವಿವರ	ವಿವಿ ಆದೇಶ ಸಂಖ್ಯೆ/ಬಿಲ್ ಸಂಖ್ಯೆ ಮತ್ತು ದಿನಾಂಕ	ಮೊಬಲಗು (ರೂಗಳಲ್ಲಿ)		
				ಆಕ್ಷೇಪಣೆ	ವಸೂಲಾತಿ	
*(Procurement Authority/ Tender Inviting Authority As per rule 6.1 (a) & (b) of Bangalore University Purchase Rules 2003)						
						ಸಾಮಗ್ರಿಗಳನ್ನು ದಾಸ್ತಾನು ಪುಸ್ತಕದಲ್ಲಿ ತೆಗೆದುಕೊಂಡು ಮೇಲಾಧಿಕಾರಿಗಳಿಂದ ದೃಢಿಪಡಿಸಲಾಗಿದೆ. ಈ ಸಂಬಂಧ ಮುಂದಿನ ಲೆಕ್ಕಪರಿಶೋಧನೆ ಸಮಯದಲ್ಲಿ ದಾಖಲೆ ಒದಗಿಸುವಂತೆ ಸೂಚಿಸಲಾಗಿದೆ. ಆದುದರಿಂದ, ಆಕ್ಷೇಪಣೆ ಮೊತ್ತ ಕೈಬಿಡುವಂತೆ ವಿನಂತಿಸಿದೆ.
5	ಅಂಚೆ ತೆರಪು ಮತ್ತು ದೂರ ಶಿಕ್ಷಣ ನಿರ್ದೇಶನಾಲಯ (ಕಂ.ಸಂ. 6)	ತುಂಡು ಗುತ್ತಿಗೆ ಮೇಲೆ ಖರೀದಿ		96,777		ಅಂಚೆ ತೆರಪು ಮತ್ತು ದೂರ ಶಿಕ್ಷಣ ನಿರ್ದೇಶನಾಲಯವನ್ನು ನಗರ ಶಾಖೆಯಿಂದ ಸರ್ಕಾರದ ಆದೇಶದಂತೆ ಮತ್ತು ಕುಲಪತಿಯವರ ಆದೇಶದಂತೆ ತುರ್ತಾಗಿ ಜ್ಞಾನಭಾರತಿಯಲ್ಲಿರುವ 1 ಕಟ್ಟಡಕ್ಕೆ ವರ್ಗಾಯಿಸಿರುವುದರಿಂದ ಹಾಗೂ ಯು.ಜಿ.ಸಿಯ ನ್ಯಾಕ್ ಕಮಿಟಿಯು ದೂರ ಶಿಕ್ಷಣ ನಿರ್ದೇಶನಾಲಯಕ್ಕೆ ಭೇಟಿ ನೀಡಲು ಬರುವುದರಿಂದ ತುರ್ತು ಕಾರ್ಯ ಗಳನ್ನು ಜರೂರಾಗಿ ಮಾಡಬೇಕಾಗಿದ್ದರಿಂದ ಈ ರೀತಿ ಕಾರ್ಯ ನಿರ್ವಹಿಸಬೇಕಾಯಿತು ಆಗಿನ ಮುಖ್ಯಸ್ಥರ ಆದೇಶದಂತೆ ತುರ್ತಾಗಿ ಈ ರೀತಿಯ ಕೆಲವು ಕೆಲಸಗಳನ್ನು ಮಾಡಬೇಕಾಗಿ ಬಂದುದ್ದರಿಂದ ಈ ರೀತಿಯ ವ್ಯತ್ಯಾಸ ಉಂಟಾಗಿರುತ್ತದೆ. ಇನ್ನು ಮುಂದೆ ಈ ರೀತಿ ಆಗದಂತೆ ಸೂಕ್ತ ಕ್ರಮವನ್ನು ಕೈಗೊಳ್ಳಲಾಗುವುದು. ಮತ್ತು ಸದರಿ ದಾಸ್ತಾನು ಸಾಮಗ್ರಿಗಳನ್ನು ದಾಸ್ತಾನು ಪುಸ್ತಕದಲ್ಲಿ ತೆಗೆದು ಕೊಂಡು ಮೇಲಾಧಿಕಾರಿಗಳಿಂದ ದೃಢೀಕರಿಸ ಲಾಗಿದೆ. ಮುಂದಿನ ಲೆಕ್ಕಪರಿಶೋಧನೆ ಸಮಯದಲ್ಲಿ ದಾಖಲೆ ಒದಗಿಸುವಂತೆ ಸೂಚಿಸಲಾಗಿದೆ. ಆದುದರಿಂದ, ಆಕ್ಷೇಪಣೆ ಮೊತ್ತ ಕೈಬಿಡುವಂತೆ ವಿನಂತಿಸಿದೆ.

ಆಕ್ಷೇಪಣೆಗಳು						ಉತ್ತರಗಳು
ಕ್ರ. ಸಂ.	ವಿಭಾಗ*	ಖರೀದಿಯ ವಿವರ	ವಿವಿ ಆದೇಶ ಸಂಖ್ಯೆ/ಬಿಲ್ ಸಂಖ್ಯೆ ಮತ್ತು ದಿನಾಂಕ	ಮೊಬಲಗು (ರೂಗಳಲ್ಲಿ)		
				ಆಕ್ಷೇಪಣೆ	ವಸೂಲಾತಿ	
*(Procurement Authority/ Tender Inviting Authority As per rule 6.1 (a) & (b) of Bangalore University Purchase Rules 2003)						
6	ಗ್ರಂಥಾಲಯ ವಿಭಾಗ (ಕಂ.ಸಂ.6)	ಕರ್ನಾಟಕ ಸ್ಟೇಟ್ ವೇರ್‌ಹೌಸಿಂಗ್ ಕಪ್ಯೂರೇಷನ್ ರವರಿಂದ ಕೀಟ ನಾಶಕ ಔಷಧ ಖರೀದಿ		94800 47400		ಈ ಕಂಡಿಕೆ 74ರಲ್ಲಿ ಪುನಾರಾವರ್ತನೆಯಾಗಿದೆ ಆದುದರಿಂದ ಈ ಆಕ್ಷೇಪಣೆ ಮೊತ್ತವನ್ನು ಕೈಬಿಡಲು ಕೋರಲಾಗಿದೆ. ಈ ಕಂಡಿಕೆಯಲ್ಲಿ ದರಪಟ್ಟಿ ಕರೆಯದಿರುವುದು ಎಂದು 2014–15ರ ರೂ.94800.00 ಮತ್ತು 2015–16ರ 47400.00 ಗಳನ್ನು 2015–16ರ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಕಂಡಿಕೆ 74 ರಲ್ಲಿ ವಿವರವಾದ ಉತ್ತರವನ್ನು ನೀಡಿ ಆಕ್ಷೇಪಣೆ ಮೊತ್ತ ರೂ.142200.00 ಗಳನ್ನು ಕೈ ಬಿಡುವಂತೆ ಕೋರಲಾಗಿದೆ. ಇದೆ ವಿಷಯವಾಗಿ ಈ ಕಂಡಿಕೆಯಲ್ಲಿ ಪುನರಾವರ್ತನೆ ಮೊತ್ತ ರೂ.142200.00 ಕೈ ಬಿಡುವಂತೆ ವಿನಂತಿಸಲಾಗಿದೆ.
7	ಗ್ರಂಥಾಲಯ ವಿಭಾಗ (ಕಂ.ಸಂ.7)	M/s Informatics Publishing Ltd, Ezproxy Server Installation		56,149		ಈ ತಂತ್ರಾಂಶವನ್ನು ಭಾರತದೇಶದಲ್ಲಿ ಮಾರಾಟ ಮಾಡಲು M/s Informatics Publishing Ltd., ರವರು Sole Distributor (ಏಕೈಕ ವಿತರಕರು) ಆಗಿದ್ದಾರೆ, ಈ ತಂತ್ರಾಂಶವು ದೇಶದಲ್ಲಿ ಇವರನ್ನು ಬಿಟ್ಟರೆ ಬೇರೆ ಯಾರಿಂದಲು ದೊರೆಯುವುದಿಲ್ಲ. ಇದಕ್ಕೆ ಪೂರಕವಾಗಿ OCLC ರವರು ಕೊಟ್ಟಿರುವ ಪ್ರಮಾಣ ಪತ್ರದ ಪ್ರತಿಯನ್ನು ಇದರೊಂದಿಗೆ **(ಅನುಬಂಧ–118(1))** (ಪು.ಸಂ.771) ಲಗತ್ತಿಸಿದೆ ಹಾಗೂ Ezproxy Server ಖರೀದಿಸಲು ಟೆಕ್ನಿಕಲ್ ಕಮಿಟಿಯ ನಡವಳಿಯನ್ನು ಸಹ ಇದರೊಂದಿಗೆ ಲಗತ್ತಿಸಿದೆ. ಆದ್ದರಿಂದ ಈ ಆಕ್ಷೇಪಣೆಯನ್ನು ಕೈಬಿಡಬೇಕೆಂದು ಕೋರುತ್ತೇನೆ.

ಆಕ್ಷೇಪಣೆಗಳು						ಉತ್ತರಗಳು
ಕ್ರ. ಸಂ.	ವಿಭಾಗ*	ಖರೀದಿಯ ವಿವರ	ವಿವಿ ಆದೇಶ ಸಂಖ್ಯೆ/ಬಿಲ್ ಸಂಖ್ಯೆ ಮತ್ತು ದಿನಾಂಕ	ಮೊಬಲಗು (ರೂಗಳಲ್ಲಿ)		
				ಆಕ್ಷೇಪಣೆ	ವಸೂಲಾತಿ	
*(Procurement Authority/ Tender Inviting Authority As per rule 6.1 (a) & (b) of Bangalore University Purchase Rules 2003)						
8	ಗ್ರಂಥಾಲಯ ವಿಭಾಗ (ಕಂ.ಸಂ.8)	ಮೆ॥ ಅರುಣಾ ಅಸೋಸಿಹೆಟ್ಸ್ ಬೆಂಗಳೂರು ಇವರಿಂದ ವಾಟರ್ ಫ್ಯೂರಿಫೈಯರ್ ಮತ್ತು ವಾಟರ್ ಕೂಲರ್ಸ್ ಖರೀದಿ	ಚೆಕ್ ಸಂ. 068496 ದಿನಾಂಕ 13.05.2015	40,425		Water Purifier & water Cooler ಅನ್ನು ವಿತ್ತಾಧಿಕಾರಿಯವರ ಕಛೇರಿಯಿಂದಲೇ ಕುಡಿಯುವ ನೀರಿನ ಯಂತ್ರವನ್ನು ಸರಬರಾಜು ಮಾಡಿರುತ್ತಾರೆ. ಆದ್ದರಿಂದ ಈ ಆಕ್ಷೇಪಣೆಯನ್ನು ಕೈಬಿಡಬೇಕೆಂದು ಕೋರುತ್ತೇನೆ.
9	ರಾಷ್ಟ್ರೀಯ ಸೇವಾ ಯೋಜನೆ (ಕಂ.ಸಂ.2)	ದೈನಂದಿನ/ವಿಶೇಷ ಶಿಬಿರಕ್ಕೆ ಊಟೋಪಚಾರ/ ಇನ್ನಿತರ ಖರ್ಚು		88,506 2,67,442		ಸದರಿ ಎನ್.ಎಸ್.ಎಸ್. ಕಾರ್ಯಕ್ರಮಗಳನ್ನು ಹಳ್ಳಿಗಳಲ್ಲಿ ಆಯೋಜನೆ ಮಾಡುವುದರಿದ ಅಲ್ಲಿ ಶಿಬಿರ ಆಯೋಜನೆಗೆ ಅವಶ್ಯಕ ಖರೀದಿಗಳನ್ನು ಅಲ್ಲಿಯೇ ದೊರೆಯುವ ಅಂಗಡಿಗಳಲ್ಲಿ ಖರೀದಿ ಮಾಡಬೇಕಾಗಿರುತ್ತದೆ. ಅಂತಹ ಇಂಟೆರಿಯರ್ ಸ್ಥಳಗಳಲ್ಲಿ ಮತ್ತು ಇನ್ನು ತುರ್ತಾಗಿ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವ ಸಂದರ್ಭದಲ್ಲಿ ಕೋಟೆಷನ್ ಪಡೆದು ಅಂತಹ ಪರಿಸ್ಥಿತಿ ಮತ್ತು ವಾಸ್ತುವವಾಗಿ ಕೊಟೆಷನ್ ಪಡೆಯಲು ಸಾಧ್ಯವಾಗುವುದಿಲ್ಲ. ಆದರೆ ಸದರಿ ವರ್ಷದಲ್ಲಿ ಸುಮಾರು 180 ಕಾಲೇಜುಗಳಿಗೆ ಅನುದಾನ ನೀಡಿದ್ದು, ಎಲ್ಲಾ ಕಾಲೇಜುಗಳು ಸಹ 5,000/–ಕ್ಕೂ ಮೀರಿದ ಮೊತ್ತಕ್ಕೆ ಕೊಟೆಷನ್ ಕರೆದು ನಿಯಮವನ್ನು ಪಾಲಿಸಿರುತ್ತಾರೆ. ಆದರೆ ಈ 19 ಕಾಲೇಜುಗಳು ಮಾತ್ರ ಈ ತೇರನಾದ ಕಾರಣದಿಂದ ಕೊಟೆಷನ್ ಪಡೆಯಲು ಸಾಧ್ಯವಾಗಿರುವುದಿಲ್ಲ. ಅದು ಸಹ ಉದ್ದೇಶ ಪೂರ್ವಕವಾಗಿ ಅಲ್ಲ ಅನಿವಾರ್ಯ ಸಂದರ್ಭದಲ್ಲಿ ಆಗಿರುತ್ತದೆ. ಅದ್ದರಿಂದ ಈ ಸಂದರ್ಭಗಳನ್ನು ಪರಿಗಣಿಸಿ ರೂ.3,56,348/–ಗಳ ಮೊತ್ತದ ಆಕ್ಷೆಪಣೆಯನ್ನು ಕೈಬಿಡಲು ಕೋರುತ್ತೇನೆ.

ಆಕ್ಷೇಪಣೆಗಳು						***ಉತ್ತರಗಳು***
ಕ್ರ. ಸಂ.	ವಿಭಾಗ*	ಖರೀದಿಯ ವಿವರ	ವಿವಿ ಆದೇಶ ಸಂಖ್ಯೆ/ಬಿಲ್ ಸಂಖ್ಯೆ ಮತ್ತು ದಿನಾಂಕ	ಮೊಬಲಗು (ರೂಗಳಲ್ಲಿ)		
				ಆಕ್ಷೇಪಣೆ	ವಸೂಲಾತಿ	
*(Procurement Authority/ Tender Inviting Authority As per rule 6.1 (a) & (b) of Bangalore University Purchase Rules 2003)						
						ವಿವರವಾದ ಪಟ್ಟಿಯನ್ನು **ಅನುಬಂಧ–118**ರಲ್ಲಿ ಲಗತ್ತಿಸಲಾಗಿದೆ.
10	ಮುದ್ರಣಾಲಯ ವಿಭಾಗ (ಕಂ.ಸಂ. 2(4)	ದಿವಾಕರ್ ಎಂಟರ್ ಪ್ರೈಸಸ್ ರವರಿಂದ ಕೆಟ್ಟೋ ಮೆಲ್ಟ್ ಹಾಟ್ ಗ್ಲೂ ಖರೀದಿ	ಬಿಲ್ ಸಂಖ್ಯೆ 1508/06.08.2015 1543/17.11.2015 1550/04.1.2016 1560/13.02.2016	 18606 18755 9378 7518		ದಿನಾಂಕ: 14.07.2015ರಲ್ಲಿ Techno melt Hot Glue ಖರೀದಿಸಲು ವಿವಿಧ ಸಂಸ್ಥೆಗಳಿಂದ ಕೋಟೆಷನ್ ಕರೆದು ತುಲಾನಾತ್ಮಕ ಪಟ್ಟಿಯನ್ನು 24.07.2015ರಲ್ಲಿ ಪಟ್ಟಿ ಅನುಮೋದನೆ ಪಡೆದು ಬೆಲೆ ನೀಡಿದ **ದಿವಾಕರ್ ಎಂಟರ್ ಪ್ರೈಸಸ್**ರವರಿಗೆ ಸರಬರಾಜು ಆದೇಶ ದಿನಾಂಕ: 28.07.2015ರಂದು ನೀಡಲಾಗಿದೆ. ಪ್ರತಿಗಳನ್ನು ಲಗತ್ತಿಸಲಾಗಿದೆ. ಅನಂತರದಲ್ಲಿ ತುರ್ತಾಗಿ ಬೇಕಾಗಿರುವುದರಿಂದ ಮಾನ್ಯ ಕುಲಪತಿ ಹಾಗೂ ಕುಲಸಚಿವರಿಂದ ಚರ್ಚಿಸಿ ಅನುಮೋದನೆ ಪಡೆದು ಅವರುಗಳು ನೀಡಿದ ಅದೇ ದರದಲ್ಲಿಯೇ ದಿನಾಂಕ: 17.11.2015 ಮತ್ತು 04.01.2016, 13,02.2016ರಂದು ಖರೀದಿ ಮಾಡಲಾಗಿದೆ. ನಂತರದ ಖರೀದಿಗೆ ಯಾವುದೇ ಹೆಚ್ಚಿನ ಹಣ ನೀಡದೆ ಅದೇ ದರದಲ್ಲಿ ಖರೀದಿಸಲಾಗಿದೆ. ಆಕ್ಷೇಪಣೆಯಲ್ಲಿಟ್ಟಿರುವ ರೂ. 18,606=00, 18,755=00, 9,378=00, 7,518=00 ಒಟ್ಟು 54,257 ರೂಗಳನ್ನು ಕೈ ಬಿಡಲು ಕೋರಲಾಗಿದೆ. ಇನ್ನು ಮುಂದೆ ದರಪಟ್ಟಿಯ ಮೂಲಕ ಖರೀದಿ ಕೈಗೊಳ್ಳಲಾಗುವುದು.
11	ವಿತ್ತಾಧಿಕಾರಿಗಳ ವಿಭಾಗ ವೋಚರ್(ಕಂಡಿಕೆ–14(2))	ಸ್ವಚ್ಛ ಮತ್ತು ಹಸಿರು ಅಭಿಯಾನ ಕಾರ್ಯಕ್ರಮ ನಡೆಸಲು ಮೆ॥ ಬೆಳಕು ಎಂಟರ್‌ಪ್ರೈಸಸ್, ಬೆಂಗಳೂರು ಇವರಿಂದ		23900		ಸಂಯೋಜನಾಧಿಕಾರಿಗಳು, ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ ಸ್ವಚ್ಛ ಮತ್ತು ಹಸಿರುವ ಅಭಿಯಾನ ಕಾರ್ಯಕ್ರಮ ನಡೆಸಲು ಮೆ॥ ಬೆಳಕು ಎಂಟರ್ ಪ್ರೈಸಸ್, ಬೆಂಗಳೂರು ಇವರಿಂದ Sound System White Light ಸೇವೆಯನ್ನು

ಆಕ್ಷೇಪಣೆಗಳು						ಉತ್ತರಗಳು
ಕ್ರ. ಸಂ.	ವಿಭಾಗ*	ಖರೀದಿಯ ವಿವರ	ವಿವಿ ಆದೇಶ ಸಂಖ್ಯೆ/ಬಿಲ್ ಸಂಖ್ಯೆ ಮತ್ತು ದಿನಾಂಕ	ಮೊಬಲಗು (ರೂಗಳಲ್ಲಿ)		
				ಆಕ್ಷೇಪಣೆ	ವಸೂಲಾತಿ	
*(Procurement Authority/ Tender Inviting Authority As per rule 6.1 (a) & (b) of Bangalore University Purchase Rules 2003)						
		Sound System, White Light ಸೇವೆಯನ್ನು ಪಡೆದಿದ್ದು, ಒಟ್ಟು ಮೊತ್ತ ರೂ.23,900.00 ಪಾವತಿ ಮಾಡಲಾಗಿರುತ್ತದೆ. ಆದರೆ, ಅಧಿಕೃತ ಸಂಸ್ಥೆಗಳಿಂದ ದರಪಟ್ಟಿಗಳನ್ನು ಪಡೆದಿರುವುದಿಲ್ಲ.				ಪಡೆದಿದ್ದು, ರೂ. 23,900=00ಗಳನ್ನು ಪಾವತಿಸಲಾಗಿದೆ. ತುರ್ತು ಅಗತ್ಯವಿದ್ದುದರಿಂದ, ಅಧಿಕೃತ ಸಂಸ್ಥೆಗಳಿಂದಲೇ ಸೇವೆಯನ್ನು ಪಡೆಯಲು ದರಪಟ್ಟಿ ಪಡೆಯಲು ಸಾಧ್ಯವಾಗದ್ದರಿಂದ ಕಾರ್ಯಕ್ರಮ ಆಯೋಜನೆಗೆ ಇವರಿಂದ ಸೇವೆ ಪಡೆಯಲಾಗಿದೆ. ಇನ್ನು ಮುಂದೆ ಆಕ್ಷೇಪಣೆಯ ಅಂಶ ಗಮನದಲ್ಲಿಟ್ಟು ವಿವಿಧ ಸಂಸ್ಥೆಗಳಿಂದ ದರಪಟ್ಟಿ ಪಡೆದು, ಸೇವೆ ಪಡೆಯಲಾಗುವುದು. ಆದುದರಿಂದ, ಆಕ್ಷೇಪಣೆ ಮೊತ್ತ ರೂ. 23,900=00 ಗಳನ್ನು ಆಕ್ಷೇಪಣೆಯಿಂದ ಕೈಬಿಡುವಂತೆ ವಿನಂತಿಸಿದೆ.
12	ವಿತ್ತಾಧಿಕಾರಿಗಳ ವಿಭಾಗ ವೋಚರ್(ಕಂಡಿಕೆ–15)	ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂ, ಇಲ್ಲಿ ನಡೆದ 2 ವರ್ಷದ ಬಿ.ಇಡಿ. ಕೋರ್ಸ್‌ನ ವ್ಯಾಸಂಗ & ಪಠ್ಯಕ್ರಮ ರಚನಾ ಸಮಿತಿ ಸಭೆಯಲ್ಲಿ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ಭಾಗವಹಿಸಲು ಎಸ್.ವಿ ಟೂರ್ಸ್ & ಟ್ರಾವಲ್ಸ್, ರಾಮ ಕೃಷ್ಣನ್ ನಗರ, ನಂದಿನಿ ಲೇಔಟ್, ಬೆಂಗಳೂರು–96 ಇವರಿಂದ 1 ಟಯೋಟ ಇಟಿಯೋಸ್ ವಾಹನವನ್ನು ಬಾಡಿಗೆಗೆ ಪಡೆದಿರುವುದು		18480		ಈ ಆಕ್ಷೇಪಣೆ ಮೊತ್ತ ರೂ. 18,480/–ಗಳಿಗೆ ವಿತ್ತಾಧಿಕಾರಿಗಳ ಓಚರ್ ಪರಿಶೀಲನೆ 2015–16 ವರದಿಯಯ ಕಂಡಿಕೆ 15ರಲ್ಲಿ ಖಾಸಗಿ ಸಂಸ್ಥೆಯಿಂದ ಬಾಡಿಗೆ ಪಡೆದಿದ್ದು, ವಾಹನ ಸಂಖ್ಯೆ , ದಿನಾಂಕ, ಮೊತ್ತದ ವಿವರ ನಮೂದಿಸಿದ್ದು, ಈ ಪಾವತಿಯ ಓಚರ್ ಸಂಖ್ಯೆ/ಚೆಕ್ ಸಂಖ್ಯೆ ವಿವರ ನೀಡಿರುವುದಿಲ್ಲ. ಆದುದರಿಂದ ಈ ವಿವರ ಒದಗಿಸಿದಲ್ಲಿ ಪರಿಶೀಲಿಸಿ, ಉತ್ತರ ಒದಗಿಸಲು ಅನುಕೂಲವಾಗುವುದು.

ಆಕ್ಷೇಪಣೆಗಳು						ಉತ್ತರಗಳು
ಕ್ರ. ಸಂ.	ವಿಭಾಗ*	ಖರೀದಿಯ ವಿವರ	ವಿವಿ ಆದೇಶ ಸಂಖ್ಯೆ/ಬಿಲ್ ಸಂಖ್ಯೆ ಮತ್ತು ದಿನಾಂಕ	ಮೊಬಲಗು (ರೂಗಳಲ್ಲಿ)		
				ಆಕ್ಷೇಪಣೆ	ವಸೂಲಾತಿ	
*(Procurement Authority/ Tender Inviting Authority As per rule 6.1 (a) & (b) of Bangalore University Purchase Rules 2003)						
13	ವಿತ್ತಾಧಿಕಾರಿಗಳ ವಿಭಾಗ ವೋಚರ್(ಕಂಡಿಕೆ–18)	ಡಾ॥ ಜಿ.ಟಿ.ಚಂದ್ರಪ್ಪ, ಪ್ರಾಧ್ಯಾಪಕರು, ರಸಾಯನ ಶಾಸ್ತ್ರ ವಿಭಾಗ, ಬೆಂ.ವಿ.ವಿ, ಇವರಿಗೆ M/s Spectris Technologies Pvt. Ltd., 201-B, 2nd Floor, Park Centra, Opp. 32 Miles Sector 30, Gurgaon-122002, Haryana ರವರಿಂದ PXRD ಉಪಕರಣದಲ್ಲಿ ಬೇರೆ ಬೇರೆ ವಿಭಾಗಗಳಿಂದ ಸಂಶೋಧನಾ ಮಾದರಿಗಳನ್ನು ಮಾಡಿಸಲು ಉಪಕರಣದ ನಿರ್ವಹಣೆ ಮತ್ತು ಸರ್ವೀಸ್ ಮಾಡಿಸಿರುವುದಕ್ಕೆ ರೂ.22,472.00 ಗಳನ್ನು ಪಾವತಿಸಿರುವುದು.	ವಿ.ವಿ. ಆದೇಶ ಸಂಖ್ಯೆ: ಹ.ಕಾ.ವಿಭಾಗ.7/ಡಾ.ಜಿಟಿಚ/ರಾಸಾಯನಶಾಸ್ತ್ರ/ PXRD/ಸರ್ವೀಸ್/2015–16 ಬೆಂಗಳೂರು. ದಿನಾಂಕ:06.01.2016	22472		ದುರಸ್ತಿಗೊಳಪಟ್ಟ Power Xray ಸಾಧನದ CPC ಬದಲಾವಣೆಗೆ ಎರಡು ಸಲ ಟೆಂಡರ್ ಕರೆಯಲಾಗಿದ್ದು ಸಾಧನದ Specification ಅನ್ವಯ Spectres Technologies Pvt. Ltd ನವರು ಎಲ ತಯಾರಿಕಾ ಮತ್ತು ಸೇವೆ ಒದಗಿಸುವ ಸಂಸ್ಥೆಯಾಗಿದ್ದರಿಂದ ಸೇವಾ ನಿರ್ವಹಣೆಯನ್ನು ಇದೆ ಸಂಸ್ಥೆಗೆ ಸಿಪಿಸಿ ಮತ್ತು ಸಿಂಡಿಕೇಟ್ ಅನುಮೋದನೆ ಪಡೆದು ರೂ.22472.00 ವೆಚ್ಚ ಭರಿಸಲಾಗಿದೆ. ಮೇಲಿನ ಸಂಸ್ಥೆಯವರು Single Souce ಸಂಸ್ಥೆಯಾಗಿರುವುದರಿಂದಲೂ ಟೆಂಡರ್ ಕರೆದರೂ ಬೇರೆಯವರಿಂದ ಬಿಡ್‌ನ ಅವಶ್ಯಕತೆಗಳು ಪೂರ್ಯೆಕೆಯಾಗದಿರುವುದರಿಂದ ಮೇಲಿನ ಸಂಸ್ಥೆಯಿಂದ ಖರೀದಿ ಮಾಡಿರುತ್ತದೆ. ಆದುದರಿಂದ ಈ ಪೊತ್ತವನ್ನು ಆಕ್ಷೇಪಣೆಯಿಂದ ಕೈ ಬಿಡುವಂತೆ ಪತ್ರ ದಿನಾಂಕ:18.05.2018ರಲ್ಲಿ ಕೋರಲಾಗಿತ್ತು ಈಗ ಮತ್ತೊಮ್ಮೆ ನೀಡಲಾದ ಉತ್ತರವನ್ನು ಪರಿಗಣಿಸಿ ಆಕ್ಷೇಪಣೆಯಿಂದ ಕೈ ಬಿಡುವಂತೆ ವಿನಂತಿಸಲಾಗಿದೆ.
14	ವಿತ್ತಾಧಿಕಾರಿಗಳ ವಿಭಾಗ ವೋಚರ್(ಕಂಡಿಕೆ–19)	ಡಾ॥ಜಿ.ಟಿ.ಚಂದ್ರಪ್ಪ, ಪ್ರಾಧ್ಯಾಪಕರು, ರಸಾಯನ ಶಾಸ್ತ್ರ ವಿಭಾಗ, ಬೆಂ.ವಿ.ವಿ, ಇವರು ಡಿ.ಎಸ್.ಟಿ. ಪ್ರಾಜೆಕ್ಟ್ ಸಂಬಂಧ accessories for Powder X-ray ಖರೀದಿ		65650		Chiller ಎಂಬ ಸಾಧನವು Powder X-Ray ಸಾಧನದ ಅವಶ್ಯಕ ಸಹಾಯಕ ಭಾಗವಾಗಿದ್ದು, (Supporting Part) ಅದನ್ನು ತಯಾರಿಸುವ ಸರಬರಾಜು ಮಾಡುವ ಸೇವೆ ಒದಗಿಸುವ ಸಂಸ್ಥೆ " Werner Finley Pvt Ltd" ಆಗಿದ್ದು Chiller ನ ದುರಸ್ತಿ ಸೇವೆಯನ್ನು ಅದೇ ಸಂಸ್ಥೆಯಿಂದ ಮಾಡಿಸಿರುವುದು ಕ್ರಮಬದ್ಧವಾಗಿರುತ್ತದೆ. ಭರಿಸಲಾದ ವೆಚ್ಚ ರೂ.54160.00 ಸಾಧನದ ಸೇವಾ ವೆಚ್ಚ ರೂ.11,400.00 ಗಳನ್ನು ಭರಿಸಿರುತ್ತದೆ.

ಆಕ್ಷೇಪಣೆಗಳು						***ಉತ್ತರಗಳು***
ಕ್ರ. ಸಂ.	ವಿಭಾಗ*	ಖರೀದಿಯ ವಿವರ	ವಿವಿ ಆದೇಶ ಸಂಖ್ಯೆ/ಬಿಲ್ ಸಂಖ್ಯೆ ಮತ್ತು ದಿನಾಂಕ	ಮೊಬಲಗು (ರೂಗಳಲ್ಲಿ)		
				ಆಕ್ಷೇಪಣೆ	ವಸೂಲಾತಿ	
*(Procurement Authority/ Tender Inviting Authority As per rule 6.1 (a) & (b) of Bangalore University Purchase Rules 2003)						
						ಆದ ಕಾರಣ ದುರಸ್ತಿಗೆ ಬೇಕಾಗುವ ಸಾಮಾಗ್ರಿಗಳನ್ನು ಖರೀದಿಸಲು ಮತ್ತು ಸೇವಾ ಭರಿಸಿರುವ ವೆಚ್ಚ ರೂ.65650.00 ಗಳನ್ನು ಆಕ್ಷೇಪಣೆಯಿಂದ ಕೈ ಬಿಡಲು ಅಪರ ನಿರ್ದೇಶಕರಿಗೆ ಪತ್ರ ದಿನಾಂಕ: 18.05.2018 ರಲ್ಲಿ ಕೋರಲಾಗಿತ್ತು ಈಗ ಮತ್ತೊಮ್ಮೆ ಆಕ್ಷೇಪಣೆ ಮೊತ್ತ ಕೈ ಬಿಡುವಂತೆ ವಿನಂತಿಸಲಾಗಿದೆ.
			ಒಟ್ಟು ಮೊತ್ತ	**1281100**		

ಆಕ್ಷೇಪಣೆಗಳು	***ಉತ್ತರಗಳು***
ಅಧಿಕಾರಿ/ಸಿಬ್ಬಂದಿಗಳ ನಿರ್ಲಕ್ಷತೆಯಿಂದ ಉಂಟಾದ ನಷ್ಟದ ಪ್ರಕರಣಗಳು.	
31. ಮೆ॥ ನಿಸರ್ಗ ಲೀಸರ್ ಮತ್ತು ಟ್ರಾವೆಲ್ಸ್ ಪ್ರೈ.ಲಿ ಇವರಿಗೆ ಪಾವತಿಸಲಾದ ವಾಹನಗಳ ಬಾಡಿಗೆಯ ಮೊತ್ತ ರೂ.52539.00 ವಸೂಲಾತಿ ಹಾಗೂ ರಿಸ್ಕ್ ಮತ್ತು ಕಾಸ್ಟ್ ನ ವ್ಯತ್ಯಾಸದ ಮೊತ್ತ ರೂ.200295.00 ವಸೂಲಾತಿ.	
ಸಹಾಯಕ ವಿತ್ತಾಧಿಕಾರಿಗಳ ವಿಭಾಗದ 2015–16 ನೇ ಸಾಲಿನಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಪರೀಕ್ಷಾ ಕಾರ್ಯಗಳ ಸಲುವಾಗಿ ವಾಹನಗಳನ್ನು ಬಾಡಿಗೆ ಆದಾರದಲ್ಲಿ ಒದಗಿಸಲು ಟೆಂಡರ್ ಕರೆದಿದ್ದು, ಮೆ॥ ನಿಸರ್ಗ ಲೀಸರ್ ಮತ್ತು ಟ್ರಾವೆಲ್ಸ್ ಪೈ.ಲಿ. ಇವರಿಗೆ ದಿನಾಂಕ 13.2.2014 ರಲ್ಲಿ ಕಾರ್ಯದೇಶವನ್ನು ನೀಡಲಾಗಿದೆ ಈ ಸಂಸ್ಥೆಯು ಪರೀಕ್ಷ ಕಾರ್ಯಗಳಿಗೆ ಸರಿಯಾಗಿ ವಾಹನಗಳನ್ನು ಒದಗಿಸದ ಹಿನ್ನಲೆಯಲ್ಲಿ ಶ್ರೀ.ಪಂಚಮುಖಿ ಟ್ರಾವೆಲ್ಸ್ ಇವರಿಗೆ ದಿನಾಕ 20.10.2014 ರ ಆದೇಶದ ಅನ್ವಯ ಕಾರ್ಯದೇಶ ನೀಡಲಾಗಿದೆ. ಮೆ॥ ನಿಸರ್ಗ ಲೀಸರ್ ಟ್ರಾವೆಲ್ಸ್ ಇವರ ಟೆಂಡರ್ ಅವಧಿಯು ದಿನಾಂಕ 28.1.2014 ರಿಂದ 27.1.2015 ರ ವರೆವಿಗೆ ಚಾಲ್ತಿಯಲ್ಲಿದ್ದು, ಇವರು ಸಮರ್ಪಕ ಸೇವೆಯನ್ನು ಒದಗಿಸದ ಹಿನ್ನಲೆಯಲ್ಲಿ ಇವರ ಗುತ್ತಿಗೆ ಕರಾರನ್ನು ರದ್ದುಪಡಿಸಿ ಇ.ಎಂ.ಡಿ ಎಫ್.ಎಸ್.ಡಿ. ಮುಟ್ಟುಗೋಲು ಹಾಕಿಕೊಂಡು ಕಪ್ಪು ಪಟ್ಟಿಗೆ ಸೇರಿಸಬೇಕಾಗಿರುತ್ತದೆ. ಹೀಗಿರುವಾಗ ವೋಚರ್ಸ್ ಸಂಖ್ಯೆ 3353 ದಿನಾಂಕ 6.7.2015 ರಲ್ಲಿ ಇವರ ರೂ.52,439.00 ಮೊತ್ತದ ಬಿಲ್ಲನ್ನು ಪಾವತಿಸಲಾಗಿದೆ ಕಪ್ಪುಪಟ್ಟಿಗೆ ಸೇರಿಸಬೇಕಾದ ಸಂಸ್ಥೆಗೆ ಯಾವ ನಿಯಮಗಳ ಅನ್ವಯ ಹಣ ಪಾವತಿಸಲಾಗಿದೆ ಎಂಬ ಬಗ್ಗೆ ಹಾಗೂ ಇವರ ಇಎಂಡಿ ಎಫ್ಎಸ್ಡಿ ಮುಟ್ಟುಗೋಲು ಹಾಕಿಕೊಂಡಿರುವ ಬಗ್ಗೆ ಮತ್ತು ಇವರ ಗುತ್ತಿಗೆ ಕರಾರನ್ನು ರದ್ದುಪಡಿಸಿರುವ ಬಗ್ಗೆ ವಿವರಣೆ ನೀಡಲು ಕೋರಿದ್ದು ಯಾವುದೇ ವಿವರಣೆ ನೀಡಿರುವುದಿಲ್ಲ. ಮೆ॥ ನಿಸರ್ಗ ಲೀಸರ್ ಮತ್ತು ಟ್ರಾವೆಲ್ಸ್ ಪೈ.ಲಿ. ಇವರು ಸಮರ್ಪಕವಾಗಿ ಕೆಲಸ ನಿರ್ವಹಿಸದ ಹಿನ್ನಲೆಯಲ್ಲಿ, ಇದೇ ಸೇವೆಯನ್ನು ಶ್ರೀ.ಪಂಚಮುಖಿ ಟ್ರಾವೆಲ್ಸ್ ಇವರಿಂದ ಪಡೆದಿರುವುರಿಂದ ವಿಶ್ವವಿದ್ಯಾಲಯಕ್ಕೆ 10% ಹೆಚ್ಚುವರಿ ವೆಚ್ಚ ಆಗಿರುತ್ತದೆ. ಈ ಹೆಚ್ಚುವರಿ ವೆಚ್ಚವನ್ನು ದಿನಾಂಕ 25.4.2015 ರಿಂದ ಪಾವತಿಸಿದ್ದು, ಶ್ರೀ.ಪಂಚಮುಖಿ ಟ್ರಾವೆಲ್ಸ್ ಇವರಿಗೆ ಪಾವತಿಸಿದ ಮೊತ್ತ ರೂ.20,02,947.00 ರ 10% ಮೊತ್ತ ರೂ.2,00,295.00 ಮೊತ್ತವನ್ನು ಮೆ॥ ನಿಸರ್ಗ ಲೀಸರ್ ಮತ್ತು ಟ್ರಾವೆಲ್ಸ್ ಪೈ.ಲಿ. ಇವರಿಂದ ವಸೂಲಿ ಮಾಡಲು ಸೂಚಿಸಿದೆ.	ಮೆ॥ ನಿಸರ್ಗ ಲೀಸರ್ ಟ್ರಾವೆಲ್ಸ್ ಪ್ರೈ. ಲಿ ಇವರಿಗೆ ದಿನಾಂಕ: 13.02.2014 ರಲ್ಲಿ ನೀಡಿದ ಕಾರ್ಯಾದೇಶದ ಪ್ರಕಾರ ಏಪ್ರಿಲ್/ಮೇ 14ರ ಪರೀಕ್ಷೆಗಾಗಿ ವಾಹನಗಳನ್ನು ಸರಬರಾಜು ಮಾಡಿರುವ ಬಾಬ್ತು ಇದಾಗಿದ್ದು, ಕಾರಾಣಂತರಗಳಿಂದ ಪಾವತಿ ಮಾಡಲು ತಡವಾಗಿರುತ್ತದೆ. ಬಿಲ್ಲನ ಮೊತ್ತವನ್ನು ಪರೀಕ್ಷೆಗಳ ಸಮಯದಲ್ಲಿ ವಾಹನಗಳನ್ನು ಸಮರ್ಪಕವಾಗಿ ಒದಗಿಸದಿದ್ದರಿಂದ ಬೇರೊಂದು ಸಂಸ್ಥೆಯಿಂದ ಅದೇ ದರದಲ್ಲಿ ವಾಹನಗಳನ್ನು ಪಡೆಯಲಾಗಿದೆ. ಈ ಬಗ್ಗೆ ಈಗಾಗಲೇ 2014–15ನೇ ಸಾಲಿನ ಪರೀಕ್ಷಾ ವಿಭಾಗ ಆಡಿಟ್ ವರದಿಯಲ್ಲಿ ಆಕ್ಷೇಪಣೆ ವ್ಯಕ್ತವಾಗಿದ್ದು, ಅದಕ್ಕೆ ಸಮಜಾಯಿಷಿ ಸಹ ನೀಡಲಾಗಿದೆ. ಈ ಮೊತ್ತವು 2014–15ನೇ ಸಾಲಿನ ಹಣ ಪಾವತಿಗೆ ಸಂಬಂದಿಸಿದ್ದು, ನಗರ ಶಾಖೆ, ಹಣಕಾಸು ವಿಭಾಗದಲ್ಲಿ 2015–16ರಲ್ಲಿ ಪಾವತಿಯಾಗಿರುತ್ತದೆ. ವಿಶ್ವವಿದ್ಯಾಲಯ ಆದೇಶದಲ್ಲಿ ಬಾಡಿಗೆ ವಾಹನಗಳನ್ನು ಒದಗಿಸುವ ಕಂಪನಿಯ ಸೇವೆ ಸಮರ್ಪಕ ವಾಗಿರದಿದ್ದಲ್ಲಿ, ಅದೇ ದರದಲ್ಲಿ ಬೇರೆಯಾವುದೇ ಕಂಪನಿಯಿಂದ ಬಾಡಿಗೆ ವಾಹನಗಳನ್ನು ಪಡೆಯಬಹುದೆಂಬ ಷರತ್ತು ಇದ್ದದರಿಂದ ಮೆ॥ನಿಸರ್ಗ ಲೀಸರ್ ಟ್ರಾವೆಲ್ಸ್‌ರವರ ಗುತ್ತಿಗೆ ಕರಾರನ್ನು ರದ್ದು ಪಡಿಸದೇ ಮಾನ್ಯ ಕುಲಪತಿಗಳ ಒಪ್ಪಿಗೆ ಪಡೆದು ಬೇರೊಂದು ಕಂಪನಿಯಿಂದ ವಾಹನಗಳ ಸೇವೆಯನ್ನು ಪಡೆಯಲಾಗಿದೆ. ದಿನಾಂಕ: 13.01.2015ರ ಸಿಂಡಿಕೇಟ್ ಸಭೆಯ ನಿರ್ಣದಂತೆ ಮಾನ್ಯ ಕುಲಪತಿಗಳು ದಿನಾಂಕ: 31.10.2015ರಲ್ಲಿ ಪರೀಕ್ಷಾ ಕಾರ್ಯ ಹಾಗೂ ಇದಕ್ಕೆ ಸಂಬಂಧಪಟ್ಟ ಇತರೆ ಕಾರ್ಯಗಳಿಗೆ ವಾಹನಗಳನ್ನು ಬಾಡಿಗೆಗೆ ಪಡೆಯಲು ಆದೇಶ ದಿನಾಂಕ: 25.04.2015ರಲ್ಲಿ ಸೂಚಿಸಿರುವ ದರಕ್ಕಿಂತ 8%ರಂತೆ ಪರಿಷ್ಕೃತ ಧರ ಹೆಚ್ಚಿಸಿ ಸರಬರಾಜು ಮಾಡುವಂತೆ ಆದೇಶಿಸಿರುತ್ತಾರೆ ಸದರಿ ಆದೇಶದನ್ವಯ ಶ್ರೀ ಪಂಚಮುಖಿ ಟ್ರಾವೆಲ್ಸ್, ಬೆಂಗಳೂರು ರವರಿಗೆ ಸರಬರಾಜು ಆದೇಶ ನೀಡಲಾಗಿದೆ. (ಆದೇಶದ ಜೆರಾಕ್ಸ್ ಪ್ರತಿಯನ್ನು ಲಗತ್ತಿಸಲಾಗಿದೆ.)(**ಅನುಬಂಧ–112**)(ಪು.ಸಂ. 752) ಮೆ॥ ನಿಸರ್ಗ ಲೀಸರ್ ಮತ್ತು ಟ್ರಾವೆಲ್ಸ್ ಪ್ರೈ. ಲಿ., ರವರನ್ನು ಕಪ್ಪುಪಟ್ಟಿಗೆ ಸೇರಿಸಿ ಆದೇಶ ಹೊರಡಿಸದ ಹಿನ್ನೆಲೆಯಲ್ಲಿ ಹಣ ಪಾವತಿ ಮಾಡಲಾಗಿದೆ. ಇನ್ನು ಮುಂದೆ ಈ ರೀತಿ ಆಗದಂತೆ ನಿಯಮಗಳ ಪ್ರಕಾರವೇ ಕ್ರಮಕೈಗೊಳ್ಳಲಾಗುವುದು ಮೆ: ನಿಸರ್ಗ ಟೂರ್ಸ್ ಅಂಡ್ ಟ್ರಾವೆಲ್ಸ್ ರವರ ಕರಾರು ರದ್ದುಪಡಿಸಿರುವ ಬಗ್ಗೆ

ಆಕ್ಷೇಪಣೆಗಳು	*ಉತ್ತರಗಳು*
	ಯಾವುದೇ ಅದೇಶ ಇಲ್ಲದಿರುವುದರಿಂದ ಅವರಿಗೆ ಪಾವತಿಸಿರುವ ಮೊತ್ತ ರೂ.52,539/–ರ ಅಕ್ಷೇಪಣೆ ಕೈ ಬಿಡುವಂತೆ ಕೋರಲಾಗಿದೆ.
32.ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಪ್ರವೇಶ ಶುಲ್ಕದ ಮರುಭರಣ: ರೂ.5,65,320.00 (ವಸೂಲಾತಿ)	
ಭೂಗೋಳ ಶಾಸ್ತ್ರ ವಿಭಾಗದ 2006–07 ರಿಂದ 2015–16ನೇ ಸಾಲಿನ ಲೆಕ್ಕಪರಿಶೋಧನೆಗೆ 2006–07 ರಿಂದ 2013–14 ನೇ ಸಾಲಿನವರೆಗೆ ಪ್ರವೇಶ ಪಡೆದ ಪ.ಜಾ/ಪ.ಪಂ/ಹಿಂದುಳಿದ ವರ್ಗದ ವಿದ್ಯಾರ್ಥಿಗಳ ಪ್ರವೇಶ ಶುಲ್ಕ ಹಾಗೂ ಪರೀಕ್ಷಾ ಶುಲ್ಕದಲ್ಲಿ ವಿನಾಯಿತಿ ನೀಡಲಾಗಿದ್ದು, ಈ ಸಂಬಂಧ ವಿನಾಯಿತಿ ನೀಡಲಾದ ಮೊತ್ತವನ್ನು ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಇಲಾಖೆಗಳಿಂದ ವಿ.ವಿ. ನಿಧಿಗೆ ಮರುಭರಣ ಮಾಡಿಕೊಂಡಿರುವ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸುವಂತೆ ಕೋರಿದ್ದು ಯಾವುದೇ ವಿವರಗಳನ್ನು ನೀಡಿರುವುದಿಲ್ಲ. ಲೆಕ್ಕಪರಿಶೋಧನೆಗೆ ಒದಗಿಸಲಾದ ಪ್ರವೇಶ ಶುಲ್ಕ ವಹಿಯಂತೆ ಮರುಭರಣದ ಮೊತ್ತ ರೂ.5,65,320.00 ಗಳಾಗಿದ್ದು, ಸಂಬಂಧಪಟ್ಟ ಇಲಾಖೆಯಿಂದ ವಸೂಲಿಸಿ ವಿವಿ ನಿಧಿಗೆ ಜಮೆ ಮಾಡಲು ಸೂಚಿಸಿದೆ.	ನಿರ್ದೇಶಕರು, ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ವಿಭಾಗ ಇವರಿಂದ ಸರ್ಕಾರದಿಂದ ಮರುಭರಣ ಗೊಂಡಿರುವ ಮೊತ್ತ ಒದಗಿಸಿದ ವಿವರ **(ಅನುಬಂಧ–119)** (ಪು.ಸಂ.773) ನೀಡಿದೆ.
33. ಪ್ರವೇಶ ಶುಲ್ಕ ನಷ್ಟದ ಮೊಬಲಗು : ರೂ.14,71,665.00	
ಸಿ.ಬಿ.ಎಸ್.ಎಂ.ಎಸ್ ವಿಭಾಗದ 2013–14 ರಿಂದ 2015–16ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ 2013–14 ರಿಂದ 2015–16 ನೇ ಸಾಲಿನವರೆಗಿನ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ಹಾಗೂ ಪ್ರವೇಶ ಶುಲ್ಕಗಳಲ್ಲಿ ವಿನಾಯಿತಿ ನೀಡಿದ್ದು, ಸದರಿ ಮೊತ್ತವನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಮರುಭರಿಸ ಬೇಕಿದ್ದು, ಸದರಿ ಇಲಾಖೆಯಿಂದ ಸ್ವೀಕೃತಿಯಾಗಿರುವ ವಿದ್ಯಾರ್ಥಿವೇತನವನ್ನು ಪರಿಶೀಲಿಸಿದ್ದು, ಬಾಕಿ ವಸೂಲಿ ಸಬೇಕಿರುವ ಮೊತ್ತವನ್ನು ಸಂಬಂಧಿಸಿದ ಇಲಾಖೆಯಿಂದ ಮರುಭರಿಸಲು ಸೂಚಿಸಿದೆ. **ಕ್ರ. ಸಂ. / ವರ್ಷ ವಾರು / ಸೆಮಿಸ್ಟರ್/ ಕೋರ್ಸ್ / ಮೊಬಲಗು (ರೂ.ಗಳಲ್ಲಿ)** 1 / 2012–13 / II year MBA / 24,745.00 2 / 2013–14 / I & II year MBA / 1,59,750.00 3 / 2014–15 / I & II year MBA / 7,42,970.00 4 / 2015–16 / I & II year MBA / 5,44,200.00 **ಒಟ್ಟು ರೂ. / 14,71,665.00** ಒಟ್ಟು ರೂ.14,71,665.00 ಗಳನ್ನು ಸರ್ಕಾರದಿಂದ ಮರುಭರಿಸಿ, ಲೆಕ್ಕತನಿಖೆಗೆ ವಿವರವನ್ನು ನೀಡಲು ಸೂಚಿಸಿದೆ. ಅಲ್ಲಿಯವರೆಗೆ ಸದರಿ ಮೊತ್ತವು ವಸೂಲಾತಿಗೆ ಸೂಚಿಸಿದೆ.	ಪ್ರವೇಶ ಶುಲ್ಕದ ನಷ್ಟ ಎಂಬುದಾಗಿ ಈ ಕಂಡಿಕೆಯಲ್ಲಿ ರೂ. 14,71,665=00ಗಳನ್ನು ವಸೂಲಾತಿಗೆ ಸೂಚಿಸಲಾಗಿದೆ. ಈ ಸಂಬಂಧ ಸರ್ಕಾರದಿಂದ ಬರಬೇಕಾದ ಪ್ರವೇಶ ಶುಲ್ಕ ಮತ್ತು ಪರೀಕ್ಷಾ ಶುಲ್ಕದ ಮೊತ್ತಗಳಿಗೆ 2012–13ರಿಂದ 2015–16ರ ಸಾಲಿನಲ್ಲಿ ಮರುಭರಣ ಗೊಂಡಿರುವ ವಿವರಗಳನ್ನು ಆಯಾ ವರ್ಷಗಳಲ್ಲಿ ಅನುಬಂಧ ಸಹಿತ ವಿವರಣೆಯನ್ನು ಒದಗಿಸಲಾಗಿದೆ. **(ಅನುಬಂಧ–120)**

ಕ್ರ. ಸಂ.	ವರ್ಷ ವಾರು	ಸೆಮಿಸ್ಟರ್/ ಕೋರ್ಸ್	ಮೊಬಲಗು (ರೂ.ಗಳಲ್ಲಿ)
1	2012–13	II year MBA	24,745.00

ಅನುಬಂಧ 33(1) ರಲ್ಲಿ ತಿಳಿಸಿರುವಂತೆ 2013 – 14 ರಲ್ಲಿ ಎಂಬಿಎ 2ನೇ ವರ್ಷದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಪ್ರವೇಶ ಶುಲ್ಕ ಮತ್ತು ಪರೀಕ್ಷಾ ಶುಲ್ಕ 8 ವಿದ್ಯಾರ್ಥಿಗಳಿಂದ ರೂ.2,35,320/– ಮರುಭರಣ ವಾಗಿರಬೇಕಾಗಿರುತ್ತದೆ. ಇದರಲ್ಲಿ ವಿದ್ಯಾರ್ಥಿ ಗಳು 2,560/– ಶುಲ್ಕ ಕಟ್ಟಿರುತ್ತಾರೆ ಮತ್ತು ರೂ.2,10,060/–ಗಳು ವಿದ್ಯಾರ್ಥಿವೇತನ ನಿರ್ದೇಶಕರ ಖಾತೆಗೆ ಸಂಖ್ಯೆ:54051212914 ಜಮೆಯಾಗಿರುತ್ತದೆ.

ಆಕ್ಷೇಪಣೆಗಳು				ಉತ್ತರಗಳು
				ಉಳಿದ ಪರೀಕ್ಷಾ ಶುಲ್ಕ ರೂ.24,745/– ಮರುಭರಣವಾಗಿರುವುದಿಲ್ಲ. ಆ ಸಂದರ್ಭ ದಲ್ಲಿ ವಿದ್ಯಾರ್ಥಿಗಳು ಆನಲೈನ್‌ನಲ್ಲಿ ಪ್ರವೇಶ ಶುಲ್ಕ ಮಾತ್ರ ಹಾಕಿದ್ದು ಪರೀಕ್ಷಾ ಶುಲ್ಕ ಹಾಕಿರುವುದಿಲ್ಲ. ಆದಕಾರಣ ರೂ.24,745/– ಮರುಭರಣವಾಗಿರುವುದಿಲ್ಲ. ಆದರೆ ಈಗ ವಿದ್ಯಾರ್ಥಿಗಳು ಎಂಬಿಎ ವಿದ್ಯಾಭ್ಯಾಸ ಮುಗಿಸಿಕೊಂಡು, ಪದವಿ ಪ್ರಮಾಣ ಪತ್ರವನ್ನು ತೆಗೆದುಕೊಂಡಿರುತಾರೆ. ಆದ್ದರಿಂದ ವಸೂಲಾತಿ ಯನ್ನು ಕೈ ಬಿಡಬೇಕೆಂದು ಕೋರಲಾಗಿದೆ.
2	2013–14	I & II year MBA	1,59,750.00	ಅನುಬಂಧ 33(2) ರಲ್ಲಿ ತಿಳಿಸಿರುವಂತೆ 2013 – 14 ಎಂಬಿಎ 1ನೇ ವರ್ಷದ ಹಾಗೂ 2014 –15 ಎಂಬಿಎ 2ನೇ ವರ್ಷದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಪ್ರವೇಶ ಶುಲ್ಕ ಮತ್ತು ಪರೀಕ್ಷಾ ಶುಲ್ಕ ಒಟ್ಟು 13 ವಿದ್ಯಾರ್ಥಿಗಳಿಂದ 2ವರ್ಷಕ್ಕೆ ರೂ.9,51,665/–ಮರುಭರಣ ವಾಗಿರಬೇಕಾಗಿರುತ್ತದೆ. ಇದರಲ್ಲಿ ವಿದ್ಯಾರ್ಥಿಗಳು 11,115/–ಶುಲ್ಕ ಕಟ್ಟಿರುತ್ತಾರೆ ಮತ್ತು ರೂ.7,84,580/–ಗಳು. ವಿದ್ಯಾರ್ಥಿವೇತನ ನಿರ್ದೇಶಕರ ಖಾತೆಗೆ ಸಂಖ್ಯೆ: 54051212914 ಜಮೆಯಾಗಿರುತ್ತದೆ. ಉಳಿದ ಪರಿಕ್ಷಾ ಶುಲ್ಕ ರೂ.1,55,970 ಮರುಭರಣವಾಗಿರುವುದಿಲ್ಲ. ಆ ಸಂದರ್ಭದಲ್ಲಿ ವಿದ್ಯಾರ್ಥಿಗಳು ಆನಲೈನ್‌ನಲ್ಲಿ ಪ್ರವೇಶ ಶುಲ್ಕ ಮಾತ್ರ ಹಾಕಿದ್ದು ಪರೀಕ್ಷಾ ಶುಲ್ಕ ಹಾಕಿರುವುದಿಲ್ಲ ಹಾಗೂ ನಾವು ಉಳಿಕೆ ಮೊತ್ತವನ್ನು ವಿದ್ಯಾರ್ಥಿಗಳಿಂದ ವಸೂಲಾತಿ ಮಾಡಲು 4ನೇ ಸೆಮಿಸ್ಟರ್ ಪರೀಕ್ಷೆಯನ್ನು ಬರೆಯಲು ನೀಡದಿದ್ದಾಗ ಅವರು ಪ್ರಭಾರ ಅಧಿಕಾರಿಗಳು, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ವಿಭಾಗ ಇವರು ಮನ್ನಾ ಮಾಡುತ್ತೇವೆ ಎಂದು ಪತ್ರ ನೀಡಿದ್ದರಿಂದ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಅನುಮತಿ ನೀಡಿದ್ದೆವು (ಪ್ರತಿಯನ್ನು ಲಗತ್ತಿಸಿದ್ದೇವೆ) ಆದಕಾರಣ ರೂ.1,55,970/–ಗಳು ಪ್ರಭಾರ ಅಧಿಕಾರಿಗಳು, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ವಿಭಾಗ ಬೆಂ.ವಿ.ವಿ 2013 –14 ಮತ್ತು 2014 – 15 ಉಳಿಕೆ ಶುಲ್ಕವನ್ನು ಮನ್ನಾ ಮಾಡುವ ಬಗ್ಗೆ ನಿರ್ಣಯ ಕಾಯ್ದಿರಿಸಿ ಪರೀಕ್ಷೆ ಬರೆಯಲು ಅನುಮತಿಸಲಾಗಿತ್ತು. ಆದ್ದುರಿಂದ ವಸೂಲಾತಿಯ ವ್ಯತ್ಯಾಸ (159750 – 155970) ರೂ.3780/– ಸೇರಿದಂತೆ ಒಟ್ಟು ಮೊತ್ತ ವಸೂಲಾತಿಯಿಂದ ಕೈ ಬಿಡುವಂತೆ ವಿನಂತಿಸಲಾಗಿದೆ.
3	2014–15	I & II year MBA	7,42,970.00	ಅನುಬಂಧ 33(3) ರಲ್ಲಿ ತಿಳಿಸಿರುವಂತೆ 2014 – 15 ಎಂಬಿಎ 1ನೇ ವರ್ಷದ ಹಾಗೂ 2015 –16 ಎಂಬಿಎ 2ನೇ ವರ್ಷದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಪ್ರವೇಶ ಶುಲ್ಕ ಮತ್ತು ಪರೀಕ್ಷಾ ಶುಲ್ಕ ಒಟ್ಟು 12 ವಿದ್ಯಾರ್ಥಿಗಳಿಂದ 2ವರ್ಷಕ್ಕೆ ರೂ.8,88,840/–ಮರುಭರಣವಾಗಿರ ಬೇಕಾಗಿರುತ್ತದೆ. ಇದರಲ್ಲಿ ವಿದ್ಯಾರ್ಥಿಗಳು 1,52,238/– ಶುಲ್ಕ ಕಟ್ಟಿರುತ್ತಾರೆ ಮತ್ತು ರೂ.3,41,536/–ಗಳು ವಿದ್ಯಾರ್ಥಿವೇತನ ನಿರ್ದೇಶಕರ ಖಾತೆಗೆ ಸಂಖ್ಯೆ:54051212914 ಜಮೆಯಾಗಿರುತ್ತದೆ ಮತ್ತು ನಿರ್ದೇಶಕರು, ವಿದ್ಯಾರ್ಥಿಕ್ಷೇಮಾಭಿವೃದ್ಧಿ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇವರ ಖಾತೆಗೆ ರೂ.3,71,710/– ಜಮೆಯಾಗಿರುತ್ತದೆ.
4	2015–16	I & II year MBA	5,44,200.00	ಅನುಬಂಧ 33(4) ರಲ್ಲಿ ತಿಳಿಸಿರುವಂತೆ 2015–16ನೇ ಸಾಲಿನ ಎಂಬಿಎ 1ನೇ ವರ್ಷದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಪ್ರವೇಶ ಶುಲ್ಕ ಮತ್ತು ಪರೀಕ್ಷಾ ಶುಲ್ಕ ಒಟ್ಟು 14 ವಿದ್ಯಾರ್ಥಿಗಳಿಂದ 1ವರ್ಷಕ್ಕೆ ರೂ.5,12,540/–ಮರುಭರಣವಾಗಿರಬೇಕಾಗಿರುತ್ತದೆ. ಇದರಲ್ಲಿ ವಿದ್ಯಾರ್ಥಿಗಳು 4,620/–ಶುಲ್ಕ ಕಟ್ಟಿರುತ್ತಾರೆ ಮತ್ತು ರೂ.2,53,940/–ಗಳು ವಿದ್ಯಾರ್ಥಿವೇತನ ನಿರ್ದೇಶಕರ ಖಾತೆಗೆ ಸಂಖ್ಯೆ:54051212914 ಜಮೆಯಾಗಿರುತ್ತದೆ ಮತ್ತು ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ವಿಭಾಗ, ಬೆಂವಿವಿ, ಬೆಂಗಳೂರು ಇವರ ಖಾತೆಗ ರೂ.2,17,230/– ಜಮೆಯಾಗಿರುತ್ತದೆ. ಅನುಬಂಧ (4) ರಲ್ಲಿ ಕ್ರಮಸಂಖ್ಯೆ 11ರಲ್ಲಿ ಇರುವ ವಿದ್ಯಾರ್ಥಿಯು ಆದಾಯ ಜಾಸ್ತಿ ಇರುವುದರಿಂದ ಪೂರ್ತಿ ಶುಲ್ಕವನ್ನು ರೂ.36,610/– ಕಟ್ಟಬೇಕೆಂದು ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಕಟ್ಟಬೇಕೆಂದು ಪತ್ರ ನೀಡಿರುತ್ತಾರೆ. ಆದರೆ ವಿದ್ಯಾರ್ಥಿಯ ಪರೀಕ್ಷಾ ಶುಲ್ಕ ರೂ.5,550/–ಮಾತ್ರ ಕಟ್ಟಿದ್ದು, ಪ್ರವೇಶ ಶುಲ್ಕ ರೂ.31,050/– ಕಟ್ಟಿರುವುದಿಲ್ಲ. ಉಳಿಕೆ ಮೊತ್ತ31,050/–ಗಳು ವಿದ್ಯಾರ್ಥಿಯಿಂದ ವಸೂಲಾತಿ ಮಾಡಿ ವಿವರ ಒದಗಿಸುತ್ತೇವೆ. ಆದುದರಿಂದ, ಮೇಲೆ ತಿಳಿಸಿರುವ ವಿವರಣೆಯನ್ನು ಪರಿಗಣಿಸಿ, ಈ ಕಂಡಿಕೆಯ ವಸೂಲಾತಿ ಮೊತ್ತ ಕೈಬಿಡುವಂತೆ ವಿನಂತಿಸಿದೆ.
		ಒಟ್ಟು ರೂ.	**14,71,665.00**	

ಆಕ್ಷೇಪಣೆಗಳು	*ಉತ್ತರಗಳು*
34. ಪ.ಜಾ/ಪ.ಪಂ/ಹಿಂದುಳಿದ ವರ್ಗಕ್ಕೆ ಸಂಬಂಧಿಸಿದ ವಿದ್ಯಾರ್ಥಿಗಳ ಪ್ರವೇಶ ಶುಲ್ಕ ಸಂಬಂಧಪಟ್ಟ ಇಲಾಖೆಗಳಿಂದ ಮರುಭರಣ ಮಾಡಿಕೊಂಡ ವಿವರ ಸಲ್ಲಿಸದಿರುವುದು:–	
ಭೂಗರ್ಭ ಶಾಸ್ತ್ರ ವಿಭಾಗ 2006–07 ರಿಂದ 2015–16 ಲೆಕ್ಕಪರಿಶೋಧನೆ ಪ.ಜಾ/ಪ.ಪಂ/ಹಿಂದುಳಿದ ವರ್ಗಕ್ಕೆ ಸಂಬಂಧಿಸಿದ ವಿದ್ಯಾರ್ಥಿಗಳ ಪ್ರವೇಶ ಶುಲ್ಕ ಸಂಬಂಧಪಟ್ಟ ಇಲಾಖೆಗಳಿಂದ ಮರುಭರಣಗೊಂಡ ವಿವರವನ್ನು ಒದಗಿಸಿರುವುದಿಲ್ಲ. ಪ್ರವೇಶಾತಿ ವಿವರ ಪರಿಶೀಲನೆಯಿಂದ ಮರುಭರಣ ಮಾಡಿಕೊಳ್ಳಬೇಕಾದ ಮೊಬಲಗು ರೂ.3,55,430.00ಗಳ ವಿವರಗಳನ್ನು ಕೋರಲಾಗಿದ್ದು, ಈ ಬಗ್ಗೆ ಯಾವುದೇ ಪ್ರತ್ಯುತ್ತರವನ್ನು ನೀಡಿರುವುದಿಲ್ಲ. ವಿವರ **ಅನುಬಂಧ–3** ರಲ್ಲಿ ನೀಡಿದೆ. ಆದುದರಿಂದ ಸಂಬಂಧಪಟ್ಟ ಇಲಾಖೆಗಳಿಂದ ವಸೂಲಿಸಿ ವಿವಿ ನಿಧಿಗೆ ಜಮೆ ಮಾಡಲು ಸೂಚಿಸಿದೆ. ದಿನಾಂಕ:03.02.2017 ರಲ್ಲಿ ನೀಡಿರುವ ಅನುಸರಣೆಯು ಸಮಂಜಸವಾಗಿಲ್ಲವಾದ್ದರಿಂದ ವಸೂಲಾತಿಯು ಯಥವತ್ತಾಗಿ ಮುಂದುವರೆಯುತ್ತದೆ.	ನಿರ್ದೇಶಕರು, ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ವಿಭಾಗ ಇವರಿಂದ ಸರ್ಕಾರದಿಂದ ಮರುಭರಣಗೊಂಡಿರುವ ಮೊತ್ತ ಒದಗಿಸಿದ ವಿವರ **(ಅನುಬಂಧ–119)** (ಪು.ಸಂ.773) ನೀಡಿದೆ.
35. ತಾಂತ್ರಿಕ ಶಿಕ್ಷಣ ಪರೀಕ್ಷಾ ಶುಲ್ಕದ ಮರುಭರಣದ ಮೊತ್ತ ರೂ.3380717.00 ವಸೂಲಾತಿಯ ಬಗ್ಗೆ.	
ಕುಲಸಚಿವರು (ಮೌಲ್ಯಮಾಪನ) ವಿಭಾಗದ 2015–16ನೇ ಸಾಲಿನ ಲೆಕ್ಕಪರಿಶೋಧನೆ 2015–16 ನೇ ಸಾಲಿನ ತಾಂತ್ರಿಕ ಶಿಕ್ಷಣ ಪರೀಕ್ಷಾ ಶುಲ್ಕದಲ್ಲಿ ಪ.ಜಾ/ಪ.ಪಂ/ ಮತ್ತು ಓ.ಬಿ.ಸಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದಲ್ಲಿ ನೀಡಿರುವ ರಿಯಾಯಿತಿಯ ಮರುಭರಣದ ಬಗ್ಗೆ ದಿನಾಂಕ 5.11.2015 ರ ಸುತ್ತೋಲೆಯಲ್ಲಿ ತಿಳಿಸಿರುವಂತೆ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನದಲ್ಲಿ ಪರೀಕ್ಷಾ ಶುಲ್ಕವನ್ನು ಕಟಾಯಿಸಿ ಪರೀಕ್ಷಾ ಶುಲ್ಕವನ್ನು ವಿಶ್ವವಿದ್ಯಾಲಯದ ಪರೀಕ್ಷಾ ನಿಧಿಗೆ ಜಮೆ ಮಾಡಬೇಕಾಗಿರುತ್ತದೆ. 2015–16 ನೇ ಸಾಲಿನ ಸೆಮಿಸ್ಟರ್ ಪರೀಕ್ಷೆಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯಕ್ಕೆ ಮರುಭರಣ ಆಗಬೇಕಾದ ಮೊತ್ತ ಈ ರೀತಿ ಇರುತ್ತದೆ. ಜುಲೈ 2015 ಹಾಗೂ ಡಿಸೆಂಬರ್ 2015 ಸೆಮಿಸ್ಟರ್ ಪರೀಕ್ಷೆಯ ಮರುಭರಣದ ವಿವರಗಳು. **35(1)** ಸಿವಿಲ್ ಇಂಜಿನಿಯರಿಂಗ್ ವಿಭಾಗದಲ್ಲಿ ಜುಲೈ 2015ರ ರೂ.565107.00 ಮತ್ತು ಡಿಸೆಂಬರ್ 2015ರ ರೂ.9,49,960.00ಗಳ ಪರೀಕ್ಷಾ ಶುಲ್ಕ ಮರುಭರಣ ಗೊಂಡಿವುದರ ವಿವರ ಅನುಬಂಧದಲ್ಲಿ–121 ಒದಗಿಸಿದೆ. **35(2)** ಪರೀಕ್ಷಾ ಶುಲ್ಕ ಜುಲೈ 2015ರಲ್ಲಿ ರೂ.1,99,063.00 ಮತ್ತು ಡಿಸೆಂಬರ್ 2015ರಲ್ಲಿ ವಸೂಲಾತಿಯಾದ ರೂ.2,89,145.00 ಒಟ್ಟು ರೂ.4,88,208.00ಗಳು ವಸೂಲಾತಿ ಯಾಗಿರುವ ವಿವರ ಸಲ್ಲಿಸಿರುತ್ತಾರೆ. ಸರ್ಕಾರದಿಂದ ಮರುಭರಣಗೊಂಡಿರುವ (**ಅನುಬಂಧ–121**) ನಲ್ಲಿ ಒದಗಿಸಿದೆ. **35(3)** ಜುಲೈ 2015ರ ಮೊತ್ತ ರೂ.7680.00 ಗಳು ಮತ್ತು 12/2015ರ ಮೊತ್ತ ರೂ.14640.00ಗಳು ಒಟ್ಟು ರೂ.22320.00ಗಳು ಮರುಭರಣವಾಗಬೇಕಾಗಿದ್ದು ರೂ.18660.00ಗಳಲ್ಲಿ ಅನುಬಂಧರಲ್ಲಿ ನೀಡಿರುವ ವಿವರದಂತೆ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸಿರುವ ರೂ.7410.00 ಮತ್ತು ಸರ್ಕಾರದಿಂದ ಮರು ಭರಣಗೊಂಡಿರುವ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ರೂ.11250.00 ಗಳ ವಿವರ ಒದಗಿಸಲಾಗಿದೆ. ಶ್ರೀ ಮಲ್ಲೀಶ್ ನಾಯ್ಕ್. ಎಸ್ ಇವರು ಪದವಿ ಅಧ್ಯಯನ ಬಿಟ್ಟಿರುತ್ತಾರೆ. (Discontinued) ಪರೀಕ್ಷಾ ಶುಲ್ಕ ವಸೂಲಾತಿ ವ್ಯಾಪ್ತಿಗೆ ಒಳಪಡುವುದಿಲ್ಲವಾದ್ದರಿಂದ ರೂ.1830.00 ವಸೂಲಾತಿಯಿಂದ ಕೈ ಬಿಡುವಂತೆ ಹಾಗೂ ಲಾವಣ್ಯ ಎಲ್ ಇವರಿಂದ ವಸೂಲಾತಿಯಾಗಬೇಕಾದ ರೂ.1830.00 ಗಳನ್ನು ವಸೂಲಾತಿಮಾಡಿ ವಿವರ ಬದಗಿಸಲಾಗುವುದು. ಆದುದರಿಂದ ಒಟ್ಟು ರೂ.20490.00 ಗಳನ್ನು ವಸೂಲಾತಿಯಿಂದ ಕೈ ಬಿಡುವಂತೆ ವಿನಂತಿಸಲಾಗಿದೆ. **35(4).** ಪ್ರಾಂಶುಪಾಲರ ಕಛೇರಿಯಿಂದ ಎಸ್‌ಸಿ/ಎಸ್ ಟಿ/ಒಬಿಸಿ ಜುಲೈ 2015 ಮತ್ತು ಡಿಸೆಂಬರ್ 2015ರ ವಿದ್ಯಾರ್ಥಿ ವೇತನವನ್ನು ವಿತ್ತಾಧಿಕಾರಿಗಳ ಕಚೇರಿಯಲ್ಲಿ ಡಿ.ಡಿ ಯನ್ನು ಸಲ್ಲಿಸಿರುವ ರಸೀದಿಯ ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ಕಾಲೇಜು ಹೆಸರು	ನಿಖಾಯ	ಮರುಭರಣದ ಮೊತ್ತ 7/2015	ಮರುಭರಣದ ಮೊತ್ತ 12/2015	ಒಟ್ಟು ಮೊತ್ತ (ರೂ.ಗಳಲ್ಲಿ)
1	ಯುವಿಸಿಇ	ಸಿವಿಲ್ ಇಂಜಿನಿಯರಿಂಗ್	565107	949960	1515067
2	ಯುವಿಸಿಇ	ಮೆಕ್ಯಾನಿಕಲ್ ಇಂಜಿನಿಯರಿಂಗ್	303355	368556	671911
3	ಯುವಿಸಿಇ	ಆರ್ಕಿಟೆಕ್ಟ್ ಇಂಜಿನಿಯರಿಂಗ್	7680	14640	22320
4	ಯುವಿಸಿಇ	ಎಲೆಕ್ಟ್ರಿಕಲ್ ಇಂಜಿನಿಯರಿಂಗ್	145604	235216	380820
5	ಯುವಿಸಿಇ	ಕಂಪ್ಯೂಟರ್ ಸೈನ್ಸ್	236770	229680	466450
6	ಯುವಿಸಿಇ	ಎಲೆಕ್ಟ್ರಾನಿಕ್ ಕಮ್ಯೂನಿಕೇಶನ್	204314	119835	324149
		ಒಟ್ಟು ರೂ.	**1462830**	**1917887**	**3380717**

ಪರೀಕ್ಷಾ ಶುಲ್ಕ ಮರುಭರಣದ ವಿವರಗಳನ್ನು ಸಲ್ಲಿಸಲು ಕೋರಿದ್ದು, ಕುಲಸಚಿವರು ಮೌಲ್ಯಮಾಪನ ಇವರು ತಮ್ಮ ದಿನಾಂಕ 28.2.2017 ರ ವರದಿಯಲ್ಲಿ ಈ ವಿವರಗಳನ್ನು ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರಿಂದ ಪಡೆದು ಮುಂದಿನ ಪರಿಶೀಲನೆಗೆ ಒದಗಿಸುವದಾಗಿ ತಿಳಿಸಿರುತ್ತಾರೆ. ಜುಲೈ 2015 ಹಾಗೂ ಡಿಸೆಂಬರ್ 2015 ಮಾಹೆಯ ಪರೀಕ್ಷಾ ಶುಲ್ಕದ

ಆಕ್ಷೇಪಣೆಗಳು	***ಉತ್ತರಗಳು***
ಮರುಭರಣದ ಮೊತ್ತ ರೂ.3380717.00 ಅನ್ನು ವಸೂಲಾತಿಗಾಗಿ ಸೂಚಿಸಿದೆ.	ಸಮಾಜ ಕಲ್ಯಾಣ ಇಲಾಖೆಯಿಂದ ಎಸ್‌ಸಿ/ಎಸ್ ಟಿ/ ಒಬಿಸಿ ವಿದ್ಯಾರ್ಥಿಗಳ ವೇತನ ಮಂಜೂರಾಗಿ ಬಂದಿರುವ ವಿದ್ಯಾರ್ಥಿ ವೇತನದ ಒಟ್ಟು ಮೊತ್ತದ ವಿವರ ರೂ.1,37,67,750.00 ಇದ್ದು ಈ ಮೊತ್ತದಲ್ಲಿ ಪರೀಕ್ಷಾ ಶುಲ್ಕವು (ರೂ.3,80,820/–) ಸೇರಿರುವುದರಿಂದ ಕಂಡೀಕೆ 35ರಲ್ಲಿ ನಮೂದಿಸಿರುವ ಬಾಕಿ ಪರೀಕ್ಷಾ ಶುಲ್ಕವು ವಿಶ್ವವಿದ್ಯಾಲಯಕ್ಕೆ ಸಂದಾಯವಾಗಿದೆ. ಆದ್ದುದರಿಂದ ಈ ಆಕ್ಷೇಪಣೆಯನ್ನು ಕೈ ಬಿಡಲು ಕೋರಲಾಗಿದೆ. **35(5).** ಸಮಾಜ ಕಲ್ಯಾಣ ಇಲಾಖೆಯಿಂದ ಎಸ್‌ಸಿ/ಎಸ್‌ಟಿ ಒಬಿಸಿ ವಿದ್ಯಾರ್ಥಿಗಳ ವೇತನ ಮಂಜೂರಾಗಿ ಬಂದಿರುವ ವಿದ್ಯಾರ್ಥಿ ವೇತನದ ಒಟ್ಟು ಮೊತ್ತದ ವಿವರ ರೂ.1,37,70,751.00 ಇದ್ದು ಈ ಮೊತ್ತದಲ್ಲಿ ಪರೀಕ್ಷಾ ಶುಲ್ಕವು (ರೂ.466450/–) ಸೇರಿರುತ್ತದೆ. **(ಅನುಬಂಧ–121)** **35(6).** ಪ್ರಾಂಶುಪಾಲರ ಕಛೇರಿಯಿಂದ ಎಸ್‌ಸಿ/ಎಸ್ ಟಿ/ಒಬಿಸಿ ಜುಲೈ 2015 ಮತ್ತು ಡಿಸೆಂಬರ್ 2015ರ ವಿದ್ಯಾರ್ಥಿ ವೇತನವನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಎಸ್‌ಸಿ/ ಎಸ್‌ಟಿ/ಒಬಿಸಿ ವಿದ್ಯಾರ್ಥಿಗಳ ವೇತನ ಮಂಜೂರಾಗಿ ಬಂದಿರುವ ವಿದ್ಯಾರ್ಥಿ ವೇತನದ ಒಟ್ಟು ಮೊತ್ತದ ವಿವರ ರೂ.1,37,67,751.00 ಇದ್ದು ಈ ಮೊತ್ತದಲ್ಲಿ ಪರೀಕ್ಷಾ ಶುಲ್ಕವು (ರೂ.3,24,149/–) ಸೇರಿರುವುದರಿಂದ ಕಂಡೀಕೆ 35ರಲ್ಲಿ ನಮೂದಿಸಿರುವ ಬಾಕಿ ಪರೀಕ್ಷಾ ಶುಲ್ಕವು ವಿಶ್ವ ವಿದ್ಯಾಲಯಕ್ಕೆ ಸಂದಾಯವಾಗಿದೆ. ಆದ್ದುದರಿಂದ ಈ ಆಕ್ಷೇಪಣೆಯನ್ನು ಕೈ ಬಿಡಲು ಕೋರಲಾಗಿದೆ **(ಅನುಬಂಧ–121)** (ಪು.ಸಂ. 779). ಜುಲೈ 2015 ಮತ್ತು ಡಿಸೆಂಬರ್2015ರ ತಾಂತ್ರಿಕ ಶಿಕ್ಷಣ ಪರೀಕ್ಷಾ ಶುಲ್ಕದ ಮರುಭರಣದ ಮೊತ್ತ ರೂ.33,80,717.00 ಗಳು ಸರ್ಕಾರದಿಂದ ಪಡೆದಿರುವ ರೂ.1,37,70,751.00 ಗಳನ್ನು ವಿತ್ತಾಧಿಕಾರಿಗಳ ಖಾತೆಗೆ ಜಮೆ ಮಾಡಲಾಗಿದ್ದು ಸರ್ಕಾರದಿಂದ ಈ ಮೊತ್ತ ಮರುಭರಣವಾಗಿರು ವುದರಿಂದ ವಸೂಲಾತಿಯಿಂದ ಈ ಮೊತ್ತ ಕೈ ಬಿಡುವಂತೆ ವಿನಂತಿಸಲಾಗಿದೆ. ಅನುಬಂಧದಲ್ಲಿ ಜಮೆಯ ರಸೀದಿ ಮತ್ತು ಲೆಕ್ಕ ಪತ್ರಗಳಲ್ಲಿ ಈ ಮೊತ್ತ ಅಳವಡಿಸಿರುವುದಕ್ಕೆ "Daily Collection Lisiting" ಲಗತ್ತಿಸಿದೆ. ಮುಂದಿನ ಲೆಕ್ಕಪರಿಶೋಧನೆ ಸಮಯದಲ್ಲಿ ಸಂಬಂದಿಸಿದ ವಿಭಾಗಗಳ DCB ದಾಖಲಾತಿ ಪರಿಶೀಲನೆಗೆ ಒದಗಿಸುವಂತೆ ತಿಳಿಸಲಾಗಿದೆ.
36. ನಿಯತಕಾಲಿಕೆಗಳ ಸರಬರಾಜು ಆಗದಿರುವುದು ವಸೂಲಾತಿ ಮೊತ್ತ 3,10,690.00	
ಗ್ರಂಥಾಲಯ ಜ್ಞಾನಭಾರತಿ ವಿಭಾಗದಲ್ಲಿ 2014–15ನೇ ಹಾಗೂ 2015–16ನೇ ಸಾಲುಗಳಲ್ಲಿ ವಿವಿಧ ನಿಯತಕಾಲಿಕೆಗಳ ಸರಬರಾಜು ಪಡೆಯಲು ಆಯವ್ಯಯ ಹಂಚಿಕೆ 20,00,000–00 ರೂ.ಗಳಲ್ಲಿ 16,82,038.00 ರೂ.ಗಳನ್ನು ಮುಂಗಡವಾಗಿ ಪಾವತಿಸ ಲಾಗಿರುತ್ತದೆ. ಆದರೆ, ಅದರಲ್ಲಿ ಕೆಲವು ವಾರಗಳಲ್ಲಿ ಕೆಲವು ನಿಯತಕಾಲಿಕೆಗಳು ಸರಬರಾಜು ಆಗಿರುವುದಿಲ್ಲ. ಸದರಿ ಸರಬರಾಜ ಪಡೆಯದಿರುವ ನಿಯತಕಾಲಿಕೆಗಳ ಸರಬರಾಜುದಾರರ ವಿವರಗಳನ್ನು **<u>ಅನುಬಂಧ–20</u>** ರಲ್ಲಿ ನೀಡಿರುವಂತೆ ಒಟ್ಟು ರೂ. 78,757.00 ಗಳನ್ನು ಹಾಗೂ **<u>ಅನುಬಂಧ–21</u>** ರಲ್ಲಿ ನೀಡಿರುವ ಹಿಂದಿನ ಸಾಲಿನ ಸರಬರಾಜು ಮಾಡದಿರುವ ನಿಯತಕಾಲಿಕೆಗಳ	ಗ್ರಂಥಾಲಯದಲ್ಲಿ ಸ್ವೀಕರಿಸುವ ನಿಯತಕಾಲಿಕೆಗಳ ವಿವರಗಳನ್ನು ಕಾರ್ಡ್‌ಕ್ಸ್‌ನಲ್ಲಿ ದಾಖಲಿಸಲ್ಪಟ್ಟಿರುತ್ತದೆ. 2014–ಜನವರಿ–ಡಿಸಂಬರ್ (2013–14)ನೇ ಸಾಲಿನಲ್ಲಿ ವರ್ಷಾಂತ್ಯದವರೆಗೆ ಸರಬರಾಜಾಗದೇ ಇರುವ ನಿಯತಕಾಲಿಕೆಗಳ ಪಟ್ಟಿಯನ್ನು ಪೊಬಲಗುಗಳೊಂದಿಗೆ ಹಾಗೂ ನಿಯತಕಾಲಿಕೆಗಳು ಸಂದಾಯವಾಗಿರುವ ಮತ್ತು ಮರುಪಾವತಿ ಮಾಡಿರುವ ನಿಯತಕಾಲಿಕೆಯನ್ನು Remarks ಕಾಲಂನಲ್ಲಿ ತಿಳಿಸಲಾಗಿದೆ. ಸಾಮಾನ್ಯಾಗಿ ನಿಯತಕಾಲಿಕೆಗಳು ಸಮಯಕ್ಕೆ ಸರಿಯಾಗಿ ಪ್ರಕಟಣೆಗೊಳುವುದಿಲ್ಲ. ಆದುದರಿಂದ ತಡವಾಗಿ ಸರಬರಾಜು ಮಾಡುತ್ತಾರೆ (Delay publication). ಯಾವುದೇ ನಿಯತಕಾಲಿಕೆಗಳು ಬರದೇ ಇದ್ದರೆ ಅವರಿಗೆ

ಆಕ್ಷೇಪಣೆಗಳು	***ಉತ್ತರಗಳು***
ಮೊತ್ತ ರೂ. 2,31,933.00 ಗಳು ಸೇರಿ ಒಟ್ಟು ರೂ. 3,10,690.00 ಗಳನ್ನು ಸಂಬಂಧಪಟ್ಟವರಿಂದ ವಸೂಲಿ ಮಾಡಿ ಸಂಬಂಧಪಟ್ಟ ಬ್ಯಾಂಕ್ ಖಾತೆಗೆ ಜಮಾ ಮಾಡಿ ಸಂಬಂಧಪಟ್ಟ ದಾಖಲೆಯನ್ನು ಮುಂದಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.	Reminder ಕೊಟ್ಟು DD ಯ ಮುಖಾಂತರ ಅವರಿಂದ ಹಣವನ್ನು ಹಿಂಪಡೆಯಲಾಗುತ್ತಿದೆ. ನಂತರ ಅದನ್ನು ವಿತ್ತಾಧಿಕಾರಿಗಳು, ಬೆಂಗಳೂರು ವಿಶ್ವವಿದ್ಯಾಲಯ ಇವರ ಹೆಸರಿನಲ್ಲಿ ರಸೀದಿ ತೆಗೆದು ವಿತ್ತಾಧಿಕಾರಿಯವರ ವಿಭಾಗಕ್ಕೆ ಸಂದಾಯ ಮಾಡಿ ರಸೀದಿ ಪಡೆಯುತ್ತೇವೆ. ಆ ರಸೀದಿ ಸಂಖ್ಯೆಯನ್ನು ಅನುಬಂದ–2ರಲ್ಲಿ 2ನೇ ಕಾಲಂನಲ್ಲಿ ನಮೂದಿಸಲಾಗಿದೆ ಹಾಗೂ ಸರಬರಾಜಾದ ನಿಯತಕಾಲಿಕೆಗಳನ್ನು ಕಾರ್ಡಕ್ಸ್‌ನಲ್ಲಿ ನಮೂದಿಸಿದೆ. ಆದ್ದರಿಂದ ಈ ಆಕ್ಷೇಪಣೆಯನ್ನು ಕೈಬಿಡಬೇಕೆಂದು ಕೋರುತ್ತೇನೆ.
37. ಜೆರಾಕ್ಸ್ ಜಾಗಕ್ಕೆ ಕಡಿಮೆ ಬಾಡಿಗೆ ಪಡೆದಿರುವ ಬಗ್ಗೆ. ವಸೂಲಾತಿ ಮೊತ್ತ ರೂ. 40,100.00	
2014–15 ಮತ್ತು 2015–16ನೇ ಸಾಲಿನ **ಗ್ರಂಥಾಲಯ (ಜ್ಞಾ) ವಿಭಾಗದ** ಜೆರಾಕ್ಸ್ ಹೊರಗುತ್ತಿಗೆಯನ್ನು ನವೀಕರಿಸುವ ಬಗ್ಗೆ ಕಡತವನ್ನು ಪರಿಶೀಲಿಸಲಾಗಿ ಜ್ಞಾನಭಾರತಿ ಗ್ರಂಥಾಲಯದಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಜೆರಾಕ್ಸ್ ಕಾರ್ಯ ನಿರ್ವಹಿಸಲು ಗಂಗಾಧರ ಎಂಬುವವರಿಗೆ ಗುತ್ತಿಗೆ ನೀಡಿ ಕರಾರನ್ನು ಮಾಡಿಕೊಂಡಿರುವುದು ಕಂಡು ಬಂದಿರುತ್ತದೆ. ಸಂಬಂಧಿಸಿದ ಕರಾರು ಪತ್ರವನ್ನು ಪರಿಶೀಲಿಸಲಾಗಿ, 2013–14ನೇ ಸಾಲಿನಲ್ಲಿ ಕರಾರನ್ನು ಮಾಡಿಕೊಂಡಿದ್ದು ಇದು ಜೂನ್–2014ಕ್ಕೆ ಅಂತ್ಯಗೊಂಡಿರುತ್ತದೆ. ಜುಲೈ–2014ನೇ ಮಾಹೆಯಿಂದ ಕರಾರನ್ನು ಮಾಡಿಕೊಂಡಿರುವುದಿಲ್ಲ. 2014–15ನೇ ಸಾಲಿಗೆ ಕರಾರನ್ನು ಮಾಡಿಕೊಂಡಿಲ್ಲದಿರುವ ಬಗ್ಗೆ ಸ್ಪಷ್ಟೀಕರಣ ನೀಡುವುದು. 2015–16ನೇ ಸಾಲಿಗೆ ಏಪ್ರಿಲ್–2015 ರಲ್ಲಿ ಕರಾರನ್ನು ಮಾಡಿಕೊಂಡಿದ್ದು, ಕರಾರಿನ ಅನ್ವಯ ಮೊತ್ತ ರೂ.8,000/– ಗಳ ಬಾಡಿಗೆಯನ್ನು ನಿಗಧಿಪಡಿಸಿರುವುದು ಕಂಡುಬಂದಿರುತ್ತದೆ. ಸಂಬಂಧಿಸಿದ ವೋಚರ್‌ಗಳನ್ನು ಪರಿಶೀಲಿಸಲಾಗಿ ನಿಗಧಿಪಡಿಸಿರುವ ಬಾಡಿಗೆ ಮೊತ್ತವನ್ನು ವಸೂಲಿ ಮಾಡಿರುವುದಿಲ್ಲ. ಆದರೆ, ಗಂಗಾಧರ್ ರವರು ಬಾಡಿಗೆ ಮೊತ್ತವನ್ನು ಕಡಿಮೆ ಮಾಡಲು ಕೋರಿ ದಿ.02.11.2015 ರಲ್ಲಿ ಪತ್ರ ಬರೆದಿದ್ದು ಸದರಿ ಕಡತವನ್ನು 'Rent Committee' ಗೆ ಮಂಡಿಸಲು ಕುಲಸಚಿವರು ದಿ.21.01.2016 ರಲ್ಲಿ ಸೂಚಿಸಿರುವುದು ಕಡತದ ಟಿಪ್ಪಣಿಯಲ್ಲಿ ಕಂಡುಬಂದಿರುತ್ತದೆ. ಬಾಡಿಗೆ ಮೊತ್ತ ಪಾವತಿಸಿರುವ ವಿವರಗಳನ್ನು **<u>ಅನುಬಂಧ–22</u>** ರಲ್ಲಿ ಲಗತ್ತಿಸಿರುವಂತೆ, ಕರಾರು ಪ್ರಕಾರ ರೂ.8000–00 ವಸೂಲಿ ಮಾಡದೆ, ಕಡಿಮೆ ವಸೂಲಿ ಮಾಡಿರುವ ಬಗ್ಗೆ ಸಮಂಜಸ ಕಾರಣಗಳಿದ್ದರೆ ಸಂಬಂಧಪಟ್ಟ ದಾಖಲೆಗಳೊಂದಿಗೆ ಸಮರ್ಥಿಸಿಕೊಳ್ಳಲು ಲೆಕ್ಕ ವಿಚಾರಣೆ ಸಂಖ್ಯೆ 8ರಲ್ಲಿ ಸೂಚಿಸಿದೆ. ಆದರೆ ಅದಕ್ಕೆ ನೀಡಿದ ಉತ್ತರದಲ್ಲಿ ವಿತ್ತಾಧಿಕಾರಿಗಳ ಆದೇಶದಂತೆ ರೂ.4000–00 ಕ್ಕೆ ಕರಾರು ಮಾಡಿಕೊಂಡು ಬಾಡಿಗೆ ಪಡೆದ ಬಗ್ಗೆ ಸಮರ್ಥನೆ ಉತ್ತರ ನೀಡಿರುತ್ತಾರೆ. ಆದರೆ ಟಿಪ್ಪಣಿಯಲ್ಲಿನ ಕುಲಸಚಿವರ ಆದೇಶವನ್ನು ಗಮನಿಸಿದಾಗ ಸದರಿ ಆದೇಶಕ್ಕು ಇವರು ವಸೂಲಿ ಮಾಡುತ್ತಿರುವ ಬಾಡಿಗೆಗೂ ಒಂದಕ್ಕೊಂದು ತಾಳೆಯಾಗುವುದಿಲ್ಲ. ಹಾಗೂ ಸದರಿ ಕಡತವನ್ನು ಕುಲಸಚಿವರ ಆದೇಶದಂತೆ ಬಾಡಿಗೆ ನಿಯಂತ್ರಣ ಸಮಿತಿಗೆ ಡಿಸೆಂಬರ್–2015 ರಲ್ಲಿ ಸಲ್ಲಸಿರುತ್ತಾರೆ. ಆದರೆ ಅಲ್ಲಿಂದ ಇಲ್ಲಿಯವರೆಗೆ Rent Committee ಯಿಂದ ಬಾಡಿಗೆ ನಿರ್ಧರಿತ ಪತ್ರ ಬಂದಿಲ್ಲ ಅದರ ಬಗ್ಗೆ ಯಾರೂ ಕಾಳಜಿ ವಹಿಸದಿರುವುದು ಲೆಕ್ಕಪರಿಶೋಧನೆಯಿಂದ ತಿಳಿದು ಬಂದಿದೆ. ಆದಕಾರಣ ಅನುಬಂಧದಲ್ಲಿ ತೋರಿರುವ ವ್ಯತ್ಯಾಸದ ಮೊತ್ತ 40,100.00 ರೂ. ಗಳನ್ನು ಸಂಬಂಧಪಟ್ಟವರಿಂದ ವಸೂಲಿ ಮಾಡಲು ಸೂಚಿಸಿದೆ.	ಜೆರಾಕ್ಸ್ ಗುತ್ತಿಗೆಯವರು ದಿನಾಂಕ:2–11–2015ರಲ್ಲಿ ಗ್ರಂಥಪಾಲಕರಿಗೆ ಬಾಡಿಗೆ ಕಡಿಮೆ ಮಾಡುವಂತೆ ಪತ್ರ ನೀಡಿದ್ದರು, ಅದನ್ನು ಗ್ರಂಥಪಾಲಕರು 2–11–2015ರಲ್ಲಿಯೇ ಕುಲಸಚಿವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದ್ದರು. ಕುಲಸಚಿವರು ದಿನಾಂಕ: 11–12–2015ರಲ್ಲಿ ರೂ.4,300/– ಗಳನ್ನು ಪಾವತಿಸಲು ಹಾಗೂ ರೆಂಟ್ ಕಮಿಟಿಗೆ ಈ ಖಿಡತವನ್ನು ಕಳುಹಿಸಲು ಆದೇಶಿಸಿದ್ದರು. ಅದರಂತೆಯೇ ದಿನಾಂಕ: 6–01–2016ರಲ್ಲಿಯೇ ರೆಂಟ್ ಕಮಿಟಿಗೆ ಕಳುಹಿಸಲಾಗಿದೆ. ಆದರೇ ಇದುವರೆವಿಗೂ ಯಾವುದೇ ಕ್ರಮ ಜರುಗಿಲ್ಲ. ನಂತರದಲ್ಲಿ ದಿನಾಂಕ: 18–07–2016ರಲ್ಲಿ ಕುಲಸಚಿವರಿಗೆ ಜೆರಾಕ್ಸ್ ಬಾಡಿಗೆಯನ್ನು ಹೆಚ್ಚಿಸುವ ಬಗ್ಗೆ ಆದಷ್ಟು ಬೇಗ ತೀರ್ಮಾನವನ್ನು ರೆಂಟ್ ಕಮಿಟಿಯಲ್ಲಿ ತೆಗೆದುಕೊಂಡು ಆದೇಶ ನೀಡುವಂತೆ ಮನವಿಯನ್ನು ಮಾಡಲಾಗಿದ್ದು, ಈ ಬಗ್ಗೆ ಅದರ ತೀರ್ಮಾನ ದಂತೆ ಕ್ರಮ ವಹಿಸಲಾಗುವುದು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದಲೇ ನಡೆಸಲಾಗುತ್ತಿರುವ ಜೆರಾಕ್ಸ್ ಸೇವೆಯನ್ನು ನಿಲ್ಲಿಸಿದಲ್ಲಿ ಅಧಿಕ ಬಾಡಿಗೆ ದರ ವಿಧಿಸಿದಲ್ಲಿ ಗುತ್ತಿಗೆದಾರರು ಅವರ ವೆಚ್ಚವನ್ನು ಸರಿದೂಗಿಸಲು ಸಾಧ್ಯವಾಗದೆ ಸೇವೆ ನಿಲ್ಲಿಸಿದಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದು. 2015–16ನೇ ಸಾಲಿಗೆ ಬಾಡಿಗೆ ರೂ. 4300/– ರಂತೆ ದರದಲ್ಲಿ ರೂ. 51600/–ಗಳನ್ನು ವಸೂಲಿ ಮಾಡಿ ಬೆಂಗಳೂರು ವಿ.ವಿ. ವಿತ್ತಾಧಿಕಾರಿಗಳ ಖಾತೆಗೆ ಜಮಾ ಮಾಡಲಾಗಿದೆ. ಈ ಕಾರಣಗಳನ್ನು ಪರಿಗಣಿಸಿ ಈ ಆಕ್ಷೇಪಣೆಯನ್ನು ಕೈಬಿಡಬೇಕೆಂದು ಕೋರುತ್ತೇನೆ.
38. ಪುಸ್ತಕಗಳ ದಾಸ್ತಾನು ವಹಿಯಲ್ಲಿ ಕಡಿಮೆ ಲೆಕ್ಕ ತೋರಿಸಿರುವುದು:	
2014–15 ಹಾಗೂ 2015–16 ನೇ ಸಾಲಿನ **ಪ್ರಸಾರಾಂಗ (ಸಿಟಿ) ವಿಭಾಗದ** ಮಾರಾಟ ಮಳಿಗೆಯಲ್ಲಿ ದಾಸ್ತಾನು ವಹಿಯನ್ನು ಪರಿಶೀಲಿಸಲಾಗಿ ಪ್ರಾರಂಭಿಕ ಹಾಗೂ ಅಂತಿಮ ಶಿಲ್ಕು ನಮೂದಿಸುವಲ್ಲಿ ವ್ಯತ್ಯಾಸ ಕಂಡುಬಂದಿರುತ್ತದೆ. ವಿವರ ಈ ಕೆಳಕಂಡಂತಿವೆ, ಈ ಕುರಿತು ಸ್ಪಷ್ಟೀಕರಣವನ್ನು ಕೋರಿದ್ದು, ಯಾವುದೇ ಅನುಸರಣೆಯನ್ನು ಸಲ್ಲಿಸಿರುವುದಿಲ್ಲ. ಆದುದರಿಂದ	1. ಪುಟ ಸಂಖ್ಯೆ 47ರಲ್ಲಿ ದೃಢೀಕರಿಸಿ ನಮೂದಿಸಿರುವಂತೆ ಅಂತಿಮ ಶಿಲ್ಕು 804 ನಮೂದಿಸಿಲಾಗಿದೆ. ಪ್ರಾರಂಭಿಕ ಶಿಲ್ಕು 804 ಸರಿಯಾಗಿರುತ್ತದೆ. ಯಾವುದೇ ವ್ಯತ್ಯಾಸವಿರುವುದಿಲ್ಲ. ಆದ್ದರಿಂದ ವ್ಯತ್ಯಾಸದ ಮೊತ್ತ ರೂ. 75ನ್ನು ವಸೂಲಾತಿಯಿಂದ ಕೈಬಿಡಲು ಕೊರಲಾಗಿದೆ.

ಆಕ್ಷೇಪಣೆಗಳು	ಉತ್ತರಗಳು
ರೂ.3615.00 ಗಳನ್ನು ವಸೂಲಾತಿಗೆ ಸೂಚಿಸಿದೆ.	2. ಪ್ರಾರಂಭಿಕ ಶಿಲ್ಕು ದಿನಾಂಕ: 01.04.2014ರಲ್ಲಿ 549 ಎಂದು ತೆಗೆದುಕೊಳ್ಳಲಾಗಿದ್ದು, ಇದು ಪುಟ ಸಂಖ್ಯೆ 630ರಲ್ಲಿ ದಿನಾಂಕ:01.10.2014ರಲ್ಲಿ 2ಪುಸ್ತಕಗಳು ಮಾರಾಟ ವಾಗಿದ್ದು ಕಳೆಯುವಾಗ 580ರಲ್ಲಿ 2 ಪುಸ್ತಕಗಳನ್ನು ಕಳೆದು 578ಎಂದು ಶುಲ್ಕವನ್ನು ನಮೂದಿಸಬೇಕಿದ್ದು ತಪ್ಪಾಗಿರುತ್ತದೆ. ಆದ್ದರಿಂದ ಈ ಪುಸ್ತಕಗಳ ಸಂಖ್ಯೆಯನ್ನು 549ಕ್ಕೆ ಕೂಡಿಸಿದಾಗ ಅಂತಿಮ ಶಿಲ್ಕು 557 ಆಗುತ್ತದೆ. ಆದ್ದರಿಂದ ದಿನಾಂಕ: 01.04.2014ರಲ್ಲಿ ಪ್ರಾರಂಭಿಕ ಶಿಲ್ಕು 557 ಪುಟ ಸಂಖ್ಯೆ 628ರಲ್ಲಿ ದಿನಾಂಕ: 01.04.2015ರಂದು ನಮೂದಿಸಲಾಗಿದೆ. ಆದ್ದರಿಂದ ಯಾವುದೇ ವ್ಯತ್ಯಾಸವಿರುವು ದಿಲ್ಲ. ರೂ. 240/– ನ್ನು ಈ ಆಕ್ಷೇಪಣೆಯನ್ನು ಕೈ ಬಿಡಲು ಕೋರಲಾಗಿದೆ. 3. ಪ್ರಾರಂಭಿಕ ಶಿಲ್ಕು ದಿ:01.04.2015ರಂದು 946 ಎಂದುತಪ್ಪಾಗಿ ತಿಳಿದುಕೊಳ್ಳಲಾಗಿದ್ದು ಇದು ಪುಟ ಸಂಖ್ಯೆ 810ರಲ್ಲಿ ದಿನಾಂಕ:18.08.2014 ರಂದು 24 ಪುಸ್ತಕಗಳನ್ನು ಕಳೆದಾಗ 1314ಎಂದು ನಮೂದಿಸಬೇಕಾಗಿತ್ತು ಆದರೆ ಕಣ್ತಪ್ಪಿನಿಂದ 1254ಎಂದು ನಮೂದಿಸಲಾಗಿದೆ ಆದ್ದರಿಂದ 946 ರ ಬದಲು ಶಿಲ್ಕು 1006 ಪುಸ್ತಕಗಳು ಇದೆ ಆದ್ದರಿಂದ ವ್ಯತ್ಯಾಸದ ಮೊತ್ತ ರೂ.3300/–ವಸೂಲಾತಿಯಿಂದ ಈ ಆಕ್ಷೇಪಣೆಯನ್ನು ಕೈ ಬಿಡಲು ಕೋರಲಾಗಿದೆ. 1006 ಪುಸ್ತಕಗಳು ದಾಸ್ತಾನಿನಲ್ಲಿ ರುತ್ತದೆ. 4. ಪುಟ ಸಂಖ್ಯೆ 740ರಲ್ಲಿ 258 ಪುಸ್ತಕಗಳು ಇದ್ದು ದಿನಾಂಕ: 08.04.2014 ರಂದು ಲೆಕ್ಕದಲ್ಲಿ 6 ಪುಸ್ತಕಗಳನ್ನು ಹೆಚ್ಚಾಗಿ ತೆಗೆದುಕೊಂಡಿರುತ್ತೇವೆ ಆದ್ದರಿಂದ 264ರಲ್ಲಿ 6 ಪುಸ್ತಕಗಳನ್ನು ಕಳೆದು (264–6) ಅಂತಿಮ ಶಿಲ್ಕು 258 ಎಂದು ನಮೂದಿಸಿ ಸರಿಪಡಿಸಿಕೊಳ್ಳಲಾಗಿದೆ. ಆದ್ದರಿಂದ ಈ ಆಕ್ಷೇಪಣೆಯನ್ನು ಕೈ ಬಿಡಲು ಕೋರಲಾಗಿದೆ. 5. ಪುಟ ಸಂಖ್ಯೆ 724 ರಲ್ಲಿ B/ಈ ಸಂಖ್ಯೆ ಇರುವುದರಿಂದ 2013–14ನೇ ಸಾಲಿನಲ್ಲಿ ಪ್ರಾರಂಭಿಕ ಶಿಲ್ಕು 1169 ಎಂದು ತೆಗೆದುಕೊಳ್ಳಬೇಕಾಯಿತು. ತಪ್ಪಾಗಿ 1205 ಎಂದು ತೆಗೆದುಕೊಂಡಿರುತ್ತೆವೆ ಇದನ್ನು ಸರಿಪಡಿಸಿ 1169 ಎಂದು ನಮೂದಿಸಿ ಸರಿಪಡಿಸಲಾಗಿದೆ. ಆದ್ದರಿಂದ ಈ ಆಕ್ಷೇಪಣೆಯನ್ನು ಕೈ ಬಿಡಲು ಕೋರಲಾಗಿದೆ. 6. ಪುಟ ಸಂಖ್ಯೆ 704 ರಲ್ಲಿ ದೃಢೀಕರಿಸಿ ನಮೂದಿಸಿರುವಂತೆ 13.01.2015ರಂದು 63 ಪುಸ್ತಕಗಳನ್ನು ಹೆಚ್ಚಾಗಿ ತೆಗೆದು ಕೊಂಡಿದ್ದು ಕಣ್ತಪ್ಪಿನಿಂದ 4,347 ಎಂದು ತಪ್ಪಾಗಿ ನಮೂದಿಸಲಾಗಿದೆ. ಆದ್ದರಿಂದ 4347 ರಲ್ಲಿ 63 ಪುಸ್ತಕಗಳನ್ನು ಕೆಳೆದು 4284 ಎಂದು ಸರಿಪಡಿಸಿಕೊಳ್ಳಲಾಗಿದೆ ಅಂತಿಮ ಶಿಲ್ಕು 2430 ಎಂದು ನಮೂದಿಸಿ ಸರಿಪಡಿಸಿಕೊಳ್ಳಲಾಗಿದೆ. ಆದ್ದರಿಂದ ಈ ಆಕ್ಷೇಪಣೆಯನ್ನು ಕೈ ಬಿಡಲು ಕೋರಲಾಗಿದೆ. 7. ಪುಟ ಸಂಖ್ಯೆ 664ರಲ್ಲಿ 1745 ಪುಸ್ತಕಗಳು ಇದ್ದು, ಇದರಲ್ಲಿ ಯಾವುದೇ ವ್ಯತ್ಯಾಸ ಇರುವುದಿಲ್ಲ. ಆದ್ದರಿಂದ ಈ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ. (ಅನುಬಂಧ–122ರಲ್ಲಿ ಲಗತ್ತಿಸಿದೆ) ಮುಂದಿನ ಲೆಕ್ಕಪರಿಶೋಧನೆ ವೇಳೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸುವಂತೆ ಸೂಚನೆ ನೀಡಲಾಗಿದೆ

ಆಕ್ಷೇಪಣೆಗಳು	ಉತ್ತರಗಳು

ಕ್ರ. ಸಂ.	ಪುಸ್ತಕದ ಹೆಸರು	ಅಂತಿಮ ಶಿಲ್ಕು 31.3.2014	ಪ್ರಾರಂಭಿಕ ಶಿಲ್ಕು 1.4.2014	ವ್ಯತ್ಯಾಸ	ವ್ಯತ್ಯಾಸದ ಮೊತ್ತ	ಒಟ್ಟು ವ್ಯತ್ಯಾಸದ ಮೊತ್ತ	ಷರಾ
1	ಬೆಡಗಿನ ಚಾಟಿಕ್	805	804	1	75	75	
2	1ನೇ ಬಿಎಸ್ಸಿ. ಇಂಗ್ಲೀಷ್	557	549	8	30	240	
3	ಯಕ್ಷ ಪ್ರಶ್ನೆ ಸಂಗ್ರಹ 1ನೇ ಬಿ.ಕಾಂ.ಸಂಸ್ಕೃತ	1006	946	60	55	3300	
4	ಕ್ಯಾಂಪಸ್ ಕವಿತೆಗಳು	258	264	6	–	–	
5	ತಮಿಳು ಪತ್ತಿರುಟ್ಟಿ	1169	1205	36	–	–	ಪ್ರಾರಂಭಿಕ ಶಿಲ್ಕು ಹೆಚ್ಚಿಗೆ ನಮೂದಿಸಿದ್ದು ಸ್ಪಷ್ಟೀಕರಣವನ್ನು ನೀಡಲು ಸೂಚಿಸಿದೆ.
6	4ನೇ ಬಿ.ಎಸ್ಸಿ. ಇಂಗ್ಲೀಷ್	2430	2493	63	–	–	
7	2ನೇ ಬಿ.ಎ/ಬಿ.ಎಸ್ಸಿ ಸಂಸ್ಕೃತ ಚಂಪೂ ರಾಮಾಯಣ	1545	1745	200	–	–	
			ಒಟ್ಟು ರೂ.			**3615.00**	

39. ಸಾದಿಲ್ವಾರು ವೆಚ್ಚದಲ್ಲಿ ಕಂಡು ಬಂದ ನ್ಯೂನತೆಗಳು.

ಮುದ್ರಣಾಲಯ ವಿಭಾಗದಲ್ಲಿ ಸಾದಿಲ್ವಾರು ವೆಚ್ಚದ ಕಡತ ಪರಿಶೀಲನೆಯಲ್ಲಿ ಈ ಕೆಳಕಂಡ ಖರೀದಿಗಳು 2014–15 ನೇ ಸಾಲಿನಲ್ಲಿ ಈಗಾಗಲೇ ವೆಚ್ಚವೆಂದು ತೋರಿಸಿದ್ದು, ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದ್ದು, ಅದೇ ಖರೀದಿಗಳನ್ನು 2015–16 ನೇ ಸಾಲಿನಲ್ಲಿಯೂ ತೋರಿಸಿರುವುದು ಕಂಡುಬಂದಿದ್ದು, ಎರಡೆರಡು ಬಾರಿ ವೆಚ್ಚದಡಿಯಲ್ಲಿ ತೋರಿಸಿದಂತಾಗುತ್ತದೆ. ಈ ಬಗ್ಗೆ ಸ್ಪಷ್ಟೀಕರಣ ನೀಡಿರುವುದಿಲ್ಲ. ಆದ್ದರಿಂದ ರೂ.4292.00 ಗಳನ್ನು ಸಂಬಂಧಪಟ್ಟವರಿಂದ ವಸೂಲಿಸಿ ವಿವಿ ನಿಧಿಗೆ ಜಮೆ ಮಾಡಲು ಸೂಚಿಸಿದೆ.

ಕ್ರ ಸಂ	ಬಿಲ್ಲಿನ ಸಂಖ್ಯೆ/ ದಿನಾಂಕ	ಕಂಪನಿಯ ವಿವರಗಳು	ಖರೀದಿಯ ವಿವರಗಳು	ಮೊಬಲಗು (ರೂ.ಗಳಲ್ಲಿ)
1	71204782/ 12.03.2015	ರಿಂಕೋ ಇಂಡಿಯಾ	ಗಾಜ್ನರ್ ಮಿಷಿನ್ ಪಂಪ್	364.00
2	105/ 27.03.2015	ಒನ್ ಇನ್ ಸರ್ವೀಸ್	ಕಟಿಂಗ್ ಮಿಷಿನ್	3664.00
3	17314/ 20.02.2015	ಮಾಲಿ ಪೇಪರ್ ಏಜೆನ್ಸಿ	ಪಾಸ್ಟ್ ಬೈಟಿಂಗ್	264.00
			ಒಟ್ಟು ರೂ.	**4292.00**

ಸಾದಿಲ್ವಾರು ವೆಚ್ಚಗಳಲ್ಲಿ, ದಾಸ್ತಾನು ಪರಿಶೀಲನೆ ಸಂದರ್ಭದಲ್ಲಿ ದಾಸ್ತಾನುವಿಗೆ ತೆಗೆದುಕೊಳ್ಳದೇ ಇರುವಂತಹ ಖರೀದಿಗಳನ್ನು ಪಟ್ಟಿಮಾಡಲಾಗಿದೆ. ಈ ಬಗ್ಗೆ ಸ್ಪಷ್ಟೀಕರಣ ನೀಡುವುದಿಲ್ಲವಾದ್ದರಿಂದ ರೂ.5332.00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳು ಕೆಳಕಂಡತಿದೆ.

ದಾಸ್ತಾನುವಿಗೆ ತೆಗೆದುಕೊಳ್ಳದೇ ಇರುವುದು.

ಕ್ರ. ಸಂ.	ವಿವರಗಳು	ಮೊಬಲಗು (ರೂ.ಗಳಲ್ಲಿ)
1	Mohan Enterprises 50th Annual – Convocation DBR No-55	2700.00
2	DBR No-70 PS Plate Brush & Scissor	422.00
3	DBR No-105 No-11605 dated:28.07.2015 Sri Balagi Hardware & Electrical	500.00
4	Kshithija Infotech DBR No-157	1710.00
	Total amount	**5332.00**

ಕಂಡಿಕೆ ಸಂಖ್ಯೆ 39ಕ್ಕೆ ಕಾಣಿಸಿರುವ ದಿನಬಳಕೆ ವಸ್ತುಗಳನ್ನು ಫೆಬ್ರವರಿ ಮತ್ತು ಮಾರ್ಚ್ ತಿಂಗಳಿನಲ್ಲಿ ಖರೀದಿಸಿದ್ದು, 2015–16ನೇ ಸಾಲಿನಲ್ಲಿ ವೆಚ್ಚವನ್ನು ಭರಿಸಲಾಗಿದೆ. 2015–16ನೇ ಸಾಲಿನಲ್ಲಿ ಖರೀದಿಸಿದ ವಸ್ತುಗಳಿಗೆ ಹಣ ಪಾವತಿಸಿದ್ದು ಎರಡು ಭಾರಿ ಪಾವತಿಯಾಗಿರುವುದಿಲ್ಲ. ಆದ್ದರಿಂದ ವಸೂಲಾತಿಗೆ ಸೂಚಿಸಿರುವ ಬಿಲ್ ಸಂಖ್ಯೆ : 71204782, 105, 17314 ಗಳ ಮೊತ್ತ ರೂ. 4,292/– ಗಳನ್ನು ಕೈ ಬಿಡಲು ಕೋರಲಾಗಿದೆ. ಬಿಲ್ ಪ್ರತಿಗಳನ್ನು ಲಗತ್ತಿಸಲಾಗಿದೆ **(ಅನುಬಂಧ–123)** (ಪು.ಸಂ.807). ಸಾದಿಲ್ವಾರು ವೆಚ್ಚಗಳಲ್ಲಿ, ದಾಸ್ತಾನು ಪರಿಶೀಲನೆಗೆ ತೆಗೆದುಕೊಳ್ಳಲಾಗಿದೆ. ಅದರ ಧೃಡೀಕರಿಸಿದ ನಕಲು ಪ್ರತಿಗಳನ್ನು ಲಗತ್ತಿಸಿದೆ(ಅನುಬಂಧ–123).

ಆಕ್ಷೇಪಣೆಗಳು	ಉತ್ತರಗಳು

40. ಅಂಕಪಟ್ಟಿ ಮುದ್ರಣದಲ್ಲಿ ನಿರ್ಲಕ್ಷ್ಯತೆಯಿಂದಾಗಿ ರದ್ದುಪಡಿಸಲಾದ 5386 ಅಂಕಪಟ್ಟಿಗಳ ಮೊತ್ತ ರೂ.10,341.00 (ವಸೂಲಾತಿ)

2015–16 ನೇ ಸಾಲಿನ **ಪರೀಕ್ಷಾ ವಿಭಾಗದ** ಲೆಕ್ಕಪರಿಶೋಧನೆಗೆ ಒದಗಿಸಲಾದ ಕಡತ ಪರಿಶೀಲನೆಯಲ್ಲಿ ಒದಗಿಸಿರುವ ಮಾಹಿತಿ ಪ್ರಕಾರ ರದ್ದುಪಡಿಸಿರುವ ಅಂಕಪಟ್ಟಿಗಳ ವಿವರ ಈ ರೀತಿ ಇರುತ್ತವೆ.

ಕ್ರ ಸಂ	ದಿನಾಂಕ	ರದ್ದುಪಡಿಸಿರುವ ಅಂಕಪಟ್ಟಿಗಳ ಸಂಖ್ಯೆ	ಕ್ರ ಸಂ	ದಿನಾಂಕ	ರದ್ದುಪಡಿಸಿರುವ ಅಂಕಪಟ್ಟಿಗಳ ಸಂಖ್ಯೆ
1	18.6.2015	2171	5	4.8.2015	340
2	26.6.2015	1011	6	27.9.2015	118
3	4.7.2015	200	7	16.10.2015	369
4	10.7.2015	650	8	9.2.2016	273
			9	26.3.2016	254
				ಒಟ್ಟು	**5386**

ಭೌತಿಕ ಪರಿಶೀಲನೆಗೆ ನೀಡಲಾದ ರದ್ದುಪಡಿಸಲಾದ ಅಂಕಪಟ್ಟಿಗಳ ವಿವರ ಈ ರೀತಿ ಇರುತ್ತದೆ.

Sl. No	Markscards issued to m/s attris tech b'lore		Total marks card issued	Error marks cards submitted by m/s Attris Tech to the university		Total Error marks cards receive
	Tall	wide		Tall	wide	
	6,86,000	1,60,000	8,46,000	886	644	1530

ಭೌತಿಕ ಪರಿಶೀಲನೆಗೆ ಸಲ್ಲಿಸಿರುವ ವಿವರಕ್ಕೂ, ಕಡತ ಪರಿಶೀಲನೆಯಲ್ಲಿ ಕಂಡುಬಂದ ವಿವರಕ್ಕೂ ವ್ಯತ್ಯಾಸವಿದ್ದು, (5386–1530=3856) ಉಳಿದ ರದ್ದು ಪಡಿಸಿರುವ ಅಂಕಪಟ್ಟಿಗಳ ಭೌತಿಕ ಪರಿಶೀಲನೆಗೆ ಒದಗಿಸಿರುವುದಿಲ್ಲ ಹಾಗೂ ರದ್ದುಪಡಿಸಿರುವ ಅಂಕಪಟ್ಟಿಗಳನ್ನು ಯಾವ ಕಾರಣಕ್ಕಾಗಿ ರದ್ದುಪಡಿಸಲಾಗಿದೆ ಅದರ ಬದಲಾಗಿ ಯಾವ ಅಂಕಪಟ್ಟಿ ಮುದ್ರಿಸಲಾಗಿದೆ ಎಂಬ ವಿವರವನ್ನು ನಿಗದಿತ ನಮೂನೆಯಲ್ಲಿ ಸಿದ್ಧಪಡಿಸಿ ದೃಢೀಕರಿಸಿ ಭೌತಿಕ ಪರಿಶೀಲನೆಗೆ ಸಲ್ಲಿಸಿರುವುದಿಲ್ಲ.

ಮುಂದುವರೆದು, ಸದರಿ ಸಂಸ್ಥೆಯವರು ವಿಶ್ವವಿದ್ಯಾಲಯದಿಂದ ಖಾಲಿ ಅಂಕಪಟ್ಟಿಗಳನ್ನು ಪಡೆದಿರುವ, ಮುದ್ರಿಸಿರುವ, ರದ್ದುಪಡಿಸಿರುವ, ಉಳಿದಿರುವ ಹಾಗೂ ಮುದ್ರಿಸಿರುವ ಅಂಕಪಟ್ಟಿ ಹಾಗೂ ಪದವಿ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ/ಕಾಲೇಜುಗಳಿಗೆ ವಿತರಿಸಿರುವ ವಿವರವನ್ನು ಹಾಗೂ ಅಂಕಪಟ್ಟಿ ಮುದ್ರಣದಲ್ಲಿ ಅವ್ಯವಹಾರವಾಗಿರುವುದಾಗಿ ಪರಿಗಣಿಸಬಹುದಾಗಿರುವ ಕುರಿತಾಗಿ ಸ್ಪಷ್ಟೀಕರಣ ಒದಗಿಸಲು ಕೋರಲಾಗಿದ್ದರೂ ಯಾವುದೇ ಅನುಸರಣೆಯನ್ನು ನೀಡಿರುವುದಿಲ್ಲ.

ರದ್ದುಪಡಿಸಿರುವ ಖಾಲಿ ಅಂಕಪಟ್ಟಿಗಳ ಖರೀದಿಯ ವೆಚ್ಚ (5386 x 1.92) ರೂ.10341.00 ಗಳನ್ನು ಮೆ॥ ಆಟ್ರಿಸ್

2015–16ನೇ ಸಾಲಿನಲ್ಲಿ ವಿಶ್ವವಿದ್ಯಾಲಯವು ಅಂಕಪಟ್ಟಿ ಮುದ್ರಣ ಕಾರ್ಯವನ್ನು ಗುತ್ತಿಗೆ ಆಧಾರದಲ್ಲಿ ಮೆ॥ ಆಟ್ರಿಸ್ ಟೆಕ್ನಾಲಜೀಸ್ ಪ್ರೈ. ಲಿ., ಬೆಂಗಳೂರು ರವರಿಗೆ ನೀಡಲಾಗಿದ್ದು ಸದರಿ ಕಂಪನಿಯವರು ಅಂಕಪಟ್ಟಿಗಳನ್ನು ಮುದ್ರಿಸುವಾಗ ಕೆಲವೊಂದು ಅಂಕಪಟ್ಟಿಗಳು ತಪ್ಪಾಗಿ ಮುದ್ರಿತವಾಗಿರುತ್ತವೆ ಹಾಗೂ ಅದರ ಬದಲಾಗಿ ಬೇರೊಂದು ಅಂಕಪಟ್ಟಿಯನ್ನು ಮುದ್ರಿಸಿರುತ್ತಾರೆ. ತಪ್ಪಾದ ಅಂಕಪಟ್ಟಿಗಳ ಬದಲಾಗಿ ಪರಿಷ್ಕೃತ ಅಂಕಪಟ್ಟಿಗಳನ್ನು ಪಡೆಯಲು ವಿದ್ಯಾರ್ಥಿಗಳು ಅರ್ಜಿಯನ್ನು ಸಲ್ಲಿಸಿದಾಗಲೆಲ್ಲಾ ಅಂಕಪಟ್ಟಿಯನ್ನು ಪರಿಶೀಲಿಸಿ ಸಿದ್ದಪಡಿಸಿ ನೀಡಿರುತ್ತಾರೆ.

ಈ ಕಾರಣದದಿಂದಾಗಿ ಪ್ರತ್ಯೇಕವಾಗಿ ಈ ಮಾಹಿತಿಯನ್ನು ಸಿದ್ದಪಡಿಸಿರುವುದಿಲ್ಲ. ಇದನ್ನು ಸಹ ಈ ಹಿಂದೆ ಮೌಖಿಕವಾಗಿ ತಿಳಿಸಲಾಗಿದೆ. ಕ್ರೋಡೀಕೃತ ತಪ್ಪಾಗಿರುವ ಅಂಕಪಟ್ಟಿಗಳ ಮಾಹಿತಿಯನ್ನು ಸದರಿ ಕಂಪನಿಯವರು ವಿಶ್ವವಿದ್ಯಾಲಯಕ್ಕೆ ಒದಗಿಸಿರುವುದಿಲ್ಲ ಹಾಗೂ ಸದರಿ ಕಂಪನಿಯವರು ಎಷ್ಟು ವಿವರ ಅವರಲ್ಲಿ ಲಭ್ಯವಿದೆಯೋ ಅಷ್ಟನ್ನು ಮಾತ್ರ ಒದಗಿಸಿರುತ್ತಾರೆ. ಸಲ್ಲಿಸಲಾಗಿದೆ. ಪರಿಷ್ಕೃತ ಅಂಕಪಟ್ಟಿಗಳ ಮುದ್ರಣದ ಬಗ್ಗೆ ವಿಶ್ವವಿದ್ಯಾಲಯವು ಈಗಾಗಲೇ ಮೆ॥ ಆಟ್ರಿಸ್ ಟೆಕ್ನಾಲಜೀಸ್ ಪ್ರೈ. ಲಿ., ಬೆಂಗಳೂರು ರವರಿಗೆ U.O.No EX.III/ SCAN/ PROCESS/ OVER PRINTING MC & DC 2017-18 dated: 28.09.2017 ರ ಮಂಜೂರಾತಿ ಆದೇಶದಲ್ಲಿ ರೂ. 10,341/–ಗಳನ್ನು ಮುರುಗಡೆಮಾಡಲಾಗಿದೆ.ವಿವರ ಲಗತ್ತಿಸಿದೆ. ಆದುದರಿಂದ ಸದರಿ ಆಕ್ಷೇಪಣೆಯ ಮೊತ್ತ ರೂ. 10,341/–ನ್ನು ಕೈಬಿಡಲು ಕೋರಲಾಗಿದೆ. (**ಮಂಜೂರಾತಿ ಆದೇಶದ ಪ್ರತಿಯನ್ನು ಲಗತ್ತಿಸಲಾಗಿದೆ.**) (ಅನುಬಂಧ–124) (ಪು.ಸಂ.819)

ಆಕ್ಷೇಪಣೆಗಳು	*ಉತ್ತರಗಳು*
ಟೆಕ್ ಇವರಿಂದ ವಸೂಲಾತಿಗೆ ಸೂಚಿಸಿದೆ ಹಾಗೂ ರದ್ದುಪಡಿಸಿದ ಅಂಕಪಟ್ಟಿಗಳ ಮುದ್ರಣದ ನಿರ್ಲಕ್ಷತೆಗೆ ದಂಡವನ್ನು ವಸೂಲಾತಿ ಮಾಡಲು ಸೂಚಿಸಿದೆ.	
41. ಪರೀಕ್ಷಾ ಮುಖ್ಯ ಸ್ಕ್ವಾಡ್ಸ್‌ಗಳು, ಫ್ಲೈಯಿಂಗ್ ಸ್ಕ್ವಾಡ್ಸ್‌ಗಳು ಪರೀಕ್ಷಾಕೇಂದ್ರಗಳಿಗೆ ಹೋಗಿಬಂದ ಬಾಡಿಗೆ ವಾಹನಕ್ಕೆ ಹೆಚ್ಚುವರಿಯಾಗಿ ಪಾವತಿಸಲಾದ ಮೊಬಲಗು ರೂ.1100.00 ವಸೂಲಾತಿ.	
ಕುಲಸಚಿವರು ಮೌಲ್ಯಮಾಪನ ವಿಭಾಗದಲ್ಲಿ ಜೂನ್/ಜುಲೈ 2015 ರಲ್ಲಿ ನಡೆದ ಯುಜಿ ಪರೀಕ್ಷೇಗಳ ಮುಖ್ಯ ಸ್ಕ್ವಾಡ್ಸ್/ಫ್ಲೈಯಿಂಗ್ ಸ್ಕ್ವಾಡ್ಸ್‌ಗಳು ಶ್ರೀ ಪಂಚಮುಖಿ ಟ್ರಾವಲ್ಸ್ ವಾಹನವನ್ನು ಬಳಸಿರುವ ಸಂಬಂಧ ವಾಹನದ ಮೀಟರ್ ಮೈಲೇಜ್ ಪ್ರಾರಂಭ & ಅಂತ್ಯ ಕಿ.ಮೀಗಳನ್ನು ದಿನದ ಸ್ಕ್ವಾಡ್ಸ್ ವರದಿಯಲ್ಲಿ ಬರೆಯಬೇಕಿದ್ದರೂ, ಕೆಲವು ಕಡೆ ಬರೆಯದೆ ಇರುವುದು, ಇಲ್ಲವೆ ಕೆಲವು ಕಡೆ ತಪ್ಪು ಬರೆದು ವಾಹನ ಮಾಲೀಕರ ಕ್ಲೈಂ ಬಿಲ್ಲು ನೋಡಿ ತಿದ್ದಿರುವುದು, ಇಲ್ಲವೇ ಇಂಕು ಬದಲಾಯಿಸಿ ಬರೆದಿರುವುದು, ಮತ್ತು ಅದಕ್ಕೆ ಸಂಬಂಧಪಟ್ಟವರ ದೃಢೀಕೃತ ಸಹಿಯಿಲ್ಲದೆಯಿರುವುದು, (ಅಟೆಸ್ಟೇಷನ್ ಮಾಡದಿರುವುದು), ಅದೇ ರೀತಿ ಇನ್ನೊಂದು ದಿನದ ವರದಿಯಲ್ಲಿ ಬರೆದಿರುವ ಪ್ರಾರಂಭ ಕಿ.ಮೀ 83680 ಅಂತ್ಯ 83721ಕಿಮೀ ಎಂದು ವರದಿ ಮಾಡಿದ್ದರೂ, ಕ್ಲೈಂ ಇನ್ವಾಯಿಸ್ ಬಿಲ್ಲಿನಲ್ಲಿ ಪ್ರಾರಂಭಿಕ ಮೈಲೇಜ್ 83580 ಎಂದುತಿದ್ದಿ 41 ಕಿ.ಮೀ ಬದಲಾಗಿ 141 ಕಿ ಮೀ ಮಾಡಿ ಹೆಚ್ಚಿಗೆ 100 ಕಿಮೀ ಗೆ ರೂ.11.00 ನಂತೆ ರೂ.1100.00 ಗಳನ್ನು ಹೆಚ್ಚಿಗೆ ಪಾವತಿಸಿರುವುದು, ಪರಿಶೀಲನೆಯಿಂದ ತಿಳಿದು ಬಂದಿದೆ. ಇದರಿಂದಾಗಿ ವಾಹನ ಮಾಲಿಕರು ಬಿಲ್ಲಿನಲ್ಲಿ ಹೆಚ್ಚಾಗಿ ಕ್ಲೈಂ ಮಾಡಿದ್ದರೂ ಅದನ್ನು ತಪ್ಪೋ? ಸರಿಯೋ ? ಎಂದು ಪರಿಶೀಲಿಸಿ ಪಾವತಿಸಲು ಸಾಧ್ಯವಾಗಿರುವುದಿಲ್ಲ ಹಾಗೂ ಸದರಿ ದಿನದ ವರದಿಯಲ್ಲಿ ಮೈಲೇಜ್ ತಿದ್ದುಪಡಿ ಬಗ್ಗೆ ವಿವರಣೆ ನೀಡಲು ಕೋರಲಾಗಿತ್ತು, ಆದರೆ ನೀಡಿರುವ ವಿವರಣೆ ಅಪೂರ್ಣವಾಗಿರುವ ಕಾರಣ ಮೈಲೇಜ್ ತಿದ್ದುಪಡಿಯಲ್ಲಿ ಹೆಚ್ಚು ಪಾವತಿಯಾದ ರೂ.1100.00 ಗಳನ್ನು ಸಂಬಂಧಪಟ್ಟವರಿಂದ ವಸೂಲಿ ಮಾಡಲು ಹಾಗೂ ಮುಂದಿನ ತಿದ್ದುಪಡಿಗಳಲ್ಲಿ (ದಿನವಹಿ ವರದಿಗಳಲ್ಲಿನ) ತಿದ್ದುಪಡಿ ಮಾಡಿದವರ ದೃಢೀಕೃತ ಸಹಿಗಳನ್ನು ಪಡೆಯಲು ಸೂಚಿಸಿದೆ.	ಸ್ಕ್ವಾಡ್ ಚೀಫ್‌ವರು ಕೆಲವು ಡಿಎಸ್‌ಆರ್‌ಗಳಲ್ಲಿ ಕೀ.ಮೀ. ತಿದ್ದುಪಡಿಮಾಡಿ ದೃಢೀಕರಿಸಿ ಸಹಿ ಮಾಡಿರುತ್ತಾರೆ. ದಿನಾಂಕ:06.07.2015 ರಂದು ALMS College, Don Bosco College, Surana College, East West College & Acharya B School ಒಟ್ಟು 5 ಕಾಲೇಜುಗಳನ್ನು ವಿಕ್ಷಿಸಲು ಸಮಯ ಬೆಳಗ್ಗೆ 9.00 ರಿಂದ 6.30 ಸಂಜೆಯವರೆಗೆ ಇಡೀ ಸ್ಕ್ವಾಡ್ ಕಾರ್ಯ ನಿರ್ವಹಿಸಲು ವಾಹನವನ್ನು ಉಪಯೋಗಿಸಿಕೊಂಡಿರುವ ಕಾರಣ ಇನ್‌ವಾಯ್ಸ್ ಬಿಲ್ಲಿನಲ್ಲಿ ನೀಡಿರುವ ಪ್ರಾರಂಭಿಕ ಕಿ.ಮೋ 83580 ಅಂತ್ಯೆ 1,174/– ಗಳನ್ನು ದಿನಾಂಕ:06.07.2015 ರಂದು ಮಂಜೂರು ಮಾಡಲಾಗಿದೆ. ಸ್ಕ್ವಾಡ್ ಚೀಫ್‌ವರು ತಪ್ಪಾಗಿ 83580 ರ ಬದಲಾಗಿ 83560 ಎಂದು ನಮೂದಿಸಿದ್ದು ನಂತರ ತಿದ್ದುಪಡಿಮಾಡಲಾಗಿದೆ. 5 ಕಾಲೇಜುಗಳಿಗೆ ಬೇಟಿ ನೀಡಿದ್ದು 141 ಕಿ.ಮೀ ಆಗಿರುತ್ತದೆ. ಸ್ಕ್ವಾಡ ಬಿಲ್ಲುಗಳಲ್ಲಿ ಆಗುವ ತಿದ್ದುಪಡಿಗಳನ್ನು ಸ್ಕ್ವಡ ಚೀಫ್‌ಗಳೇ ತಿದ್ದಿ ದೃಢೀಕರಿಸಿರುತ್ತಾರೆ. ನಂತರ ಇನ್‌ವಾಯ್ಸ್‌ನ್ನು ಪರಿಶೀಲಿಸಿ ಪಂಚಮುಖಿ ಟ್ರಾವಲ್ಸ್‌ರವರು ಸಲ್ಲಿಸಿರುವ ಇನ್‌ವಾಯ್ಸ್‌ನ ಮೊತ್ತದಲ್ಲಿ ಕಡಿತಗೊಳಿಸಿ ಅನುಮೋದನೆಯಾಗಿರುವ ದರದಲ್ಲಿ ಮೊತ್ತವನ್ನು ಮಂಜೂರು ಮಾಡಲಾಗಿದೆ. ಆದುದರಿಂದ ಈ ಆಕ್ಷೇಪಣೆಯ ಮೊತ್ತವನ್ನು ಕೈ ಬಿಡಲು ಕೋರಲಾಗಿದೆ.
ವಿಶ್ವವಿದ್ಯಾಲಯದ ನಿಧಿಗೆ ಜಮೆಯಾಗದಿರುವ ಸ್ವೀಕೃತಿಗಳು/ವಿಳಂಬ ಜಮೆ	
42. ಎನ್.ಎಸ್.ಎಸ್ ಭವನದ ಬಾಡಿಗೆಯ ಬಗ್ಗೆ:–	
ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2014–16 ಸಾಲಿನ ಎನ್.ಎಸ್.ಎಸ್ ಭವನದ ಬಾಡಿಗೆ ವಹಿಗೆ ಸಂಬಂಧಿಸಿದಂತೆ ಪರಿಶೀಲಿಸಲಾಗಿದ್ದು, ಈ ಸಂಸ್ಥೆ ಶಿಬಿರಾರ್ಥಿಗಳಿಂದ ಕಡಿಮೆ ವಸೂಲಿಸಿದ್ದು,	ಎನ್.ಎಸ್.ಎಸ್. ಭವನ ನಿರ್ವಹಣೆ ಮೊತ್ತ ಸಂಗ್ರಹಿಸುವ ಸಂಬಂದ ಸಪ್ತಮಿ ಟ್ರಸ್ಟ್ ಇವರು ಕಾಲೇಜಿನ ಶಿಕ್ಷಕರಿಗೆ ಕಾಲೇಜು ಶಿಕ್ಷಣ ಇಲಾಖೆ, ಸಪ್ತಮಿ ಟ್ರಸ್ಟ ಮತ್ತು

ಆಕ್ಷೇಪಣೆಗಳು	ಉತ್ತರಗಳು
ಸಂಬಂಧಿಸಿದವರಿಂದ ವಸೂಲಿಸಿ ಸಂಬಂಧಿಸಿದ ಖಾತೆಗೆ ಜಮೆ ಮಾಡಲು ಸೂಚಿಸಿದೆ. ಈ ಕೆಳಕಂಡ ಮೊತ್ತ ರೂ. 78,000.00 ಗಳನ್ನು ವಸೂಲಿಸಲು ಸೂಚಿಸಿದೆ.	ಎನ್.ಎಸ್.ಎಸ್, ಬೆಂ.ವಿ.ಬೆಂ. ಈ ಮೂರು ಸಂಸ್ಥೆಗಳ ಸಹಬಾಗಿತ್ವದಲ್ಲಿ ಶಿಕ್ಷಕರಿಗೆ ತೆರಬೇತಿಯನ್ನು ನೀಡಲು ಈ ಕಾರ್ಯಗಾರಗಳನ್ನು ಹಮ್ಮಿಕೊಳ್ಳಲಾಗಿದೆ. ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯ ಬಾಗವಾದ ಸಾರ್ವಜನಿಕ ಶಿಕ್ಷಣ ಇಲಾಖೆಯ ಮತ್ತು ನಮ್ಮ ವಿಭಾಗದ ಸಹಯೋಗದೊಂದಿಗೆ ಈ ತರಬೇತಿ ಕಾರ್ಯಗಳನ್ನು ಹಮ್ಮಿಕೊಂಡಿರುತ್ತಾರೆ. ಈ ಸಂಬಂದ ಸಹಯೋಗ ದೊಂದಿಗೆ ಕಾರ್ಯಕ್ರಮ ಆಯೋಜನೆ ಮಾಡಿದಲ್ಲಿ ಶೇ. 50% ರಿಯಾಯಿತಿ ನೀಡಲು ಅವಕಾಶ ಇರುತ್ತದೆ. ಅಗಾಗಿ ಕ್ರ.ಸಂ 3,4,5 ರಲ್ಲಿ ಇರುವ ಮೊತ್ತ ರೂ. 35,800 ಪಡೆಯಬೇಕು ಎಂದು ಲೆಕ್ಕಪರಿಶೋಧನೆಯಲ್ಲಿ ತಿಳಿಸಲಾಗಿದೆ. ಆದರೆ ಎನ್.ಎಸ್.ಎಸ್. ಭವನದಲ್ಲಿ ಸಂಸ್ಥೆಗಳು ನಮ್ಮ ಸಹಯೋಗದೊಂದಿಗೆ ಕಾರ್ಯಕ್ರಮ ಆಯೋಜನೆ ಮಾಡಿದರೆ ಅದಕ್ಕೆ ನಿಯಮಾವಳಿಯಂತೆ ಶೇ.50% ರಿಯಾಯಿತಿಯನ್ನು ನಿಯಮಾದಡಿ ನೀಡಲಾಗಿದ್ದು, ರೂ. 23,800/–ರಂತೆ ನಿರ್ವಹಣಾ ಮೊತ್ತ ಸಂಗ್ರಹಿಸಲಾಗಿದೆ. ಅದ್ದರಿಂದ ಸದರಿ ಮೊತ್ತವನ್ನು ವಸೂಲಾತಿಯಿಂದ ಕೈಬಿಡಲು ಕೋರಲಾಗಿದೆ. ಇನ್ನು ಕ್ರ.ಸ. 01ರಲ್ಲಿ ದಿನಾಂಕ 19.08.2014ರ ಮಾನ್ಯ ಕುಲಪತಿಗಳ ಅನುಮೋದನೆಯಂತೆ ನಿರ್ವಹಣೆ ಮೊತ್ತವನ್ನು ಬಿಟ್ಟು ಕೇವಲ ವಿದ್ಯುತ್ ಮತ್ತು ಸೇವಾ ಶುಲ್ಕ ಒಟ್ಟು ರೂ.11,800/–(ಈ ಎರಡು ಮೊತ್ತಗಳನ್ನು ಮಾತ್ರ ಸಂಗ್ರಹಿಸಲಾಗಿದೆ) ಸ್ವೀಕರಿಸಲಾಗಿದೆ. ಮತ್ತು ಕ್ರ.ಸಂ.02ರಲ್ಲಿ ಮಾನ್ಯ ಕುಲಪತಿಗಳ ಅನುಮೋದನೆಯಂತೆ ಸಾರ್ವಜನಿಕ ಶಿಕ್ಷಣ ಸಂಸ್ಥೆಯ ಸಹಯೋಗ ಮತ್ತು ನಮ್ಮ ಸಹಯೋಗದೊಂದಿಗೆ ಕಾರ್ಯಕ್ರಮ ಇರುವ ಕಾರಣ ನಿರ್ವಹಣಾ ಮೊತ್ತದಲ್ಲಿ ಮತ್ತೆ ಶೇ25% ರಿಯಾಯಿತಿಯನ್ನು ನೀಡಿದ್ದರಿಂದ ರಿಯಾಯಿತಿಯನ್ನು ನೀಡಿ ನಿರ್ವಹಣಾ ಮೊತ್ತ ರೂ.17,800/–ನ್ನು ಸಂಗ್ರಹಿಸಲಾಗಿದೆ. ಈ ಎಲ್ಲ ಅಂಶಗಳನ್ನು ನೋಡಿದಾಗ ಇದು ಸರ್ಕಾರದ ಕಾರ್ಯಕ್ರಮದ ಭಾಗವಾದ್ದರಿಂದ ಸಂಪೂರ್ಣ ಉಚಿತವಾಗಿ ನೀಡುವಂತೆ ಕೋರಿತ್ತಾರೆ. ಆದರೆ ಭವನದ ನಿರ್ವಹಣೆ ದೃಷ್ಟಿಯಿಂದ ರಿಯಾಯಿತಿಯನ್ನು ನೀಡಲಾಗಿದೆ ಅದ್ದರಿಂದ ಈ ಎಲ್ಲ ಅಂಶಗಳನ್ನು ಪರಿಗಣಿಸಿ ವಸೂಲಾತಿಯನ್ನು ಕೈಬಿಡಲು ಕೋರಲಾಗಿದೆ. **(ಅನುಬಂಧ–125)** (ಪು.ಸಂ.819)

ಕ್ರ. ಸಂ.	ಬಾಡಿಗೆ ಪಡೆದ ಸಂಸ್ಥೆಯ ಹೆಸರು	ಭವನದ ಪಡೆದ ದಿನಾಂಕ	ಅವಧಿ ಮತ್ತು ಬಾಡಿಗೆ ಪಡೆದ ವಿವರ	ಭವನಕ್ಕೆ ಬಾಡಿಗೆ ಬರಬೇಕಾದ ಮೊತ್ತ	ಬಾಡಿಗೆ ಸಂದಾಯ ಮಾಡಿದ ಮೊತ್ತ	ವ್ಯತ್ಯಾಸ	ಉತ್ತರ
1	ಸಪ್ತಮಿ ಟ್ರಸ್ಟ, ಬೆಂಗಳೂರು	21.08.2014 ರಿಂದ 29.06.2014	4 ದಿನ ಸಂಪೂರ್ಣ ಭವನ	35,800.00	11,800.00	24,000.00	ವಿದ್ಯುತ್ ಮತ್ತು ಸೇವಾ ಶುಲ್ಕವನ್ನು ಮಾತ್ರ ಸಂಗ್ರಹಿಸಲಾಗಿದೆ.
2		21.08.2014 ರಿಂದ 24.08.2014	4 ದಿನ ಸಂಪೂರ್ಣ ಭವನ	35,800.00	17,800.00	18,000.00	ಶೇ.25 % ರಿಯಾಯಿತಿ ನೀಡಲಾಗಿದೆ.

ಆಕ್ಷೇಪಣೆಗಳು					ಉತ್ತರಗಳು		
3		29.06.2015 ರಿಂದ 02.07.2015	4 ದಿನ ಸಂಪೂರ್ಣ ಭವನ	35,800.00	23,800.00	12,000.00	ನಿಯಮಾವಳಿಯಂತೆ ಶೇ.50% ರಿಯಾಯಿತಿ ನೀಡಲಾಗಿದೆ.
4		04.07.2015 ರಿಂದ 07.07.2015	4 ದಿನ ಸಂಪೂರ್ಣ ಭವನ	35,800.00	23,800.00	12,000.00	
5		27.11.2015 ರಿಂದ 25.11.2015	4 ದಿನ ಸಂಪೂರ್ಣ ಭವನ	35,800.00	23,800.00	12,000.00	
					ಒಟ್ಟು ಮೊತ್ತ	**78,000.00**	

43. ವಿಶ್ವವಿದ್ಯಾಲಯದ ಆವರಣ ಹಾಗು ಕ್ಯಾಂಪಸ್ ಬಿಲ್ಡಿಂಗ್ ಆವರಣದಲ್ಲಿನ ಭೂಮಿ ಮತ್ತು ಕಟ್ಟಡಗಳನ್ನು ಭೋಗ್ಯದ ಆಧಾರದ ಮೇಲೆ ನೀಡಿರುವುದಕ್ಕೆ ಸಂಬಂಧಿಸಿದಂತೆ ರಾಜಸ್ವ ವಸೂಲಾತಿಯ ಮೊತ್ತ ರೂ. (510000.00+54811.00) =5,64,811.00 (ವಸೂಲಾತಿ) (ಕುಲಸಚಿವರು ಆಡಳಿತ ವಿಭಾಗ)

1. ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ಹಾಗೂ ಸಿಟಿ ಕ್ಯಾಂಪಸ್ ಆವರಣದಲ್ಲಿ ಭೂಮಿ ಮತ್ತು ಕಟ್ಟಡಗಳನ್ನು ಭೋಗ್ಯದ ಆಧಾರದ ಮೇಲೆ ವಹಿಸಿರುವುದಕ್ಕೆ ಸಂಬಂಧಪಟ್ಟ ಕಡತಗಳನ್ನು ಪರಿಶೀಲಿಸಲಾಗಿ ಕೆಲವು ಶೈಕ್ಷಣಿಕ ಸಂಸ್ಥೆಗಳಿಗೆ ಹಾಗೂ ಕೆಲವು ಇಲಾಖೆಗಳಿಗೆ ಭೋಗ್ಯದ ಆಧಾರದ ಮೇಲೆ ಭೂಮಿಯನ್ನು/ಕಟ್ಟಡವನ್ನು ವಹಿಸಿದ್ದು, ಈ ಲೀಸ್ ದಾಖಲೆಗಳು ಮುದ್ರಾಂಕ ಮತ್ತು ನೋಂದಣಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟಿರುವುದಿಲ್ಲ. ಇದರಿಂದಾಗಿ, ಸರ್ಕಾರಕ್ಕೆ ಸಂದಾಯವಾಗಬೇಕಾದ ಮುದ್ರಾಂಕ ಹಾಗು ನೋಂದಣಿ ಶುಲ್ಕ ಸಂದಾಯವಾಗಿರುವುದಿಲ್ಲ.

ಮೌಲಾನ ಆಜಾದ್ ನ್ಯಾಷನಲ್ ಉರ್ದು ಯುನಿವರ್ಸಿಟಿಗೆ ರಸ್ತೆ Maintainence Chargesಗೆ 1 ವರ್ಷಕ್ಕೆ 30,000.00 ರೂ ನಂತೆ 1999ರಿಂದ 2017 ರವರೆಗೆ ರೂ.5,10,000.00 ಗಳನ್ನು ನೀಡಲು ದಿನಾಂಕ:05.07.2017 ರಂದು ಪತ್ರ ಬರೆಯಲಾಗಿದೆ. ISEರವರು ದಿನಾಂಕ: 16.04.2016ರಲ್ಲಿ ವರ್ಷಕ್ಕೆ ರೂ. 5,000ರ ದಂತೆ ಎಕರೆಗೆ (1,91,050.00) ಪಾವತಿಸಿರುತ್ತಾರೆ. ಮೌಲಾನ ಆಜಾದ್ ನ್ಯಾಷನಲ್ ಉರ್ದು ಯುನಿವರ್ಸಿಟಿರವರು ದಿನಾಂಕ: 28.12.2016ರಂದು ಬಾಕಿ 3,799.00 ರೂಗಳನ್ನು ಕಟ್ಟಿರುತ್ತಾರೆ. ಆದ್ದರಿಂದ ವಸೂಲಾತಿ ಮೊತ್ತ (5,10,000 + 43,961)= 5,53,961.00 ರೂಗಳನ್ನು ಪಾವತಿಸಲು ಪತ್ರ ಬರೆಯಲಾಗಿದೆ.

ಕ್ರ.ಸಂ	ಸಂಸ್ಥೆಯ ಹೆಸರು	ಲೀಸ್ ನೀಡಲಾದ ಭೂಮಿಯ ಪರಿಮಾಣ ವಿವರ	ಲೀಸ್ ದಿನಾಂಕ	ಅವಧಿ (ವರ್ಷ)	ಷರಾ
1	Regional Institute of English (NIS)	81.20	24.12.2000	30	ಲೀಸ್‌ಡೀಡ್ ನೋಂದಾವಣೆ ಆಗಿರುವುದಿಲ್ಲ.
2	Institute for Social & Economics Change (ISEC)	38.21	11.3.1974	99	ಲೀಸ್‌ಡೀಡ್ ನೋಂದಾವಣೆ ಆಗಿರುವುದಿಲ್ಲ.
3	National Law School of Indian university (NLSIU)	18.00	2.11.1984	30	ಲೀಸ್‌ನ ಅವಧಿ ಮುಕ್ತಾಯಗೊಂಡಿರುತ್ತದೆ.
	National Law school of Indian University (NLSIU)	5.00	17.11.2005	30	ಲೀಸ್ ಡೀಡ್ ನೋಂದಾವಣೆ ಆಗಿರುವುದಿಲ್ಲ.
4	Dunavantari vana Forest Department	8.00	19.11.1997	30	ಲೀಸ್ ಡೀಡ್ ನೋಂದಾವಣೆ ಆಗಿರುವುದಿಲ್ಲ.
5	Telecom Department (DOT)	10.000 (ಅಡಿ)	15.6.1999	30	ಲೀಸ್ ಡೀಡ್ ನೋಂದಾವಣೆ ಆಗಿರುವುದಿಲ್ಲ.
6	Kuvempu Sathamanastava Bhavana	2.00	28.1.2005	30	ಲೀಸ್ ಡೀಡ್ ನೋಂದಾವಣೆ ಆಗಿರುವುದಿಲ್ಲ.
7	PG, OBC Boy Hostel	1.15	20.11.2001	30	ಲೀಸ್ ಡೀಡ್ ನೋಂದಾವಣೆ ಆಗಿರುವುದಿಲ್ಲ.

ಈ ಮೇಲಿನ ಪ್ರಕರಣಗಳನ್ನು ಹೊರತು ಪಡಿಸಿ ಉಳಿದಂತೆ ಬೇರೆ ಶೈಕ್ಷಣಿಕ ಸಂಸ್ಥೆಗಳಿಗೆ ಹಾಗೂ ಇತರೆ ಸಂಸ್ಥೆಗಳಿಗೆ ಭೋಗ್ಯದ ಆಧಾರದ ಮೇಲೆ ನೀಡಿರುವ ಭೂಮಿಯು ಮುದ್ರಾಂಕ ಮತ್ತು ನೋಂದಣಿ ಇಲಾಖೆಯಲ್ಲಿ ನೋಂದಾವಣೆ ಆಗಿದ್ದು ಮೇಲೆ ತಿಳಿಸಿದ 7 ಪ್ರಕರಣಗಳಲ್ಲಿ ನೋಂದಾವಣೆ ನಿಯಮಗಳನ್ನು ಪಾಲಿಸಿರುವುದಿಲ್ಲ. ಇದರಿಂದಾಗಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾಗಿರುತ್ತದೆ. **<u>ವಿಶ್ವವಿದ್ಯಾಲಯವು ತನ್ನ ಅಧೀನದಲ್ಲಿರುವ ಭೂಮಿಯನ್ನು</u>**

1. ಬೆಂಗಳೂರು ವಿಶ್ವವಿದ್ಯಾಲಯದ ಸಿಟಿ ಕ್ಯಾಂಪಸ್ ಆವರಣದಲ್ಲಿ ಇರುವ ಭೂಮಿ ಹಾಗೂ ಕಟ್ಟಡಗಳು ಸರ್ವೆ ರೆಕಾರ್ಡುಗಳಲ್ಲಿ ಹಾಗೂ ಬಿಬಿಎಂಪಿಯ ಕಡತಗಳಲ್ಲಿ ಮಾಲಿಕರು ಸರ್ಕಾರ ಎಂದು ನಮೂದಿಸಲಾಗಿದೆ. ಸರ್ಕಾರ ಇವುಗಳನ್ನು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಕೊಟ್ಟಿರುವ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ, ಕಾರಣ ಸೆಂಟ್ರಲ್ ಕಾಲೇಜಿನಲ್ಲಿ ಇರುವ ಲೀಸ್‌ಗೆ ಕೊಟ್ಟಿರುವ ಭೂಮಿ ಹಾಗೂ ಕಟ್ಟಡಗಳನ್ನು ನೊಂದಾವಣೆ ಮಾಡಿಸಿರುವುದಿಲ್ಲ.
ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ

ಆಕ್ಷೇಪಣೆಗಳು	ಉತ್ತರಗಳು
ಇತರೆ ಸಂಸ್ಥೆಗಳಿಗೆ ಭೋಗ್ಯದ ಆಧಾರದ ಮೇಲೆ ನೀಡಲು ಇರುವ ನಿಯಮಾವಳಿಗಳೇನು? ಎಂಬ ಬಗ್ಗೆ ವಿವರಣೆಯನ್ನು ಕೋರಿದ್ದು, ನೀಡಿರುವ ವಿವರಣೆಯು ಸಮರ್ಪಕವಾಗಿರುವುದಿಲ್ಲ. ಆದ್ದರಿಂದ ಈ ಮೇಲಿನ 7 ಶೈಕ್ಷಣಿಕ ಸಂಸ್ಥೆಗಳ ಭೋಗ್ಯದ ಕರಾರು ಪತ್ರವನ್ನು ನೋಂದಣಿ ಮಾಡಿಕೊಳ್ಳಲು ಸೂಚಿಸಿದೆ. 1. ಬೆಂ.ವಿ.ವಿ. ಸಿಟಿ ಕ್ಯಾಂಪಸ್ ಆವರಣದಲ್ಲಿ ಕೆಲವು ಶೈಕ್ಷಣಿಕ ಸಂಸ್ಥೆಗಳಿಗೆ ಹಾಗೂ ಇತರೆ ಸಂಸ್ಥೆಗಳಿಗೆ ಭೋಗ್ಯದ ಆಧಾರದ ಮೇಲೆ ಭೂಮಿ/ಕಟ್ಟಡವನ್ನು ನೀಡಿದ್ದು, ಇಲ್ಲಿಯೂ ಸಹ ಲೀಸ್ ಡೀಡ್‌ಗಳು ನೋಂದಣಿ ಆಗಿರುವುದಿಲ್ಲ. 2. ಮೌಲಾನಾ ಅಜಾದ ನ್ಯಾಷನಲ್ ಉರ್ದು ಯುನಿವರ್ಸಿಟಿ 2.00 ಎಕರೆ ಜಾಗವನ್ನು ಭೋಗ್ಯದ ಆಧಾರದ ಮೇಲೆ ದಿನಾಂಕ: 4.3.1999 ರಲ್ಲಿ ನೀಡಲಾಗಿದ್ದು ಲೀಸ್ ಡೀಡ್ ನೋಂದಣಿ ಆಗಿರುತ್ತದೆ. ಲೀಸ್ ಡೀಡ್‌ನ ಕಂಡಿಕೆ 13(iii) ರ ಅನ್ವಯ ಈ ಸಂಸ್ಥೆಯವರು ಶೈಕ್ಷಣಿಕ ಸಂಸ್ಥೆಯು ಆರಂಭವಾದ ವರ್ಷದಿಂದ ಪ್ರತಿ ವರ್ಷ ರೂ.30000.00 ಮೊತ್ತವನ್ನು ರಸ್ತೆಗಳ ನಿರ್ವಹಣಾ ವೆಚ್ಚವೆಂದು ಪಾವತಿಸಬೇಕಾಗಿರುತ್ತದೆ. ಈ ಬಗ್ಗೆ ಸದರಿ ಶಿಕ್ಷಣ ಸಂಸ್ಥೆ ಯಾವ ವರ್ಷದಿಂದ ತನ್ನ ಸಂಸ್ಥೆಯನ್ನು ಆರಂಭಿಸಿದೆಯೋ ಆ ವರ್ಷದಿಂದ ನಿರ್ವಹಣಾ ವೆಚ್ಚ ಪಡೆಯಬೇಕಾಗಿದ್ದು, 1999–2000 ರಿಂದ 2015–16 ನೇ ಸಾಲಿನವರೆಗಿನ (17 ವರ್ಷ) ವರ್ಷಗಳ ಒಟ್ಟು ಮೊತ್ತ ರೂ.(17x30000/–) = 5,10,000.00 ಗಳ ಮೊತ್ತವನ್ನು ಸಂಬಂಧಪಟ್ಟ ಸಂಸ್ಥೆಯಿಂದ ವಸೂಲಿ ಮಾಡಲು ಸೂಚಿಸಿದೆ. 3. ದಿನಾಂಕ 31.03.2016 ರವರೆಗಿನ ಅಂತ್ಯದವರೆವಿಗೆ ಭೂಮಿ/ಕಟ್ಟಡಗಳಿಂದ ವಸೂಲಾಗಬೇಕಾದ ಮೊತ್ತ ಗುತ್ತಿಗೆ ಮೊತ್ತ ರೂ.54,811.00 ಗಳನ್ನು ವಸೂಲಾತಿಗಾಗಿ ಸೂಚಿಸಿದೆ. ವಿವರಗಳನ್ನು **ಅನುಬಂಧ–23** ರಲ್ಲಿ ಲಗತ್ತಿಸಿದೆ.	ಇರುವ ಸಂಸ್ಥೆಗಳಿಗೆ ಲೀಸ್ ಮೇಲೆ ನೀಡಿರುವ ವಿವರಗಳನ್ನು ಪುಟ 2ರಲ್ಲಿ ನಮೂದಿಸಲಾಗಿದೆ. 1. **Regional Institute of English**ರವರಿಗೆ ದಿನಾಂಕ: 15.10.2018ರಂದು ಲೀಸ್ ಡೀಡ್ ನೊಂದಾಣಿ ಮಾಡಿಸಲು ಪತ್ರ ಬರೆಯಲಾಗಿದೆ. 2. **Institute for Social Economic Change** Lease Agreement ಬಗ್ಗೆ ಸರ್ಕಾರದಿಂದ 30 ವರ್ಷ ನೀಡಲು ಆದೇಶ ಬಂದಿದ್ದು, ಲೀಸ್ ಅಗ್ರಿಮೆಂಟ್ ಮಾಡಿಸಿ ನೊಂದಾವಣಿ ಮಾಡಿಸಲು ದಿನಾಂಕ: 15.03.2018ರಂದು ಪತ್ರ ಬರೆಯಲಾಗಿದೆ. 3. **National Law School of Indian University**ಗೆ ಲೀಸ್ ಅಗ್ರಿಮೆಂಟ್ ನೊಂದಾಣಿ ಮಾಡಿಸಲು ದಿನಾಂಕ: 12.03.2018ರಂದು ಪತ್ರ ಸಂಖ್ಯೆ ದಿನಾಂಕದಲ್ಲಿ ಬರೆಯಲಾಗಿದೆ (ಪ್ರತಿ ಲಗತ್ತಿಸಿದೆ). **National Law School of Indian University**ಗೆ 5 ಎಕರೆ ನೀಡಿರುವ ಲೀಸ್ ಡೀಡ್ ದಿನಾಂಕ: 17.11.2005ದಂದು ನೊಂದಾವಣಿ ಆಗಿದ್ದು, ಇದರ ಪ್ರತಿಯನ್ನು ಲೆಕ್ಕಪರಿಶೋಧಕರಿಗೆ ನೀಡಲಾಗಿತ್ತು (ಮತ್ತೊಮ್ಮೆ ಪ್ರತಿಯನ್ನು ಲಗತ್ತಿಸಿದೆ). 4. **ಧನ್ವಂತರಿ ವನ**ಕ್ಕೆ ನೀಡಿರುವ 8 ಎಕರೆ ಜಮೀನಿನ ಬಾಬ್ತು ಲೀಸ್ ಅಗ್ರಿಮೆಂಟ್‌ನ್ನು ನೊಂದಾಣಿ ಮಾಡಿಸಲು ದಿನಾಂಕ: 05.07.2017ರಂದು ಪತ್ರ ಬರೆಯಲಾಗಿದೆ (ಪ್ರತಿ ಲಗತ್ತಿಸಿದೆ). 5. **ಟೆಲಿಕಾಂ** ಲೀಸ್ ಅಗ್ರಿಮೆಂಟ್‌ನ್ನು ನೋಂದಣಿ ಮಾಡಿಸಿರುತ್ತಾರೆ. (ಪ್ರತಿ ಲಗತ್ತಿಸಿದೆ) **(ಅನುಬಂಧ–126).** 6. **ಕುವೆಂಪು ಶತಮಾನೋತ್ಸವ ಭವನ** ಲೀಸ್ ಅಗ್ರಿಮೆಂಟ್‌ನ್ನು ನೊಂದಾಣಿ ಮಾಡಿಸಲು ದಿನಾಂಕ: 05.07.2017ರಂದು ಪತ್ರ ಬರೆಯಲಾಗಿದೆ. 7. **PG OBC BOYS HOSTEL**ಗೆ ಲೀಸ್ ಅಗ್ರಿಮೆಂಟ್‌ನ್ನು ನೊಂದಾಣಿ ಮಾಡಿಸಲು ದಿನಾಂಕ: 05.07.2017 ರಂದು ಪತ್ರ ಬರೆಯಲಾಗಿದೆ. ಬೆಂಗಳೂರು ವಿಶ್ವವಿದ್ಯಾಲಯದ ಜಮೀನನ್ನು ಲೀಸ್ ಆಧಾರದ ಮೇಲೆ ನೀಡಲು ಯಾವುದೇ ನಿಯಮ ಅಭಿವೃದ್ಧಿ ವಿಭಾಗದಲ್ಲಿ ಇರುವುದಿಲ್ಲ. ಆದ್ದರಿಂದ ಪ್ರತಿ ಪ್ರಕರಣವನ್ನು ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರ ಓಪ್ಪಿಗೆಗೆ ಲೀಸ್ ಅಗ್ರಿಮೆಂಟ್‌ನ್ನು ಕಳುಹಿಸಿ ಓಪ್ಪಿಗೆ ಪಡೆದ ನಂತರ ಲೀಸ್ ದಾರರಿಗೆ ಸಹಿಗಾಗಿ ನೀಡಲಾಗುತ್ತದೆ. ಬೆಂಗಳೂರು ವಿಶ್ವವಿದ್ಯಾಲಯದ ಸಿಟಿ ಕ್ಯಾಂಪಸ್ ಆವರಣದಲ್ಲಿ ಇರುವ ಭೂಮಿ ಹಾಗೂ ಕಟ್ಟಡಗಳು ಸರ್ವೆ ರೆಕಾರ್ಡುಗಳಲ್ಲಿ ಹಾಗೂ ಬಿಬಿಎಂಪಿಯ ಕಡತಗಳಲ್ಲಿ ಮಾಲಿಕರು ಸರ್ಕಾರ ಎಂದು ನಮೂದಿಸಲಾಗಿದೆ. ಆದ್ದರಿಂದ ಬೆಂಗಳೂರು ವಿಶ್ವವಿದ್ಯಾಲಯವು ಲೀಸ್ ಅಗ್ರಿಮೆಂಟ್‌ನ್ನು ರಿಜಿಸ್ಟರ್ ಮಾಡಿಸಲಾಗಿರುವುದಿಲ್ಲ. ದಿನಾಂಕ: 11.01.2017ರಂದು ರಸ್ತೆ Maintainence Chargesಗೆ 1999ರಿಂದ 2016ರವರೆಗೆ ವರ್ಷಕ್ಕೆ ರೂ. 30,000.00 ರಂತೆ ನೀಡಲು ಮೌಲಾನ ಆಜಾದ್ ನ್ಯಾಷನಲ್ ಉರ್ದು ಯುನಿವರ್ಸಿಟಿಗೆ ದಿನಾಂಕ: 05.07.2017ರಂದು ಪತ್ರ ಬರೆಯಲಾಗಿದೆ.

ಆಕ್ಷೇಪಣೆಗಳು	ಉತ್ತರಗಳು

31.03.2016ರವರೆಗಿನ ಅಂತ್ಯದವರೆಗೆ ಭೂಮಿ ಹಾಗೂ ಕಟ್ಟಡಗಳಿಂದ ವಸೂಲಾಗಬೇಕಾದ ಮೊತ್ತ 2,38,810.00 ಇದ್ದು. ಈಗಾಗಲೇ 1,94,849.00 ರೂಗಳು ಪಾವತಿ ಆಗಿದ್ದು. ಉಳಿಕೆ 43,961.00 ರೂಗಳು ಬಾಕಿ ಬರಬೇಕಾಗಿರುತ್ತದೆ. ಇದರ ಬಗ್ಗೆ ಪತ್ರವನ್ನು ಸಂಬಂಧಿಸಿದ ಸಂಸ್ಥೆಗಳಿಗೆ ಬಾಕಿ ಪಾವತಿಸಲು ದಿನಾಂಕ: 27.07.2018 ಪತ್ರ ಬರೆಯಲಾಗಿತ್ತು (ಪ್ರತಿ ಲಗತ್ತಿಸಿದೆ). ಅದರಂತೆ ಕೆಲ ಸಂಸ್ಥೆಗಳು ಬರಬೇಕಿದ್ದ ಬಾಕಿ ಬಾಡಿಗೆ ಮೊತ್ತವನ್ನು ಪಾವತಿಸಿರುತ್ತಾರೆ (ಸಂಸ್ಥೆಗಳು ಕಟ್ಟಿರುವ ರಶೀದಿಗಳ ಪ್ರತಿಯನ್ನು ಮತ್ತು 'Daily Collection Listing'ಲಗತ್ತಿಸಿದೆ). ಕೆಳಕಂಡ ವಿವರದಂತೆ ರೂ. 15,977=00ಗಳು ವಸೂಲಾತಿಯಾಗಿದೆ.

ಅನುಬಂಧ–23ರ

ಕ್ರ ಸಂ	ಸಂಸ್ಥೆ	ವಸೂಲಾತಿ ಮೊತ್ತ	JF ಮತ್ತು DDಸಂಖ್ಯೆ
1	ಕರ್ನಾಟಕ ಅಸೋಸಿಯೇಷನ್ ಫಾರ್ ಅಡ್ವಾನ್ಸ್ ಮೆಂಟ್ ಆಫ್ ಸೈನ್ಸ್	3540.00	JF-11827983 DD 957873, dt 3.12.2018 Rs. 3900=00 ಗಳಲ್ಲಿ ರೂ. 3540=00 ವಸೂಲಾತಿಯಾಗಿದೆ
5	ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಪ್ಲಾನ್ ಟೇಷನ್ ಮ್ಯಾನೆಜ್ ಮೆಂಟ್	4750.00	JF-46603 dt 25.02.2015 Cheque No. 384402/ 23.02.2015 Union Bank of India
6	ನ್ಯಾಷನಲ್ ಅಸೆಸ್‌ಮೆಂಟ್ ಅಂಡ್ ಅಕ್ರಿಡಿಯೆಷನ್ ಕೌನ್ಸಿಲ್	3282.00	JF-188-13806 dt 30.08.2018 DD No. 740956 27.08.2018.
10	ಸ್ಟೋಟ್ಸ್ ಅಥಾರಿಟಿ ಆಫ್ ಇಂಡಿಯ	405.00	JF-218-19660 dt 03.11.2018 DD No.248686 25.10.2018.
21	BUTCA (6900-4000-2900)	4000.00	JF-118-18839 dt 10.10.2018 DD No. 879399 04.10.2018..

ಇದೇ ಕಂಡಿಕೆಯ ಅನುಬಂಧ(23)ರ ಕ್ರಮ ಸಂಖ್ಯೆ(10) ಸ್ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ ಇವರಿಂದ ರೂ.190.40 ಎಂದು ವಸೂಲಾತಿಗೆ ತಿಳಿಸಲಾಗಿದ್ದು ರೂ.19040.00 ಎಂದು ಪರಿಗಣಿಸಿ ಒಟ್ಟು ಕೂಡುವಿಕೆಯಲ್ಲಿ ರೂ.35961.00 ರ ಬದಲು ರೂ.54811.00 ಎಂದು ತೆಗೆದುಕೊಳ್ಳಲಾಗಿದೆ ಆದುದರಿಂದ ವ್ಯತ್ಯಾಸದ ಮೊತ್ತ ರೂ.18849.60 ಗಳನ್ನು ವಸೂಲಾತಿ ಮೊತ್ತದಲ್ಲಿ ಕಡಿಮೆಗೊಳಿಸಲು ಪತ್ರ ದಿನಾಂಕ:04.07.2018ರಲ್ಲಿ ಕೋರಲಾಗಿದೆ (ಅನುಬಂಧ–127). ಆದಿದರಿಂದ ವಸೂಲಾತಿಯಿಂದ ರೂ. 34,806=00ಗಳನ್ನು ಕೈಬಿಡುವಂತೆ ವಿನಂತಿಸಲಾಗಿದೆ.

ಆಕ್ಷೇಪಣೆಗಳು	*ಉತ್ತರಗಳು*
44. ಬೆಂ.ವಿ.ವಿ. ಹಾಗೂ ಸಿಟಿ ಕ್ಯಾಂಪಸ್ ಬಿಲ್ಡಿಂಗ್ ಆವರಣದಲ್ಲಿನ ಭೂಮಿ ಮತ್ತು ಕಟ್ಟಡದ ಭೋಗ್ಯ ಮತ್ತು ಬಾಡಿಗೆಯ ವಸೂಲಾತಿಯ ಮೊತ್ತ ರೂ.921600.00 (ವಸೂಲಾತಿ) (ಕುಲಸಚಿವರು ಆಡಳಿತ ವಿಭಾಗ)	
ಬೆಂಗಳೂರು ವಿಶ್ವವಿದ್ಯಾಲಯವು ವಿಶ್ವವಿದ್ಯಾಲಯದ ಆವರಣದಲ್ಲಿ ಹಾಗೂ ಸಿಟಿ ಕ್ಯಾಂಪಸ್ ಆವರಣದಲ್ಲಿನ ಭೂಮಿ ಮತ್ತು ಕಟ್ಟಡಗಳನ್ನು ಇತರೆ ಶೈಕ್ಷಣಿಕ ಸಂಸ್ಥೆಗಳಿಗೆ ಮತ್ತು ಸಂಘ ಸಂಸ್ಥೆಗಳಿಗೆ ಭೋಗ್ಯದ ಆಧಾರದ ಮೇಲೆ ನೀಡಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿದೆ. 1. ಬೆಂ.ವಿ.ವಿ.ಯ ದಿನಾಂಕ 18.4.2013 ರಲ್ಲಿ ತನ್ನ 104 ನೇ ಸಿಂಡಿಕೇಟ್ ಸಭೆಯಲ್ಲಿ ಐ.ಎಸ್.ಇ.ಸಿ. ಸಂಸ್ಥೆಗೆ ನಾಗರಬಾವಿಯಲ್ಲಿ ನೀಡಿರುವ 38.21 ಎಕರೆ ಜಮೀನನ್ನು 30 ವರ್ಷಗಳ ಅವಧಿಗೆ ನವೀಕರಿಸಲು ಕೈಗೊಂಡ ನಿಯಮಗಳ ಅನ್ವಯ ಪ್ರತಿ ಎಕರೆ ಜಮೀನಿಗೆ ಪ್ರತಿ ವರ್ಷಕ್ಕೆ ರೂ.5000.00 ನಿಗಧಿಪಡಿಸುವಂತೆ ತೀರ್ಮಾನವನ್ನು ಕೈಗೊಂಡಿದ್ದು, ಇದೇ ಮಾರ್ಗಸೂಚಿಯನ್ನು ಇತರೆ ಶೈಕ್ಷಣಿಕ ಸಂಸ್ಥೆಗಳಿಗೂ ಅನ್ವಯಿಸಿ ಭೋಗ್ಯದ ಮೊತ್ತವನ್ನು ಹೆಚ್ಚಿಸಲು ತೀರ್ಮಾನಿಸಿ ಈ ಬಗ್ಗೆ ವಿಶ್ವವಿದ್ಯಾಲಯದ ಕುಲಪತಿಗಳು ಅಗತ್ಯ ಕ್ರಮ ಕೈಗೊಳ್ಳಲು ಅಧಿಕಾರವನ್ನು ನೀಡಿರುತ್ತಾರೆ. ಈ ಬಗ್ಗೆ ವಿವರಣೆ ನೀಡಲು ಕೋರಿದ್ದು, ನಿರ್ದೇಶಕರು, ಪಿ.ಎಂ.ಇ.ಬಿ ಇವರು ತಮ್ಮ ದಿನಾಂಕ 08.07.2016 ರ ವಿವರಣೆಯಲ್ಲಿ ಶ್ರೀ.ಶ್ರೀನಿವಾಸಯ್ಯ ಸಿಂಡಿಕೇಟ್ ಲ್ಯಾಂಡ್ ಸಬ್ ಕಮಿಟಿ ಚೇರ್‌ಮನ್ ರವರು ವರದಿ ನೀಡುವವರೆಗೂ ಕಾಯುವಂತೆ ಸೂಚಿಸಿರುವುದಾಗಿ ತಿಳಿಸಿ ಈ ಕುರಿತು ಕಾನೂನು ಸಲಹೆಗಾರರಿಗೆ ಪತ್ರ ಬರೆದಿರುವುದಾಗಿ ತಿಳಿಸಿರುತ್ತಾರೆ. ವಿಶ್ವವಿದ್ಯಾಲಯವು ತನ್ನ ಆಂತರಿಕ ಸಂಪನ್ಮೂಲವನ್ನು ಅಭಿವೃದ್ಧಿಪಡಿಸುವ ಸಲುವಾಗಿ ಸಿಂಡಿಕೇಟ್ ದಿನಾಂಕ 18.04.2013 ರಲ್ಲಿ ಭೋಗ್ಯದ ಮೊತ್ತವನ್ನು ಪರಿಷ್ಕರಿಸಲು ನಿರ್ಣಯ ಕೈಗೊಂಡಿದ್ದು ಈ ನಿರ್ಣಯವನ್ನು ಜಾರಿಗೆ ತರುವಲ್ಲಿ ವಿಶ್ವವಿದ್ಯಾಲಯದ ಆಡಳಿತ ವಿಭಾಗವು ಮೂರು ವರ್ಷ ಕಳೆದರೂ ಭೋಗ್ಯದ ಮೊತ್ತವನ್ನು ಪರಿಷ್ಕರಿಸದಿರುವುದು ಆಡಳಿತದ ವೈಪಲ್ಯವನ್ನು ಎತ್ತಿತೋರುತ್ತದೆ. ಇದರಿಂದಾಗಿ ವಿಶ್ವವಿದ್ಯಾಲಯಕ್ಕೆ ಆಗಿರುವ ನಷ್ಟವನ್ನು ಲೆಕ್ಕಪರಿಶೋಧನೆಯಲ್ಲಿ ತೀವ್ರವಾಗಿ ಆಕ್ಷೇಪಿಸಿದೆ. 2. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ಕಾಯಿದೆ 2000 ರ ಅನ್ವಯ ವಿಶ್ವವಿದ್ಯಾಲಯಗಳು ತಮ್ಮ ಸ್ಥಿರಾಸ್ತಿಗಳನ್ನು ಇತರೆ ಸಂಘ ಸಂಸ್ಥೆಗಳಿಗೆ ಭೋಗ್ಯದ ಬಾಡಿಗೆಗೆ ನೀಡುವ ಮುನ್ನ ಸರ್ಕಾರದ ಅನುಮತಿಯನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ. 3. ಸರ್ಕಾರದ ದಿನಾಂಕ:15.7.2011 ರ ಆದೇಶದ ಅನ್ವಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಉನ್ನತ ಶಿಕ್ಷಣ ಇಲಾಖೆ	18.04.2013ರ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಆಡಿಟರ್ ಶ್ರೀ ಶರ್ಮರವರು ತಪ್ಪಾಗಿ ಅರ್ಥೈಸಿರುತ್ತಾರೆ. ಸಿಂಡಿಕೇಟ್ ಸಭೆಯ ನಿರ್ಣಯ ಕೆಳಕಂಡಂತೆ ಇರುತ್ತದೆ. The Syndicate resolved to approve the draft Lease Agreement for 30 years between B'lore Uni & ISEC.H owever, Members wanted the Lease Agreement to be enhanced considerably atleast to the extent of Rs 5,000/- Per Acre/Per Annum. The same norms to be applied to all the Organisations/Institutions to whom, University land has been Leased out. Sri.T.H.Sreenivasaiah suggested for awaiting the report to be submitted by the Sub-Committee headed by him constituted for fixing rents for University Buildings/Lands. The Syndicate authorized the Vice- Chancellor to discuss with the authorities of ISEC and take a decision in this regard. Therefore the Syndicate Sub-Committee has to give decision from then it can be applied to New Lease Agreements after the date of Sub-Committee report on fixation of rent of Lands. But in the Lease Agreement which is registered prior to date of report of the Sub-Committee of Syndicate can not be changed. Until & Unless the period of the Lease Agreement expires the only solution to this is to convey the meeting of Head of Institutions which has been leased by Bangalore University and by mutual consent they can enhance the rent Per Acre/Per Annum. Otherwise the Lessee may go to the Court. For new Lease Agreement as per Syndicate Resolution & Legal Opinion the land rent is fixed as Rs 5,000 Per Acre/Per Year with 10% hike in rent every year. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ಕಾಯಿದೆ 2000ರ ಅನ್ವಯ ಬೆಂಗಳೂರು ವಿಶ್ವವಿದ್ಯಾಲಯದ ಸ್ಥಿರಾಸ್ಥಿಗಳನ್ನು ಲೀಸ್ ಮಾಡಿರುವ ಎಲ್ಲಾ ವಿಷಯವನ್ನು ಸರ್ಕಾರದ ಗಮನಕ್ಕೆ ತಂದು ಅನುಮತಿಯನ್ನು ಪಡೆಯಲಾಗಿದೆ. ಆದೇಶದ ಪ್ರತಿಗಳನ್ನು **(ಅನುಬಂಧ–127ರಲ್ಲಿ)** (ಪು.ಸಂ.838)ಲಗತ್ತಿಸಲಾಗಿದೆ. AICTE (SWARO) ಸಂಸ್ಥೆಗೆ ಸರ್ಕಾರ 25 ಲಕ್ಷ ಪಡೆದು ಭೂಮಿ ಹಾಗೂ ಕಟ್ಟಡವನ್ನು 99 ವರ್ಷ ಲೀಸ್ ಆಧಾರದ ಮೇಲೆ ನೀಡಲು ದಿನಾಂಕ: 15.12.2000ರಂದು ಸರ್ಕಾರ ಆದೇಶಿಸಿರುತ್ತದೆ. ಅದರಂತೆ, 25 ಲಕ್ಷ ರೂಗಳನ್ನು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಜಮೆ ಆಗಿ ಭೂಮಿ/ಕಟ್ಟಡವನ್ನು AICTಇರವರು ತೆಗೆದು ಕೊಂಡಿರುತ್ತಾರೆ. ಆದರೆ, 80'X55'

ಆಕ್ಷೇಪಣೆಗಳು	***ಉತ್ತರಗಳು***
ಬೆಂಗಳೂರು ಇವರು ತಮ್ಮ ದಿನಾಂಕ:4.8.2015 ರ ಪತ್ರದಲ್ಲಿ ಪ್ರಸನ್ನಕುಮಾರ್ ಬ್ಲಾಕ್‌ನಲ್ಲಿ 80" x 55" ಅಡಿ ಅಳತೆಯ ಕಟ್ಟಡ ಮತ್ತು 200" x 200" ಅಡಿ ಭೂಮಿಯನ್ನು AICTE ಸಂಸ್ಥೆಗೆ ಮಂಜೂರು ಮಾಡಿದ್ದು AICTES ಇವರು ಖಾತೆ ಮಾಡಿಸಿಕೊಳ್ಳಲು ಬೇಕಾಗಿರುವ ದಾಖಲೆಗಳನ್ನು ನೀಡುವಂತೆ ಆದೇಶಿಸಿದ್ದು, ಸಂಬಂಧಪಟ್ಟವರಿಂದ ಕಟ್ಟಡದ ಮೊತ್ತ ರೂ.54.28 ಲಕ್ಷ ಹಾಗೂ ಭೂಮಿಯ ಮೊತ್ತ ರೂ.20.00 ಕೋಟಿ ಪಡೆಯುವಂತೆ ಆದೇಶಿಸಿದೆ. 4.ವಿಶ್ವವಿದ್ಯಾಲಯವು ತನ್ನ ಹೆಸರಿನಲ್ಲಿ ಸದರಿ ಭೂಮಿಯ ಹಾಗೂ ಕಟ್ಟಡದ ಖಾತೆಯನ್ನು ತನ್ನ ಹೆಸರಿನಲ್ಲಿ ಹೊಂದಿಲ್ಲದ ಕಾರಣದಿಂದಾಗಿ ರೂ.20,54,28,000.00 ಗಳನ್ನು ಸದರಿ ಸಂಸ್ಥೆಯಿಂದ ಪಡೆಯಲು ಸಾಧ್ಯವಾಗಿರುವುದಿಲ್ಲ. ಈ ಬಗ್ಗೆ ಶೀಘ್ರ ಕ್ರಮ ಕೈಗೊಂಡು ಸದರಿ ಸಂಸ್ಥೆಯಿಂದ ಈ ಮೊತ್ತವನ್ನು ಪಡೆಯಲು ನಿರ್ದೇಶನ ನೀಡಿದೆ.	ಅಡಿ ಜಾಗವು ಸರ್ಕಾರದ ಹೆಸರಲ್ಲಿ ಇದ್ದು. ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮಂಜೂರಾದ ಯಾವ ದಾಖಲೆ ಪತ್ರಗಳು ಇರುವುದಿಲ್ಲ. ಹೀಗಿದ್ದಾಗಿಯು ಪ್ರಧಾನ ಕಾರ್ಯದರ್ಶಿಗಳಿಗೆ ಉಚ್ಚ ಶಿಕ್ಷಣ ಕರ್ನಾಟಕ ಸರ್ಕಾರಕ್ಕೆ ಹಾಗೂ AICTE (SWARO) ಸಂಸ್ಥೆಗೆ 20,54,00,000.00 ರೂಗಳನ್ನು ಕೊಡಲು ಕುಲಸಚಿವರು ದಿನಾಂಕ: 02.07.2011 ಹಾಗೂ 18.02.2015ರಂದು ಪತ್ರ ಬರೆದಿದ್ದರೂ ಯಾವುದೇ ಉತ್ತರ ಬಂದಿರುವುದಿಲ್ಲ. ಹೀಗಿರುವಾಗ ನಾವು 20,54,00,000.00 ರೂಗಳನ್ನು ಪಡೆದರೆ ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಹೇಗೆ ಪಡೆದು ನೊಂದಾಣಿ ಮಾಡಿಸಬೇಕು ಎಂಬುದಕ್ಕೆ ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರಿಗೆ ಪತ್ರ ಬರೆಯಲಾಗಿದೆ. ಕಾನೂನು ವಿಭಾಗದ ಅಭಿಪ್ರಾಯದಂತೆ ಕ್ರಮವಹಿಸಲಾಗುವುದು. ಸಂಬಂಧಿಸಿದ ವಿಭಾಗದಿಂದ ಉತ್ತರ ಪಡೆದು ಒದಗಿಸಲಾಗುವುದು.
<u>ವಿಶ್ವವಿದ್ಯಾಲಯವು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಇವರಿಗೆ ವಿಶ್ವವಿದ್ಯಾಲಯದ ಆವರಣದಲ್ಲಿ ನೀಡಿರುವ ಕಟ್ಟಡದ ಬಾಡಿಗೆಯನ್ನು ದಿನಾಂಕ 1.1.2008 ರ ರೀತ್ಯಾ ರೂ.9600.00 ಗಳನ್ನು ನಿಗಧಿಪಡಿಸಿದ್ದು, ದಿನಾಂಕ 01.01.2008 ರಿಂದ 01.01.2016 ರವರೆಗಿನ 8 ವರ್ಷಗಳ ಬಾಡಿಗೆಯ ಮೊತ್ತ ರೂ. 9600x12x8=ಒಟ್ಟು ರೂ.9,21,600.00 ಗಳನ್ನು ವಸೂಲಾತಿಗಾಗಿ ಸೂಚಿಸಿದೆ.</u> 4. ಟೆಲಿಕಾಂ ಇಲಾಖೆಗೆ 10,000 ಚದರ ಅಡಿ ಜಾಗ'ವನ್ನು ದಿನಾಂಕ 15.6.1999 ರಲ್ಲಿ 30 ವರ್ಷಗಳ ಅವಧಿಗೆ ಭೋಗ್ಯಕ್ಕೆ ನೀಡಿದ್ದು, ಈ ಲೀಸ್ ಡೀಡ್‌ನ ಮೂಲ ದಾಖಲೆಯಲ್ಲಿ ಲೀಸರ್ ಸಹಿ ಇರುವುದಿಲ್ಲ. ಹಾಗೂ ಡೀಡ್ ನೋಂದಣಿ ಆಗಿರುವುದಿಲ್ಲ ಈ ಬಗ್ಗೆ ಶೀಘ್ರ ಕ್ರಮ ಕೈಗೊಂಡು ಲೀಸ್ ಡೀಡ್‌ನ್ನು ನೋಂದಣಿ ಮಾಡತಕ್ಕದ್ದು.	ವ್ಯವಸ್ಥಾಪಕರು ಎಸ್‌ಬಿಐ ನಾಗರಭಾವಿ ಶಾಖೆ, ಬೆಂಗಳೂರು ರವರಿಗೆ ದಿನಾಂಕ : 12.11.2019ರಂದು ಪತ್ರ ಬರೆದು ದಿನಾಂಕ : 1.1.2008ರಿಂದ 31.10.2019ರವರೆಗೆ ವಿತಾಧಿಕಾರಿಗಳು, ಬೆಂ.ವಿ.ವಿ. ಖಾತೆಗೆ ಜಮೆ ಮಾಡಲಾಗಿರುವ ವಿವರ ಚಲನ್‌ನೊಂದಿಗೆ ಸಲ್ಲಿಸಲು ತಿಳಿಸಿದೆ. **4. ಟೆಲಿಕಾಂ** ಲೀಸ್ ಅಗ್ರಿಮೆಂಟ್‌ನ್ನು ನೊಂದಾಣಿ ಮಾಡಿಸಿರುತ್ತಾರೆ, ಲೀಸ್ ಡೀಡನಲ್ಲಿ ಲೀಸರ್ ಸಹಿ ಇದೆ. ಪ್ರತಿಯನ್ನು ಲಗತ್ತಿಸಿದೆ. **(ಅನುಬಂಧ–126)** (ಪು.ಸಂ.821)
45. ಜ್ಞಾನಭಾರತಿ ಆವರಣದ ಹಾಗೂ ಸೆಂಟ್ರಲ್ ಕಾಲೇಜು ಆವರಣದ ಕ್ಯಾಂಟೀನ್ ಬಾಡಿಗೆಯ ಮೊತ್ತ ರೂ.62700.00+60000.00=122700.00 (ವಸೂಲಾತಿ) (ಕುಲಸಚಿವರು ಆಡಳಿತ ವಿಭಾಗ)	
ಬೆಂ.ವಿ.ವಿ. ಜ್ಞಾನಭಾರತಿ ಆವರಣದ ಸಿವಿಲ್ ಇಂಜಿನಿಯರಿಂಗ್ ವಿಭಾಗದ ಹತ್ತಿರದ ಕ್ಯಾಂಟೀನ್ ನಡೆಸಲು ಟೆಂಡರ್ ಪ್ರಕಟಣೆ ದಿನಾಂಕ 18.11.2015 ರಂದು ಹೊರಡಿಸಲಾಗಿದ್ದು, [ಟೆಂಡರ್ ಡಾಕ್ಯೂಮೆಂಟ್ಸ್ Terms & conditions ಪ್ರಕಾರ] ಜ್ಞಾನಭಾರತಿ ಸಿವಿಲ್ ಇಂಜಿನಿಯರಿಂಗ್ ಆಡಳಿತ ಕಟ್ಟಡದ ಹಿಂಬದಿಯಲ್ಲಿರುವ ಕ್ಯಾಂಟೀನ್ ನಡೆಸಲು ಇಬ್ಬರು ಬಿಡ್‌ದಾರರು ಬಿಡ್ಡಾ ವಹಿಸಿರುತ್ತಾರೆ. ಹೆಚ್ಚು ಬಾಡಿಗೆ ದರವನ್ನು ನಮೂದಿಸಿರುವ ಶ್ರೀ.ಟಿ.ಎಂ.ರುದ್ರಪ್ಪರವರನ್ನು ರೂ.10,000.00 ಬಾಡಿಗೆ ಮೊತ್ತ ಹಾಗೂ ಕರೆಂಟ್ ಬಿಲ್ & ನೀರಿನ ಬಿಲ್ಲಿನ ಮೊತ್ತವನ್ನು ಡಿಡಿ ಮೂಲಕ ಪಾವತಿಸಿ ಕ್ಯಾಂಟೀನ್ ನಡೆಸುವಂತೆ ಸಂಧಾನ ಮಾಡಲು ಸೂಚಿಸಿ ದಿನಾಂಕ 29.12.2015 ರ ವಿಶೇಷ	a) ಶ್ರೀ.ರುದ್ರಪ್ಪನವರು 50,000/– ಗಳ ಭದ್ರತಾ ಠೇವಣಿಯನ್ನು ಕಟ್ಟರುತ್ತಾರೆ. ವಿ.ವಿ.ಗೆ ಪಾವತಿಸಿರುವ ಭದ್ರತಾ ಠೇವಣಿ ಮೊತ್ತದಲ್ಲಿ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಶ್ರೀ.ಟಿ.ಎಂ.ರುದ್ರಪ್ಪನವರಿಗೆ 2014–15ನೇ ಸಾಲಿಗೆ ಬಾಕಿಯಿರುವ ಕ್ಯಾಂಟೀನ್ ಬಾಡಿಗೆ ಪಾವತಿಸಲು ನೋಟೀಸ್ ನೀಡಲಾಗಿದೆ. ಸದರಿಯವರ ವಿಳಾಸವಿಲ್ಲದ ಕಾರಣ ನೋಟೀಸ್ ವಾಪಸ್ ಬಂದಿರುತ್ತದೆ. b) ದಿನಾಂಕ:27.11.2017 ರಂದು ಕ್ಯಾಂಟಿನ್ ಬಾಡಿಗೆ ರೂ.50,000.00 (25,000+25,000) ಜಮೆ ಮಾಡಲಾಗಿದೆ. Daily Collection Lisiting

ಆಕ್ಷೇಪಣೆಗಳು	ಉತ್ತರಗಳು
ಕೇಂದ್ರ ಖರೀದಿ ಸಮಿತಿ ನಡವಳಿಗಳನ್ನು ದಿನಾಂಕ 29.12.2015 ರಂದು ಜರುಗಿದ 125 ನೇ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ. ಜ್ಞಾನಭಾರತಿ ಆವರಣದ ಹಾಗೂ ಸೆಂಟ್ರಲ್ ಕಾಲೇಜು ಆವರಣದ ಕ್ಯಾಂಟೀನ್ ಬಾಡಿಗೆ ವಸೂಲಾತಿಗೆ ಸಂಬಂಧಿಸಿದಂತೆ ವಿವರಗಳನ್ನು ಕೋರಿದ್ದು, ವಿಶ್ವವಿದ್ಯಾಲಯವು ವಿವರಣೆಗಳನ್ನು ಸಲ್ಲಿಸಿರುವುದಿಲ್ಲ. ಟೆಂಡರ್ ಅನುಮೋದನೆಗೆ ಸಂಬಂಧಿಸಿದಂತೆ ಈ ಕೆಳಕಂಡ ಆಕ್ಷೇಪಣೆ ವ್ಯಕ್ತಪಡಿಸಿದೆ. ಟೆಂಡರ್ ಡಾಕ್ಯುಮೆಂಟ್ Terms & conditions ಪ್ರಕಾರ L1 ಟೆಂಡರ್‌ದಾರರಾದ ಶ್ರೀ ಟಿ.ಎಂ.ರುದ್ರಪ್ಪನವರು ಈ ಕೆಳಕಂಡ ದಾಖಲೆ ಒದಗಿಸಿಲ್ಲವಾದರೂ ಕ್ಯಾಂಟೀನ್ ನಡೆಸಲು ಒಪ್ಪಿಗೆ ಸೂಚಿಸಲಾಗಿದೆ. 1. Hotel Owner's Associataion certificate 1 2. Experience certificate for running the canteen or hotel with documentary evidence of vegetarian. 3. Cooking certificate. ಕರಾರು ಒಪ್ಪಂದದ ಪ್ರಕಾರ ಟೆಂಡರ್ 1 ವರ್ಷದ ಅವಧಿಯು ದಿನಾಂಕ 01.01.2016 ರಿಂದ 31.12.2016 ರವರೆಗೆ ಇದ್ದು, ಮೂರು ತಿಂಗಳ ಬಾಡಿಗೆ ವಸೂಲಿಸಿರುವ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ. ಮುಂದುವರೆದು, 2013–14ನೇ ಹಾಗೂ 2014–15 ನೇ ಸಾಲಿಗೆ ಕ್ಯಾಂಟೀನ್ ಬಾಕಿ ಬಾಡಿಗೆ ಇಲ್ಲಿಯವರೆಗೆ ವಸೂಲಾಗಿರುವುದಿಲ್ಲವಾದ್ದರಿಂದ, ವಸೂಲಾತಿಗೆ ಕ್ರಮ ವಹಿಸಲು ಹಾಗೂ 2015–16 ನೇ ಸಾಲಿಗೆ ಕ್ಯಾಂಟೀನ್ ಬಾಡಿಗೆ ಜೂನ್–2015 ಹೊರತುಪಡಿಸಿ 11 x 5700= ರೂ. 62,700.00 ಗಳನ್ನು ವಸೂಲಿಸಲು ಸೂಚಿಸಿದೆ. **ಬೆಂ.ವಿ.ವಿ. ಜ್ಞಾನಭಾರತಿ ಆವರಣದ ಕ್ಯಾಂಟೀನ್ ಬಾಡಿಗೆಯನ್ನು ವಸೂಲಿಸದಿರುವುದು:** ಬೆಂ.ವಿ.ವಿ. ಜ್ಞಾನಭಾರತಿ ಆವರಣದ ಕ್ಯಾಂಟೀನ್ ನಡೆಸುವ ಸಲುವಾಗಿ ಟೆಂಡರ್‌ನ್ನು ದಿನಾಂಕ 18.11.2015 ರಲ್ಲಿ ಕರೆದಿದ್ದು, ಯಾವ ಟೆಂಡರ್‌ದಾರರು ಸಹ ಬಿಡ್ಡನ್ನು ಸಲ್ಲಿಸಿರುವುದಿಲ್ಲ. ಕುಲಸಚಿವರ ಅಧಿಕೃತ ಜ್ಞಾಪನ ಸಂ.ಆರ್.ಪಿ. ಎಫ್1/ಅಲಾಟ್‌ಮೆಂಟ್ ನಂ.5/2013–14 ದಿನಾಂಕ 27.7.13 ರಲ್ಲಿ ಟೆಂಡರ್ ಪ್ರಕ್ರಿಯೆ ಪೂರೈಸುವವರೆಗೂ ಅಥವಾ ಮುಂದಿನ ಆದೇಶದವರೆಗೆ ತಾತ್ಕಾಲಿಕವಾಗಿ ಡಿಎಸ್‌ಆರ್ ರಲ್ಲಿ ನಿಗಧಿಪಡಿಸಲಾದ ಬಾಡಿಗೆ ಪಾವತಿಸುವ ಷರತ್ತಿಗೆ ಒಳಪಟ್ಟು ಶ್ರೀ.ಗಿಡ್ಡಪ್ಪ ಇವರಿಗೆ ತಾತ್ಕಾಲಿಕ ಪರವಾನಿಗೆ ನೀಡಲಾಗಿದೆ. ಬಾಡಿಗೆ ವಸೂಲಿಸದ ವಿವರಗಳು ಕೆಳಕಂಡಂತಿದೆ. **ಕ್ರ.ಸ** | **ಅವಧಿ** | **ವಸೂಲಿಸಬೇಕಾದ ಬಾಡಿಗೆ ಮೊಬಲಗು ರೂ.** 1 | ಸೆಪ್ಟೆಂಬರ್–2014 ರಿಂದ ಮಾರ್ಚ್–2015 ರವರೆಗೆ | 7x5000=35000.00 2 | ಏಪ್ರಿಲ್ –2015 ರಿಂದ ಮಾರ್ಚ್–2016 ರವರೆಗೆ | 12x5000=60000.00 2015–16 ನೇ ಸಾಲಿಗೆ ಬೆಂ.ವಿ.ವಿ. ಆಡಳಿತ ಕಛೇರಿ	ಲಗತ್ತಿಸಿದೆ. **(ಅನುಬಂಧ–128)** (ಪು.ಸಂ.839) ಕ್ಯಾಂಟಿನ್ ಬಾಡಿಗೆ ವಸೂಲಾತಿ ಮೊತ್ತ ರೂ.50,000/– ಗಳನ್ನು ಕ್ಕೆ ಬಿಡಲು ಕೋರಿದೆ.

ಆಕ್ಷೇಪಣೆಗಳು	***ಉತ್ತರಗಳು***
ಹಿಂಭಾಗದ ಉಪಹಾರ ಮಂದಿರ ಬಾಡಿಗೆ ರೂ.60,000.00 ಗಳನ್ನು ವಸೂಲಾತಿಗೆ ಸೂಚಿಸಿದೆ.	
46. ಬೆಂಗಳೂರು ವಿಶ್ವವಿದ್ಯಾಲಯದ ಆಡಳಿತ ಕಛೇರಿ ಆವರಣದ ಹಿಂಭಾಗದ ಉಪಹಾರ ಮಂದಿರದ ಬಾಡಿಗೆ ಹಣ ವಸೂಲಾತಿ ರೂ.198000.00 (ಕುಲಸಚಿವರು ಆಡಳಿತ ವಿಭಾಗ)	
ಶ್ರೀ.ಸುರೇಂದ್ರ ರೆಡ್ಡಿ ಇವರು ಬೆಂ.ವಿ.ವಿ., ಆಡಳಿತ ಕಛೇರಿಯ ಹಿಂಭಾಗದ ಉಪಹಾರ ಮಂದಿರವನ್ನು ದಿನಾಂಕ 23.11.2009 ರಿಂದ ನಡೆಸುತ್ತಿದ್ದು, ಸುಮಾರು 18 ತಿಂಗಳು ಬಾಡಿಗೆಯನ್ನು ವಿಶ್ವವಿದ್ಯಾಲಯಕ್ಕೆ ಪಾವತಿಸದೆ ರೂ.1,25,772.00 ಗಳನ್ನು ಬಾಕಿ ಉಳಿಸಿಕೊಂಡು ಉಪಹಾರ ಮಂದಿರವನ್ನು ಖಾಲಿ ಮಾಡಿರುತ್ತಾರೆ. ಈ ಕುರಿತಂತೆ, ಪೋಲಿಸ್ ಠಾಣೆಗೆ ದೂರು ನೀಡಲಾಗಿ, ಸಿವಿಲ್ ಸ್ವರೂಪದ ಸಮಸ್ಯೆಯಾಗಿರುವುದರಿಂದ ವ್ಯಾಪ್ತಿಗೆ ಬರುವುದಿಲ್ಲವೆಂದು ತಿಳಿಸಿ ಸಿವಿಲ್ ದಾವೆ ಹೂಡಿ ಬಗೆಹರಿಸಿಕೊಳ್ಳುವಂತೆ ತಿಳಿಸಿರುವುದು ಪರಿಶೀಲನೆಯಿಂದ ಕಂಡು ಬಂದಿರುತ್ತದೆ. ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ಕೋಶದಿಂದ ನ್ಯಾಯಾಲಯದ ಮುಂದೆ ಹೋದರೆ ಇದಕ್ಕಿಂತಲೂ ಹಣ ಹೆಚ್ಚಾಗಿ ಖರ್ಚಾಗುತ್ತದೆ ಎಂದು ತಿಳಿಸಿರುವಂತೆ ದಿನಾಂಕ 13.10.2015 ರ 123 ನೇ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ ಬಾಕಿ ಪಾವತಿಯನ್ನು ಮನ್ನಾ ಮಾಡಲು ನಿರ್ಣಯ ಕೈಗೊಂಡಿರುವುದು ಕಂಡುಬಂದಿರುತ್ತದೆ. ಈ ಬಗ್ಗೆ ವಿವರಣೆಯನ್ನು ನೀಡಲು ಕೋರಿದ್ದು, ಕುಲಸಚಿವರು (ಆಡಳಿತ) ವಿಭಾಗ ಇವರು ವಿವರಣೆಯನ್ನು ಸಲ್ಲಿಸಿರುವುದಿಲ್ಲ. ಈ ಹಿಂದೆ ದಿನಾಂಕ:05.07.2011 ರಲ್ಲಿ ಶ್ರೀ.ಸುರೇಂದ್ರ ರೆಡ್ಡಿಯವರು, ಕುಲಪತಿಗಳು ಬರೆದಿರುವ ಪತ್ರದಲ್ಲಿ ಬರಬೇಕಾದ ಬಾಕಿ ಬಿಲ್ಲುಗಳ ಹಣವನ್ನು ನೀಡಿದ್ದಲ್ಲಿ ಈಗಾಗಲೇ ಮುಚ್ಚಿರುವ ಉಪಹಾರ ಮಂದಿರವನ್ನು ಹಿಂದಿರುಗಿಸಲು ಸಿದ್ದರಿರುತ್ತೇವೆ ಎಂಬುದಾಗಿ ಕೇಳಿಕೊಂಡಿದ್ದಾರೆ ಹಾಗೂ ದಿನಾಂಕ: 15.06.2011 ರಲ್ಲಿ ಕುಲಸಚಿವರಿಗೆ ಬರೆದಿರುವ ಪತ್ರದಲ್ಲಿ ಉಪಹಾರ ಮಂದಿರವನ್ನು ಮುಚ್ಚಲು ಅನುಮತಿ ಕೋರಿರುತ್ತಾರೆ. ದಿನಾಂಕ: 23.11.2009 ರಿಂದ ಉಪಹಾರ ಮಂದಿರವನ್ನು ಪ್ರಾರಂಭಿಸಿದ್ದು, ಅಲ್ಲಿಂದ ದಿನಾಂಕ:6.8.2010 ರಂದು ರೂ.31000.00 ಗಳನ್ನು ಮಾತ್ರ ಪಾವತಿಸಿರುತ್ತಾರೆ. ಉಳಿಕೆ ಬಾಬ್ತು ವಿವರ ಈ ಕೆಳಕಂಡಂತಿದೆ. ವಿದ್ಯುತ್ ಶುಲ್ಕ ಸೇರಿ ಒಟ್ಟು ಪಾವತಿಸಬೇಕಾದ ಬಾಡಿಗೆ ರೂ.2,79,000.00 ಪಾವತಿಸಿದ ಬಾಕಿ ರೂ. 31,000.00 ಬಾಕಿ 2,48,000.00 ಇ.ಎಂ.ಡಿ. ಮುರುಗಡೆ 50,000.00 ಬಾಕಿ ರೂ. 1,98,000.00 ದಿನಾಂಕ:06.08.2010 ರಿಂದ ಉಪಹಾರ ಮಂದಿರದ ಬಾಡಿಗೆಯನ್ನು ವಸೂಲಿಸದ ಬಗ್ಗೆ ದಿನಾಂಕ: 13.10.2015 ನೇ ಸಿಂಡಿಕೇಟ್ ಸಭೆಯಲ್ಲಿ ಮನ್ನಾ ಮಾಡಲು	2011–12ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಕ್ಯಾಂಟೀನ್ ಬಾಡಿಗೆ ರೂ.1,98,000/–ಗಳನ್ನು ಶ್ರೀ ಸುರೇಂದ್ರ ರೆಡ್ಡಿಯವರಿಂದ ವಸೂಲಿಸಿಲ್ಲವೆಂದು ವಸೂಲಾತಿಗೆ ಸೂಚಿಸಿರುತ್ತದೆ. ಈ ವಸೂಲಾತಿಯ ಮೊತ್ತದಲ್ಲಿ ರೂ. 1,25,772/–ಗಳಿಗೆ ದಿನಾಂಕ 13.10.2015 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ವಜಾವಟ್ಟು ಮಾಡಿಸಿಕೊಂಡು, ಕ್ಯಾಂಟೀನ್‌ಗೆ ಕಾಫಿ, ಟೀ, ತಿಂಡಿಗಳ ಸರಬರಾಜಿಗೆ ಪಾವತಿಸಬೇಕಾಗಿದ್ದ ರೂ. 72,228/–ಗಳನ್ನು ಕಳೆದು ಉಳಿದ ಮೊತ್ತ ರೂ. 1,25,772/–ಗಳಿಗೆ ವಜಾವಟ್ಟು ಮಾಡಿಸಿ ಕೊಂಡಿರುವ ವಿವರವಾದ ಮಾಹಿತಿಯನ್ನು ಸೂಕ್ತ ದಾಖಲೆಗಳೊಂದಿಗೆ ದಿನಾಂಕ 09.09.2017ರ ಪತ್ರದಲ್ಲಿ ಅಪರ ನಿರ್ದೇಶಕರಿಗೆ ವಸೂಲಾತಿಯನ್ನು ಕೈಬಿಡಲು ಕೋರಿರುತ್ತದೆ. ಎಲ್ಲಾ ಕ್ರಮಗಳು ಮುಗಿದ ನಂತರವೇ ವಜಾವಟ್ಟು ಮಾಡಿರುವ ಅಂಶವನ್ನು ಸ್ಪಷ್ಟವಾಗಿ ತಿಳಿಸಿದ್ದರೂ ಸಹ ವಜಾವಟ್ಟು ಆದೇಶವನ್ನು ಮಾನ್ಯ ಮಾಡಿ 2011–12ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಕಂಡಿಕೆ 2.2.3.7ರಲ್ಲಿ ವಸೂಲಾತಿಗೆ ಸೂಚಿಸಿರುವ ಮೊತ್ತ ರೂ. 1,98,000/–ಗಳನ್ನು ಕೈಬಿಡುವ ಬದಲು, 2015–16ನೇ ಸಾಲಿನಲ್ಲಿ ಕಂಡಿಕೆ 46ರಲ್ಲಿ ಮತ್ತೊಮ್ಮೆ ವಸೂಲಾತಿಗೆ ಸೂಚಿಸಿರುತ್ತದೆ. ಇದರಿಂದ ಒಂದೇ ಆಕ್ಷೇಪಣೆಯನ್ನು ಎರಡು ಸಲ ವಸೂಲಾತಿಗೆ ಸೂಚಿಸಿದಂತಾಗುತ್ತದೆ. ಆದಕಾರಣ, ಕಂಡಿಕೆ 46ರಲ್ಲಿ ಮತ್ತೊಮ್ಮೆ ವಸೂಲಾತಿಗೆ ಸೂಚಿಸಿರುವುದು ತಪ್ಪಾಗಿರುವುದರಿಂದ ವಸೂಲಾತಿಯನ್ನು ಕೈಬಿಡಲು ಕೋರಿದೆ. ಇದರ ಜೊತೆಗೆ ವಸೂಲಾತಿಗೆ ಸಾಧ್ಯವಿಲ್ಲದ ಬಾಬ್ತುಗಳನ್ನು ಎಲ್ಲಾ ವಸೂಲಾತಿ ಕ್ರಮಗಳು ಮುಗಿದ ನಂತರ, ವಜಾವಟ್ಟು (write off) ಮಾಡಿಸಿಕೊಳ್ಳಲು ಲೆಕ್ಕಪರಿಶೋಧಕರು ನೀಡಿರುವ ಸಲಹೆಗಳಿಗೆ ವಿರುದ್ಧವಾಗಿರುತ್ತದೆ. ಆದಕಾರಣ, ಈಗಾಗಲೇ ದಿನಾಂಕ 09.09.2017ರ ಪತ್ರದಲ್ಲಿ 2011–12ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಕಂಡಿಕೆ 2.2.3.7 ರಲ್ಲಿ ವಸೂಲಾತಿಗೆ ಸೂಚಿಸಿರುವ ಮೊತ್ತಕ್ಕೆ ವಜಾವಟ್ಟು ಮಾಡಿಸಿಕೊಂಡಿರುವ ಬಗ್ಗೆ ದಾಖಲೆಗಳ ಸಮೇತ ಉತ್ತರಗಳನ್ನು ಪತ್ರ ದಿನಾಂಕ 18.05.2018ರಲ್ಲಿ ಸಲ್ಲಿಸಲಾಗಿದೆ. ಆದುದರಿಂದ, ಮೇಲೆ ತಿಳಿಸಿರುವ ವಿವರಣೆಯನ್ನು ಪರಿಗಣಿಸಿ, ಮತ್ತೊಮ್ಮೆ ರೂ. 1,98,000/–ಗಳನ್ನು ಕೈಬಿಡುವಂತೆ ಕೋರಲಾಗಿದೆ **(ಅನುಬಂಧ–129)** (ಪು.ಸಂ.839).

ಆಕ್ಷೇಪಣೆಗಳು	***ಉತ್ತರಗಳು***
ನಿರ್ಣಯಿರಲಾಗಿದೆ, ಆದರೆ, ಬೆಂ.ವಿ.ವಿ.ಯಲ್ಲಿರುವ ಇತರೆ ಕ್ಯಾಂಟೀನ್ ಬಾಡಿಗೆದಾರರು ಈ ರೀತಿಯಾಗಿ ಬಾಡಿಗೆ ಪಾವತಿಸದೇ ಕ್ಯಾಂಟೀನ್ ಖಾಲಿ ಮಾಡಿ ಹೋಗುವ ಸಂದರ್ಭ ಬರುವುದರಿಂದ ವಿ.ವಿ.ಗೆ ಆರ್ಥಿಕ ನಷ್ಟ ಉಂಟಾಗುವುದರಿಂದ ಕ್ಯಾಂಟೀನ್ ಮಾಹೆಯಾನ ಬಾಡಿಗೆ ವಸೂಲಾತಿಗೆ ಕ್ರಮಕೈಗೊಳ್ಳಲು ಸೂಚಿಸಿದೆ.	
47. **ನಿಯಮ ಬಾಹಿರ ವಸತಿ ಗೃಹದ ಹಂಚಿಕೆ ಹಾಗು ವಸತಿ ಗೃಹಗಳ ಬಾಡಿಗೆಯ ವಸೂಲಾತಿಯ ಮೊತ್ತ ರೂ.16,57,520.00 (ವಸೂಲಾತಿ)** (ಕುಲಸಚಿವರು ಆಡಳಿತ ವಿಭಾಗ)	
ಬೆಂ.ವಿ.ವಿ.ನೌಕರರಿಗೆ ವಸತಿ ಗೃಹವನ್ನು 2015–16ನೇ ಸಾಲಿಗೆ ಕಡತ ಸಂ: ಸಾಮಾನ್ಯ01/ವಸತಿ ಗೃಹ ಹಂಚಿಕೆ/2015–16 ಪರಿಶೀಲಿಸಲಾಗಿ, ವಸತಿ ಗೃಹ ಹಂಚಿಕೆ ಕುರಿತಂತೆ ಸಿಂಡಿಕೇಟ್ ಸಭೆ ಅನುಮೋದನೆಯಾಗಲಿ ಕುಲಪತಿಗಳಿಂದಾಗಲಿ ಅನುಮೋದನೆ ಪಡೆಯದೇ ವಸತಿ ಗೃಹ ಹಂಚಿಕೆ ಸಮಿತಿ ಸಭೆಯಲ್ಲಿ ವಸ'ತಿ ಗೃಹ ಹಂಚಿಕೆ ಮಾಡಿರುವುದು ಕಂಡುಬಂದಿರುತ್ತದೆ ಹಾಗೂ ವಸತಿ ಗೃಹ ಸಮಿತಿ ಸಭೆಯ ಮುಂದಿನ ಅನುಮೋದನೆಯನ್ನು ನಿರೀಕ್ಷಿಸಿ ಹಂಚಿಕೆ ಮಾಡಲು ಮಾನ್ಯ ಕುಲಸಚಿವರು ಮೌಖಿಕವಾಗಿ ಆದೇಶಿಸಿರುವಂತೆ ವಸತಿ ಗೃಹ ಹಂಚಿಕೆಮಾಡಲಾಗಿದೆ ಗ್ರೂಪ್ 'ಡಿ' ಕಿರಿಯ ಸಹಾಯಕರು ಗ್ರೂಪ್ 'ಸಿ' ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕ್ಷೇತರ ಸಿಬ್ಬಂದಿಗಳಿಗೆ ರೀಡರ್, ಉಪನ್ಯಾಸಕರ ವಸತಿ ಗೃಹಗಳನ್ನು ಹಂಚಿಕೆ ಮಾಡಲಾಗಿದ್ದು, ಇದರಿಂದಾಗಿ ಬೆಂ.ವಿ.ವಿ. ನಿಧಿಗೆ ಆರ್ಥಿಕ ನಷ್ಟವಾಗುತ್ತದೆ. ವಸತಿಗೃಹಗಳ ಹಂಚಿಕೆಯಲ್ಲಿನ ಆಕ್ಷೇಪಣೆಗಳಿಗೆ ಸಂಬಂಧಿಸಿದಂತೆ ವಿವರಗಳನ್ನು ನೀಡಲು ಕೋರಿದ್ದು, ಕುಲಸಚಿವರು (ಆಡಳಿತ) ವಿಭಾಗ ಇವರು ಲೆಕ್ಕಪರಿಶೋಧನೆಗೆ ವಿವರಗಳನ್ನು ನೀಡಿರುವುದಿಲ್ಲ. ವಸತಿ ಗೃಹಗಳ ಹಂಚಿಕೆಗೆ ಸಂಬಂಧಿಸಿದಂತೆ ವಿವರಗಳನ್ನು **ಅನುಬಂಧ–24** ರಲ್ಲಿ ನೀಡಿದೆ.	ದಿನಾಂಕ: 20.05.2015 ನಡೆದ ಸಿಂಡಿಕೇಟ್ ಸಭೆಯ ತೀರ್ಮಾನದಂತೆ ಖಾಲಿಯಿದ್ದ ಕಂಡಿಕೆ 47ರ ಅನುಬಂಧ–24ರ ಕ್ರ.ಸಂ:1–25 ರವರೆಗಿನ ರೀಡರ್, ಲೆಕ್ಚರರ್ ಮತ್ತು ಇತರೆ ವಸತಿ ಗೃಹಗಳನ್ನು ಹಂಚಿಕೆ ಮಾಡಲಾಗಿದೆ.
➢ ವಸತಿ ಗೃಹವನ್ನು ಗೃಹ ಮುಂಗಡ ಸಾಲ (House Building Advance) ಪಡೆದಿರುವ ನೌಕರರ ಹಾಗೂ ನಿವೃತ್ತಿ ನಂತರದಲ್ಲಿಯೂ ವಸತಿ ಗೃಹದಲ್ಲಿ ವಾಸವಾಗಿರುವ ನಿವೃತ್ತಿ ನೌಕರರ ವಿವರಗಳನ್ನು ಲೆಕ್ಕತನಿಖೆಗೆ ಒದಗಿಸಿರುವುದಿಲ್ಲ.	ಈ ವಿವರಗಳನ್ನು ಮುಂದಿನ ಲೆಕ್ಕಪರಿಶೋಧನೆಗೆ ಒದಗಿಸಲು ಸೂಚಿಸಿದೆ.
➢ ಬೆಂಗಳೂರು ವಿಶ್ವವಿದ್ಯಾಲಯದ ಶಿಕ್ಷಕ ಹಾಗೂ ಶಿಕ್ಷಕ್ಷೇತರ ಸಿಬ್ಬಂದಿಗಳು ನಿವೃತ್ತಿ ಹಾಗೂ ನಿಧನ ಹೊಂದಿದ ನಂತರ ವಸತಿ ಗೃಹವನ್ನು ಖಾಲಿಮಾಡದೆ ವಾಸಿಸುತ್ತಿದ್ದು, ಸಂಬಂಧಿಸಿದವರಿಂದ ವಸತಿ ಗೃಹ ಬಾಡಿಗೆಯನ್ನು ಕಟಾವಣೆ ಮಾಡಿಕೊಂಡಿರುವುದಿಲ್ಲ. ವಸತಿ ಗೃಹವನ್ನು ಖಾಲಿ ಮಾಡದೇ ಬಾಡಿಗೆಯನ್ನು ಕಟಾವಣೆ ಮಾಡಿಲ್ಲದಿರುವುದರಿಂದ ಬೆಂ.ವಿ.ವಿ. ನಿರ್ಲಕ್ಷತೆ ಕಂಡುಬಂದಿದ್ದು, ಸಂಬಂಧಪಟ್ಟವರಿಂದ **<u>ರೂ.16,57,520.00 ವಸೂಲಿಸಿ ವಿವಿ ನಿಧಿಗೆ ಜಮೆ ಮಾಡಲು ಸೂಚಿಸಿದೆ. ವಸತಿ ಗೃಹ ಹಂಚಿಕೆ ವಿವರಗಳನ್ನು ಅನುಬಂಧ–24 ರಲ್ಲಿ ಹಾಗೂ ವಸೂಲಾತಿಯ ಮೊತ್ತದ ವಿವರಗಳನ್ನು ಅನುಬಂಧ–25 ರಲ್ಲಿ ಒದಗಿಸಿದೆ.</u>**	**(ದಿನಾಂಕ:20;05;2015ರ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಲಗತ್ತಿಸಲಾಗಿದೆ). (ಅನುಬಂಧ–130)** (ಪು.ಸಂ.840) ಕಂಡಿಕೆ ಅನುಬಂಧ–25ರ ಕ್ರಮ ಸಂಖ್ಯೆ.1 ರಿಂದ 9 ವರೆಗಿನ ಶಿಕ್ಷಕ ಹಾಗೂ ಶಿಕ್ಷಕೇತರ ಸಿಬ್ಬಂದಿಗಳು ನಿವೃತ್ತಿ ಮತ್ತು ನಿಧನ ಹೊಂದಿದ ನಂತರ, ಕುಟುಂಬದವರು ವಸತಿ ಗೃಹವನ್ನು ತೆರವುಗೊಳಿಸದಿದ್ದು, ಈ ಬಗ್ಗೆ ಅನುಸರಣೆ ಕ್ರಮ ವಹಿಸಿ ಉತ್ತರ ಒದಗಿಸುವಂತೆ ಸೂಚನೆ ನೀಡಲಾಗಿದೆ.

ಆಕ್ಷೇಪಣೆಗಳು	ಉತ್ತರಗಳು
48. 2015–16 ನೇ ಸಾಲಿನಲ್ಲಿ ವಿದ್ಯಾಕಾರ್ಯಶಾಖೆ–1 ರಲ್ಲಿ ಬರುವಂತಹ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಪ್ರವೇಶ ಶುಲ್ಕಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ನ್ಯೂನತೆಗಳು ಇರುತ್ತವೆ. ರೂ.71468050.00 (ಆಕ್ಷೇಪಣೆ) ಹಾಗೂ ರೂ.1664804.00 (ವಸೂಲಾತಿ) (ಕುಲಸಚಿವರು ಆಡಳಿತ ವಿಭಾಗ)	
1. ವಿದ್ಯಾಕಾರ್ಯಶಾಖೆ–1 ರಲ್ಲಿ ಬರುವಂತಹ ಕಾಲೇಜುಗಳಲ್ಲಿ ಈಗಾಗಲೇ ಪ್ರವೇಶ ಪಡೆದಿರುವ 2ನೇ ಹಾಗೂ 3ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ರೂ.600 ರಂತೆ ಪ್ರವೇಶ ಶುಲ್ಕ ಪಾವತಿಸಿದ್ದು, ಈ ಸಂಬಂಧ ಬೆಂ.ವಿ.ವಿಯು ಯಾವುದೇ ಆದೇಶ / ಹೊರಡಿಸಿರುವ ಅಧಿಸೂಚನೆಯನ್ನು ಲೆಕ್ಕತನಿಖೆಗೆ ನೀಡಿರುವುದಿಲ್ಲ ಹಾಗೂ ಕೆಲವು ಕಾಲೇಜುಗಳಲ್ಲಿ 2ನೇ 3ನೇ ಸೆಮಿಸ್ಟರ್‌ಗೆ ಪ್ರವೇಶ ಶುಲ್ಕಗಳನ್ನು ಪಾವತಿಸದೆ ಇರುವುದು ಕಂಡುಬಂದಿರುತ್ತದೆ. ಈ ಸಂಬಂಧ ಕಲಂ 9ಮತ್ತು 10 ರಲ್ಲಿ ಸೂಚಿಸಿರುವ (ರೂ.35021530.00 + ರೂ. 36446520.00) = ರೂ. **7,14,68,050.00** ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರವನ್ನು **ಅನುಬಂಧ–26** ರ'ಲ್ಲಿ ನೀಡಿದೆ. 2. ವಿಶ್ವವಿದ್ಯಾಲಯದ ಅಧಿಸೂಚನೆ– ದಿನಾಂಕ 26.05.2015 ರಂತೆ ದಂಡ ಶುಲ್ಕ ರಹಿತ ದಿನಾಂಕ: 08.07.2015 ಅಂತಿಮ ದಿನಾಂಕವಾಗಿದ್ದು, 09.07.2015 ರಿಂದ 31.07.2015 ರವರೆಗೆ ದಂಡ ಶುಲ್ಕ ರೂ.440 ರಂತೆ (ಪ್ರತಿ ವಿದ್ಯಾರ್ಥಿಗೆ) ಪಾವತಿಸಬೇಕಿದ್ದು, ಅಂತಹ ವಿದ್ಯಾರ್ಥಿಗಳಿಂದ ವಸೂಲಿಸಬೇಕಿರುವ ವಿವರಗಳನ್ನು ಲಗತ್ತಿಸಿರುವ ಅನುಬಂಧದಲ್ಲಿ ಕಲಂ.7 ರಲ್ಲಿ **(ರೂ. 1002200.00)** ರಲ್ಲಿ ಹಾಗೂ ಕಡಿಮೆ ಪಾವತಿಸಿರುವ ಪ್ರವೇಶ ಶುಲ್ಕವನ್ನು ಕಲಂ. 8 ರಲ್ಲಿ **(ರೂ.505404.00)** ರಲ್ಲಿ ಪಟ್ಟಿ ಮಾಡಲಾಗಿದ್ದು, ಸಂಬಂಧಿಸಿದ ಕಾಲೇಜುಗಳಿಂದ ವಸೂಲಿಸತಕ್ಕದ್ದು. 3. 2015–16 ನೇ ಸಾಲಿನ ಅಧಿಸೂಚನೆಯ ಪ್ರಕಾರ ಬಿ.ಸಿ.ಎ & ನಾನ್ ಬಿ.ಸಿ.ಎ ಕೋರ್ಸ್‌ಗಳಿಗೆ ವಿದೇಶಿ ವಿದ್ಯಾರ್ಥಿಗಳು ಅರ್ಹತಾ ಪ್ರಮಾಣ ಪತ್ರವನ್ನು ಪಡೆಯುವ ಮೊದಲು ತಲಾ ರೂ.6,600.00 ಗಳನ್ನು ವಿ.ವಿ.ಗೆ ಪಾವತಿಸಬೇಕಿದ್ದು, ಸದರಿ ಸಾಲಿಗೆ ಪಾವತಿಯಾಗಿರುವ ಸಂಬಂಧಪಟ್ಟ ಚಲನ್‌ಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ. 2015–16 ನೇ ಸಾಲಿನಲ್ಲಿ ಮೇಲ್ಕಂಡ ಕೋರ್ಸ್‌ಗಳಿಗೆ ಒಟ್ಟಾರೆ ಪಾವತಿಯಾಗಿರುವ ಅರ್ಹತಾ ಶುಲ್ಕದ ಮೊತ್ತ ಎಷ್ಟು ಎಂಬ ವಿವರಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲು ಕೋರಿದ್ದು ವಿವರಗಳನ್ನು ಒದಗಿಸಿರುವುದಿಲ್ಲ. 4. ಬಿಪಿಎಡ್ ಸಂಬಂಧ ಪ್ರವೇಶ ಶುಲ್ಕಗಳ ಕಡತಗಳ ಪರಿಶೀಲನೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಯು.ವಿ.ಸಿ.ಇ ಕಾಲೇಜಿನ ಕಡತ ಪರಿಶೀಲನೆಯಲ್ಲಿ ಪ್ರವೇಶ ಶುಲ್ಕಗಳ ಹಾಗೂ ಪರೀಕ್ಷಾ ಶುಲ್ಕಗಳಲ್ಲಿ ವಿನಾಯಿತಿ ಇರುವ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು 20 ಹಾಗೂ ಅಲ್ಪ ಸಂಖ್ಯಾಂತರ ವಿದ್ಯಾರ್ಥಿಗಳು–2 ಇವರುಗಳಿಂದ **ರೂ.1,57,200.00**ಗಳನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಮರುಭರಿಸಿ ವಿಶ್ವವಿದ್ಯಾಲಯದ ನಿಧಿಗೆ ಜಮೆ	ಈ ಕಂಡಿಕೆಯ ಅನುಬಂಧ 26ರಲ್ಲಿ ಅಂಕಣ(7)ರಲ್ಲಿ ಒಟ್ಟು ದಂಡದ ಮೊತ್ತ ರೂ.10,02,200.00 ಗಳಲ್ಲಿ ರೂ.178360.00 ವಸೂಲಾತಿಯಾಗಿದೆ. ಅಂಕಣ (8)ರಲ್ಲಿ ಕಡಿಮೆ ಶುಲ್ಕ ಸಂಗ್ರಹ ರೂ.5,05,404.00ಗಳಲ್ಲಿ ರೂ.54620.00 ವಸೂಲಾತಿಯಾಗಿದೆ. ಆದುದರಿಂದ ಇವುಗಳ ಒಟ್ಟು ಮೊತ್ತ ರೂ.15,07,604.00 ಗಳಲ್ಲಿ ರೂ. 2,27,770.00 ವಸೂಲಾತಿಯಾಗಿದೆ. ಈ ಮೊತ್ತಕ್ಕೆ ವಿಶ್ವವಿದ್ಯಾಲಯದ ನಿಧಿಗೆ ಜಮಾ ಆಗಿರುವುದಕ್ಕೆ ಮತ್ತಿ ಲೆಕ್ಕ ಪತ್ರಗಳಲ್ಲಿ ಸೇರಿರುವುದಕ್ಕೆ "Daily Collection Listing" ಲಗತ್ತಿಸಿದೆ. ಆದುದರಿಂದ ರೂ. 2,27,770.00ಗಳನ್ನು ವಸೂಲಾತಿ ಯಿಂದ ಕೈ ಬಿಡಲು ವಿನಂತಿಸಿದೆ. ಈ ಕಂಡಿಕೆಯಲ್ಲಿ 18 ಕಾಲೇಜುಗಳ ಕಡತಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲವೆಂದು ಸೂಚಿಸಿರುತ್ತೀರಿ, ಆದರೆ ಲೆಕ್ಕಪರಿಶೋಧನೆಗೆ ಸಲ್ಲಿಸಲಾಗಿರುತ್ತದೆ ಅದರಲ್ಲಿ ಲೆಕ್ಕಪರಿಶೋಧಕರು ಕಡತಗಳ ರೈಟ್ ಮಾರ್ಕ್ ಹಾಕಿರುವ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸಲಾಗಿದೆ ಹಾಗೂ ಅಗತ್ಯವಿದ್ದಲ್ಲಿ ಪುನರ್ ಪರಿಶೀಲನೆಗೆ ಒದಗಿಸಲಾಗುವುದು. 1. ಶಾರದ ಮಹಿಳಾ ಪ್ರಥಮ ದರ್ಜೆ ಕಾಲೇಜು, ಮುಳಬಾಗಿಲು 2. ಕೈರಾಲಿ ನಿಕೇತನ ಪದವಿ ಕಾಲೇಜು, ಬೆಂಗಳೂರು 3. ಪ್ರೈಡ್ ಪದವಿ ಕಾಲೇಜು, ಬೆಂಗಳೂರು 4. ಎಸ್.ಜೆ.ಇ.ಎಸ್. ಕಾಲೇಜ್ ಆಫ್ ಹೋಟಲ್ ಮ್ಯಾನೇಜ್‌ಮೆಂಟ್ 5. ಬ್ರಹ್ಮಶ್ರೀ ಶಿಲ್ಪ ಗುರುಕುಲಂ ಕಾಲೇಜು 6. ವಿಲಿಯಮ್ಸ್ ಇಂಟರ್‌ನ್ಯಾಷನಲ್ ಸಂಜೆ ಕಾಲೇಜು, ಬೆಂಗಳೂರು ಅದರಲ್ಲಿ ನೂತನ ಸಂಯೋಜನೆ ಪಡೆದ ಕೆಳಕಂಡ ಕಾಲೇಜುಗಳಲ್ಲಿ ಪ್ರವೇಶವಿಲ್ಲದ ಇರುವ ಕಾರಣ ಪ್ರವೇಶಾನುಮೋದನೆ ಇರುವುದಿಲ್ಲ. 1. ಮೌಂಟ್ ಪ್ರೆಂಟ್ ಕಾಲೇಜು, ಬೆಂಗಳೂರು 2. ಎಂಪಿ ಬಿರ್ಲಾ ಇನ್ಸ್‌ಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ 3. ಇಂಟರ್‌ನ್ಯಾಷಿನಲ್ ಇನ್ಸ್‌ಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಬೆಂಗಳೂರು 4. ಜೋಸ್ಕೋ ಇನ್ಸ್‌ಟ್ಯೂಟ್ ಆಫ್ ಆರ್ಟ್ಸ್, ಸೈನ್ಸ್ ಮತ್ತು ಮ್ಯಾನೇಜ್‌ಮೆಂಟ್ 5. ವೆಂಕಟೇಶ್ವರ ಪದವಿ ಕಾಲೇಜ್, ಚಿಕ್ಕಬಳ್ಳಪುರ 6. ವೆಂಕಟಾದ್ರಿ ಕಾಲೇಜ್ ಆಫ್ ಎ.ಎಸ್. ಮತ್ತು ಕಾಮರ್ಸ್ ಕಾಲೇಜು, ಚಿಂತಾಮಣಿ 7. ಲೋಹಿತ್ ಅಕಾಡಮಿ ಆಫ್ ಕಾಮರ್ಸ್, "ಜನನಿ" ಬೆಂಗಳೂರು

ಆಕ್ಷೇಪಣೆಗಳು	ಉತ್ತರಗಳು
ಮಾಡಿ ಅಗತ್ಯ ದಾಖಲೆಗಳನ್ನು ಲೆಕ್ಕತನಿಖೆಗೆ ಒದಗಿಸಲು ಕೋರಿದ್ದು ವಿವರಗಳನ್ನು ಒದಗಿಸಿರುವುದಿಲ್ಲ. 5. ಕಡತ ಸಂಖ್ಯೆ:53 ರಲ್ಲಿ ಹೆಚ್ಚುವರಿ ಪ್ರವೇಶ 40 ವಿದ್ಯಾರ್ಥಿಗಳಿದ್ದು, ಇದಕ್ಕೆ ನಂತರ ಅನುಮೋದನೆ ಪಡೆಯಲಾಗಿದೆಯೆ ಎಂಬ ಬಗ್ಗೆ ವಿವರಣೆಯನ್ನು ಕೋರಿದ್ದು, ವಿವರಗಳನ್ನು ಒದಗಿಸಿರುವುದಿಲ್ಲ. 6. ಈ ಕೆಳಕಂಡ ಕಾಲೇಜುಗಳ ಕಡತಗಳನ್ನು ಲೆಕ್ಕ ಪರಿಶೋಧನೆಗೆ ಒದಗಿಸಿರುವುದಿಲ್ಲ. 1. Sharada womens FGC Mulabaghalu- ರೂ. 2,22,770.00 2. Kairali Niketan Degree college B'lore- ರೂ 27,750.00 3. Pride Degree College B'lore- ರೂ 74,750.00 4. Mount fort college B'lore. 5. MP Birla Institute Mgt. B'lore 6. SJES college of Hotel Mgt 7. ISBR college B'lore 8. S.V.R Evening college B'lore 9. International Inst of Business Mgt B'lore 10. Smt. Ramamani Sundararaja Iyenger FGC 11. Josco Institute of Arts, Sc & mgt B'lore 12. Brahmarshi Shilpa Gurukulam College 13. Williams International Evening Degree College B'lore 14. Venkateshwara Degree College Chikballapura 15. Venkatadri College of SC & Commerce Chintamani 16. Lohits Academy of Commerce 'Janani' Arcade B'lore 17. G.M.FGC B'lore (Rural) 18. Yoga Study Central Iskon Rajajinagar B'lore 2015–16 ನೇ ಸಾಲಿನ ಶೈಕ್ಷಣಿಕ ವರ್ಷದ ಯು.ಜಿ ಪದವಿ ಪ್ರವೇಶಾತಿಗೆ ಸಂಬಂಧಿಸಿದಂತೆ, 561 ಕಾಲೇಜುಗಳಿಂದ ಒಟ್ಟು ವಿದ್ಯಾರ್ಥಿಗಳು 73,509 ಗಳಿದ್ದು ಒಟ್ಟು ಪ್ರವೇಶ ಶುಲ್ಕ ರೂ.2,41,912,677.00 ವಿತ್ತಾಧಿಕಾರಿಗಳ ವಿಭಾಗಕ್ಕೆ ಜಮೆಯಾಗಿರುತ್ತದೆ. ಡಿ.ಸಿ.ಬಿ. ವಹಿಯನ್ನು ಲೆಕ್ಕಪರಿಶೋಧನೆಗೆ ಸಲ್ಲಿಸಿದ್ದು. ಸದರಿ ವಿಭಾಗದಿಂದ ಪ್ರವೇಶ ಶುಲ್ಕದ ಮೊಬಲಗನ್ನು ಲೆಕ್ಕಸಮನ್ವಯಗೊಳಿಸಿರುವ ವಿವರವನ್ನು ಲೆಕ್ಕತನಿಖೆಗೆ ಒದಗಿಸಲು ಕೋರಿದ್ದು ವಿವರಗಳನ್ನು ಲೆಕ್ಕ ತನಿಖೆಗೆ ಒದಗಿಸಿರುವುದಿಲ್ಲ.	8. ಜಿ.ಎಂ. ಪ್ರ.ದ. ಕಾಲೇಜು, ಬೆಂಗಳೂರು ರೂರಲ್ 9. ಯೋಗಾ ಸ್ಟಡೀಸ್ ಸೆಂಟ್ರಲ್ ಇಸ್ಕಾನ್, ರಾಜಾಜಿನಗರ, ಬೆಂಗಳೂರು 10. ಐ.ಎಸ್.ಬಿ.ಆರ್. ಕಾಲೇಜ್ ಬೆಂಗಳೂರು 11. ಎಸ್.ವಿ.ಆರ್. ಸಂಜೆ ಕಾಲೇಜು, ಬೆಂಗಳೂರು 12. ಶ್ರೀಮತಿ ರಮಮಣಿ ಸುಂದರಾಜ ಐಯಂಗಾರ್ ಪ್ರ.ದ.ಕಾಲೇಜು ಮೇಲೆ ತಿಳಿಸಿರುವ ಮಾಹಿತಿಯನ್ನು ಪರಿಗಣಿಸಿ ಆಕ್ಷೇಪಣೆಯನ್ನು ಕೈಬಿಡುವಂತೆ ವಿನಂತಿಸಿದೆ.
49. ಶೈಕ್ಷಣಿಕ ವರ್ಷದ ಬಿ.ಎಡ್ ಪದವಿ ಪ್ರವೇಶ ಶುಲ್ಕ ಮೊಬಲಗು ರೂ. 30530.00 (ವಸೂಲಾತಿ) (ಕುಲಸಚಿವರು ಆಡಳಿತ ವಿಭಾಗ)	
2015–16 ನೇ ಸಾಲಿನ ಶೈಕ್ಷಣಿಕ ವರ್ಷದಬಿ.ಎಡ್ ಪ್ರವೇಶಾತಿ ಸಂಬಂಧಿಸಿದಂತೆ, ದಿನಾಂಕ 07.05.2016 ರ ಬೆಂ.ವಿ.ವಿ. ಅಧಿಸೂಚನೆಯಂತೆ ದಿನಾಂಕ 22.03.2016 ರಿಂದ 02.04.2016 ರವರೆಗೆ ವಿದ್ಯಾರ್ಥಿಗಳ ದಾಖಲಾತಿಗೆ ದಂಡ ಶುಲ್ಕ ಪ್ರತಿ ವಿದ್ಯಾರ್ಥಿಗೆ ರೂ.370.00 ರಂತೆ ವಸೂಲಿಸಬೇಕಿರುತ್ತದೆ. ಅದರಂತೆ **ಅನುಬಂಧ–27** ರಲ್ಲಿ ಲಗತ್ತಿಸಿರುವ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳಿಂದ ದಂಡ	ಈ ಕಂಡಿಕೆಯಲ್ಲಿ ಅನುಬಂಧ–27ರಲ್ಲಿನ ಕ್ರಮ ಸಂಖ್ಯೆ(4)ರ ಎಜೆಜಿ ಕಾಲೇಜ್ ಆಫ್ ಎಜುಕೇಶನ್ ರವರಿಂದ ಡಿಡಿ ಸಂಖ್ಯೆ 829855 ದಿನಾಂಕ:09.05.2018 (ಜೆ.ಎಫ್ 218–06753 ದಿನಾಂಕ:09.05.2018) ರೂ.2960.00 ಗಳನ್ನು ಮತ್ತು ಕ್ರಮ ಸಂಖ್ಯೆ (8)ರ ಜಿಎಮ್ ಕಾಲೇಜ್ ಆಫ್ ಎಜುಕೇಶನ್ ಜಿಎಂ.ಕ್ಯಾಂಪಸ್ ರವರಿಂದ ಡಿಡಿ ಸಂಖ್ಯೆ 463745 ದಿನಾಂಕ:02.07.2018(ಜೆ.ಎಫ್.ಸಂಖ್ಯೆ218–15500

ಆಕ್ಷೇಪಣೆಗಳು	***ಉತ್ತರಗಳು***
ಶುಲ್ಕ ಹಾಗೂ ಬಾಕಿ ಪ್ರವೇಶ ಶುಲ್ಕವನ್ನು ವಸೂಲಿಸಿರುವುದಿಲ್ಲ. ಸದರಿ ಮೊತ್ತ ರೂ.28490.00 ಹಾಗೂ ರೂ.2040.00 ಗಳಾಗಿದ್ದು, ಸಂಬಂಧಪಟ್ಟವರಿಂದ ವಸೂಲಿಸಲು ಸೂಚಿಸಿದೆ ಹಾಗೂ ಈ ಮೇಲ್ಕಂಡ ವಿವಿ ಅಧಿಸೂಚನೆಯಂತೆ ದಿನಾಂಕ 2.4.2016 ರವರೆಗೆ ಮಾತ್ರ ಪ್ರವೇಶಾತಿ ಪಡೆಯಲು ಅವಕಾಶವಿದ್ದು, **ಅನುಬಂಧ–28** ರಲ್ಲಿ ವಿವರಿಸಿದಂತೆ ಸದರಿ ಕಾಲೇಜುಗಳಲ್ಲಿ ವಿಳಂಬವಾಗಿ ವಿದ್ಯಾರ್ಥಿಗಳಿಂದ ಪ್ರವೇಶ ಶುಲ್ಕ ಪಡೆದಿರುವುದು ಕಂಡುಬಂದಿದ್ದು, ಈ ಕುರಿತು ಸ್ಪಷ್ಟೀಕರಣವನ್ನು ನೀಡಲು ಕೋರಿದ್ದು ವಿವರಗಳನ್ನು ಸಲ್ಲಿಸಿರುವುದಿಲ್ಲ.	ದಿನಾಂಕ:03.07.2018) ರೂ.5180.00 ಗಳನ್ನು ವಿಶ್ವವಿದ್ಯಾಲಯ ನಿಧಿಗೆ ಜಮಾಮಾಡಲಾಗಿದೆ. ಆದುದರಿಂದ ವಸೂಲಾತಿಯಿಂದ ರೂ.8140.00 ಗಳನ್ನು ಕೈ ಬಿಡುವಂತೆ ಅಪರ ನಿರ್ದೇಶಕರಿಗೆ ಪತ್ರ ದಿನಾಂಕ:18.07.2018ರಲ್ಲಿ ಕೋರಲಾಗಿದೆ. ಈಗ ವಸೂಲಾತಿಯಾಗಿರುವ ಮೊತ್ತವನ್ನು ಕೈ ಬಿಡುವಂತೆ ಮತ್ತೊಮ್ಮೆ ವಿನಂತಿಸಲಾಗಿದೆ.
50. ಪ್ರವೇಶ ಶುಲ್ಕ ನಷ್ಟದ ಮೊಬಲಗು : ರೂ.13,32,132 ಆಕ್ಷೇಪಣೆ ರೂ. 48,780 ವಸೂಲಾತಿ. (ಸಿ.ಬಿ.ಎಸ್.ಎಮ್.ಎಸ್ ವಿಭಾಗ)	
1. ನವ್ಯ ಎಸ್.ಪಿ ಇವರು 2013–14 ನೇ ಸಾಲು I & II year MBA ಇವರಿಗೆ ಬೆಂ.ವಿ.ವಿ.ಯ ಭೋಧಕ/ಭೋಧಕೇತರ ಸಿಬ್ಬಂದಿಗಳಿಗೆ ನೀಡಿರುವ ವಿನಾಯಿತಿ ಅಡಿಯಲ್ಲಿ ಪ್ರವೇಶ ದಾಖಲಾಗಿದ್ದು, ಸದರಿಯವರು ಸದರಿಯವರಿಗೆ ಯಾವುದೇ ಪ್ರವೇಶ ಶುಲ್ಕ ಪಡೆದಿರುವುದಿಲ್ಲ. ಬೆಂ.ವಿ.ವಿಯು ನೌಕರರ ಮಕ್ಕಳಿಗೆ ವಿನಾಯಿತಿ ನೀಡುವ ಬಗ್ಗೆ ವಿಶ್ವವಿದ್ಯಾಲಯದ ಪರಿನಿಯಮಗಳಲ್ಲಿ ಅಳವಡಿಸಿಕೊಂಡಿದೆಯೆ? ಆಗಿದ್ದಲ್ಲಿ ವಿಶ್ವವಿದ್ಯಾಲಯವು ಅಳವಡಿಸಿಕೊಂಡಿರುವ ಪರಿನಿಯಮವನ್ನು ಸಲ್ಲಿಸುವುದು ಅಲ್ಲಿಯವರೆಗೂ 1 & 2 ನೇ ವರ್ಷದ ಒಟ್ಟು ಮೊತ್ತ ರೂ.48,780.00 ಗಳನ್ನು ಸದರಿಯವರಿಂದ ವಸೂಲಿಸಿ ವಿವಿ ನಿಧಿಗೆ ಜಮೆ ಮಾಡುವುದು.	ಈ ಕಂಡಿಕೆ ಸಂಬಂಧಿಸಿದಂತೆ ಪರಿನಿಯಮಗಳನ್ನು ರಚಿಸಿಕೊಳ್ಳಲಾಗಿದೆ. **(ಅನುಬಂಧ–131)** (ಪು.ಸಂ.841) ಪ್ರತಿಯನ್ನು ಲಗತ್ತಿಸಿದೆ. ಕುಲಸಚಿವರು ಆದೇಶ ನೀಡಿದ್ದು. ರೂ.48780/–ವಿದ್ಯಾರ್ಥಿನಿಗೆ ಹಿಂದಿರುಗಿಸಲಾಗಿದೆ ಪ್ರತಿಯನ್ನು ಲಗತ್ತಿಸಿದೆ. ರೂ.48,780/–ವಸೂಲಾತಿ ಕೈ ಬಿಡಲು ಕೋರಿದೆ.
2. 2013–14 ರಿಂದ 2015–16 ನೇ ಸಾಲಿನವರೆಗೆ ಸಮಾಜ ಕಲ್ಯಾಣ ಇಲಾಖೆಯಿಂದ ಬಂದಿರುವ ಒಟ್ಟು ವಿದ್ಯಾರ್ಥಿವೇತನ ರೂ.13,13,432.00 ಗಳನ್ನು ವಿತ್ತಾಧಿಕಾರಿಗಳ ಖಾತೆಗೆ ಜಮೆ ಮಾಡಲು ಸೂಚಿಸಿದೆ. ವಿವರ ಲೆಕ್ಕತನಿಖೆಗೆ ನೀಡಲು ಸೂಚಿಸಿದೆ. ಅಲ್ಲಿಯವರೆಗೂ ಸದರಿ ಮೊತ್ತವನ್ನು ಆಕ್ಷೇಪಣೆಯಲ್ಲಿಡಲಾಗಿದೆ.	
3. ಸಮಾಜ ಕಲ್ಯಾಣ ಇಲಾಖೆಯಿಂದ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ಮಂಜೂರಾಗಿರುವ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಗಳ ಹೆಸರಿಗೆ ಚೆಕ್ ಬರೆದಿದ್ದು, ವಿದ್ಯಾರ್ಥಿಗಳು ಚೆಕ್ ಪಡೆಯದೇ ಇರುವುದರಿಂದ ಸದರಿ ವಿದ್ಯಾರ್ಥಿಗಳ ಒಟ್ಟು ಮೊತ್ತ ರೂ.18,700.00 ಗಳನ್ನು ಸಮಾಜ ಕಲ್ಯಾಣ ಇಲಾಖೆಗೆ ಹಿಂತಿರುಗಿಸಿ, ಲೆಕ್ಕತನಿಖೆಗೆ ವಿವರ ನೀಡುವುದು. ಅಲ್ಲಿಯವರೆಗೂ ಸದರಿ ಮೊತ್ತವನ್ನು ಆಕ್ಷೇಪಣೆಯಲ್ಲಿಡಲಾಗಿದೆ. **ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ವೇತನ** ಕ್ರ.ಸಂ | ಚೆಕ್ ಸಂಖ್ಯೆ/ದಿನಾಂಕ | ಮೊಬಲಗು | ಯಾರಿಗೆ ವಿತರಿಸಿದೆ. 1 | 026332/4.4.2015 | 6600.00 | ಎಸ್ಸಿ/ಎಸ್ಟಿ ವಿದ್ಯಾರ್ಥಿ ವೇತನದ ಮೊಬಲಗನ್ನು ಚೇತನ್ ಪವಾರ್ ರವರಿಗೆ ಪಾವತಿಸಿದೆ.	ರೂ.18,700/– ಗಳನ್ನು ಸಮಾಜ ಕಲ್ಯಾಣ ಇಲಾಖೆಗೆ ದಿನಾಂಕ ಹಿಂತಿರುಗಿಸಲಾಗಿದೆ. ಅದರ ಪತ್ರಿಯನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ. ಈ ಕೆಳಕಂಡ 3 (ಮೂರು) ವಿದ್ಯಾರ್ಥಿಗಳಿಗೆ ಸಂಬಂಧಪಟ್ಟಂತೆ, ರೂ.18,700/– ಸಮಾಜ ಕಲ್ಯಾಣ ಇಲಾಖೆ ಖಾತೆಗೆ ಜಮೆ ಮಾಡಿದೆ. ಖಜಾನೆ ಚಲನ್ ಪ್ರತಿ ಲಗತಿಸಿದೆ **(ಅನುಬಂಧ–132)** (ಪು.ಸಂ.844). 1) ಚೇತನ್ ಪವರ್ – ರೂ. 6,600/–, 2) ಅಮಿತ್ ಬಾಯ್ – 5,500/–, 3)ಬಸವರಾಜು–6,600/– ರೂ.18,700/–ಗಳ ಆಕ್ಷೇಪಣೆ ಕೈ ಬಿಡಲು ಕೋರಿದೆ.

ಆಕ್ಷೇಪಣೆಗಳು				ಉತ್ತರಗಳು
2	026333/4.4.2015	5500.00	ಎಸ್‌ಸಿ/ಎಸ್‌ಟಿ ವಿದ್ಯಾರ್ಥಿ ವೇತನದ ಮೊಬಲಗನ್ನು ಅಮಿತ್‌ಬಾಯ್‌ರವರಿಗೆ ಪಾವತಿಸಿದೆ.	
3	023608/3.11.2014	6600.00	ಎಸ್‌ಸಿ/ಎಸ್‌ಟಿ ವಿದ್ಯಾರ್ಥಿ ವೇತನದ ಮೊಬಲಗನ್ನು ಬಸವರಾಜ್ ರವರಿಗೆ ಪಾವತಿಸಿದೆ.	

51. ಬೆಂಗಳೂರು ವಿಶ್ವವಿದ್ಯಾಲಯವು ಮೈಸೂರು ಪೇಪರ್ ಮಿಲ್ಸ್ ಸಂಸ್ಥೆಯಲ್ಲಿ ರೂ.3 ಲಕ್ಷಗಳನ್ನು ಠೇವಣಿ ಇಟ್ಟಿರುವ ಬಗ್ಗೆ. (ಮುದ್ರಣಾಲಯ ವಿಭಾಗ)

1. ಬೆಂಗಳೂರು ವಿಶ್ವವಿದ್ಯಾಲಯವು ಮೈಸೂರು ಪೇಪರ್ ಮಿಲ್ಸ್ ಸಂಸ್ಥೆಯಲ್ಲಿ 3 ಲಕ್ಷ ಮೊತ್ತವನ್ನು ಕಾಗದ ಖರೀದಿಸುವ ಸಲುವಾಗಿ ಠೇವಣಿಯಾಗಿ ಇಟ್ಟಿದ್ದು, ಕರಾರು ಒಪ್ಪಂದ ದಿನಾಂಕ: 30.12.2002 ರಂತೆ ಪ್ರತಿ ವರ್ಷ 12% ರಂತೆ ಬಡ್ಡಿ ನೀಡಬೇಕಾಗಿರುತ್ತದೆ. ಈ ಬಗ್ಗೆ ಲೆಕ್ಕಪರಿಶೋಧನೆಯಲ್ಲಿ 2007–08 ನೇ ಸಾಲಿನಿಂದಲೂ ಆಕ್ಷೇಪಿಸಲಾಗುತ್ತಿದ್ದು, ಪ್ರತಿ ವರ್ಷ ಬರಬೇಕಿರುವ ಬಡ್ಡಿ ಹಣದ ಮೊತ್ತವನ್ನು ವಸೂಲಾತಿಗೆ ಸೂಚಿಸಲಾಗುತ್ತಿದೆ
2. ಮುಂದುವರೆದು ಮುದ್ರಣಾಲಯದ ನಿರ್ದೇಶಕರು ಈ ಬಗ್ಗೆ ಕ್ರಮವಹಿಸಿ ದಿನಾಂಕ 17.05.2014 ರಲ್ಲಿ ಮೈಸೂರು ಪೇಪರ್ ಮಿಲ್ಸ್ ಸಂಸ್ಥೆಗೆ ಪತ್ರ ಬರೆದಿದ್ದು, ಇದರಲ್ಲಿ ರೂ.3,84,000.00 ಬಡ್ಡಿ ಹಣ ಬರಬೇಕೆಂದು ತಿಳಿಸಿರುತ್ತೀರಿ ಹಾಗೂ ದಿನಾಂಕ 25.07.2015 ರ ಪತ್ರದಲ್ಲಿ ದಿನಾಂಕ 01.04.2003 ರಿಂದ 31.03.2007 ರ ತನಕ ರೂ. 4% ಬಡ್ಡಿ ನೀಡಲಾಗಿದೆ. ಆದರೆ ಹಣದ ಚೆಕ್ ಅಥವಾ ಡಿಡಿಯಾಗಲಿ ಈ ಸಂಸ್ಥೆಗೆ ಬಂದಿರುವುದಿಲ್ಲ ವೆಂದು ತಿಳಿಸಿರುತ್ತೀರಿ. ಈ ಸಂಬಂಧ ಬಂದಿರುವ ಕ್ರೆಡಿಟ್ ನೋಟ್ ಅಥವ ಲೆಡ್ಜರ್ ಖಾತೆಗಳನ್ನು ಸಲ್ಲಿಸುವುದು.
3. ದಿನಾಂಕ 26.02.2016 ರಲ್ಲಿ ಮೈಸೂರು ಪೇಪರ್ ಮಿಲ್ಸ್ ಸಂಸ್ಥೆಯವರು ಪತ್ರವನ್ನು ಬರೆದಿದ್ದು, ಇದರೊಂದಿಗೆ B-002 B'lore University PTG PRESS-Ledger Account ದಿನಾಂಕ01.04.2008ರಿಂದ ದಿನಾಂಕ 31.09.2015 ರವರೆಗೆ ಸಲ್ಲಿಸಿದ್ದು, 2008–09 ನೇ ಸಾಲಿಗೆ ರೂ.21528.00 ಹಾಗೂ 2009–10 ರಿಂದ 2010–11 ನೇ ಸಾಲಿಗೆ ರೂ.21,528.00 ರಂತೆ ಒಟ್ಟು ರೂ. 64,584.00 ಮಾತ್ರ ಸಲ್ಲಿಸಿದ್ದು, ಬಾಕಿ ಸಾಲುಗಳ ಅಂದರೆ ದಿನಾಂಕ 01.04.2011 ರಿಂದ 31.03.2014 ರವರೆಗೆ ಯಾವುದೇ ಬಡ್ಡಿ ಹಣ ಪಾವತಿಸಿರುವುದಿಲ್ಲ. [ಚೆಕ್ ಸಂ:088226, ದಿನಾಂಕ 30.04.2014 ರಲ್ಲಿ ಚೆಕ್ ವಾಪಸ್ಸು ಪಡೆದಿರುತ್ತಾರೆ]

ಈ ಮೇಲಿನ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ,

I. ದಿನಾಂಕ 01.04.2003 ರಿಂದ 31.03.2007 ರವರೆಗೆ ಒಟ್ಟು ಎಷ್ಟು ಬಡ್ಡಿ ಹಣ ಬಂದಿದೆ? ಹಾಗೂ ಬರಬೇಕಿರುವ ಬಾಕಿ ಬಡ್ಡಿ ಹಣದ ಲೆಕ್ಕ ಹಾಕಿ. ವಿವರವನ್ನು ಲೆಕ್ಕಪರಿಶೋಧನೆಗೆ ಸಲ್ಲಿಸುವುದು.

ಆಕ್ಷೇಪಣೆಯಲ್ಲಿ 2008–09 ರಿಂದ 2010–11 ರ ವರೆಗೆ ಬರಬೇಕಾದ ಬಡ್ಡಿ ರೂ.1,08,000/– ಗಳಲ್ಲಿ ರೂ.65,584/– ಬಂದಿರುವುದಾಗಿ ತಿಳಿಸಿ, ಬಾಕಿ ಮೊತ್ತ ರೂ.43,416.00 ಗಳನ್ನು ವಸೂಲಾತಿಗೆ ಸೂಚಿಸಿರುತ್ತದೆ.

ಅದೇ ರೀತಿ 2011–12 ರಿಂದ 2013–14 ರವರೆಗೆ ರೂ.1,08,000/– ಗಳನ್ನು ವಸೂಲಾತಿಗೆ ಸೂಚಿಸಿರುತ್ತದೆ. ಇದರಿಂದ ಒಟ್ಟು ರೂ.1,51,416/– ಗಳನ್ನು ವಸೂಲಾತಿಗೆ ಸೂಚಿಸಿರುತ್ತದೆ.

ಆದರೆ ಈ ಕೆಳಕಂಡ ಲೆಕ್ಕಪರಿಶೋಧನಾ ವರದಿಗಳಲ್ಲಿ ರೂ.1,08,000/– ಗಳನ್ನು ಈಗಾಗಲೇ ಆಕ್ಷೇಪಣೆಯಲ್ಲಿಟ್ಟಿರುತ್ತದೆ.

ಕ್ರಮ ಸಂ.	ಲೆಕ್ಕಪರಿಶೋಧನಾ ವರದಿಯ ವರ್ಷ	ಕಂಡಿಕೆ	ಮೊತ್ತ
1	2010-11	2.2.2.17	36,000.00
2	2012-13	60	36,000.00
3	2013-14	65	36,000.00
		ಒಟ್ಟು ಮೊತ್ತ ರೂ.	**1,08,000.00**

ಇದರಿಂದಾಗಿ ಹಿಂದಿನ ವರ್ಷಗಳಲ್ಲಿ ವಸೂಲಾತಿಗೆ ಸೂಚಿಸಿರುವ ಮೊತ್ತವನ್ನು ಮತ್ತೆ 2015–16ನೇ ಸಾಲಿನಲ್ಲಿಯೂ ವಸೂಲಾತಿಗೆ ಸೂಚಿಸಿದಂತೆ ಆಗುತ್ತದೆ.

ಹಿಂದೆ ಮೈಸೂರ್ ಪೇಪರ್ ಮಿಲ್ಸ್ ಸಂಸ್ಥೆಗೆ ಕೊಟ್ಟಿದ್ದಂತಹ ಠೇವಣಿಯ ಮೊತ್ತ ರೂ.3,00,000.00 ಗಳನ್ನು ಚೆಕ್ ನಂ.088226 ದಿನಾಂಕ:30.04.2014 ರಲ್ಲಿ ಬಂದಿರುವುದರಿಂದ 2014–15ನೇ ಸಾಲಿನಲ್ಲಿಯೇ ಮುಕ್ತಾಯಗೊಂಡಿರುತ್ತದೆ. ಆದರೆ 2015–16ನೇ ಸಾಲಿನಲ್ಲಿ ಯಾವುದೇ ವಹಿವಾಟು ನಡೆದಿರುವುದಿಲ್ಲ.

ಈಗಾಗಲೇ ಹಿಂದಿನ ವರ್ಷಗಳ ಆಕ್ಷೇಪಣೆಗಳಿಗೆ ಉತ್ತರಗಳನ್ನು ನೀಡಿ. ಆ ಸಂಸ್ಥೆಯವರು ಆರ್ಥಿಕ ಸಂಕಷ್ಟದಿಂದ ಠೇವಣಿಗೆ ಬಡ್ಡಿಕೊಡಲು ಸಾಧ್ಯವಿಲ್ಲವೆಂಬ ಅಂಶವನ್ನು ತಿಳಿಸಿ ಬಾಕಿ ಉಳಿಸಿರುವ ಬಡ್ಡಿಯು ಸೇರಿ ವಿಶ್ವವಿದ್ಯಾಲಯಕ್ಕೆ ಕೊಡಬೇಕಾಗಿದ್ದು, ಬಾಕಿಯ ಮೊತ್ತಕ್ಕೆ ಕಾಗದ ವನ್ನು ಸರಬರಾಜು ಮಾಡಿರುವ ಮಾಹಿತಿಯನ್ನು ಒದಗಿಸಲಾಗಿದೆ.

ಆಕ್ಷೇಪಣೆಗಳು	ಉತ್ತರಗಳು
II. 2008–09 ರಿಂದ 2010–11 ನೇ ಸಾಲಿನವರೆಗೆ ಒಟ್ಟು ರೂ.1,08,000.00 ಬಡ್ಡಿ ಹಣ ಬರಬೇಕಿದ್ದು. [12% ರಂತೆ] ರೂ.64,584.00 ಮಾತ್ರ ಜಮೆಯಾಗಿದ್ದು, ಬಾಕಿ ರೂ.43,416.00 ಗಳನ್ನು ಸದರಿ ಸಂಸ್ಥೆಯಿಂದ ವಸೂಲಿಸುವುದು. III. ದಿನಾಂಕ 01.04.2011 ರಿಂದ 2014 ರವರೆಗೆ 3 ವರ್ಷದ ಬಡ್ಡಿ ರೂ.1,08,000.00 ಗಳನ್ನು ವಸೂಲಿಸುವುದು. ಒಟ್ಟು II & III ರೂ. 1,51,416.00 ಗಳನ್ನು ಸಂಸ್ಥೆಯಿಂದ ವಸೂಲಿಸಿ ವಿವಿ ನಿಧಿಗೆ ಜಮೆ ಮಾಡಿ ವಿವರವನ್ನು ಲೆಕ್ಕಪರಿಶೋಧನೆಗೆ ನೀಡಲು ಸೂಚಿಸಿದೆ. ಈ ಬಗ್ಗೆ ಸ್ಪಷ್ಟೀಕರಣವನ್ನು ಕೋರಿದ್ದು, ಯಾವುದೇ ಅನುಸರಣಾ ವರದಿ ನೀಡಿರುವುದಿಲ್ಲ. ಆದ ಕಾರಣ ರೂ.1,51,416.00 ಗಳನ್ನು ವಸೂಲಿಸಲು ಸೂಚಿಸಿದೆ.	2015–16ನೇ ಸಾಲಿನಲ್ಲಿ ಯಾವುದೇ ವಹಿವಾಟು ನಡೆಯದಿರುವುದರಿಂದಲೂ ಹಾಗೂ ಈ ಹಿಂದೆಯೆ ಹಲವು ವರ್ಷಗಲಲ್ಲಿ ವಸೂಲಾತಿಗೆ ಸೂಚಿಸಿದ್ದರೂ ಮತ್ತೊಮ್ಮೆ ವಸೂಲಾತಿಗೆ ಸೂಚಿಸಿರುವುದರಿಂದ ವಸೂಲಾತಿ ಮೊತ್ತವೂ ಎರಡು ಸಲ ಸೇರಿರುವುದರಿಂದ ವಸೂಲಾತಿಯನ್ನು ಕೈ ಬಿಡಲು ಕೋರಿದೆ. ಅಪರ ನಿರ್ದೇಶಕರಿಗೆ ಉತ್ತರವನ್ನು ಪತ್ರ ದಿನಾಂಕ:28.05.2018ರಲ್ಲಿ ಒದಗಿಸಿ ಆಕ್ಷೇಪಣೆ ಮೊತ್ತ ಕೈ ಬಿಡುವಂತೆ ಕೋರಲಾಗಿತ್ತು. ಈಗ ಮತ್ತೊಮ್ಮೆ ಆಕ್ಷೇಪಣೆ ಮೊತ್ತ ಕೈ ಬಿಡುವಂತೆ ವಿನಂತಿಸಲಾಗಿದೆ.
52. ವಿದ್ಯಾರ್ಥಿ ವೇತನಕ್ಕೆ ಸಂಬಂಧಿಸಿದ ವಿವರ ಪರಿಶೀಲನೆಗೆ ಒದಗಿಸದಿರುವ ಬಗ್ಗೆ	
2015–16ನೇ ಸಾಲಿನಲ್ಲಿ **ಅಂಚೆ ತೆರಪು ಮತ್ತು ದೂರ ಶಿಕ್ಷಣ ನಿರ್ದೇಶನಾಲಯ,** ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇವರಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಸ್ವೀಕರಿಸಿರುವ ವಿದ್ಯಾರ್ಥಿವೇತನವನ್ನು ಲೆಕ್ಕ ಖಾತೆ ಸಂಖ್ಯೆ 54051173030ಕ್ಕೆ ಜಮಾ ಮಾಡುತ್ತಿದ್ದು ಜಮೆ ಹಾಗೂ ಪಾವತಿ ವಿವರಗಳನ್ನು ಪರಿಶೀಲಿಸಲಾಗಿ ಕೆಳಕಂಡ ನ್ಯೂನತೆಗಳು ಕಂಡು ಬಂದಿರುತ್ತದೆ 1. ವಿದ್ಯಾರ್ಥಿ ವೇತನ ಸಕಾಲದಲ್ಲಿ ಪಾವತಿಯಾಗಿರುವುದಿಲ್ಲ. 2. ವಿಳಂಬ ಹಾಗೂ ಪಾವತಿ ಆಗದೇ ಇರುವುದು ಕಂಡುಬಂದಿರುತ್ತದೆ. 3. ಹಿಂದಿನ ಸಾಲಿನ ವಿದ್ಯಾರ್ಥಿ ವೇತನವು ಸಹ ಪ್ರಸ್ತುತ ಸಾಲಿನಲ್ಲಿ ಬಿಡುಗಡೆ ಆಗುತ್ತಿದ್ದು ಯಾವ ಯಾವ ಸಾಲಿನಲ್ಲಿ ವಿತರಿಸಲಾಗಿದೆ, ಬಾಕಿ ಇರುವ ಮೊತ್ತ ಎಷ್ಟು ಎಂಬುದು ನಿಖರವಾಗಿ ಕಂಡು ಬಂದಿರುವುದಿಲ್ಲ. **ಹಾಗೂ** 1. ವಿದ್ಯಾರ್ಥಿ ವೇತನ ಸ್ವೀಕೃತಿ ಹಾಗೂ ವಿತರಣೆ ಕುರಿತಂತೆ ಲೆಕ್ಕಖಾತೆಯ ಲೆಕ್ಕ ಸಮನ್ವಯ ಮಾಡಿರುವ ವಿವರ. 2. ವಿದ್ಯಾರ್ಥಿವೇತನ ಸ್ವೀಕೃತಿ ಹಾಗೂ ವಿತರಣೆ ಕುರಿತಂತೆ ಲೆಕ್ಕಖಾತೆಯ ಲೆಕ್ಕ ಸಮನ್ವಯ ಮಾಡಿರುವ ವಿವರ 3. ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಹಾಗೂ ಇತರೆ ತಾಲ್ಲೂಕುಗಳಿಂದ ವಿದ್ಯಾರ್ಥಿ ವೇತನ ಮಂಜೂರು ಮಾಡಿದ ಮೊಬಲಗಿಗೆ ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ಪಾವತಿಸಿ ವಿದ್ಯಾರ್ಥಿ ವೇತನ ವಿತರಣೆಯಾಗದೇ ಉಳಿದಿರುವ ಮೊತ್ತವನ್ನು ಜಮೆ ಮಾಡಿರುವ ಬಗ್ಗೆ ಹಾಗೂ ವಿದ್ಯಾರ್ಥಿ ವೇತನ ವಿತರಣೆಯಾದ ಕೂಡಲೇ ಅಕ್ವಿಟೆನ್ಸ್‌ನ್ನು ಸದರಿ ಕಚೇರಿಗೆ ಕಳುಹಿಸಲು ದಿ:06–03–2015ರಲ್ಲಿ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳಿಂದ ಆದೇಶವಾಗಿದ್ದು ಈ ಕುರಿತು ಕೈಗೊಂಡ ಕ್ರಮದ ವಿವರ. (**ಅನುಬಂಧ–29**	ನಿರ್ದೇಶನಾಲಯದಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ಹೆಚ್ಚಾಗಿ ಉದ್ಯೋಗಸ್ಥರಾಗಿರುವುದರಿಂದ ವಿದ್ಯಾರ್ಥಿ ವೇತನ ಮಂಜೂರಾಗಿದ್ದರೂ ಸಹ ಸಂಬಂಧಪಟ್ಟ ವರ್ಷಗಳಲ್ಲಿ ನಿರ್ದೇಶನಾಲಯಕ್ಕೆ ಬಂದು ಕಛೇರಿ ವೇಳೆಯಲ್ಲಿ ಸ್ವೀಕರಿಸದೇ ಇರುವುದರಿಂದ ವಿತರಣೆ ಮಾಡದಿರುವ ವಿದ್ಯಾರ್ಥಿವೇತನ ಉಳಿದಿದ್ದು ಸದರಿ ಹಣವನ್ನು ಸ್ವೀಕರಿಸಲು ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ ಪದವಿ ಮುಗಿಸುವ ಕನಿಷ್ಟ 3 ವರ್ಷ ಅವಧಿಯವರೆಗೂ ಕಾಲಾವಕಾಶ ನೀಡಿ ತದ ನಂತರ ಬಾಕಿ ಉಳಿದಿರುವ ಹಣವನ್ನು ಸಮಾಜ ಕಲ್ಯಾಣ ಇಲಾಖೆಗೆ ಹಿಂದಿರುಗಿಸಲು ಕ್ರಮಕ್ಕೈಗೊಳ್ಳಲಾಗಿದೆ ಸರ್ಕಾರದ ಆದೇಶದಂತೆ ವಿದ್ಯಾರ್ಥಿಗಳು ಯಾವ ಯಾವ ತಾಲ್ಲೂಕಿಗೆ ಸಂಬಂಧಪಟ್ಟಿರುತ್ತಾರೋ ಆಯಾಯ ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆಗಳಿಂದಲೇ ಮಂಜೂರು ಮಾಡಲು ಆದೇಶಿಸಲಾಗಿದೆ. ಅದರಂತೆ ಆಯಾಯ ತಾಲ್ಲೂಕುಗಳಿಂದ ಮಂಜೂರಾದ ವಿದ್ಯಾರ್ಥಿವೇತನ ಹಿಂದೆ ಚೆಕ್‌ಗಳ ಮುಖಾಂತರ ಕಳುಹಿಸಲಾಗುತ್ತಿತ್ತು. ಆದರೆ ಈಗಿನ ಬ್ಯಾಂಕಿನ ನಿಯಮದಂತೆ RTGS ಮುಖಾಂತರ ಹಣವನ್ನು ತಮ್ಮ ಖಾತೆಗೆ ಜಮೆ ಮಾಡಲಾಗುತ್ತಿದೆ. ಆದರೆ ನಮ್ಮ ಖಾತೆಗೆ ಹಣ ಸಂದಾಯವಾಗಿ ಸುಮಾರು 6–7 ತಿಂಗಳು ಕಳೆದರೂ ನಮ್ಮ ಕಛೇರಿಗೆ ಆಯಾ ತಾಲ್ಲೂಕ್‌ಗಳಿಂದ ಮಂಜೂರಾತಿ ಆದೇಶ ಮತ್ತು ವಿದ್ಯಾರ್ಥಿ ವೇತನದ ಪಟ್ಟಿಯನ್ನು ವಿಳಂಬವಾಗಿ ಕಛೇರಿಗೆ ಕಳುಹಿಸುವುದರಿಂದ ಕಛೇರಿಯ ದಾಖಲೆಗೂ & ಬ್ಯಾಂಕಿನ ದಾಖಲೆಗೂ ವ್ಯತ್ಯಾಸವಾಗಿರುವುದು. ಆದುದರಿಂದ ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಚೆಕ್ ಸ್ವೀಕೃತಿ ವಹಿಗೂ ಮತ್ತು ಬ್ಯಾಂಕ್ ಪಾಸ್ ಶೀಟ್‌ಗೂ ವ್ಯತ್ಯಾಸಕ್ಕೆ ಸಮನ್ವಯಗೊಳಿಸಿ, ಮಾಹಿತಿ ಒದಗಿಸುವಂತೆ ಸೂಚನೆ ನೀಡಲಾಗಿದೆ.

ಆಕ್ಷೇಪಣೆಗಳು	ಉತ್ತರಗಳು
ರಲ್ಲಿ ತೋರಿದೆ) ಈ ಮೇಲಿನ ವಿವರಗಳನ್ನು ಒದಗಿಸಲು ಕೋರಲಾಗಿತ್ತು, ಆದರೆ ಸದರಿ ವಿವರಗಳನ್ನು ಒದಗಿಸಿರುವುದಿಲ್ಲವಾದ ಕಾರಣ ಮುಂದಿನ ಲೆಕ್ಕಪರಿಶೀಲನೆಗೆ ಒದಗಿಸಲು ಹಾಗೂ ಸದರಿ ಬಗ್ಗೆ ವರದಿ ಮಾಡಲು ಸೂಚಿಸಿದೆ. ಅಲ್ಲಿಯವರೆಗೆ ಸದರಿ ಅನುಬಂಧದ ಮೊತ್ತ 4,15,495 ರೂ. ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.	
53. ಬ್ಯಾಂಕ್ ವಹಿವಾಟಿನಲ್ಲಿ ಸ್ವೀಕರಿಸಿದ ಬಡ್ಡಿ ಹಣವನ್ನು ವಿಶ್ವವಿದ್ಯಾಲಯದ ಖಾತೆಗೆ ವರ್ಗಾಯಿಸುವ ಬಗ್ಗೆ:	
ಯು.ವಿ.ಸಿ.ಇ ಕಾಲೇಜು ಮತ್ತು ಗ್ರಂಥಾಲಯ ವಿಭಾಗದ ಪ್ರಸಕ್ತ 2014–15 ಹಾಗೂ 2015–16ನೇ ಸಾಲಿನಲ್ಲಿ ಸಿಂಡಿಕೇಟ್ ಬ್ಯಾಂಕ್ ಖಾತೆ ಸಂಖ್ಯೆ.04462010004877 ರಲ್ಲಿ ಸಂಸ್ಥೆಯವರ ಉಳಿತಾಯ ಖಾತೆಗೆ ಕ್ರಮವಾಗಿ ರೂ. 196585.00 ಹಾಗೂ ರೂ.5,41,031.00 ಬಡ್ಡಿ ಮೂಲಕ ಸ್ವೀಕರಿಸಿದ್ದ ಈ ಮೊತ್ತವನ್ನು ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಿ ಅದನ್ನು ಸಂಬಂಧಪಟ್ಟ ಖಾತೆಗಳಿಗೆ ಮರು ಜಮಾ ಮಾಡಲು ತಿಳಿಸಿದೆ. ಒಟ್ಟು ಮೊತ್ತ ರೂ.7,37,616.00ನ್ನು ಸಂಬಂಧಪಟ್ಟ ಖಾತೆಗೆ ವರ್ಗಾಯಿಸುವವರೆಗೆ ಈ ಮೊತ್ತವನ್ನು ಆಕ್ಷೇಪಣೆಯಲ್ಲಿಡಲಾಗಿದೆ.	ಸಿಂಡಿಕೇಟ್ ಬ್ಯಾಂಕ್ ಖಾತೆ ಸಂಖ್ಯೆ 04462010004877 ಪ್ರಾಂಶುಪಾಲರು ಸಂಸ್ಥೆಯ ಉಳಿತಾಯ ಖಾತೆಯನ್ನು ಹೊಂದಿರುತ್ತಾರೆ. ಉಳಿತಾಯ ಖಾತೆಯಲ್ಲಿ ಬಡ್ಡಿ ಮೂಲಕ ದಿನಾಂಕ 24.01.2019 ರವರೆಗೆ ಬಂದಿರುವ ಒಟ್ಟು ಬಡ್ಡಿ ಹಣ ರೂ. 15,45,660/– ವಿಶ್ವವಿದ್ಯಾಲಯದ ವಿತ್ತಾಧಿಕಾರಿಗಳ ಖಾತೆಗೆ ರಸೀದಿ ಸಂಖ್ಯೆ ಜೆ.ಎಫ್.–218–23910/29.01.2019 ರಂದು ಜಮಾ ಮಾಡಲಾಗಿದೆ. ಚಲನ್ ಪ್ರತಿ ಲಗತ್ತಿಸಿದೆ **(ಅನುಬಂಧ–133)** (ಪು.ಸಂ.845). 2015–16ರ ಸಾಲಿನ ಈ ಕಂಡಿಕೆಯ ಮೊತ್ತ ರೂ. 7,37,616=00ಗಳು ಸೇರಿದಂತೆ ಬಡ್ಡಿ ಹಣ 24.01.2019ರವರೆಗೆ ಪ್ರಾಪ್ತವಾಗಿರುವ ಬಡ್ಡಿ ರೂ. 15,45,660=00ಗಳು ವಿ.ವಿ. ನಿಧಿಗೆ ಜಮಾ ಮಾಡಲಾಗಿರುವುದರಿಂದ ಆಕ್ಷೇಪಣೆ ಮೊತ್ತ ರೂ. 7,37,616=00 ಕೈ ಬಿಡುವಂತೆ ಕೋರಲಾಗಿದೆ.
54. ಕಡಿಮೆ ಜಮೆಯಾದ ವಸೂಲಾತಿ ಮೊತ್ತ 1300/– ರೂ ಗಳ ಬಗ್ಗೆ.	
ದೈಹಿಕ ಶಿಕ್ಷಣ ನಿರ್ದೇಶನಾಲಯ ವಿಭಾಗದಲ್ಲಿ 2014–15 ನೇ ಸಾಲಿನ ಸಂಯೋಜನಾ ಶುಲ್ಕ ವಹಿ ಕ್ರೀಡಾಕೂಟಕ್ಕಾಗಿ ಸ್ವೀಕರಿಸಿರುವ ನೊಂದಣಿ ಶುಲ್ಕಕ್ಕೆ ಸಂಬಂಧಿಸಿದ ವಹಿಯಲ್ಲಿನ ರಶೀದಿಯನ್ನು ಬ್ಯಾಂಕ್ ಚಲನ್‌ಗಳೊಂದಿಗೆ ಪರಿಶೀಲಿಸಲಾಗಿ ರಶೀದಿ ಮೊತ್ತ 1,03,890=00 ರೂಗಳ ನೊಂದಣಿ ಶುಲ್ಕವನ್ನು ವಸೂಲಿ ಮಾಡಿ ಸಂಬಂಧಿಸಿದ ಖಾತೆಗೆ ಮೊತ್ತ1,02,790=00 ಗಳನ್ನು ಜಮೆ ಮಾಡಿರುವುದು ಕಂಡು ಬಂದಿರುತ್ತದೆ. ಈ ರೀತಿ ಕಡಿಮೆ ಜಮೆಯಾದ ವ್ಯತ್ಯಾಸದ ಮೊತ್ತ 1,100=00 ಇರುತ್ತದೆ, ಹಾಗೂ 2015–16ನೇ ಸಾಲಿನಲ್ಲಿ ರಶೀದಿ ಮೊತ್ತ 1,07,085=00 ರೂಗಳ ವಸೂಲಿ ಇದ್ದು ಅದರಲ್ಲಿ 1,06,885=00ರೂಗಳನ್ನು ಮಾತ್ರ ಸಂಬಂಧಿಸಿದ ಖಾತೆಗೆ ಜಮೆ ಮಾಡಲಾಗಿದೆ ಇದರಲ್ಲಿ ಕಡಿಮೆ ಜಮೆಯಾದ ಮೊತ್ತ 200=00 ರೂ ಸೇರಿ ಒಟ್ಟು 1300=00 ಗಳನ್ನು ಸಂಬಂದಿಸಿದ ಖಾತೆಗೆ ಜಮೆ ಮಾಡಲು ಹಾಗೂ ಸದರಿ ಜಮೆಯಾದ ಬಗ್ಗೆ ಮಾಹಿತಿನೀಡಲು ಮತ್ತು ಕೆಎಫ್‌ಸಿ ಪಾರಂ_1 ರಲ್ಲಿ ನಂಬರ್ ನಮೂದಿಸಿರುವ ರಶೀದಿ ಪುಸ್ತಕಗಳನ್ನು ನಿರ್ವಹಿಸಬೇಕಿದ್ದರೂ ಏಕೆ? ರಶೀದಿ ಪಡೆಯುವಾಗ ರಶೀಧಿ ಪುಸ್ತಕ ಉಪಯೋಗಿಸುತ್ತಿಲ್ಲಾ ಎಂಬ ಬಗ್ಗೆ ಲೆಕ್ಕ ತನಿಖಾ ತಂಡಕ್ಕೆ ಸಮಜಾಯಿಸಿ ನೀಡಲು ಲೆಕ್ಕ ತನಿಖಾ ವಿಚಾರಣೆ ಸಂಖ್ಯೆ2 ರಲ್ಲಿ ಕೋರಲಾಗಿತ್ತು ಆದರೆ ತಾವು ಸದರಿ ಬಗ್ಗೆ ಉತ್ತರಿಸದಿರುವ ಕಾರಣ ಕಡಿಮೆ ಜಮೆಯಾದ ಸದರಿ ಮೊತ್ತ 1300=00 ರೂಗಳನ್ನು ಸಂಬಂದಪಟ್ಟವರಿಂದ ವಸೂಲಿ ಮಾಡಿ ಖಾತೆಗೆ	ಈ ಕಂಡಿಕೆಕ್ಕೆ ಸಂಬಂಧಿಸಿದ್ದಂತೆ ಈ ಕಂಡಿಕೆಯಲ್ಲಿ ಕಡಿಮೆ ಜಮೆಯಾದ ಮೊತ್ತ ರಿಜಿಸ್ಟ್ರೇಷನ್ ಶುಲ್ಕ ರೂ.1,100/– & ರೂ.200/– ಒಟ್ಟು ಮೊತ್ತ ರೂ.1,300/– ರೂಗಳು ವಸೂ ಲಾತಿಗೆ ಸೂಚಿಸಲಾಗಿದ್ದು ಜೆ.ಎಫ್.10811 ದಿನಾಂಕ: 27.02.2016ರಂದು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಈ ಮೂಲಕ ವಿ.ವಿ.ನಿಧಿಗೆ ಜಮಾ ಮಾಡಲಾಗಿದೆ. Daily Collecting Listing ಲಗತ್ತಿಸಿದೆ. ಆದುದರಿಂದ, ವಸೂಲಾತಿಯಿಂದ ರೂ. 1300=00ಗಳನ್ನು ಕೈಬಿಡುವಂತೆ ವಿನಂತಿಸಲಾಗಿದೆ **(ಅನುಬಂಧ–134)** (ಪು.ಸಂ.845).

ಆಕ್ಷೇಪಣೆಗಳು	*ಉತ್ತರಗಳು*
ಜಮೆಯಾದ ವಿವರಗಳೊಂದಿಗೆ ಕೋರಿರುವ ವಿವರಗಳನ್ನು ನೀಡಲು ಸೂಚಿಸಿದೆ.	
55. ಎಸ್.ಸಿ/ಎಸ್.ಟಿ ಓಬಿಸಿ ವಿದ್ಯಾರ್ಥಿಗಳಿಗೆ ನೀಡಲಾದ ಪರೀಕ್ಷಾ ಶುಲ್ಕದ ರಿಯಾಯಿತಿಯ ವಸೂಲಾತಿಯ ಮೊತ್ತ ರೂ.129375 + 2893145 = 3022520.00	
ಕುಲಸಚಿವರು ಮೌಲ್ಯಮಾಪನ ವಿಭಾಗದ 2015–16 ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಪರೀಕ್ಷಾ ಶುಲ್ಕ ರಿಯಾಯಿತಿ: ವಿಶ್ವವಿದ್ಯಾಲಯದ ಯು.ಜಿ ಪರೀಕ್ಷಾ ಪ್ರಕಟಣೆಯಲ್ಲಿ SC,ST,OBC ವಿದ್ಯಾರ್ಥಿಗಳಿಗೆ ನೀಡಲಾದ ರಿಯಾಯಿತಿಗೆ ಸಂಬಂಧಿಸಿದಂತೆ ಏಪ್ರಿಲ್–2015 ಮಾಹೆಯ ಒಟ್ಟು ವಸೂಲಾತಿಯ ಮೊತ್ತ ರೂ.1,17,45,709.00 ರಲ್ಲಿ ಸಂಬಂಧಪಟ್ಟ ಕಾಲೇಜುಗಳಿಂದ ರೂ.116,16,334.00 ಮೊತ್ತ ವಿಶ್ವವಿದ್ಯಾಲಯದ ನಿಧಿಗೆ ಜಮೆ ಆಗಿದ್ದು ಉಳಿದಂತೆ 5 ಕಾಲೇಜುಗಳಿಂದ ರೂ.1,29,375.00 ವಸೂಲಾತಿಗಾಗಿ ಸೂಚಿಸಿದೆ. ನವೆಂಬರ್ 2015 ಮಾಹೆಯ ಪರೀಕ್ಷಾ ಶುಲ್ಕ ರಿಯಾಯಿತಿಗೆ ಸಂಬಂಧಿಸಿದಂತೆ ಒಟ್ಟು ವಸೂಲಾತಿಯ ಮೊತ್ತ ರೂ.37,90,201.00 ರಲ್ಲಿ ರೂ.8,97,059.00 ಮಾತ್ರ ವಿಶ್ವವಿದ್ಯಾಲಯದ ನಿಧಿಗೆ ಜಮೆ ಆಗಿದ್ದು ರೂ.28,93,145.00 ವಸೂಲಾತಿಗಾಗಿ ಬಾಕಿ ಇರುತ್ತದೆ. **ಪರೀಕ್ಷಾ ಶುಲ್ಕದ ರಿಯಾಯಿತಿ ಮೊತ್ತ ರೂ. 30,22,520.00 ಗಳನ್ನು ವಸೂಲಾತಿಗಾಗಿ ಸೂಚಿಸಿದೆ.**	ಪರೀಕ್ಷಾ ವಿಭಾಗದಿಂದ ಬಂದಿರುವ ಮಾಹಿತಿಯಂತೆ ಒಟ್ಟು ವಸೂಲಾತಿಗೆ ಸೂಚಿಸಿರುವ ರೂ.30,22,520.00 ಗಳಲ್ಲಿ ಏಪ್ರಿಲ್ 2015ರ ಮಾಹೆ ಪರೀಕ್ಷೆಯ 5 ಕಾಲೇಜುಗಳಿಂದ ರೂ.1,29,375.00 ವಸೂಲಾತಿಗೆ ಬಾಕಿ ಉಳಿದಿದೆ. ನವೆಂಬರ್ 2015ರ ಪರೀಕ್ಷಾ ಶುಲ್ಕ ವಸೂಲಾತಿಗೆ ಸೂಚಿಸಿರುವ ರೂ.28,93,142.00 ಗಳಲ್ಲಿ ರೂ.2,05,091=00 ಗಳು ಮಾತ್ರ ಬಾಕಿಯಿದ್ದು, ವರದಿಯಲ್ಲಿ ವಸೂಲಾತಿಯಾಗಿಯೆಂದು ತಿಳಿಸಿರುವ ರೂ.8,97,059.00 ಸೇರಿದಂತೆ ಒಟ್ಟು ರೂ.35,85,110.00 ಗಳಿಗೆ ವಾರ್ಷಿಕ ಲೆಕ್ಕಪತ್ರಗಳಲ್ಲಿ ಸೇರ್ಪಡೆಯಾಗಿರುವ " Daily Collection Listing" ಅನುಬಂಧದಲ್ಲಿ ಲಗತ್ತಿಸಲಾಗಿದೆ. ವಸೂಲಾತಿಗೆ ಸೂಚಿಸಿರುವ ಮೊತ್ತದಲ್ಲಿ ವಸೂಲಾತಿ ವಸೂಲಾತಿಯಾಗಿರುವ ಮೊತ್ತ ರೂ.26,88,051.00 ಗಳನ್ನು ವಸೂಲಾತಿಯಿಂದ ಕೈ ಬಿಡುವಂತೆ ವಿನಂತಿಸಲಾಗಿದೆ. ಈ ಕಂಡೀಕೆಯಲ್ಲಿ (5) ಕಾಲೇಜುಗಳಿಂದ ರೂ.129375.00 ವಸೂಲಾತಿಗೆ ಬಾಕಿ ಇರುವುದಾಗಿ ತಿಳಿಸಿದ್ದು, ಕಾಲೇಜುಗಳ ಮಾಹಿತಿ ಇರುವುದಿಲ್ಲ. ಆದುದರಿಂದ (5) ಕಾಲೇಜುಗಳ ಮಾಹಿತಿ ಒದಗಿಸುವಂತೆ ಕೋರಿದೆ. ದಿನಾಂಕ:12.10.2018ರ ಪತ್ರದಲ್ಲಿ ದಾಖಲಾತಿ ಸಮೇತ " Daily Collection Listing" ಉತ್ತರವನ್ನು ಒದಗಿಸಲಾಗಿದೆ. ಅದಾಗ್ಯೂ ಈಗ ಮತ್ತೊಮ್ಮೆ ವಸೂಲಾತಿಯಾಗಿರುವ ರೂ.2688051.00 ಗಳನ್ನು ವಸೂಲಾತಿಯಿಂದ ಕೈ ಬಿಡುವಂತೆ ವಿನಂತಿಸಿದೆ**(ಅನುಬಂಧ–135)** (ಪು.ಸಂ.847).
56. 2015–16 ನೇ ಸಾಲಿನ ಮೊದಲ ಸೆಮಿಸ್ಟರ್ ಪರೀಕ್ಷಾ ಶುಲ್ಕವನ್ನು ವಿಶ್ವವಿದ್ಯಾಲಯಕ್ಕೆ ವಿಳಂಬವಾಗಿ ಸಲ್ಲಿಸಿರುವ ಕಾಲೇಜುಗಳಿಂದ ರೂ.5,20,000.00 ದಂಡ ವಸೂಲಾತಿಯ ಬಗ್ಗೆ:	
ಕುಲಸಚಿವರು ಮೌಲ್ಯಮಾಪನ ವಿಭಾಗದ 2015–16 ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ 1, 3, 5 ಸೆಮಿಸ್ಟರ್‌ನ ಬಿ.ಎ. ಬಿಎಸ್ಸಿ ಬಿಕಾಂ/ಬಿ.ಎಸ್.ಡಬ್ಲ್ಯೂ ಪರೀಕ್ಷೇಗಳಿಗೆ ಪರೀಕ್ಷಾ ಶುಲ್ಕವನ್ನು ವಿಶ್ವವಿದ್ಯಾಲಯಕ್ಕೆ ಸಂದಾಯ ಮಾಡಲು ದಿನಾಂಕ 19.10.2015 ಕೊನೆಯ ದಿನಾಂಕವಾಗಿದ್ದು ಮೊದಲನೆ ಸೆಮಿಸ್ಟರ್ ವಿದ್ಯಾರ್ಥಿಗಳ ಪ್ರವೇಶ ಪ್ರಕ್ರಿಯೆ ವಿಳಂಬವಾಗಿರುವುದರಿಂದ ನಿಗದಿತ ಅವಧಿಯೊಳಗೆ ಪರೀಕ್ಷಾ ಶುಲ್ಕವನ್ನು ಸಂಬಂಧಪಟ್ಟ ಕಾಲೇಜಿನವರು ವಿಶ್ವವಿದ್ಯಾಲಯಕ್ಕೆ ಸಂದಾಯ ಮೊದಲು ಸಾಧ್ಯವಾಗಿರುವುದಿಲ್ಲ. ಎಲ್ಲಾ ಕಾಲೇಜುಗಳಿಂದ ನಿಗದಿತ ದಿನಾಂಕದ ನಂತರ ವಿಶ್ವವಿದ್ಯಾಲಯಕ್ಕೆ ಹಣ ಸಂದಾಯವಾಗಿರುತ್ತದೆ (ನವೆಂಬರ್ ಡಿಸೆಂಬರ್–2015 ರಲ್ಲಿ) ಈ ಬಗ್ಗೆ ವಿಶ್ವವಿದ್ಯಾಲಯವು ಪರಿಷ್ಕೃತ ದಿನಾಂಕಗಳನ್ನು ನಿಗದಿಪಡಿಸಿದ್ದಲ್ಲಿ ವಿವರಗಳನ್ನು ನೀಡಲು ಕೋರಲಾಗಿದ್ದು, ಕುಲಸಚಿವರು ಮೌಲ್ಯಮಾಪನ ಇವರು ತಮ್ಮ ದಿನಾಂಕ 28.2.2017 ರ ಪತ್ರದಲ್ಲಿ ಮೊದಲ	ಈ ಕಂಡಿಕೆಯಲ್ಲಿ ಪರೀಕ್ಷಾ ಶುಲ್ಕವನ್ನು ವಿಶ್ವವಿದ್ಯಾಲಯಕ್ಕೆ ಅನುಬಂಧ–30ರಲ್ಲಿ ತಿಳಿಸಿರುವಂತೆ 104 ಕಾಲೇಜಿನವರು ವಿಳಂಬವಾಗಿ ಕಟ್ಟಿರುವುದಕ್ಕೆ ರೂ.5000/– ರಂತೆ ಕಾಲೇಜುಗಳಿಂದ ಒಟ್ಟು ರೂ.5,20,000/– ಗಳನ್ನು ವಸೂಲಾತಿಗೆ ಸೂಚಿಸಲಾಗಿದೆ. ಈ ಸಂಬಂಧ104 ಕಾಲೇಜುಗಳ ಪೈಕಿ 71 ಕಾಲೇಜುಗಳಿಂದ ರೂ.5000/– ರಂತೆ ಒಟ್ಟು ರೂ.3,65,561/– ವಸೂಲಾತಿ ಮಾಡಿ ವಿಶ್ವವಿದ್ಯಾಲಯ ನಿಧಿಗೆ ಜಮಾಮಾಡಲಾಗಿದೆ. ಹಾಗೂ ಈ ಮೊತ್ತವನ್ನು ಲೆಕ್ಕಪತ್ರಗಲಲ್ಲಿ ಅಳವಡಿಕೊಳ್ಳಲಾಗಿದೆ. ಇದಕ್ಕೆ ಪೂರಕವಾಗಿ **ಅನುಬಂಧ–30ರಲ್ಲಿ** JF ಸಂಖ್ಯೆ ಡಿಡಿ ಸಂಖ್ಯೆ ವಿವರ ನೀಡಲಾಗಿದೆ ಮತ್ತು "Daily Collection Listing" ಪತ್ರ ದಿನಾಂಕ 06.08.2018ರಲ್ಲಿ ಅಪರ ನಿರ್ದೇಶಕರಿಗೆ ಒದಗಿಸಲಾಗಿದೆ. ಆದುದರಿಂದ ರೂ. 3,65,561.00/–ಗಳನ್ನು ವಸೂಲಾತಿಯಿಂದ ಕೈ ಬಿಡುವಂತೆ ಅಪರ ನಿರ್ದೇಶಕರಿಗೆ ಪತ್ರ

ಆಕ್ಷೇಪಣೆಗಳು	***ಉತ್ತರಗಳು***
ಸೆಮಿಸ್ಟರ್ ವಿದ್ಯಾರ್ಥಿಗಳ ನೋಂದಣಿ ಪ್ರಕ್ರಿಯೆ ವಿಳಂಬವಾಗಿರುವುದರಿಂದ ಪರೀಕ್ಷಾ ಶುಲ್ಕವನ್ನು ಕಾಲೇಜಿನವರು ನಿಗದಿತ ಅವಧಿಯೊಳಗೆ ಪಾವತಿಸಲು ಸಾಧ್ಯವಾಗಿರುವುದಿಲ್ಲ ಎಂದು ತಿಳಿಸಿದ್ದು ದಿನಾಂಕ 30.11.2015 ರವರೆಗೂ ಪರೀಕ್ಷಾ ಶುಲ್ಕ ಪಾವತಿಗೆ ಅವಕಾಶ ನೀಡಲಾಗಿದೆ ಎಂದು ತಿಳಿಸಿದ್ದು ದಿನಾಂಕ 30.11.2015 ರ ನಂತರ ಪರೀಕ್ಷಾ ಶುಲ್ಕ ಪಾವತಿಸಿದ 104 ಕಾಲೇಜುಗಳಿಂದ ದಂಡ ಶುಲ್ಕ ರೂ.50,00.00 ರಂತೆ ರೂ.5,20,000.00 ವಸೂಲಾತಿಗೆ ಸೂಚಿಸಿದೆ. ವಿವರಗಳನ್ನು ಅನುಬಂಧ–30 ರಲ್ಲಿ ನೀಡಿದೆ.	ದಿನಾಂಕ:06.05.2015ರಲ್ಲಿ ಕೋರಲಾಗಿತ್ತು ಈಗ ಮತ್ತೊಮ್ಮೆ ರೂ.3,65,561.00ಗಳು ವಸೂಲಾತಿಯಾಗಿದ್ದು ದಾಖಲಾತಿ ಒದಗಿಸಲಾಗಿರುವುದರಿಂದ ಮತ್ತೊಮ್ಮೆ ಕೈ ಬಿಡುವಂತೆ ವಿನಂತಿಸಲಾಗಿದೆ.
57. 2015–16 ನೇ ಸಾಲಿನ ಏಪ್ರಿಲ್ ಮಾಹೆಯ 2, 4, 6 ನೇ ಸೆಮಿಸ್ಟರ್ ಪರೀಕ್ಷೆಗಳ ಪರೀಕ್ಷಾ ಶುಲ್ಕವನ್ನು ನಿಗದಿತ ದಿನಾಂಕದ ನಂತರ ಪಾವತಿಸಿರುವ ಕಾಲೇಜುಗಳಿಂದ ದಂಡ ಶುಲ್ಕ ರೂ.300000.00 ವಸೂಲಾತಿಯ ಬಗ್ಗೆ.	
1. **ಕುಲಸಚಿವರು ಮೌಲ್ಯಮಾಪನ ವಿಭಾಗದ** 2015–16 ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಬಿ.ಎ/ಬಿ.ಎಸ್ಸಿ/ಬಿ.ಕಾಂ/ಬಿ.ಬಿ.ಎಂ/ಪರೀಕ್ಷೆಗಳ 2, 4, 6 ನೇ ಸೆಮಿಸ್ಟರ್ ಪರೀಕ್ಷಾ ಶುಲ್ಕವನ್ನು ನಿಗದಿತ ದಿನಾಂಕದ ನಂತರ ಪಾವತಿಸಿರುವ 19 ಕಾಲೇಜುಗಳಿಂದ ದಂಡ ಶುಲ್ಕ ರೂ.5000.00 ರಂತೆ ರೂ.95,000.00 ವಸೂಲಾತಿಗಾಗಿ ಸೂಚಿಸಿದೆ. 2. ಬಿ.ಎಡ್ ಪರೀಕ್ಷೆಯ ಪರೀಕ್ಷಾ ಶುಲ್ಕವನ್ನು ನಿಗದಿತ ದಿನಾಂಕದ ನಂತರ ಪಾವತಿಸಿರುವ 39 ಕಾಲೇಜುಗಳಿಂದ ದಂಡ ಶುಲ್ಕ ರೂ.5,000.00 ರಂತೆ ರೂ.1,95,000.00 ವಸೂಲಾತಿಗಾಗಿ ಸೂಚಿಸಿದೆ. 3. ಎಲ್ಎಲ್ಬಿ ಪರೀಕ್ಷಾ ಶುಲ್ಕವನ್ನು ನಿಗದಿತ ದಿನಾಂಕದ ನಂತರ ಪಾವತಿಸಿರುವ 2 ಕಾಲೇಜುಗಳಿಂದ ದಂಡ ಶುಲ್ಕ ರೂ.5000.00 ರಂತೆ ರೂ.10,000.00 ವಸೂಲಾತಿಗಾಗಿ ಸೂಚಿಸಿದೆ. (95,000+1,95,000+10,000=3,00,000) ವರಗಳನ್ನು **ಅನುಬಂಧ–31** ರಲ್ಲಿ ಲಗತ್ತಿಸಿದೆ.	1. ಈ ಕಂಡಿಕೆಯ ಕ್ರಮ ಸಂಖ್ಯೆ(1) ರಲ್ಲಿ ತಿಳಿಸಿರುವಂತೆ 19 ಕಾಲೇಜುಗಳಿಂದ ದಂಡ ಶುಲ್ಕ ರೂ.5000.00 ರಂತೆ ಒಟ್ಟು ರೂ. 95,000.00 ಗಳನ್ನು ವಸೂಲಾತಿಗೆ ಸೂಚಿಸಲಾಗಿದೆ. ಈ ಸಂಬಂಧ ಕೆಳಗೆ ತಿಳಿಸಿರುವ ಅನುಬಂದದ ಕ್ರಮ ಸಂಖ್ಯೆಗಳ ಕಾಲೇಜುಗಳಿಂದ ವಸೂಲಾತಿ ಮಾಡಲಾದ ಒಟ್ಟು ರೂ.90,000.00 ಗಳನ್ನು ವಿಶ್ವವಿದ್ಯಾಲಯ ನಿಧಿಗೆ ಜಮಾ ಮಾಡಲಾಗಿದೆ. ಈ ಸಂಬಂಧ ಲೆಕ್ಕ ಪತ್ರಗಳಲ್ಲಿ ಈ ಮೊತ್ತ ಸೇರಿರುವುದಕ್ಕೆ " Daily Collection Listing" ಲಗತ್ತಿಸಲಾಗಿದೆ. 2. ಕ್ರಮ ಸಂಖ್ಯೆ (2)ರಲ್ಲಿ ವಸೂಲಾತಿಗೆ ಸೂಚಿಸಲಾದ ರೂ.195000.00 ಗಳಲ್ಲಿ ರೂ.85,000.00 ಗಳು ಅನುಬಂಧ (31) ರಲ್ಲಿ ತಿಳಿಸಿರುವ ಕಾಲೇಜುಗಳಿಂದ ವಸೂಲಾತಿ ಮಾಡಿ ವಿಶ್ವವಿದ್ಯಾಲಯ ನಿಧಿಗೆ ಜಮಾ ಮಾಡಲಾಗಿದೆ ಮತ್ತು ಲೆಕ್ಕ ಪತ್ರಗಳಲ್ಲಿ ಈ ಮೊತ್ತ ಸೇರಿರುವುದಕ್ಕೆ "Daily Collection Listing" ಲಗತ್ತಿಸಲಾಗಿದೆ **(ಅನುಬಂಧ–31).** ಆದುದರಿಂದ ಈ ಕಂಡಿಕೆಯ ಒಟ್ಟು ಮೊತ್ತ ರೂ. 1,75,000.00 ಗಳನ್ನು ವಸೂಲಾತಿಯಿಂದ ಕೈಬಿಡುವಂತೆ ವಿನಂತಿಸಲಾಗಿದೆ.
58. ಪಿ.ಜಿ ಪರೀಕ್ಷಾ ಶುಲ್ಕ ವಿಳಂಬ ಜಮೆಯ ದಂಡದ ಮೊತ್ತ ರೂ.87,000.00 ವಸೂಲಾತಿಯ ಬಗ್ಗೆ.	
ಕುಲಸಚಿವರು ಮೌಲ್ಯಮಾಪನ ವಿಭಾಗದ 2015–16 ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಪಿ.ಜಿ ಪರೀಕ್ಷಾ ಶುಲ್ಕವನ್ನು ನಿಗದಿತ ದಿನಾಂಕದ ನಂತರ ವಿಶ್ವವಿದ್ಯಾಲಯಕ್ಕೆ ಪಾವತಿಸಿರುವ ಕಾಲೇಜುಗಳಿಂದ /ವಿದ್ಯಾರ್ಥಿಗಳಿಂದ ದಂಡ ಶುಲ್ಕ ವಸೂಲಾತಿಯ ವಿವರಗಳನ್ನು ಕೋರಿದ್ದು, ವಿವರಣೆಯನ್ನು ಲೆಕ್ಕತನಿಖೆಗೆ ನೀಡಿರುವುದಿಲ್ಲ. ವಿಳಂಬವಾಗಿ ಪರೀಕ್ಷಾ ಶುಲ್ಕ ಪಾವತಿಸಿರುವ ಕಾಲೇಜುಗಳಿಂದ ವಿದ್ಯಾರ್ಥಿಗಳಿಂದ ರೂ.87,000.00 ವಸೂಲಾತಿಗಾಗಿ ಸೂಚಿಸಿದೆ. ವಿವರಗಳನ್ನು **ಅನುಬಂಧ–32 ರ**ಲ್ಲಿ ಲಗತ್ತಿಸಿದೆ.	ಪಿಜಿ ಪರೀಕ್ಷಾ ಶುಲ್ಕ ವಿಳಂಬ ಜಮೆಯ ದಂಡದ ಮೊತ್ತ ಅನುಬಂಧ–32ರಲ್ಲಿ ಕಾಲೇಜು ಗಳಿಂದ ವಿದ್ಯಾರ್ಥಿಗಳಿಂದ ವಸೂಲಾತಿಗೆ ಸೂಚಿಸಿರುವ ಮೊತ್ತ ರೂ.87000.00 ಗಳಲ್ಲಿ ಕೆಳಕಂಡ ಮೊತ್ತಗಳು ವಸೂಲಾತಿಯಾಗಿದೆ. ಅನುಬಂಧದ ಕ್ರಮ ಸಂಖ್ಯೆ:4 ಇಂಗ್ಲಿಷ್ ವಿಭಾಗ ಘಟಿಕೋತ್ಸವ ವ್ಯತ್ಯಾಸದ ಮೊತ್ತ **ರೂ.200.00** (Transaction ID QA X G 7431.422313/ 12.04.2019) ಅನುಬಂಧದ ಕ್ರಮ ಸಂಖ್ಯೆ: 25 Dr.S.R Chandra Shekar Inst of Spech and Hearing (Rs.200.00 JF 118-13115/ Date:27.08.2018 DD 597923/24.08.2018) ಪರೀಕ್ಷಾ ಶುಲ್ಕ **ರೂ.200.00**

ಆಕ್ಷೇಪಣೆಗಳು	***ಉತ್ತರಗಳು***
ಖನಿಜಗಳ ರಾಯಲ್ಟಿ ಮೊತ್ತವನ್ನು ಪರಿಷ್ಕರಿಸಿ ಉಪ ಖನಿಜಗಳಾದ ಕಟ್ಟಡ ಕಲ್ಲು, ಮರಳು, ಇಟ್ಟಿಗೆ ಮಣ್ಣು, ಗ್ರಾನೈಟ್ ಮುಂತಾದ ಉಪಖನಿಜಗಳ ರಾಯಲ್ಟಿ ಮೊತ್ತವನ್ನು ಪ್ರತಿ ಕ್ಯೂಬಿಕ್ ಮೀಟರ್‌ಗಳಿಗೆ ನಿರ್ಧರಿಸಿ ಅದರ ಅನ್ವಯ ಮುರುಗಡೆ ಮಾಡಲು ಆದೇಶಿಸಲಾಗಿದೆ. ವಿಶ್ವವಿದ್ಯಾಲಯದಿಂದ ಕೈಗೊಳ್ಳಲಾದ ಕಟ್ಟಡ ಕಾಮಗಾರಿಗಳ 2015–16 ನೇ ಸಾಲಿನ ಬಿಲ್ಲುಗಳಲ್ಲಿ ರಾಯಲ್ಟಿ ಮೊತ್ತವನ್ನು Lump sum amount ಮುರುಗಡೆ ಮಾಡಿರುವುದು ಕಂಡುಬಂದಿರುತ್ತದೆ ಹಾಗೂ ರಾಯಲ್ಟಿ ಮುರುಗಡೆ ಸಲುವಾಗಿ ಬೆಂಗಳೂರು ಪಿಡಬ್ಲ್ಯೂಡಿ ವೃತ್ತದ ದರಪಟ್ಟಿಯಲ್ಲಿ ನೀಡಿರುವ Constant ರೀತ್ಯಾ ಪರಿಮಾಣಗಳನ್ನು ನಿಗದಿಪಡಿಸಿ ಚಾಲ್ತಿ ದರಗಳ ರೀತ್ಯಾ ರಾಯಲ್ಟಿ ಮುರುಗಡೆ ಮಾಡಬೇಕಾಗಿದ್ದು Short Recovery of Royalty ಮೊತ್ತ ರೂ.134580.00 ಗಳನ್ನು ವಸೂಲಾತಿಗಾಗಿ ಸೂಚಿಸಿದೆ. (ಕಾಮಗಾರಿವಾರು ವಿವರಗಳನ್ನು **ಅನುಬಂಧ –74**ರಲ್ಲಿ ಲಗತ್ತಿಸಿದೆ).	ವಸೂಲಿ ಮಾಡಲಾಗುತ್ತದೆ. ಎಂಬುದನ್ನು ತಿಳಿಸಲು ದಿನಾಂಕ:25.03.2019ರ ಟಿಪ್ಪಣಿಯಲ್ಲಿ ಸೂಚಿಸಿದೆ. ದಿನಾಂಕ : 21.10.2019ರಂದು ನಡೆದ ಸಭೆಯಲ್ಲಿ ಉತ್ತರ ಸಲ್ಲಿಸಿರುವುದನ್ನು ಚರ್ಚಿಸಿ ಕೂಡಲೇ ಉತ್ತರ ಸಲ್ಲಿಸಲು ತಿಳಿಸಲಾಯಿತು.
115. ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ಅಕಾಡೆಮಿಕ್ ಕಾಲೇಜು ಮತ್ತು ಅತಿಥಿ ಗೃಹ ನಿರ್ಮಾಣ ಕಾಮಗಾರಿಯ ಉಳಿಕೆ ಕಾಮಗಾರಿಯ ಪ್ರಥಮ ಹಾಗೂ ಭಾಗದ ಬಿಲ್ಲಿನಲ್ಲಿ ಹೆಚ್ಚುವರಿಯಾಗಿ ಪಾವತಿಸಿರುವ ಮೊಬಲಗು : ರೂ.112653.00 (ವಸೂಲಾತಿ)	
ಈ ಕಾಮಗಾರಿಯ ಉಳಿಕೆ ಕಾಮಗಾರಿಯ ಅಂದಾಜನ್ನು 2014–15 ನೇ ಸಾಲಿನ ದರ ಪಟ್ಟಿಯ ರೀತ್ಯಾ ರೂ.137.00 ಲಕ್ಷ ಮೊತ್ತದ ಕಾಮಗಾರಿಯನ್ನು ಸಪ್ಲಿಮೆಂಟಲ್ ಅಗ್ರಿಮೆಂಟ್ ಸಂಖ್ಯೆ UE/DM/BALwork /104 / 2015-16 ದಿನಾಂಕ 02.05.2016 ರಲ್ಲಿ ಗುತ್ತಿಗೆದಾರರಾದ Ms|| PMJ Constuction pvt ltd ಗೆ ವಹಿಸಿದ್ದು, ಮೂಲ ಕರಾರಿನ PWG 65 ಅನ್ವಯ ಟೆಂಡರ್‌ದಾರರು ಕಾಮಗಾರಿಯನ್ನು ಪೂರ್ಣಗೊಳಿಸಿದೆ. CSR ದರಗಳನ್ನು ಪಡೆಯಲು ಅವಕಾಶ' ಇರುವುದಿಲ್ಲ. ಈ ಬಗ್ಗೆ ಯಾವುದೇ ವರದಿ ಸಲ್ಲಿಸಿರುವುದಿಲ್ಲ. ಅಂತೆಯೆ ಉಳಿಕೆ ಕಾಮಗಾರಿಯ ಪ್ರಥಮ ಹಾಗೂ ಭಾಗದ ಬಿಲ್ಲು ವೋಚರ್ ಸಂಖ್ಯೆ 868 ದಿನಾಂಕ: 23.05.2016 ರಲ್ಲಿ ರೂ.2664410.00 ಪಾವತಿಯಾಗಿದ್ದು ಈ ಕಾಮಗಾರಿಯಲ್ಲಿ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತ ರೂ.112653.00 ಅನ್ನು ವಸೂಲಾತಿಗಾಗಿ ಸೂಚಿಸಿದೆ ವಿವರಗಳನ್ನು **ಅನುಬಂಧ–75**ರಲ್ಲಿ ಲಗತ್ತಿಸಿದೆ.	ಅಕಾಡೆಮಿಕ್ ಕಾಲೇಜು ಮತ್ತು ಅತಿಥಿ ಗೃಹ ನಿರ್ಮಾಣ ಕಾಮಗಾರಿಯ ಉಳಿಕೆ ಕಾಮಗಾರಿಯನ್ನು M/s. PMJ Constructions ಗೆ ಸಪ್ಲಿಮೆಂಟರಿ ಅಗ್ರಿಮೆಂಟ್ ಮುಖಾಂತರ, ಕಾಮಗಾರಿ ಸಮಿತಿ ಹಾಗೂ ಸಿಂಡಿಕೇಟ್ ಸಭೆಯ ನಿರ್ಧಾರದ ಪ್ರಕಾರ ವಹಿಸಿದ್ದು, ಈ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ**(ಅನುಬಂಧ–160)**(ಪು.ಸಂ. 959).
116. "Construction of Acadamic College and Guest house" at JBC, BU. ನೆಲ ಅಂತಸ್ತು ಹಾಗೂ ಮೊದಲನೇ ಮಹಡಿ ಕಾಮಗಾರಿಯ ಮುಂಗಡ ಹಣದ 28.20 ಲಕ್ಷ ಮೊತ್ತದ ಬಡ್ಡಿಯ ಬಾಬ್ತು: ರೂ.34,96,978.00 (ವಸೂಲಾತಿ)	
ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ "Construction of Acadamic College and Guest house" ನೆಲ ಅಂತಸ್ತು ಹಾಗೂ ಮೊದಲನೇ ಮಹಡಿ ಕಾಮಗಾರಿಯ ಅಂದಾಜನ್ನು 2008–09ನೇ ಸಾಲಿನ ದರಪಟ್ಟಿಯ ರೀತ್ಯಾ ರೂ.205.00 ಲಕ್ಷಗಳಿಗೆ ತಯಾರಿಸಿ	1.ಅಕಾಡೆಮಿಕ್ ಕಾಲೇಜು ಮತ್ತು ಅತಿಥಿ ಗೃಹ ನಿರ್ಮಾಣ ಕಾಮಗಾರಿಯನ್ನು M/s. PMJ Constructions ಗೆ ವಹಿಸಲಾಗಿದೆ. ಈ ಕಾಮಗಾರಿಯ ಪ್ರಥಮ ಹಾಗೂ ಭಾಗಶದ ಬಿಲ್ಲಿನ

ಆಕ್ಷೇಪಣೆಗಳು	ಉತ್ತರಗಳು
ಅನುಮೋದಿಸಲಾಗಿದೆ. ಈ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ಗುತ್ತಿಗೆದಾರರಾದ M/s.P.M.J Construction private limited ಇವರಿಗೆ 2008–09ನೇ ಸಾಲಿನ ದರಪಟ್ಟಿಯ ದರಗಳಿಗೆ 3.04% ಹೆಚ್ಚುವರಿ ದರಗಳ ರೀತ್ಯಾ 208.10 ಲಕ್ಷ ಮೊತ್ತದ ಕಾಮಗಾರಿಯನ್ನು ಅಗ್ರಿಮೆಂಟ್ ಸಂಖ್ಯೆ UE:DM:WO:699:2008–09 ದಿನಾಂಕ: 05/10/2009ರಲ್ಲಿ 12 ತಿಂಗಳ ಕಾಲಾವಧಿಯೊಂದಿಗೆ ನಿರ್ವಹಿಸಿದ್ದು ದಿನಾಂಕ:20/11/2009 ರಂದು ಕಾಮಗಾರಿಯ ಸ್ಥಳವನ್ನು ಗುತ್ತಿಗೆದಾರರಿಗೆ ಹಸ್ತಾಂತರಿಸಿದ್ದು ನಿಗಧಿತ ಅವಧಿ ದಿನಾಂಕ: 19/11/2010 ಕ್ಕೆ ಪೂರ್ಣಗೊಂಡಿರುತ್ತದೆ. ಗುತ್ತಿಗೆದಾರರು ಕಾಮಗಾರಿಯ ಸ್ಥಳದಲ್ಲಿ 3/2010 ರಲ್ಲಿ ಶೇಖರಿಸಿದ 532.16 ಕ್ವಿಂಟಾಲ್ ಉಕ್ಕಿನ ಪರಿಮಾಣಗಳಿಗೆ ವೋಚರ್ ಸಂಖ್ಯೆ 787 ದಿನಾಂಕ: 29.11.2010ರಲ್ಲಿ ರೂ.28.20 ಲಕ್ಷ ಮುಂಗಡ ಹಣವನ್ನು ಗುತ್ತಿಗೆದಾರರಿಗೆ ಪಾವತಿಸಿದೆ (ಅಳತೆ ಪುಸ್ತಕ ಸಂಖ್ಯೆ 3976 ಪುಟಸಂಖ್ಯೆ 1 ಹಾಗೂ 2 ರಲ್ಲಿ ಅಳತೆಗಳ ದಾಖಲಿಸಿದೆ) ಮುಂಗಡ ಹಣ ಪಡೆದಿರುವುದನ್ನು ಹೊರತುಪಡಿಸಿ ಉಳಿದಂತೆ ಗುತ್ತಿಗೆದಾರರು ನಿಗಧಿತ ಅವಧಿಯಲ್ಲಿ ಯಾವುದೇ ಭೌತಿಕ ಹಾಗೂ ಆರ್ಥಿಕ ಪ್ರಗತಿಯನ್ನು ಸಾಧಿಸಿರುವುದಿಲ್ಲ ಈ ಕಾಮಗಾರಿಯ 2ನೇ ಹಾಗೂ ಭಾಗದ ಬಿಲ್ಲು ವೋಚರ್ ನಂ 169 ದಿನಾಂಕ: 5/10/15 ರಲ್ಲಿ ಪಾವತಿಸಿದ್ದು ಆರ್ಥಿಕ ಪ್ರಗತಿ ರೂ. 39.68 ಲಕ್ಷ ಮಾತ್ರ ಆಗಿರುತ್ತದೆ. ಕಾಮಗಾರಿ ಪೂರ್ಣಗೊಳ್ಳುವ ಮುನ್ನವೇ ಈ ಕಾಮಗಾರಿಯ ಉಳಿಕೆ ಕಾಮಗಾರಿಯ ಅಂದಾಜನ್ನು 2014–15 ನೇ ಸಾಲಿನ ದರಪಟ್ಟಿಯ ರೀತ್ಯಾ ರೂ. 137.00 ಲಕ್ಷ ಮೊತ್ತಕ್ಕೆ ಅನುಮೋದಿಸಿ ಸಪ್ಲಮೆಂಟರಿ ಅಗ್ರಿಮೆಂಟ್ ಸಂಖ್ಯೆ UE:DM:BALWORK:104:2015-16 ದಿನಾಂಕ: 02/05/2016 ರಲ್ಲಿ 6 ತಿಂಗಳ ಕಾಲಾವಧಿಯೊಂದಿಗೆ ಕಾಮಗಾರಿಯ ಮೂಲ ಗುತ್ತಿಗೆದಾರರಾದ P.M.J Construction Pvt Ltd ಇವರಿಗೆ ವಹಿಸಲಾಗಿದೆ, ಈ ಕಾಮಗಾರಿಗೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳನ್ನು ಆಕ್ಷೇಪಣೆಯಲ್ಲಿರಿಸಲಾಗಿದೆ. 1) ಕಾಮಗಾರಿಗೆ ನಿಗಧಿಪಡಿಸಿದ ಕಾಲಾವಧಿ 12 ತಿಂಗಳು ಆಗಿದ್ದು ಕಾಮಗಾರಿಯ ಸ್ಥಳವನ್ನು ದಿನಾಂಕ: 20/11/2009 ರಂದು ಗುತ್ತಿಗೆದಾರರಿಗೆ ಹಸ್ತಾಂತರಿಸಿದ್ದು ನಿಗಧಿತ ಅವಧಿ 19/11/2010 ಕ್ಕೆ ಮುಕ್ತಾಯವಾಗಿದ್ದು ಗುತ್ತಿಗೆದಾರರು ನಿಗಧಿತ ಅವಧಿಯೊಳಗೆ ಯಾವುದೇ ಭೌತಿಕ ಹಾಗೂ ಆರ್ಥಿಕ ಪ್ರಗತಿ ಸಾಧಿಸಿರುವುದಿಲ್ಲ ನಂತರದ ಅವಧಿಯಲ್ಲಿ ಈ ಕಾಮಗಾರಿಯ 2ನೇ ಹಾಗೂ ಭಾಗದ	ಮೊತ್ತ ರೂ. 28,20,448.00ನ್ನು ದಿನಾಂಕ 29–04–2010ರಂದು ಗುತ್ತಿಗೆದಾರರಿಗೆ ಪಾವತಿಸಲಾಗಿದೆ. ಕೆಲವು ಆಡಳಿತಾತ್ಮಕ ಮತ್ತು ತಾಂತ್ರಿಕ ಕಾರಣಗಳಿಂದ ಈ ಕಾಮಗಾರಿಯನ್ನು ಗುತ್ತಿಗೆದಾರರು ಪೂರ್ಣಗೊಳಿಸಲಾಗಲಿಲ್ಲ. ಈ ವಿಷಯವನ್ನು ವಿಶ್ವವಿದ್ಯಾಲಯದ ಅಧಿಕಾರಿಗಳು ಪ್ರಥಮ ಮತ್ತು ದ್ವಿತೀಯ ತಾಂತ್ರಿಕ ಸಲಾಹಾ ಸಮಿತಿ ನಡೆದ ದಿನಾಂಕ 19–02–2015 ಮತ್ತು ದಿನಾಂಕ 17–03–2015 ರಂದು ನಡೆದ ಕಾಮಗಾರಿ ಸಭೆಯಲ್ಲಿ ಹಾಗೂ ದಿನಾಂಕ 24–03–2015 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿದ್ದಾರೆ. ವಿವರವಾಗಿ ಚರ್ಚಿಸಿದ ನಂತರ ಸಿಂಡಿಕೇಟ್ ಸಭೆಯು ಆಯಾ ಕಾಮಗಾರಿಯ ಗುತ್ತಿಗೆದಾರರಿಗೆ ಕಾಮಗಾರಿಯನ್ನು ಚಾಲ್ತಿಯಲ್ಲಿರುವ ದರಪಟ್ಟಿಯ ದರಗಳಿಗೆ ವಹಿಸಲು ನಿರ್ಧರಿಸಲಾಯಿತು. ಗುತ್ತಿಗೆದಾರರು ಈ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು ಮತ್ತು ಈ ಕಟ್ಟಡಗಳ ಉದ್ಘಾಟನೆಯು ದಿನಾಂಕ 06–02–2017ರಂದು ನಡೆಸಲಾಯಿತು. ಈ ಕಾಮಗಾರಿಗಳ ವಿಳಂಬದ ಬಗ್ಗೆ Shivashankar Bhatt Commission ನಲ್ಲಿ ಚರ್ಚಿಸಲಾಗಿದೆ. ಈ ಸಮಿತಿಯ ''ಪದ್ದತಿಯ ಲೋಪ'' ಎಂಬ ವರದಿಯನ್ನು ನೀಡಿದೆ. ಗುತ್ತಿಗೆದಾರರು ಈ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು ಮತ್ತು ಈ ಕಟ್ಟಡಗಳ ಉದ್ಘಾಟನೆಯನ್ನು ದಿನಾಂಕ 06–02–2017ರಂದು ಮಾನ್ಯ ಉನ್ನತ ಶಿಕ್ಷಣ ಸಚಿವರು ನೆರವೇರಿಸಿದರು

ಆಕ್ಷೇಪಣೆಗಳು	ಉತ್ತರಗಳು
ಬಿಲ್ಲು ಒಚರ್ ಸಂಖ್ಯೆ 169 ದಿನಾಂಕ: 5/10/15 ರಲ್ಲಿ ರೂ.39.68 ಲಕ್ಷಕ್ಕೆ ಪಾವತಿಯಾಗಿದ್ದು, ನಿಗಧಿತ ಅವಧಿಯೊಳಗಿನ ಆರ್ಥಿಕ ಪ್ರಗತಿ ಶೂನ್ಯ ಹಾಗೂ 5 ವರ್ಷಗಳ ನಂತರದ ಪ್ರಗತಿ ಕೇವಲ 19% ಮಾತ್ರ ಆರ್ಥಿಕ ಪ್ರಗತಿ ಸಾಧಿಸಿರುತ್ತಾರೆ. ಈ ಅವಧಿಯಲ್ಲಿ ಗುತ್ತಿಗೆದಾರರಿಗೆ ನೋಟೀಸ್ ನೀಡಿರುವುದಿಲ್ಲ, ಕಾಲವಿಸ್ತರಣೆ ನೀಡಿರುವುದಿಲ್ಲ ಹಾಗೂ ದಂಡ ವಿಧಿಸಿರುವುದಿಲ್ಲ. 2) ಗುತ್ತಿಗೆದಾರರಿಗೆ ಯಾವ ನಿಯಮದ ಅನ್ವಯ ಮುಂಗಡ ಹಣ ನೀಡಲಾಗಿದೆ? ಗುತ್ತಿಗೆದಾರರು ಪ್ರೋಗ್ರಾಂ ಆಫ್ ವರ್ಕ್‌ನಲ್ಲಿ ನಿಗಧಿಪಡಿಸಿದ ರೀತ್ಯಾ ಪ್ರಗತಿ ಸಾಧಿಸದೆ ಇರುವುದರಿಂದ ಉಕ್ಕಿನ ಪರಿಮಾಣಗಳಿಗೆ ನಿಡಲಾದ ಮುಂಗಡ ಹಣ ರೂ.28.20 ಲಕ್ಷ ಮೊತ್ತಕ್ಕೆ ಗುತ್ತಿಗೆದಾರರಿಂದ ಶೇ.18 ಬಡ್ಡಿ ದರದಲ್ಲಿ ಅಸಲು ಮತ್ತು ಬಡ್ಡಿಯನ್ನು ವಸೂಲಿ ಮಾಡತಕ್ಕದ್ದು. *3)* ಗುತ್ತಿಗೆದಾರರು ಸಂಗ್ರಹಿಸಲಾದ 532.16 ಕ್ವಿಂಟಾಲ್ ಉಕ್ಕಿನಲ್ಲಿ ಮೂಲ ಕಾಮಗಾರಿಯ ಬಿಲ್ಲಿನಲ್ಲಿ 188.45 ಕ್ವಿಂಟಾಲ್ ಹಾಗೂ ಉಳಿಕೆ ಕಾಮಗಾರಿಯ ಬಿಲ್ಲಿನಲ್ಲಿ 142.90 ಕ್ವಿಂಟಾಲ್ ಮಾತ್ರ ಬಳಕೆಯಾಗಿದ್ದು ಬಾಕಿ 331.35 ಕ್ವಿಂಟಾಲ್ ಉಕ್ಕಿನ ಬಗ್ಗೆ ವಿವರಗಳನ್ನು ಲೆಕ್ಕತನಿಖೆಗೆ ನೀಡಿರುವುದಿಲ್ಲ. *4)* ಕಾಮಗಾರಿಯ ಸ್ಥಳದಲ್ಲಿ ಶೇಖರಿಸಲಾದ 532.16 ಕ್ವಿಂಟಾಲ್ ಉಕ್ಕಿನಲ್ಲಿ 2/11 ರಲ್ಲಿ 188.45 ಕ್ವಿಂಟಾಲ್ ಹಾಗೂ 4/2016 ರಲ್ಲಿ 142.90 ಕ್ವಿಂಟಾಲ್ ಬಳಕೆಯಾಗಿದ್ದು 6 ವರ್ಷಗಳ ನಂತರ ಉಕ್ಕನ್ನು ಕಾಮಗಾರಿಗೆ ಬಳಸಿರುವ ಬಗ್ಗೆ ಗುಣ ನಿಯಂತ್ರಣ ವರದಿ ಪಡೆದಿರುವ ಬಗ್ಗೆ ವಿವರಗಳನ್ನು ಲೆಕ್ಕತನಿಖೆಗೆ ನೀಡಿರುವುದಿಲ್ಲ. *5)* ವಹಿಸಲಾದ ಮೂಲ ಕಾಮಗಾರಿಯನ್ನು ಗುತ್ತಿಗೆದಾರರು ಪೂರ್ಣಗೊಳಿಸದೆ ಇರುವಾಗ ಯಾವ ನಿಯಮಗಳ ಅನ್ವಯ ಬಾಕಿ ಕಾಮಗಾರಿಯನ್ನು 2014–15 ಸಾಲಿನ ದರಗಳಿಗೆ ವಹಿಸಲಾಗಿದೆ. ಕಾಮಗಾರಿ ನಿರ್ವಹಣೆಯಲ್ಲಿ ಇಲಾಖಾವತಿಯಿಂದ ಸಮಸ್ಯೆಗಳು ಇದ್ದಲ್ಲಿ ಗುತ್ತಿಗೆದಾರರು ಕಾಲ ವಿಸ್ತರಣೆ ಪಡೆಯಲು ಮಾತ್ರ ಅರ್ಹರಿದ್ದು ಸಿ.ಎಸ್.ಆರ್ ದರಗಳನ್ನು ಪಡೆಯಲು ಅಂಗೀಕೃತ ಕರಾರಿನಲ್ಲಿ ಅವಕಾಶ ಇರುವುದಿಲ್ಲ. ಗುತ್ತಿಗೆದಾರರಿಂದ ಸಮಸ್ಯೆಗಳು ಇದ್ದಲ್ಲಿ Risk and cost ನೊಂದಿಗೆ ಗುತ್ತಿಗೆಯನ್ನು ರದ್ದುಪಡಿಸಿ ಹೊಸದಾಗಿ ಟೆಂಡರ್ ಕರೆದು ಕಾಮಗಾರಿಯ ನಿರ್ವಹಿಸಬೇಕಾಗಿರುತ್ತದೆ. *6)* ಮೂಲ ಕಾಮಗಾರಿಯಲ್ಲಿ ನೆಲ ಅಂತಸ್ತು ಹಾಗೂ ಮೊದಲನೇ ಮಹಡಿ ಕಾಮಗಾರಿಯು ಒಳಗೊಂಡಿದ್ದು ಬಾಕಿ ಕಾಮಗಾರಿಯಲ್ಲಿ ಕೇವಲ ನೆಲ ಅಂತಸ್ತು ಕಾಮಗಾರಿಗೆ ಮಾತ್ರ ಅಂದಾಜನ್ನು ತಯಾರಿಸಿದ್ದು ಮೊದಲ ಮಹಡಿ ಕಾಮಗಾರಿಯನ್ನು ಕೈಬಿಟ್ಟಿರುವ ಬಗ್ಗೆ ಹಾಗೂ ಇದರಿಂದ ವಿಶ್ವವಿದ್ಯಾಲಯಕ್ಕೆ ಆಗಲಿರುವ ನಷ್ಟದ ಬಗ್ಗೆ ವಿವರಗಳನ್ನು ಲೆಕ್ಕತನಿಖೆಗೆ ನೀಡುವುದಿಲ್ಲ.	2. ಗುತ್ತಿಗೆದಾರರು ಅದೇ ಕಬ್ಬಿಣವನ್ನು ನಿರ್ಮಾಣ ಮಾಡುವ ಸಮಯದಲ್ಲಿ ಬಳಕೆ ಮಾಡಿರುತ್ತಾರೆ ಆದುದರಿಂದ ಆ ಕಬ್ಬಿಣದ ದರವನ್ನು ಮೊದಲ ಮತ್ತು ಎರಡನೇ ಭಾಗದ ಬಿಲ್ಲಿನಲ್ಲಿ ಕಟಾಯಿಸಲಾಗಿದೆ. ಆದುದರಿಂದ ಈ ಆಕ್ಷೇಪಣೆಯನ್ನು ಕೈ ಬಿಡಲು ಕೋರಲಾಗಿದೆ. ಗುತ್ತಿಗೆದಾರರು ಕಬ್ಬಿಣವನ್ನು ಖರೀದಿಸಿದ್ದು ಅದನ್ನು ಕಾಮಗಾರಿಯ ಸ್ಥಳದಲ್ಲಿ ಶೇಖರಿಸದ್ದರು. ಖರೀದಿಸಿ ಕಾಮಗಾರಿಗೆ ಬಳಸಿದ ಕಬ್ಬಿಣಕ್ಕೆ ಗುತ್ತಿಗೆದಾರರಿಗೆ ಪಾವತಿಸಲಾಗಿದೆ. ಗುತ್ತಿಗೆದಾರರಿಗೆ ಯಾವುದೇ ಮುಂಗಡ ಹಣವನ್ನು ಪಾವತಿ ಮಾಡಿರುವುದಿಲ್ಲ. 3. ಉಳಿದ ಕಬ್ಬಿಣ 343.71ಕೆಣಟ ನ ದರವನ್ನು ಗುತ್ತಿಗೆದಾರರ ಮೊದಲ ಮತ್ತು ಎರಡನೇ ಭಾಗದ ಬಿಲ್ಲಿನಲ್ಲಿ ಕಟಾಯಿಸಲಾಗಿದೆ. ಬಿ.ಆರ್.ನಂ. 35 ದಿನಾಂಕ: 11–05–2015. ಗುತ್ತಿಗೆದಾರರು ಕಬ್ಬಿಣವನ್ನು ಖರೀದಿಸಿದ್ದು ಅದನ್ನು ಕಾಮಗಾರಿಯ ಸ್ಥಳದಲ್ಲಿ ಶೇಖರಿಸಿದ್ದರು. ಖರೀದಿಸಿ ಕಾಮಗಾರಿಗೆ ಬಳಸಿದ ಕಬ್ಬಿಣಕ್ಕೆ ಗುತ್ತಿಗೆದಾರರಿಗೆ ಪಾವತಿಸಲಾಗಿದೆ. 4. ಕಟ್ಟಡದ ನಿರ್ಮಾಣದ ಸಮಯದಲ್ಲಿ ಬಳಕೆ ಮಾಡಿದ ಕಬ್ಬಿಣದ ಪರೀಕ್ಷೆಯ ವರದಿಯನ್ನು ನೀಡಿರುತ್ತಾರೆ. 5. ಈ ಕಾಮಗಾರಿಗಳ ವಿವರಗಳನ್ನು ತಾಂತ್ರಿಕ ಸಲಾಹಾ ಸಮಿತಿ, ಕಾಮಗಾರಿ ಸಮಿತಿ ಮತ್ತು ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಲಾಗಿದೆ. ಈ ಕಾಮಗಾರಿಗಳ ವಿಳಂಬದ ಬಗ್ಗೆ ವಿವರವಾಗಿ ಚರ್ಚಿಸಿದ ನಂತರ ದ್ವಿತೀಯ ತಾಂತ್ರಿಕ ಸಲಾಹಾ ಸಮಿತಿ ನಡೆದ ದಿನಾಂಕ 19–02–2015 ಮತ್ತು ದಿನಾಂಕ 17–03–2015 ರಂದು ನಡೆದ ಕಾಮಗಾರಿ ಸಭೆಯಲ್ಲಿ ಹಾಗೂ ದಿನಾಂಕ 24–03–2015 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಆಯಾ ಕಾಮಗಾರಿಯ ಗುತ್ತಿಗೆದಾರರಿಗೆ ಉಳಿಕೆ ಕಾಮಗಾರಿಯನ್ನು ಪೂರ್ಣಗೊಳಿಸಲು ಚಾಲ್ತಿಯಲ್ಲಿರುವ ದರಪಟ್ಟಿಯ ದರಗಳಿಗೆ ವಹಿಸಲು ನಿರ್ಧರಿಸಲಾಯಿತು. ಗುತ್ತಿಗೆದಾರರು ಈ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು ಮತ್ತು ಈ ಕಟ್ಟಡಗಳ ಉದ್ಘಾಟನೆಯನ್ನು ದಿನಾಂಕ 06–02–2017ರಂದು ಮಾನ್ಯ ಉನ್ನತ ಶಿಕ್ಷಣ ಸಚಿವರು ನೆರವೇರಿಸಿದರು.

ಆಕ್ಷೇಪಣೆಗಳು	ಉತ್ತರಗಳು
	6. ದಿನಾಂಕ:24.03.2015 ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ಈ ಕಟ್ಟಡದ ನೆಲ ಅಂತಸ್ತಿನ ಕಾಮಗಾರಿಯ ಪೂರ್ಣಗೊಳಿಸುವ ನಿರ್ಧಾರವನ್ನು ತೆಗೆದುಕೊಳ್ಳಲಾಯಿತು. ಈ ವಿಷಯದ ಬಗ್ಗೆ ದ್ವಿತೀಯ ತಾಂತ್ರಿಕ ಸಲಾಹಾ ಸಮಿತಿ ನಡೆದ ದಿನಾಂಕ 19–02–2015 ಮತ್ತು ದಿನಾಂಕ 17–03–2015 ರಂದು ನಡೆದ ಕಾಮಗಾರಿ ಸಭೆಯಲ್ಲಿ ಹಾಗೂ ದಿನಾಂಕ 24–03–2015 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿಲಾಗಿದೆ. ವಿವರವಾಗಿ ಚರ್ಚಿಸಿದ ನಂತರ ವಿಶೇಷ ಸಿಂಡಿಕೇಟ್ ಸಭೆಯು ತಕ್ಷಣವೇ ಈ ಕಾಮಗಾರಿಯನ್ನು ಪೂರ್ಣಗೊಳಿಸಬೇಕೆಂದು ನಿರ್ಧರಿಸಿತು. ಈ ಸಭೆಗಳ ನಡಾವಳಿಯನ್ನು **ಅನುಬಂಧ–161ರಲ್ಲಿ** ಲಗತ್ತಿಸಲಾಗಿದೆ.
7) ಈ ಕಾಮಗಾರಿಗೆ 3/2010 ರಲ್ಲಿ ನೀಡಲಾದ ರೂ.28.20 ಲಕ್ಷ ಮುಂಗಡ ಹಣವನ್ನು 5.10.2015 ರಲ್ಲಿ ವೋಚರ್ ಸಂಖ್ಯೆ169 ರಲ್ಲಿ 2 ನೇ ಹಾಗೂ ಭಾಗದ ಬಿಲ್ಲಿನಲ್ಲಿ ಮುರುಗಡೆಯಾಗಿರುತ್ತದೆ. ನಿಗದಿತ ಅವಧಿಯೊಳಗೆ ಕಾಮಗಾರಿ ಪೂರ್ಣಗೊಳ್ಳದಿರುವ ಕಾರಣದಿಂದಾಗಿ ನೀಡಿರುವ ಮುಂಗಡ ಹಣಕ್ಕೆ 18% ಬಡ್ಡಿ ದರದಲ್ಲಿ ಬಡ್ಡಿಯ ಮೊತ್ತ ರೂ.3496978.00 ಅನ್ನು ವಸೂಲಾತಿಗಾಗಿ ಸೂಚಿಸಿದೆ. (ಬಡ್ಡಿ ಲೆಕ್ಕಚಾರದ ವಿವರಗಳು ಈ ರೀತಿ ಇರುತ್ತದೆ) ಮುಂಗಡ ಹಣ ನೀಡಲಾದ ಮೊತ್ತ 2820000.00 ಮುಂಗಡ ಹಣ ನೀಡಲಾದ ದಿನಾಂಕ 29.11.2010 ಮುಂಗಡ ಹಣ ವಸೂಲಾತಿ ಮಾಡಲಾದ ದಿನಾಂಕ 5.10.2015	7. ಖರೀದಿಸಿ ಕಾಮಗಾರಿಯ ಸ್ಥಳದಲ್ಲಿ ಬಳಸಿದ ಕಬ್ಬಿಣಕ್ಕೆ ಗುತ್ತಿಗೆದಾರರಿಗೆ ಪಾವತಿಸಲಾಗಿದೆ ರೂ. 34,96,978.00 ಹಣವನ್ನು ಗುತ್ತಿಗೆದಾರರ ಅಂತಿಮ ಬಿಲ್ಲಿನಲ್ಲಿ ಕಟಾಯಿಸಲಾಗುವುದು. ಅಕಾಡೆಮಿಕ್ ಕಾಲೇಜು ಮತ್ತು ಅತಿಥಿಗೃಹ ನಿರ್ಮಾಣ ಕಾಮಗಾರಿಯ ಉಳಿಕೆ ಕಾಮಗಾರಿ ಯನ್ನು M/s. PMJ Constructionsಗೆ ಸಪ್ಲಿಮೆಂಟರಿ ಅಗ್ರಿಮೆಂಟ್ ಮುಖಾಂತರ, ಕಾಮಗಾರಿ ಸಮಿತಿ ಹಾಗೂ ಸಿಂಡಿಕೇಟ್ ಸಭೆಯ ನಿರ್ಧಾರದ ಪ್ರಕಾರ ವಹಿಸಲಾಗಿದೆ. ಕಾಮಗಾರಿ ಸಮಿತಿ ಹಾಗೂ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಅನುಬಂಧ–161ರಲ್ಲಿ ಲಗತ್ತಿಸಲಾಗಿದೆ. ಈ ಕಾಮಗಾರಿಯು ಈಗ ಪೂರ್ಣಗೊಂಡಿರುತ್ತದೆ. ಕರಾರು ಪತ್ರದ ನಿಬಂಧನೆಗಳ ಪ್ರಕಾರ ಯಾವ ರಿತೀ ಕ್ರಮ ಕೈಗೊಳ್ಳಲಾಗಿದೆ ಎಂಬುದನ್ನು ತಿಳಿಸಿಸುವುದು. ಗುತ್ತಿಗೆದಾರರಿಗೆ ಕಬ್ಬಿಣಕ್ಕೆ ಪಾವತಿಸಲಾಗಿದ್ದ ಮೊತ್ತವನ್ನು ಯಾವ ಯಾವ ಬಿಲ್ಲುಗಳಲ್ಲಿ ಬಳಸಲಾಗಿದೆ/ಕಟಾಯಿಸಲಾಗಿದೆಯೆಂಬ ಮಾಹಿತಿಯನ್ನು ಒದಗಿಸುವುದು. ಕಬ್ಬಿಣ ಪರೀಕ್ಷೆಯ ವರದಿಯನ್ನು ಒದಗಿಸಲು ತಿಳಿಸಿದೆ. ಕಾಮಗಾರಿಯನ್ನು 2014–15ನೇ ಸಾಲಿನ ದರಗಳಲ್ಲಿ ಯಾವ ನಿಯಮದಡಿ ಮಾಡಲಾಗಿದೆ ಎಂಬ ವಿವರ ನೀಡುವುದು. ಸಿಂಡಿಕೇಟ್ ಮುಂದೆ ಮಂಡಿಸಿದ ಪರಾಮಾರ್ಷನ ಟಿಪ್ಪಣಿಯನ್ನು ಒದಗಿಸುವುದು. ಕಾಮಗಾರಿಯು ಪೂರ್ಣಗೊಂಡು ದಿನಾಂಕ: 06.12.2017ರಂದು ಉದ್ಘಟನೆಯಾಗಿದ್ದರೂ, ಅಂತಿಮ ಬಿಲ್ಲು ಯಾವ ಹಂತದಲ್ಲಿದೆಯೆಂಬ ಮಾಹಿತಿ ಇರುವುದಿಲ್ಲ. ಜೊತೆಗೆ

ಆಕ್ಷೇಪಣೆಗಳು	ಉತ್ತರಗಳು
	ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಒದಗಿಸುವಂತೆ ದಿನಾಂಕ:25.03.2019ರ ಈ ಕಛೇರಿ ಟಿಪ್ಪಣಿಯಲ್ಲಿ ತಿಳಿಸಲಾಗಿದೆ.

1	29.11.2010 ರಿಂದ 31.3.2011	(4 Month) 2820000x18%		507600x4 / 12	169200.00
2	1.4.2011 ರಿಂದ 31.3.2012	2820000+169200		2989200x18%	538056.00
3	1.4.2012 ರಿಂದ 31.3.2013	2989200+538056		3527256x18%	634906.00
4	1.4.2013 ರಿಂದ 31.3.2014	3527256+634906		4162162x18%	749189.00
5	1.4.2014 ರಿಂದ 31.3.2015	4162162+749189		4911351x18%	884043.00
6	1.4.2015 ರಿಂದ 5.10.2015	4911351+884043		5795394x18%	521584.00
				Total amount	3496978.00

ಈ ಮೇಲಿನ ಆಕ್ಷೇಪಣೆಗಳಿಗೆ ವಿವರಗಳನ್ನು ಸಲ್ಲಿಸಲು ಕೋರಿದ್ದು, ಯಾವುದೇ ವರದಿ ಲೆಕ್ಕತನಿಖೆಗೆ ನೀಡದಿರುವುದರಿಂದ ಕಾಮಗಾರಿಗೆ ನೀಡಲಾದ ಮುಂಗಡ ಹಣ ರೂ.28.20 ಲಕ್ಷ ಮೊತ್ತದ ಬಡ್ಡಿಯ ಮೊತ್ತ ರೂ.34,96,978.00 ಗಳನ್ನು ಗುತ್ತಿಗೆದಾರರಿಂದ ವಸೂಲಾತಿಗಾಗಿ ಸೂಚಿಸಿದೆ.

117. "Construction of Boys hostel" JBC BU ಕಟ್ಟಡದ ನೆಲ ಅಂತಸ್ತು ಹಾಗೂ ಮೊದಲ ಮಹಡಿ ಕಾಮಗಾರಿಯ ಬಾಬ್ತು: ರೂ. 9165720.00

ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ "Construction of Boys hostel" ಕಟ್ಟಡದ ನೆಲ ಅಂತಸ್ತು ಹಾಗೂ ಮೊದಲ ಮಹಡಿ ಕಾಮಗಾರಿಯ ಅಂದಾಜನ್ನು 2008–09ನೇ ಸಾಲಿನ ದರ ಪಟ್ಟಿಯ ರೀತ್ಯಾ ರೂ.380.00 ಲಕ್ಷಗಳಿಗೆ ಅಂದಾಜನ್ನು ತಯಾರಿಸಿ ಅನುಮೋದಿಸಲಾಗಿದೆ. ಈ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ಗುತ್ತಿಗೆದಾರರಾದ M/s. P.M.J. Construction Pvt limited ಇವರಿಗೆ 2008–09ನೇ ಸಾಲಿನ ದರ ಪಟ್ಟಿಯ ದರಗಳಿಗೆ 2.54% ಹೆಚ್ಚುವರಿ ರೀತ್ಯಾ ಅಗ್ರಿಮೆಂಟ್ ಸಂಖ್ಯೆ UE:DM:698:2008–09 ರಲ್ಲಿ 12 ತಿಂಗಳ ಕಾಲಾವಧಿಯೊಂದಿಗೆ ರೂ.383.89ಲಕ್ಷ ಮೊತ್ತದ ಕಾಮಗಾರಿಯನ್ನು ವಹಿಸಲಾಗಿದೆ ಈ ಕಾಮಗಾರಿಯ ಸ್ಥಳವನ್ನು ದಿನಾಂಕ:20.11.2009 ರಲ್ಲಿ ಗುತ್ತಿಗೆದಾರರಿಗೆ ವಹಿಸಲಾಗಿದೆ.

ಈ ಕಾಮಗಾರಿಯು ಪ್ರಗತಿಯಲ್ಲಿರುವಾಗ ವಿಶ್ವವಿದ್ಯಾಲಯದ ಕುಲಪತಿಗಳು ಸ್ಥಳ ಪರಿಶೀಲಿಸಿ ಸದರಿ ಕಾಮಗಾರಿಯನ್ನು 32 ಕೊಠಡಿಗಳಿಂದ 50 ಕೊಠಡಿಗಳಿಗೆ ಹೆಚ್ಚಿಸಿ ಸುಮಾರು 3273 sqm ಕಟ್ಟಡ ನಿರ್ಮಾಣ ಮಾಡಲು ನಿರ್ದೇಶಿಸಿರುವ ಮೇರೆಗೆ ಕಾಮಗಾರಿಯ ಪರಿಮಾಣಗಳು ಹೆಚ್ಚುವರಿಯಾಗಿದ್ದು ರೂ.28.09 ಲಕ್ಷ ಮೊತ್ತದ Work slip ಹಾಗೂ Extra Item ಹೆಚ್ಚುವರಿ ಹಿನ್ನಲೆಯಲ್ಲಿ ದಿನಾಂಕ: 18/11/2011ರ ಟೆಕ್ನಿಕಲ್ ಕಮಿಟಿ ಉಳಿಕೆ ಕಾಮಗಾರಿಯನ್ನು ಸಿ.ಎಸ್.ಆರ್ ದರಗಳ ಅನ್ವಯ ಟೆಂಡರ್ ಗುತ್ತಿಗೆದಾರರಿಗೆ ವಹಿಸಲು ತೀರ್ಮಾನಿಸಲಾಗಿದೆ.

Balance work for the Construction of ¨Boys Hostel" JBC,BUB ಕಾಮಗಾರಿಯು ಪೂರ್ಣಗೊಂಡಿದ್ದು ಕಟ್ಟಡವನ್ನು ಹಸ್ತಾಂತರಿಲಾಗಿದ್ದು ವಿದ್ಯಾರ್ಥಿಗಳು ವಾಸ್ತವ್ಯ ಹೂಡಿದ್ದಾರೆ.

Balance work for the Construction of ¨Boys Hostel" JBC,BUB ಕಾಮಗಾರಿಯುನ್ನು M/s. PMJ Constructionsಗೆ ಕಾಮಗಾರಿ ಸಮಿತಿ ಹಾಗೂ ಸಿಂಡಿಕೇಟ್ ಸಭೆಯ ನಿರ್ಧಾರದ ಪ್ರಕಾರ ವಹಿಸಲಾಗಿದೆ.

1. ಈ ಕಾಮಗಾರಿಗಳ ವಿಳಂಬದ ಬಗ್ಗೆ Shiva shankar Bhat Commission ನಲ್ಲಿ ಚರ್ಚಿಸ ಲಾಗಿದೆ. ಈ ಸಮಿತಿಯ ''ಪದ್ದತಿಯ ಲೋಪ'' ಎಂಬ ವರದಿಯನ್ನು ನೀಡಿದೆ.

ಈ ವಿಷಯವನ್ನು ವಿಶ್ವವಿದ್ಯಾಲಯದ ಅಧಿಕಾರಿಗಳು ಪ್ರಥಮ ಮತ್ತು ದ್ವಿತೀಯ ತಾಂತ್ರಿಕ ಸಲಾಹಾ ಸಮಿತಿ ನಡೆದ ದಿನಾಂಕ 19–02–2015 ಮತ್ತು ದಿನಾಂಕ 17–03–2015 ರಂದು ನಡೆದ ಕಾಮಗಾರಿ ಸಭೆಯಲ್ಲಿ ಹಾಗೂ ದಿನಾಂಕ 24–03–2015 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿದ್ದಾರೆ.

ವಿವರವಾಗಿ ಚರ್ಚಿಸಿದ ನಂತರ ಸಿಂಡಿಕೇಟ್ ಸಭೆಯು ಆಯಾ ಕಾಮಗಾರಿಯ ಗುತ್ತಿಗೆದಾರರಿಗೆ ಕಾಮಗಾರಿಯನ್ನು ಚಾಲ್ತಿಯಲ್ಲಿರುವ ದರಪಟ್ಟಿಯ ದರಗಳಿಗೆ ವಹಿಸಲು

ಆಕ್ಷೇಪಣೆಗಳು	ಉತ್ತರಗಳು
ಈ ಕಾಮಗಾರಿಯ ಉಳಿಕೆ ಕಾಮಗಾರಿಯನ್ನು ಟೆಂಡರ್ ಗುತ್ತಿಗೆದಾರರಾದ M/s. P.M.J. Construction Pvt limited ಇವರಿಗೆ ಸಪ್ಲಿಮೆಂಟಲ್ ಅಗ್ರಿಮೆಂಟ್ ಸಂಖ್ಯೆ UE:DM:WORKORDER:106:2015-16 ದಿನಾಂಕ:02/05/2016 ರಲ್ಲಿ ರೂ 289.00 ಲಕ್ಷ ಮೊತ್ತದ ಕಾಮಗಾರಿಯನ್ನು ನಿರ್ವಹಿಸಲಾಗಿದೆ. ಈ ಕಾಮಗಾರಿಗೆ ಸಂಬಂಧಿಸಿದಂತೆ ಈ ಕೆಳಕಂಡ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿದೆ. ಈ ಕಾಮಗಾರಿಗೆ ನಿಗಧಿಪಡಿಸಲಾದ ಕಾಲಾವಧಿ 12 ತಿಂಗಳು ಆಗಿದ್ದು ಈ ಕಾಮಗಾರಿಗೆ ದಿನಾಂಕ:20/11/2009 ರಂದು Site hand over ಮಾಡಿದ್ದು ನಿಗದಿತ ಅವಧಿ ದಿನಾಂಕ:19.11.2010 ಕ್ಕೆ ಮುಕ್ತಾಯವಾಗಿದ್ದು ನಿಗದಿತ ಅವಧಿಯೊಳಗೆ ಗುತ್ತಿಗೆದಾರರು ಯಾವುದೇ ಆರ್ಥಿಕ ಪ್ರಗತಿ ಸಾಧಿಸಿರುವುದಿಲ್ಲ ಈ ಕಾಮಗಾರಿಯ 5ನೇ ಹಾಗೂ ಭಾಗದ ಬಿಲ್ಲು ದಿನಾಂಕ: 30/04/2015 ರಲ್ಲಿ ಅಳತೆ ಪುಸ್ತಕದಲ್ಲಿ ದಾಖಲಾಗಿದ್ದು ಕಾಮಗಾರಿ ನಿರ್ವಹಣೆಯಲ್ಲಿ 4 ವರ್ಷ ವಿಳಂಬವಾಗಿರುತ್ತದೆ. ಈ ವಿಳಂಬಕ್ಕೆ ಗುತ್ತಿಗೆದಾರರಿಗೆ ನೋಟೀಸ್ ನೀಡಿರುವುದಿಲ್ಲ. ಕಾಲ ವಿಸ್ತರಣೆ ನೀಡಿರುವುದಿಲ್ಲ ಹಾಗೂ ಕಾಮಗಾರಿಯ ಬಿಲ್ಲುಗಳಲ್ಲಿ ವಿಳಂಭಿತ ಅವಧಿಗೆ ದಂಡವನ್ನು ವಿಧಿಸಿರುವುದಿಲ್ಲ. ಈ ಕಾಮಗಾರಿ ನಿರ್ವಹಣೆಯಲ್ಲಿ ಉಂಟಾದ 4 ವರ್ಷ ವಿಳಂಬದಿಂದಾಗಿ ಉಳಿಕೆ ಕಾಮಗಾರಿಯ ಅಂದಾಜನ್ನು 2014–15 ನೇ ಸಾಲಿನ ದರಪಟ್ಟಿಗೆ ರೂ.289.00 ಲಕ್ಷ ಮೊತ್ತದ ಅಂದಾಜನ್ನು ಸಿದ್ದಪಡಿಸಿ ಟೆಂಡರ್ ಗುತ್ತಿಗೆದಾರರಿಗೆ ವಹಿಸಲಾಗಿದೆ. ಮೂಲ ಕಾಮಗಾರಿಯನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಿದ್ದಲ್ಲಿ ಉಳಿಕೆ ಕಾಮಗಾರಿಯ ಅಂದಾಜನ್ನು 2010–11ನೇ ಸಾಲಿನ ದರಪಟ್ಟಿಗೆ ತಯಾರಿಸಬಹುದಾಗಿದ್ದು 4 ವರ್ಷ increased rates can be avoided Reason is not stated to Audit. ಉಳಿಕೆ ಕಾಮಗಾರಿಗೆ 6 ತಿಂಗಳು ಕಾಲಾವಧಿ ನೀಡಿದ್ದು ಈ ಅವಧಿ ದಿನಾಂಕ: 01/11/2015 ಕ್ಕೆ ಪೂರ್ಣಗೊಂಡಿರುತ್ತದೆ. ನಿಗಧಿತ ಅವಧಿಯೊಳಗೆ ರೂ.77.95 ಲಕ್ಷ ಮೊತ್ತ ಪ್ರಗತಿ ಸಾಧಿಸಿದ್ದು ಉಳಿಕೆ ಮೊತ್ತ ಶಾರ್ಟಫಾಲ್ ಆಗಿರುತ್ತದೆ ಅಂಗೀಕೃತ ಕರಾರಿನ ಕಲಂ 37.2 ರೀತ್ಯಾ ಕುಂಠಿತ ಪ್ರಗತಿಗೆ ದಂಡ ವಿಧಿಸಬೇಕಾಗಿದ್ದು, ದಂಡವನ್ನು ವಿಧಿಸಿರುವುದಿಲ್ಲ. ಈ ಬಗ್ಗೆ ಯಾವುದೇ ವರದಿಗಳನ್ನು ಲೆಕ್ಕತನಿಖೆಗೆ ಒದಗಿಸಿರುವುದಿಲ್ಲ. ಈ ಕಾಮಗಾರಿಯ ಮೂಲ ಕರಾರಿಗೆ ಸಂಬಂಧಿಸಿದಂತೆ 9/2015 ಮಾಹೆಯಲ್ಲಿ ರೂ.13697755 ಹಾಗೂ ಸಪ್ಲಿಮೆಂಟಲ್ ಅಂಗ್ರಿಮೆಂಟ್‌ಗೆ ಸಂಭಂಧಿಸಿದಂತೆ ಪ್ರಥಮ ಹಾಗೂ ಭಾಗದ ಬಿಲ್ಲು ರೂ.7795945.00 ಜನವರಿ 2016 ರಲ್ಲಿ ಪಾವತಿಯಾಗಿದೆ. ವಿಳಂಬಿತ ಅವಧಿಗೆ ದಂಡ ವಿದಿಸದೇ ಬಿಲ್ಲುಗಳನ್ನು ಪಾವತಿಸಿರುವುದರಿಂದ ಹಾಗೂ ಮೂಲ ಕಾಮಗಾರಿಯಲ್ಲಿ ಉಂಟಾದ ವಿಳಂಬದಿಂದಾಗಿ 4	ನಿರ್ಧರಿಸಲಾಯಿತು. ಗುತ್ತಿಗೆದಾರರು ಈ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು ಮತ್ತು ಈ ಕಟ್ಟಡಗಳ ಉದ್ಘಾಟನೆಯು ದಿನಾಂಕ 06–02–2017ರಂದು ನಡೆಸಲಾಯಿತು. Construction of ¨Boys Hostel" JBC, BUB ಕಾಮಗಾರಿಯನ್ನು M/. PMJ Constructionsಗೆ ವಹಿಸಲಾಗಿದೆ. ಈ ಕಾಮಗಾರಿಯ ಪ್ರಥಮ ಹಾಗೂ ಭಾಗದ ಬಿಲ್ಲಿನ ಮೊತ್ತ ರೂ. 28,20,448.00ನ್ನು ದಿನಾಂಕ 29–04–2010ರಂದು ಗುತ್ತಿಗೆದಾರರಿಗೆ ಪಾವತಿಸಲಾಗಿದೆ. ಕೆಲವು ಆಡಳಿತಾತ್ಮಕ ಮತ್ತು ತಾಂತ್ರಿಕ ಕಾರಣಗಳಿಂದು ಈ ಕಾಮಗಾರಿಯನ್ನು ಗುತ್ತಿಗೆದಾರರು ಪೂರ್ಣಗೊಳಿಸಲಾಗಲಿಲ್ಲ. 2. ಈ ಕಾಮಗಾರಿಗಳ ವಿವರಗಳನ್ನು ತಾಂತ್ರಿಕ ಸಲಾಹಾ ಸಮಿತಿ, ಕಾಮಗಾರಿ ಸಮಿತಿ ಮತ್ತು ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಲಾಗಿದೆ. ಈ ಕಾಮಗಾರಿಗಳ ವಿಳಂಬದ ಬಗ್ಗೆ ವಿವರವಾಗಿ ಚರ್ಚಿಸಿದ ನಂತರ ದ್ವಿತೀಯ ತಾಂತ್ರಿಕ ಸಲಾಹಾ ಸಮಿತಿ ನಡೆದ ದಿನಾಂಕ 19–02–15 ಮತ್ತು ದಿನಾಂಕ 17–03–15 ರಂದು ನಡೆದ ಕಾಮಗಾರಿ ಸಭೆಯಲ್ಲಿ ಹಾಗೂ ದಿನಾಂಕ 24–03–15 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಆಯಾ ಕಾಮಗಾರಿಯ ಗುತ್ತಿಗೆದಾರರಿಗೆ ಉಳಿಕೆ ಕಾಮಗಾರಿಯನ್ನು ಪೂರ್ಣಗೊಳಿಸಲು ಚಾಲ್ತಿಯಲ್ಲಿರುವ ದರಪಟ್ಟಿಯ ದರಗಳಿಗೆ ವಹಿಸಲು ನಿರ್ಧರಿಸಲಾಯಿತು. ಗುತ್ತಿಗೆದಾರರು ಈ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು ಮತ್ತು ಈ ಕಟ್ಟಡಗಳ ಉದ್ಘಾಟನೆಯನ್ನು ದಿನಾಂಕ 06–02–2017ರಂದು ಮಾನ್ಯ ಉನ್ನತ ಶಿಕ್ಷಣ ಸಚಿವರು ನೆರವೇರಿಸಿದರು. ಈ ಕಾಮಗಾರಿಗಳ ವಿವರಗಳನ್ನು ತಾಂತ್ರಿಕ ಸಲಾಹಾ ಸಮಿತಿ, ಕಾಮಗಾರಿ ಸಮಿತಿ ಮತ್ತು ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಲಾಗಿದೆ. 3. ಈ ಕಾಮಗಾರಿಯ ವಿಳಂಬದ ಬಗ್ಗೆ Shivashankar Bhatt Commissionನಲ್ಲಿ ಚರ್ಚಿಸಲಾಗಿದೆ. ಈ ಸಮಿತಿಯ ಕಾಲಾವಧಿಯ ''ಪದ್ದತಿಯ ಲೋಪ'' ಎಂಬ ವರದಿಯನ್ನು ನೀಡಿದೆ. ಈ ವಿಷಯವನ್ನು ವಿಶ್ವವಿದ್ಯಾಲಯದ ಅಧಿಕಾರಿಗಳು ಪ್ರಥಮ ಮತ್ತು ದ್ವಿತೀಯ ತಾಂತ್ರಿಕ ಸಲಾಹಾ ಸಮಿತಿ ನಡೆದ ದಿನಾಂಕ 19–02–15 ಮತ್ತು ದಿನಾಂಕ 17–03–15 ರಂದು ನಡೆದ ಕಾಮಗಾರಿ ಸಭೆಯಲ್ಲಿ ಹಾಗೂ ದಿನಾಂಕ 24–03–15 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ

ಆಕ್ಷೇಪಣೆಗಳು	ಉತ್ತರಗಳು
ವರ್ಷಗಳ increased rates ನೀಡಿರುವ ಬಗ್ಗೆ ಮಾಹಿತಿಗಳನ್ನು ನೀಡುವವರೆವಿಗೆ ರೂ.1369775+7795945=9165720.00 ಅನ್ನು ಆಕ್ಷೇಪಣೆಯಲ್ಲಿಡಲಾಗಿದೆ.	ಚರ್ಚಿಸಿದ್ದಾರೆ. ವಿವರವಾಗಿ ಚರ್ಚಿಸಿದ ನಂತರ ಸಿಂಡಿಕೇಟ್ ಸಭೆಯು ಆಯಾ ಕಾಮಗಾರಿಯ ಗುತ್ತಿಗೆದಾರರಿಗೆ ಕಾಮಗಾರಿಯನ್ನು ಚಾಲ್ತಿಯಲ್ಲಿರುವ ದರಪಟ್ಟಿಯ ದರಗಳಿಗೆ ವಹಿಸಲು ನಿರ್ಧರಿಸಲಾಯಿತು. ಗುತ್ತಿಗೆದಾರರು ಈ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು ಮತ್ತು ಈ ಕಟ್ಟಡಗಳ ಉದ್ಘಾಟನೆಯು ದಿನಾಂಕ06–02–17ರಂದು ನಡೆಸಲಾಯಿತು. ಸ್ಪಷ್ಟವಾದ ಕಂಡಿಕೆವಾರು ಅಂತಿಮ ಉತ್ತರ ಸಲ್ಲಿಸಲು ದಿನಾಂಕ:25.03.2019 ರ ಈ ಕಛೇರಿ ಟಿಪ್ಪಣಿಯಲ್ಲಿ ತಿಳಿಸಲಾಗಿದೆ. ದಿನಾಂಕ : 21.10.2019ರಂದು ನಡೆದ ಸಭೆಯಲ್ಲಿ ಚರ್ಚಿಸಿ ಕೂಡಲೆ ಉತ್ತರ ಸಲ್ಲಿಸಲು ತಿಳಿಸಲಾಯಿತು.
118. **ಬೆಂಗಳೂರು ವಿಶ್ವವಿದ್ಯಾಲಯದ ಸಿಟಿ ಕ್ಯಾಂಪಸ್ ಆವರಣದಲ್ಲಿ Construction of Commerce Buildings ಕಟ್ಟಡದ ನಿರ್ಮಾಣ ಕಾಮಗಾರಿ ಮೊಬಲಗು: ರೂ. 10,49,634.00 ಗಳು (ಆಕ್ಷೇಪಣೆ)**	
ಬೆಂಗಳೂರು ವಿಶ್ವವಿದ್ಯಾಲಯದ ಸಿಟಿ ಕ್ಯಾಂಪಸ್ ಆವರಣದಲ್ಲಿ Construction of Commerce Buildings ಕಟ್ಟಡದ ನೆಲ ಅಂತಸ್ತು ಹಾಗೂ ಮೊದಲ ಎರಡನೇ ಅಂತಸ್ತಿನ ಕಟ್ಟಡ ನಿರ್ಮಾಣದ ಸಲುವಾಗಿ ವಿಶ್ವವಿದ್ಯಾಲಯದ ಅಭಿಯಂತರರು 2006–07ನೇ ಸಾಲಿನ ದರಪಟ್ಟಿಯ ರೀತ್ಯಾ 268.00 ಲಕ್ಷ ರೂಗಳ ಅಂದಾಜನ್ನು ಡಿ.ಆರ್. ನಂ–51/20006–07ರಲ್ಲಿ ತಯಾರಿಸಿ ಅನುಮೋದಿಸಿರುತ್ತಾರೆ. ಈ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ಗುತ್ತಿಗೆದಾರರಾದ ಕೃಷ್ಣೇಗೌಡ ಇವರಿಗೆ 2007–08ನೇ ಸಾಲಿನ ದರಪಟ್ಟಿಗೆ 15% ಹೆಚ್ಚುವರಿ ದರದೊಂದಿಗೆ (ದರ ಸಂಧಾನ) ಈ ಕಛೇರಿಯ ವರ್ಕ್ ಆರ್ಡರ್ ಸಂಖ್ಯೆ UE:DM:WORK ORDER:2007-08 ದಿನಾಂಕ: 31/03/2008ರಲ್ಲಿ 12 ತಿಂಗಳು ಕಾಲಾವದಿಯೊಂದಿಗೆ ರೂ.354.35 ಲಕ್ಷ ಮೊತ್ತದ ಕಾಮಗಾರಿಯನ್ನು ವಹಿಸಲಾಗಿದೆ. ಈ ಕಾಮಗಾರಿಯ ವರ್ಕ್‌ಸ್ಲಿಪ್ ಮೊತ್ತ 35,95,780/– ಹಾಗೂ EIRL ಮೊತ್ತ 20,64,747/– ಮೊತ್ತ ಪಾವತಿಯ ನಂತರವೂ ಈ ಕಾಮಗಾರಿಯ ಉಳಿಕೆ ಕಾಮಗಾರಿಯ ಸಿವಿಲ್ ಕಾಮಗಾರಿಗಳಿಗೆ 123.00 ಲಕ್ಷ ಹಾಗೂ ಎಲೆಕ್ಟ್ರಿಕಲ್ ಕಾಮಗಾರಿಯ 46.00 ಲಕ್ಷ ಮೊತ್ತದ ಅಂದಾಜುಗಳನ್ನು 2014–15ನೇ ಸಾಲಿನ ದರಪಟ್ಟಿಯ ಅನ್ವಯ ಅಂದಾಜುಗಳನ್ನು ತಯಾರಿಸಿ ಅನುಮೋದಿಸಿ ಟೆಂಡರ್ ಗುತ್ತಿಗೆದಾರರಾದ ಶ್ರೀ. ಕೃಷ್ಣೇಗೌಡ ಇವರಿಗೆ 2014–15ನೇ ಸಾಲಿನ ದರಪಟ್ಟಿಯ ದರಗಳ ಅನ್ವಯ ರೂ.1,66,25,054/– ಮೊತ್ತದ ಕಾಮಗಾರಿಯನ್ನು ವಹಿಸಲಾಗಿದೆ. ಈ ಕಾಮಗಾರಿಗೆ ಸಂಬಂಧಿಸಿದಂತೆ ಈ ಕೆಳಕಂಡ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿದೆ. 1 ಈ ಕಾಮಗಾರಿಯ ತುಲನಾತ್ಮಕ ದರಪಟ್ಟಿಯ (Comparative Statement) ಐಟಂ ಸಂಖ್ಯೆ 4ರ Antitermitc treatments ಸಲುವಾಗಿ ಅಂದಾಜಿನಲ್ಲಿ ನಿಗದಿ ಪಡಿಸಲಾದ ದರ ಪ್ರತಿ Square feet ಗೆ ರೂ 81.62	1. .ಬೆಂಗಳೂರು ವಿಶ್ವವಿದ್ಯಾಲಯದ ಸಿಟಿ ಕ್ಯಾಂಪಸ್ ಆವರಣದಲ್ಲಿ **"Construction of Commerce Buildings"** ಕಟ್ಟಡದ ನಿರ್ಮಾಣ ಕಾಮಗಾರಿಯನ್ನು ಅಂದಾಜುಪಟ್ಟಿಯನ್ನು ರೂ. 248.00 ಲಕ್ಷಗಳಿಗೆ 2006–2007ನೇ ಸಾಲಿನ ದರಪಟ್ಟಿಯಂತೆ ತಯಾರಿಸಲಾಗಿದೆ. ಈ ಅಂದಾಜು ಪಟ್ಟಿಯನ್ನು ವಾಸ್ತುಶಿಲ್ಪ ವಿಭಾಗದವರು ಸಲ್ಲಿಸಿರುವ ನಕ್ಷೆ ಮತ್ತು ರೇಖಾಕೃತಿಯಂತೆ ಸಿದ್ಧಪಡಿಸಲಾಗಿದೆ. ಈ ಕಾಮಗಾರಿಯನ್ನು ಶ್ರೀ. ಕೃಷ್ಣೇಗೌಡ ಎಂಬ ಗುತ್ತಿಗೆದಾರರಿಗೆ @ 15.00% above SR 07–08 ಗೆ ನೀಡಲಾಗಿರುತ್ತದೆ. 21ನೇ ಕಾಮಗಾರಿ ಸಮಿತಿಯ ನಿರ್ಧಾರದ ಅನ್ವಯ 01–12–2007ರಂದು ನಡೆದ 68ನೇ ಸಿಂಡಿಕೇಟ್ ಸಭೆಯಲ್ಲಿ 21ನೇ ಕಾಮಗಾರಿ ಸಮಿತಿಯ ನಡಾವಳಿಯು ಅನುಮೋದನೆಗೊಂಡಿರುತ್ತದೆ. Antitermite treatment ಐಟಂ ಅನ್ನು ತುಲನಾತ್ಮಕ ಹೇಳಿಕೆಯಲ್ಲಿ ತೆಗೆದುಕೊಂಡು ಸರಿಪಡಿಸಲಾಗುವುದು. 2.ಗುತ್ತಿಗೆದಾರರಿಗೆ ಯಾವುದೇ ಅಧಿಕ ಮೊತ್ತವನ್ನು ಪಾವತಿ ಮಾಡಿದ್ದಲ್ಲಿ, ಆ ಮೊತ್ತವನ್ನು ಗುತ್ತಿಗೆದಾರರ ಅಂತಿಮ ಬಿಲ್ಲಿನಲ್ಲಿ, ಇ,ಎಮ್.ಡಿ ಮತ್ತು ಎಫ್.ಎಸ್.ಡಿ.ಗಳ ಮೊತ್ತದಲ್ಲಿ ಕಟಾಯಿಸ ಲಾಗುವುದು. ಅ. ಕಾಮಗಾರಿಯ ವಿಳಂಬಕ್ಕೆ ಕಾರಣ ವಾಸ್ತುಶಿಲ್ಪ ವಿಭಾಗದವರು ನಕ್ಷೆ ಮತ್ತು ರೇಖಾಕೃತಿಯು ವಾಸ್ತುಶಿಲ್ಪ ವಿಭಾಗದವರು ಸಲ್ಲಿಸಿರುವ ನಕ್ಷೆ ಮತ್ತು ರೇಖಾಕೃತಿಯನ್ನು ವಿಳಂಬವಾಗಿ ಸಲ್ಲಿಸಿರುತ್ತಾರೆ. ಈ ವಿಳಂಬದ ಬಗ್ಗೆ ದಿನಾಂಕ 19–01–2015ರಂದು ನಡೆದ ತಾಂತ್ರಿಕ ಸಲಹಾ

ಆಕ್ಷೇಪಣೆಗಳು	ಉತ್ತರಗಳು

ಆಗಿದ್ದು ತುಲನಾತ್ಮಕ ಪಟ್ಟಿಯಲ್ಲಿ ರೂ. 562.86 ನಿಗದಿ ಪಡಿಸಿ ತುಲನಾತ್ಮಕ ದರ ಪಟ್ಟಿ ತಯಾರಿಸಿದ್ದು ವ್ಯತ್ಯಾಸದ ಮೊತ್ತ ರೂ. 529364.00 ಆಗಿದ್ದು ಈ ಬಗ್ಗೆ ವಿವರಗಳನ್ನು ಲೆಕ್ಕತನಿಖೆಗೆ ಸಲ್ಲಿಸಿರುವುದಿಲ್ಲ.

2ಗುತ್ತಿಗೆದಾರರು ಟೆಂಡರ್‌ನಲ್ಲಿ ನಮೂದಿಸಿರುವ ದರಗಳು 2006–07ನೇ ಸಾಲಿನ ದರಗಳಿಗೆ 37.53% ಹಾಗೂ 2007–08ನೇ ಸಾಲಿನ ದರಗಳಿಗೆ 17% ಹೆಚ್ಚುವರಿ ದರ ನಮೂದಿಸಿದ್ದು, ದಿನಾಂಕ:17/12/2007 ರಂದು ಸಂಧಾನದ ರೀತ್ಯಾ ಅಂತಿಮವಾಗಿ 2007–08ನೇ ಸಾಲಿನ ದರಗಳಿಗೆ 15% ಹೆಚ್ಚುವರಿ ದರಗಳನ್ನು ನೀಡಲು ತೀರ್ಮಾನಿಸಿ ಟೆಂಡರ್‌ನ್ನು ಅಂಗೀಕರಿಸಿದೆ ಈ ರೀತಿ ದರಗಳನ್ನು ಅಂಗೀಕರಿಸುವ ಸಂದರ್ಭದಲ್ಲಿ ಈ ಕೆಳಕಂಡ ಐಟಂಗಳಿಗೆ ಗುತ್ತಿಗೆದಾರರು ಟೆಂಡರ್‌ನಲ್ಲಿ ನಮೂದಿಸಿರುವ ದರಗಳಿಗಿಂತ ಹೆಚ್ಚುವರಿ ದರ ನಿಗದಿಪಡಿಸಿರುವುದು ಕಂಡು ಬಂದಿದೆ. ಇಲಾಖಾ ನಿಯಮಗಳ ರೀತ್ಯಾ ಗುತ್ತಿಗೆದಾರರು ನಮೂದಿಸಿರುವ ದರಗಳನ್ನು ದರ ಸಂಧಾನದ ರೀತ್ಯಾ ಕಡಿಮೆಗೊಳಿಸಿ ನಿಗದಿಪಡಿಸಬೇಕಾಗಿದ್ದು ಹೆಚ್ಚುವರಿ ದರ ನಿಗದಿಪಡಿಸುವ ಬಗ್ಗೆ ಮಾಹಿತಿಗಳನ್ನು ಲೆಕ್ಕತನಿಖೆಗೆ ನೀಡಿರುವುದಿಲ್ಲ. (ವಿವರಗಳು)

ಕ್ರ ಸಂ	ಹೆಚ್ಚಾಗಿರುವ ಐಟಂ ಸಂಖ್ಯೆ	ಕಾಮಗಾರಿಯ ವಿಶೇಷ ವಿವರಣೆ	ಪರಿಮಾಣ	ಗುತ್ತಿಗೆದಾರರು ನಮೂದಿಸಿರುವ ದರಗಳು	ಹೆಚ್ಚಾಗಿರುವ ದರಗಳು	ಹೆಚ್ಚುವರಿಯಾಗಿ ನಿಗದಿ ಪಡಿಸಿದ ದರಗಳು
1	8	Earth work-excavation	510.00 .cm	200.00	300.00	100.00
2	9	Reinforcement sheet	154.00 MT	53,000.00	59,000.00	6,000.00
3	18	Ready mix concrete	415.16 Cm	5,300.00	5,500.00	200.00
4	79	Provoding fixing Gate	2.00N	300.00	501.00	201.00

ಈ ರೀತಿ ಹೆಚ್ಚುವರಿಯಾಗಿ ದರಗಳನ್ನು ನಿಗದಿಪಡಿಸಿರುವುದರಿಂದ ಮೂಲ ಕಾಮಗಾರಿಯ ಬಿಲ್ಲಿನಲ್ಲಿ ಪಾವತಿಸಲಾದ ಪರಿಮಾಣಗಳಲ್ಲಿ ರೂ. 12,27,890.00 ಹೆಚ್ಚುವರಿ ಮೊತ್ತ ಪಾವತಿಯಾಗಿದ್ದು, ಈ ಮೊತ್ತವನ್ನು ಸಂಬಂಧಪಟ್ಟವರಿಂದ ವಸೂಲಿಸಿ ಜಮೆ ಮಾಡಲು ಅನುಬಂಧ–2ರ ಕ್ರಮಸಂಖ್ಯೆ 1ರಲ್ಲಿ ಸೂಚಿಸಿದೆ.

(ಅ)ಈ ಕಾಮಗಾರಿಗೆ ದಿನಾಂಕ: 31–03–2008 ರಂದು ವರ್ಕ್ ಆರ್ಡರ್ ನೀಡಿದ್ದು ನಿಗದಿಪಡಿಸಿದ ಕಾಲಾವಧಿ 12 ತಿಂಗಳು ಆಗಿದ್ದು 2014–15 ನೇ ಸಾಲಿನವರೆವಿಗೂ ಈ ಕಾಮಗಾರಿಯು ಮುಂದುವರಿದಿದೆ.

ಸಮಿತಿ ಮತ್ತು ದಿನಾಂಕ 17–03–2015ರಂದು ನಡೆದ 44ನೇ ಕಾಮಗಾರಿ ಸಮಿತಿ ಮತ್ತು 24–03–2015ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಲಾಯಿತು. ವಿವರವಾಗಿ ಚರ್ಚಿಸಿದ ನಂತರ ಬೆಂಗಳೂರು ವಿಶ್ವವಿದ್ಯಾಲಯದ ಸಿಟಿ ಕ್ಯಾಂಪಸ್ ಆವರಣದಲ್ಲಿ **"Construction of Commerce Buildings"** ಕಟ್ಟಡದ ನಿರ್ಮಾಣ ಉಳಿಕೆ ಕಾಮಗಾರಿಯ ಮೊತ್ತ ರೂ. 123.00 ಲಕ್ಷಗಳನ್ನು ಸಿವಿಲ್ ಕಾಮಗಾರಿಗೆ @ **CSR** ಅನ್ವಯ ಅನುಮೋದನೆಯನ್ನು ನೀಡಿರುತ್ತದೆ.

ದಿನಾಂಕ 19–01–2015ರಂದು ನಡೆದ ತಾಂತ್ರಿಕ ಸಲಹಾ ಸಮಿತಿ ಮತ್ತು ದಿನಾಂಕ 17–03–2015ರಂದು ನಡೆದ 44ನೇ ಕಾಮಗಾರಿ ಸಮಿತಿ ಮತ್ತು 24–03–2015ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಅನುಬಂಧ–161ರಲ್ಲಿ ಲಗತ್ತಿಸಲಾಗಿದೆ.

ಈ ಕಾಮಗಾರಿಗಳ ವಿಳಂಬದ ಬಗ್ಗೆ Shivashankar Bhatt Commissionನಲ್ಲಿ ಚರ್ಚಿಸಲಾಗಿದೆ. ಈ ಸಮಿತಿಯ ''ಪದ್ದತಿಯ ಲೋಪ'' ಎಂಬ ವರದಿಯನ್ನು ನೀಡಿದೆ.

ಸ್ಪಷ್ಟವಾದ ಕಂಡಿಕೆವಾರು ಅಂತಿಮ ಉತ್ತರ ಸಲ್ಲಿಸಲು ದಿನಾಂಕ:25.03.2019ರ ಈ ಕಛೇರಿ ಟಿಪ್ಪಣಿಯಲ್ಲಿ ತಿಳಿಸಲಾಗಿದೆ. ದಿನಾಂಕ : 21.10.2019ರಂದು ನಡೆದ ಸಭೆಯಲ್ಲಿ ಚರ್ಚಿಸಿ ಕೂಡಲೆ ಉತ್ತರ ಸಲ್ಲಿಸಲು ತಿಳಿಸಲಾಯಿತು.

ಆಕ್ಷೇಪಣೆಗಳು	ಉತ್ತರಗಳು
(ಆ)ಸಿವಿಲ್ ಕಾಮಗಾರಿಗೆ ಸಂಬಂಧಿಸಿದಂತೆ ಅನುಮೋದಿಸಲಾಗಿರುವ 123.00ಲಕ್ಷ ಪೂರಕ ಅಂದಾಜಿನಲ್ಲಿ ಮೂಲ ಅಂದಾಜಿನಲ್ಲಿರುವ ಐಟಂಗಳಾದ Antitermitc treatment, Reinforcementsheet, Ready mix concret, Stone works, painting flooring, ಸಲುವಾಗಿ ತಯಾರಿಸಿ ಅನುಮೋದಿಸಿದ ಅಂದಾಜು ಆಗಿರುತ್ತದೆ. ಕಡತದಲ್ಲಿ ಲಭ್ಯವಿರುವ ಮಾಹಿತಿಗಳ ರೀತ್ಯಾ ಕಾಮಗಾರಿ ಪ್ರಗತಿಯಲ್ಲಿರುವ ಸಂದರ್ಭದಲ್ಲಿ ಆರ್ಕಿಟೆಕ್ಚರವರು ನೀಡಿದ ಡ್ರಾಯಿಂಗ್‌ನಲ್ಲಿ ಹಲವು ಬದಲಾವಣೆಗಳಿದ್ದು ಪರಿಮಾಣಗಳು ಹೆಚ್ಚುವರಿಯಾಗಿರಲು ಕಾರಣವಾಗಿರುತ್ತದೆ. ಮೂಲ ಅಂದಾಜು ತಯಾರಿಸುವ ಮುನ್ನ ಆರ್ಕಿಟೆಕ್ಚರರವರಿಂದ ಡ್ರಾಯಿಂಗ್ ಅನುಮೋದನೆ ಪಡೆಯದ ಕಾರಣದಿಂದಾಗಿ ಹೆಚ್ಚುವರಿ ಪರಿಮಾಣಗಳಿಗೆ ಸುಮಾರು 8 ವರ್ಷಗಳ increased Rates of S.R ನೀಡಿದಂತಾಗಿರುತ್ತದೆ. ಕಾಮಗಾರಿಗೆ ಸಂಬಂಧಿಸಿದ ಡ್ರಾಯಿಂಗ್‌ಗಳನ್ನು ಆರ್ಕಿಟೆಕ್ಚರವರಿಂದ ಪಡೆಯದೆ ತಯಾರಿಸಲಾದ ಅಂದಾಜು Defective estimate ಆಗಿದ್ದು ವಿಶ್ವವಿದ್ಯಾಲಯಕ್ಕೆ ಹೆಚ್ಚುವರಿ ಹೊರೆ ಆಗಿರುತ್ತದೆ. ಈ ಬಗ್ಗೆ ಮಾಹಿತಿಗಳನ್ನು ಲೆಕ್ಕತನಿಖೆಗೆ ನೀಡಿರುವುದಿಲ್ಲ. (ಇ) ಕಾಮಗಾರಿಯಲ್ಲಿ ಉಂಟಾಗಿರುವ 8 ವರ್ಷಗಳ ವಿಳಂಬಕ್ಕೆ ಕಾರಣಗಳನ್ನು ಮತ್ತು ಅದರ ಸಮಯವನ್ನು ಹಾಗೂ ಗುತ್ತಿಗೆದಾರರಿಂದ ಉಂಟಾಗಿರುವ ವಿಳಂಬಕ್ಕೆ ದಂಡ ವಿಧಿಸಿರುವ ಬಗ್ಗೆ ಮಾಹಿತಿಗಳನ್ನು ನೀಡಲು ಕೋರಿದ್ದು ಯಾವುದೇ ವರದಿ ನೀಡದೆ ಇರುವುದರಿಂದ ಪ್ರಸಕ್ತ ಸಾಲಿನಲ್ಲಿ ಈ ಕಾಮಗಾರಿಗೆ ಸಂಬಂಧಿಸಿದಂತೆ, 13ನೇ ಹಾಗೂ ಭಾಗದ ಬಿಲ್ಲಿನಲ್ಲಿ ಡಿಸೆಂಬರ್–2015 ರಲ್ಲಿ ಪಾವತಿಸಲಾದ ಮೊತ್ತ ರೂ.10,49,634.00 ನ್ನು ಆಕ್ಷೇಪಣೆಯಲ್ಲಿಡಲಾಗಿದೆ.	
119. **ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ ಆವರಣದಲ್ಲಿನ ಮುದ್ರಾಣಾಲಯ ಮತ್ತು ಪ್ರಸಾರಾಂಗ ಕಟ್ಟಡ ಕಾಮಗಾರಿ ಮೊಬಲಗು ರೂ.1,23,64,557.00 ಗಳು (ಆಕ್ಷೇಪಣೆ)**	
ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ ಆವರಣದಲ್ಲಿನ ಮುದ್ರಾಣಾಲಯ ಮತ್ತು ಪ್ರಸಾರಾಂಗ ಕಟ್ಟಡ ಕಾಮಗಾರಿಯ ಅಂದಾಜನ್ನು ರೂ. 275.00 ಲಕ್ಷಗಳಿಗೆ 2006–07ನೇ ಸಾಲಿನ PWD ಬೆಂಗಳೂರು ವೃತ್ತದ ದರ ಪಟ್ಟಿಯ ರೀತಿ ವಿಶ್ವವಿದ್ಯಾಲಯ ಅಭಿಯಂತರರು ಅಂದಾಜು ಪಟ್ಟಿಯನ್ನು ತಯಾರಿಸಿ ಅನುಮೋದಿಸಿರುತ್ತಾರೆ. ದಿ:15–07–07ರ Chambers of Chairman Dept. of Architecture ಸಭೆಯ ನಡಾವಳಿಗಳಲ್ಲಿ ಟೆಕ್ನಿಕಲ್ ಕಮಿಟಿಯು ರೂ. 275.00 ಲಕ್ಷ ಮೊತ್ತದ ಕಾಮಗಾರಿಗೆ ತಾಂತ್ರಿಕ ಒಪ್ಪಿಗೆಯನ್ನು ನೀಡಿರುತ್ತದೆ. ಈ ಒಪ್ಪಿಗೆ ಸಂದರ್ಭದಲ್ಲಿ lumpsum ಐಟಂಗಳ ಮೊತ್ತಕ್ಕೆ ಅಧೀಕ್ಷಕ ಅಭಿಯಂತರರು PWD ಇವರಿಂದ ಅನುಮೋದನೆ ಪಡೆಯಲು ನಿರ್ಧರಿಸಿದ್ದು, ಟೆಂಡರ್ ಕರೆಯುವ ಮುನ್ನಾ ಅನುಮತಿ ಪಡೆಯಲು ಸಮಿತಿಯು ನಿರ್ಧರಿಸಿದೆ.	

ಆಕ್ಷೇಪಣೆಗಳು	ಉತ್ತರಗಳು
ಈ ಕಾಮಗಾರಿಯ ಟೆಂಡರ್‌ನಲ್ಲಿ ಇಬ್ಬರು ಟೆಂಡರ್‌ದಾರರು ಭಾಗವಹಿಸಿದ್ದು ಶ್ರೀ. ವಿಜಯಕುಮಾರ ಪಿ. ಇವರು L1 ಟೆಂಡರ್‌ದಾರರಾಗಿ ಆಯ್ಕೆಯಾಗಿದ್ದು ಇವರು ನಮೂದಿಸಿರುವ ದರಗಳು 2006–07ನೇ ಸಾಲಿನ ದರಪಟ್ಟಿಗೆ 46.68% ಹಾಗೂ 2007–08ನೇ ಸಾಲಿನ ದರಪಟ್ಟಿಯ ದರಗಳಿಗೆ 21.09% ಹೆಚ್ಚುವರಿ ದರ ನಮೂದಿಸಿದ್ದು ದಿನಾಂಕ: 17.12.2007ರಂದು ವಿಶ್ವವಿದ್ಯಾಲಯವು ಗುತ್ತಿಗೆದಾರರೊಂದಿಗೆ ದರ ಸಂದಾನ ನಡೆಸಿದ್ದು 2007–08ನೇ ಸಾಲಿನ ದರಗಳಿಗೆ 15% ಹೆಚ್ಚುವರಿ ದರಗಳನ್ನು ನೀಡಲು ನಿರ್ಧರಿಸಿದೆ ಹಾಗೂ ಸಿಮೆಂಟಿನ ವ್ಯತ್ಯಾಸದ ದರಗಳನ್ನು ಸಹ ನೀಡಲು ಅನುಮತಿ ನೀಡಿರುತ್ತದೆ. ಈ ಕಾಮಗಾರಿಗೆ ಸಂಭಂದಿಸಿದಂತೆ ಈ ಕೆಳಕಂಡ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿದೆ. **ಅ) ಅಂದಾಜು ಅನುಮೋದನೆ:** ವಿಶ್ವವಿದ್ಯಾಲಯ ಅಭಿಯಂತರರು ಈ ಕಾಮಗಾರಿಗೆ ರೂ. 275.00 ಲಕ್ಷ ಮೊತ್ತದ ಅಂದಾಜನ್ನು 2006–07ನೇ ಸಾಲಿನ ಬೆಂಗಳೂರು ವೃತ್ತದ ದರಪಟ್ಟಿಯ ರೀತಿ ಅಂದಾಜನ್ನು ಸಿದ್ದಪಡಿಸಿ ಅನುಮೋದಿಸಿರುತ್ತಾರೆ. ಸರ್ಕಾರದ ಆದೇಶ ಸಂಖ್ಯೆ PWD 671/FC1/2009 ಬೆಂಗಳೂರು ದಿನಾಂಕ: 03–02–2010ರಲ್ಲಿ ಪ್ರತ್ಯಾಯೋಜಿಸಿರುವ ಅಧಿಕಾರದ ಅನ್ವಯ ಕಾರ್ಯಪಾಲಕ ಅಭಿಯಂತರರು ರೂ. 10.00ಲಕ್ಷ ಮೊತ್ತದ ವರೆಗಿನ ಅಂದಾಜು ಪಟ್ಟಿಗಳಿಗೆ ಮಾತ್ರ ತಾಂತ್ರಿಕ ಮುಂಜೂರಾತಿ ನೀಡಲು ಅಧಿಕಾರವಿರುತ್ತದೆ.	ಅ. ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿನ ಮುದ್ರಾಣಾಲಯ ಮತ್ತು ಪ್ರಸಾರಾಂಗ ಕಟ್ಟಡ ಕಾಮಗಾರಿಯ ಅಂದಾಜುಪಟ್ಟಿಯನ್ನು ರೂ. 275.00 ಲಕ್ಷಗಳಿಗೆ 2006–2007 ನೇ ಸಾಲಿನ ದರಪಟ್ಟಿಯಂತೆ ತಯಾರಿಸಲಾಗಿದೆ. ಈ ಅಂದಾಜು ಪಟ್ಟಿಯನ್ನು ವಾಸ್ತುಶಿಲ್ಪ ವಿಭಾಗದವರು ಸಲ್ಲಿಸಿರುವ ನಕ್ಷೆ ಮತ್ತು ರೇಖಾಕೃತಿಯಂತೆ ಸಿದ್ಧಪಡಿಸಲಾಗಿದೆ. ಈ ಮೇಲ್ಕಂಡ ಅಂದಾಜು ಪಟ್ಟಿಯನ್ನು ದಿನಾಂಕ 15–05–2007 ರಂದು ನಡೆದ 32ನೇ ತಾಂತ್ರಿಕ ಪರಿಶೋಧನಾ ಸಮಿತಿಯಲ್ಲಿ ಇರಿಸಲಾಗಿ ತಾಂತ್ರಿಕ ಪರಿಶೋಧನಾ ಸಮಿತಿಯು ರೂ. 275.00 ಲಕ್ಷಗಳಿಗೆ ಅನುಮೋದನೆಯನ್ನು ನೀಡಿರುತ್ತದೆ. ತಾಂತ್ರಿಕವಾಗಿ ಪರಿಶೀಲಿಸಿದ ಮತ್ತು ತಾಂತ್ರಿಕವಾಗಿ ಅನುಮೋದಿಸಿದ ರೂ. 275.00 ಲಕ್ಷಗಳ ಅಂದಾಜು ಪಟ್ಟಿಯನ್ನು ದಿನಾಂಕ 23–05–2007 ರಂದು ನಡೆದ 19ನೇ ಕಾಮಗಾರಿ ಸಮಿತಿಯಲ್ಲಿ ಇರಿಸಿ ಅನುಮೋದನೆಯನ್ನು ಕಾಮಗಾರಿ ಸಮಿತಿಯಿಂದ ಪಡೆಯಲಾಗಿದೆ. 23–05–2007ರಂದು ನಡೆದ 19ನೇ ಕಾಮಗಾರಿ ಸಮಿತಿಯ ನಡಾವಳಿಯನ್ನು ದಿನಾಂಕ 09–06–2007ರಂದು ನಡೆದ 62ನೇ ಸಿಂಡಿಕೇಟ್ ಸಭೆಯು ಅನುಮೋದನೆಯನ್ನು ನೀಡಿರುತ್ತದೆ. ಈ ಮೇಲ್ಕಂಡ ಸಮಿತಿಗಳ ನಡಾವಳಿಗಳನ್ನು ಅನುಬಂಧ–161ರಲ್ಲಿ ಲಗತ್ತಿಸಲಾಗಿದೆ. ಈ ಕಾಮಗಾರಿಯ ಅಂದಾಜು ಪಟ್ಟಿಯು ತಾಂತ್ರಿಕ ಸಲಾಹಾ ಸಮಿತಿ, ಕಾಮಗಾರಿ ಸಮಿತಿ ಮತ್ತು ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಗೊಂಡಿದೆ ಮತ್ತು ತಾಂತ್ರಿಕ ಅನುಮೋದನೆಯನ್ನು ವಿಶ್ವವಿದ್ಯಾಲಯದ ತಾಂತ್ರಿಕ ಸಲಾಹಾ ಸಮಿತಿಯು ನೀಡಿದೆ.

ಆಕ್ಷೇಪಣೆಗಳು	ಉತ್ತರಗಳು
ಆ) ಕರಡು ಟೆಂಡರ್ ಶೀಟ್ಸ್ ಅನುಮೋದನೆಯ ಬಗ್ಗೆ (ಡಿ.ಟಿ.ಪಿ.): ಇಲಾಖಾ ನಿಯಾಮಗಳ ರೀತಿ ಟೆಂಡರ್ ಪ್ರಕಟಣೆ ನೀಡುವ ಮುನ್ನ ಅಥವಾ ಖಾಲಿ ಟೆಂಡರ್ ಫಾರಂಗಳನ್ನು ಟೆಂಡರ್‌ದಾರರಿಗೆ ವಿತರಿಸುವ ಮುನ್ನ ಕರಡು ಟೆಂಡರ್ ಶೀಟ್ಸ್ (ಡಿ.ಟಿ.ಪಿ.) ಅನುಮೋದನೆಯನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಬೇಕಾಗಿರುತ್ತದೆ.	ಆ. ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿನ ಮುದ್ರಾಣಾಲಯ ಮತ್ತು ಪ್ರಸಾರಾಂಗ ಕಟ್ಟಡ ಕಾಮಗಾರಿಯ ಅಂದಾಜುಪಟ್ಟಿಯನ್ನು ದಿನಾಂಕ 15–05–2007 ರಂದು ನಡೆದ 32ನೇ ತಾಂತ್ರಿಕ ಪರಿ ಶೋಧನಾ ಸಮಿತಿಯಲ್ಲಿ ಮತ್ತು 19ನೇ ಕಾಮಗಾರಿ ಸಮಿತಿಯಲ್ಲಿ ಹಾಗೂ ದಿನಾಂಕ 09–06–2007ರಂದು ನಡೆದ 62ನೇ ಸಿಂಡಿಕೇಟ್ ಸಭೆಯಲ್ಲಿ ರೂ. 275.00 ಲಕ್ಷಗಳಿಗೆ ಅನುಮೋದನೆಗೊಂಡಿರುತ್ತದೆ. ಈ ಅಂದಾಜುಪಟ್ಟಿಯಲ್ಲಿರುವ ಎಲ್ಲಾ Specifications ಮತ್ತು itemಗಳು ದಿನಾಂಕ 15–05–2007ರಂದು ನಡೆದ 32ನೇ ತಾಂತ್ರಿಕ ಪರಿಶೋಧನಾ ಸಮಿತಿಯಲ್ಲಿ ಪರಿಶೀಲಿಸ ಲಾಗಿದೆ ಇದು ಡಿ.ಟಿ.ಸಿಗೆ ಸರಿಸಮವಾಗಿದೆ. ಡಿ.ಟಿ.ಸಿ ಯು ತಾಂತ್ರಿಕ ಸಲಾಹಾ ಸಮಿತಿ, ಕಾಮಗಾರಿ ಸಮಿತಿ ಮತ್ತು ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಗೊಂಡಿದೆ.
ಇ) ಷೆಡ್ಯೂಲ್–ಬಿ ದರಗಳನ್ನು ಕ್ರಮಬದ್ಧವಾಗಿ ನಿಗದಿ ಪಡಿಸದಿರುವುದು: L1 ಟೆಂಡರ್‌ದಾರರಾದ ಶ್ರೀ. ವಿಜಯಕುಮಾರ ಪಿ. ಇವರು 2007–08ನೇ ಸಾಲಿನ ದರಪಟ್ಟಿಗೆ 21.6% ಹೆಚ್ಚವರಿ ದರಗಳನ್ನು ನಮೂದಿಸಿದ್ದು, ವಿಶ್ವವಿದ್ಯಾಲಯವು ದಿನಾಂಕ: 17.12.2007ರಂದು ನಡೆಸಿದ ದರ ಸಂದಾನದ ರೀತ್ಯಾ ಈ ಹೆಚ್ಚುವರಿ ದರಗಳನ್ನು 15%ಗೆ ನಿಗದಿಪಡಿಸಿದೆ. ಅದರ ಅನ್ವಯ 2007–08ನೇ ಸಾಲಿನ ಎಸ್.ಆರ್. ದರಗಳಿಗೆ 15% ಹೆಚ್ಚುವರಿ ದರಗಳನ್ನು ನಿಗದಿಗೊಳಿಸಿ ಅಥವಾ ಗುತ್ತಿಗೆದಾರರು ಹೆಚ್ಚುವರಿ ದರ ನಮೂದಿಸಿರುವ ಐಟಂಗಳ ದರಗಳನ್ನು ಕಡಿಮೆಗೊಳಿಸಿ, ಷೆಡ್ಯುಲ್–ಬಿಯೊಂದಿಗೆ ಅಗ್ರಿಮೆಂಟ್ ಮಾಡಿಕೊಳ್ಳಬೇಕಾಗಿರು ತ್ತದೆ. ಆದರೆ ಷೆಡ್ಯುಲ್–ಬಿನಲ್ಲಿ ದರಗಳನ್ನು ನಿಗಧಿಪಡಿಸುವಲ್ಲಿ ಇಲಾಖಾ ನಿಯಮಗಳ ರೀತಿ ನಿಗಧಿಪಡಿಸದೆ. ಹೆಚ್ಚುವರಿಯಾಗಿ ನಿಗಧಿಪಡಿಸಿರುವುದು ಕಂಡು ಬಂದಿರುತ್ತದೆ. ವಿವರಗಳು ಈ ಕೆಳಕಂಡಂತೆ ಇರುತ್ತದೆ. **ಉದಾಹರಣೆ:** **The Rates in Schedule-B is as follows;** ಈ ಮೇಲಿನ ಅಂಶಗಳನ್ನು ಪರಿಶೀಲಿಸಿದಾಗ ಗುತ್ತಿಗೆದಾರರು ಟೆಂಡರ್‌ನಲ್ಲಿ ನಮೂದಿಸಿರುವ ದರಗಳಿಗಿಂತ ಹೆಚ್ಚುವರಿ ದರಗಳನ್ನು ನಿಗಧಿಪಡಿಸಿ ಷೆಡ್ಯುಲ್–ಬಿ ನೀಡಿರುವ ಬಗ್ಗೆ ಮಾಹಿತಿಗಳನ್ನು ಲೆಕ್ಕತನಿಖೆಗೆ ನೀಡಿರುವುದಿಲ್ಲ. (ಇಲಾಖಾ ನಿಯಮಾನುಸಾರ ನೀಡಬೇಕಾದ ದರಗಳ ಅನ್ವಯ ದರಗಳನ್ನು ಸಿದ್ದಪಡಿಸಿ ಸದರಿ ದರಗಳ ಅನ್ವಯ ಪಾವತಿಸಬೇಕಾದ ಮೊತ್ತ ಹಾಗೂ ಪ್ರಸ್ತುತ ಷೆಡ್ಯುಲ್–ಬಿ ಅನ್ವಯ ನೀಡಿರುವ ಮೊತ್ತದ ವಿವರಗಳ ತಖ್ತೆಯನ್ನು	ಇ. ಗುತ್ತಿಗೆದಾರರ ಅಂತಿಮ ಬಿಲ್ಲನ್ನು ಇನ್ನೂ ಸಿದ್ದ ಪಡಿಸಲಾಗಿಲ್ಲ ಮತ್ತು ಯಾವುದೇ ರೀತಿಯ ದರಗಳ ಮತ್ತು ಹಣದ ಹೆಚ್ಚಳವಾದಲ್ಲಿ ಆ ಹಣವನ್ನು ಗುತ್ತಿಗೆದಾರರ ಅಂತಿಮ ಬಿಲ್ಲಿನಲ್ಲಿ ಕಟಾಯಿಸ ಲಾಗುವುದು. ರೂ. 11,74,661.00 ಹಣವನ್ನು ಗುತ್ತಿಗೆ ದಾರರ ಅಂತಿಮ ಬಿಲ್ಲಿನಲ್ಲಿ ನೀಡಲು ಶಿಫಾರಸು ಮಾಡಲಾಗಿದೆ. ಈ ಕಾಮಗಾರಿಗಳ ವಿಳಂಬದ ಬಗ್ಗೆ Shivashankar Bhatt Commission ನಲ್ಲಿ ಚರ್ಚಿಸಲಾಗಿದೆ. ಈ ಸಮಿತಿಯ ''ಪದ್ದತಿಯ ಲೋಪ'' ಎಂಬ ವರದಿಯನ್ನು ನೀಡಿದೆ. ಈ ವಿಷಯವನ್ನು ವಿಶ್ವವಿದ್ಯಾಲಯದ ಅಧಿಕಾರಿಗಳು ಪ್ರಥಮ ಮತ್ತು ದ್ವಿತೀಯ ತಾಂತ್ರಿಕ ಸಲಾಹಾ ಸಮಿತಿ ನಡೆದ ದಿನಾಂಕ 19–02–2015 ಮತ್ತು ದಿನಾಂಕ 17–03–2015 ರಂದು ನಡೆದ ಕಾಮಗಾರಿ ಸಭೆಯಲ್ಲಿ ಹಾಗೂ ದಿನಾಂಕ 24–03–2015 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿದ್ದಾರೆ. ವಿವರವಾಗಿ ಚರ್ಚಿಸಿದ ನಂತರ ಸಿಂಡಿಕೇಟ್ ಸಭೆಯು ಆಯಾ ಕಾಮಗಾರಿಯ ಗುತ್ತಿಗೆದಾರರಿಗೆ ಕಾಮಗಾರಿಯನ್ನು ಚಾಲ್ತಿಯಲ್ಲಿರುವ ದರಪಟ್ಟಿಯ ದರಗಳಿಗೆ ವಹಿಸಲು ನಿರ್ಧರಿಸಲಾಯಿತು. ಗುತ್ತಿಗೆದಾರರು ಈ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು ಮತ್ತು ಈ ಕಟ್ಟಡಗಳ ಉದ್ಘಾಟನೆಯು ದಿನಾಂಕ 06–02–2017ರಂದು ನಡೆಸಲಾಯಿತು.

Sl No	Schedule-B items	Description of specification	Rates quoted by the Contractor	Rate fixed in Schedule-B	Difference Amount (in Rs)
1	1	Earth work excavation	101	125	24
2	6	Size stone masonry cement concrete 1:4:8	3496	3600	104
3	33	Flooring	2533	2700	167

ಆಕ್ಷೇಪಣೆಗಳು	ಉತ್ತರಗಳು
ಸಿದ್ದಪಡಿಸಿ ಲೆಕ್ಕ ಪರಿಶೋಧನೆಗೆ ಒದಗಿಸಲು ಕೋರಿದ್ದು ವಿವರಗಳನ್ನು ನೀಡಿರುವುದಿಲ್ಲ. ಹೆಚ್ಚುವರಿ ದರಗಳನ್ನು ನಿಗದಿಪಡಿಸಿ ಪಾವತಿಸಲಾಗಿರುವ ಮೊತ್ತದ ವಿವರಗಳನ್ನು ಅನುಬಂಧ–73 ರ ಕ್ರಮಸಂಖ್ಯೆ 2 ರಲ್ಲಿ ನಮೂದಿಸಿದ್ದು ಹೆಚ್ಚುವರಿಯಾಗಿ ಪಾವತಿಸಲಾಗಿರುವ ಮೊತ್ತ ರೂ. 11,74,661.00 ಆಗಿರುತ್ತದೆ. **ಈ) ಕಾಮಗಾರಿ ಕಾಲಮಿತಿ:** ಈ ಕಛೇರಿಯ ಅಗ್ರಿಮೆಂಟ್ ಸಂಖ್ಯೆ UE/DM/WORK ORDER/24/2008-09 ದಿನಾಂಕ:4.4.2008 ರಲ್ಲಿ ಗುತ್ತಿಗೆದಾರರಾದ ಶ್ರೀ. ವಿಜಯಕುಮಾರ ಪಿ. ಇವರಿಗೆ ರೂ. 348.45 ಲಕ್ಷ ಮೊತ್ತದ ಕಾಮಗಾರಿಯನ್ನು 12 ತಿಂಗಳ ಕಾಲಾವಧಿಯೊಂದಿಗೆ ವಹಿಸಿದ್ದು ಮಾಹೆಯಾನ ರೂ. 29.03 ಲಕ್ಷ ಆರ್ಥಿಕ ಪ್ರಗತಿಯನ್ನು ನೀಡಬೇಕಾಗಿದ್ದು ನಿಗಧಿತ ಅವಧಿ ದಿನಾಂಕ: 03–04–2009ಕ್ಕೆ ಪೂರ್ಣಗೊಂಡಿದೆ. ನಿಗಧಿತ ಅವಧಿಯೊಳಗೆ ಗುತ್ತಿಗೆದಾರರು ಕೇವಲ ರೂ. 117.73 ಲಕ್ಷ ಮಾತ್ರ ಆರ್ಥಿಕ ಪ್ರಗತಿ ಸಾಧಿಸಿದ್ದು ಉಳಿದ 230.72 ಲಕ್ಷ ಶಾರ್ಟ್ ಫಾಲ್ ಆಗಿರುತ್ತದೆ. ಅಂಗೀಕೃತ ಕರಾರಿನ ಕಲಂ 2ರ ರೀತ್ಯಾ ಶಾರ್ಟ್ ಫಾಲ್ ಮೊತ್ತಕ್ಕೆ ದಂಡ ವಿಧಿಸಿರುವುದಿಲ್ಲ. ಹಾಗೂ ಗುತ್ತಿಗೆದಾರರಿಗೆ ನೋಟೀಸ್‌ಗಳನ್ನು ನೀಡಿರುವುದಿಲ್ಲ. ನಿಗಧಿತ ಅವಧಿ ನಂತರ 04/2009 ರಿಂದ 04/2015ರ ವರೆವಿಗೆ 6 ವರ್ಷ ಅವಧಿಯವರೆಗೂ ಈ ಕಾಮಗಾರಿಯು ಸಾಗುತ್ತಿದ್ದು 9ನೇ ಹಾಗೂ ಭಾಗದ ಬಿಲ್ಲು ವೋಚರ್ ನಂ. 866, ದಿನಾಂಕ: 25.06.2015ರಲ್ಲಿ ಪಾವತಿಯಾಗಿದ್ದು, ಗುತ್ತಿಗೆದಾರರು ರೂ. 342.69 ಲಕ್ಷ ಮೊತ್ತದ ಆರ್ಥಿಕ ಪ್ರಗತಿ ಸಾಧಿಸಿರುತ್ತಾರೆ. ನಿಗಧಿತ ಅವಧಿ ಪೂರ್ಣಗೊಂಡ ನಂತರವೂ ಸುಮಾರು 6 ವರ್ಷಗಳ ಕಾಮಗಾರಿ ಚಾಲ್ತಿಯಲ್ಲಿದ್ದ ಪರಿಮಾಣದಿಂದಾಗಿ ಉಳಿದ ಕಾಮಗಾರಿಯ ಅಂದಾಜನ್ನು ಅನಿವಾರ್ಯವಾಗಿ 2014–2015ನೇ ಸಾಲಿನ ದರ ಪಟ್ಟಿಗೆ ಸಿದ್ದಪಡಿಸಬೇಕಾದ ಅನಿವಾರ್ಯತೆ ಇರುತ್ತದೆ. ಕಾಮಗಾರಿಯನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸಿದಲ್ಲಿ ಉಳಿದ ಕಾಮಗಾರಿಯನ್ನು 2009–10ರ ದರಪಟ್ಟಿಗೆ ವಹಿಸಬಹುದಾಗಿದ್ದು, ಈ ವಿಳಂಬದಿಂದಾಗಿ ವಿಶ್ವವಿದ್ಯಾಲಯಕ್ಕೆ ಉಂಟಾಗಿರುವ ಹೆಚ್ಚುವರಿ ಆರ್ಥಿಕ ಹೊರೆಯ ಬಗ್ಗೆ ಮಾಹಿತಿಗಳನ್ನು ಲೆಕ್ಕತನಿಖೆಗೆ ನೀಡಿರುವುದಿಲ್ಲ. **ಉ) ಉಳಿಕೆ ಕಾಮಗಾರಿ:** ಈ ಕಾಮಗಾರಿಯ ಉಳಿಕೆ ಕೆಲಸದ ಅಂದಾಜನ್ನು 2014–15ನೇ ಸಾಲಿನ ದರಪಟ್ಟಿಯ ರೀತ್ಯಾ ರೂ. 247.00 ಲಕ್ಷಕ್ಕೆ ಸಿದ್ದಪಡಿಸಿದ್ದು ವರ್ಕ್ ಆದೇಶ ಸಂಖ್ಯೆ 559/2014–15 ದಿನಾಂಕ: 12.09.2015ರಲ್ಲಿ ಈ ಕಾಮಗಾರಿಯ ಮೂಲ ಗುತ್ತಿಗೆದಾರರಾಗಿದ್ದ ಶ್ರೀ. ವಿಜಯಕುಮಾರ ಪಿ. ಇವರಿಗೆ ರೂ. 246.99 ಲಕ್ಷ ಮೊತ್ತದ ಕಾಮಗಾರಿಯನ್ನು ವಹಿಸಿದ್ದು ಇದೇ ದಿನದಂದು ಇದೇ ಕಾಮಗಾರಿಯನ್ನು ಶ್ರೀ. ವಿಜಯಕುಮಾರ	ಉ. ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿನ ಮುದ್ರಾಣಾಲಯ ಮತ್ತು ಪ್ರಸಾರಾಂಗ ಕಟ್ಟಡದ ಉಳಿಕೆ ಕಾಮಗಾರಿಯನ್ನು ಶ್ರೀ. ಪಿ. ವಿಜಯಕುಮಾರ್ ಎಂಬುವವರಿಗೆ ಸಪ್ಲಿಮೆಂಟರಿ ಅಗ್ರಿಮೆಂಟ್ ಮುಖಾಂತರ ದಿನಾಂಕ 22–06–2015 ರಂದು ನೀಡಲಾಯಿತು. ಶ್ರೀ. ಪಿ. ವಿಜಯಕುಮಾರ್ ಎಂಬುವವರು ಕಾಮಗಾರಿಯ ಬಗ್ಗೆ ಪೂರ್ತಿ ಗಮನ ಹರಿಸದ ಕಾರಣ M/s. Thirumala Construction ಎಂಬುವವರಿಗೆ ಕಾನೂನಿನ ಪ್ರಕಾರ General Power of Attorny ಯನ್ನು ನೀಡಿರುತ್ತಾರೆ. ಮುಂದುವರೆದು General Power of Attorny ಯನ್ನು ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರ ಅಭಿಪ್ರಾಯಕ್ಕೆ ಈ ಮೇಲ್ಕಂಡ ಕಡತವನ್ನು ಸಲ್ಲಿಸಲಾಗಿತ್ತು. ಈ ಮೇಲ್ಕಂಡ ವಿಷಯಕ್ಕೆ ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರು General Power of Attorny ಯನ್ನು ಮಾನ್ಯ ಮಾಡಬಹುದು ಎಂದು ಅಭಿಪ್ರಾಯ ಪಟ್ಟಿರುತ್ತಾರೆ ಮತ್ತು ಉಳಿಕೆ ಕಾಮಗಾರಿಯನ್ನು ಪೂರ್ಣಗೊಳಿಸಲು ಹೊಸ ಅಗ್ರಿಮೆಂಟ್ ಅನ್ನು M/s. Thirumala Construction ಮತ್ತು ಶ್ರೀ. ಪಿ. ವಿಜಯಕುಮಾರ್ ಇಬ್ಬರಿಂದಲೂ ಪಡೆಯಬೇಕೆಂದು ತಿಳಿಸಿರುತ್ತಾರೆ. ಸದರಿ ವಿಷಯವನ್ನು ದಿನಾಂಕ 20–08–2015 ರಂದು ನಡೆದ 122ನೇ ಸಿಂಡಿಕೇಟ್ ಸಭೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರ ಅಭಿಪ್ರಾಯದ ಪ್ರಕಾರ ನಿರ್ಧಾರವನ್ನು ತೆಗೆದು ಕೊಳ್ಳುವಂತೆ ತೀರ್ಮಾನಿಸಲಾಯಿತು. ಆದುದರಿಂದ ಈ ಕೆಲಸವನ್ನು ಶ್ರೀ. ಪಿ. ವಿಜಯ ಕುಮಾರ್ ಮತ್ತು General Power of Attorny M/s. Thirumala Construction ಎಂಬುವವರಿಗೆ ವಹಿಸಿಲಾಗಿದೆ. General Power of Attorny holder ಮುಖಾಂತರ M/s. Thirumala Construction ಎಂಬುವವರಿಗೆ ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರ ಅಭಿಪ್ರಾಯವನ್ನು ಪಡೆದು ನೀಡಿರುತ್ತಾರೆ. ಈ ಕಾಮಗಾರಿಗಳ ವಿಳಂಬದ ಬಗ್ಗೆ Shivashankar Bhatt Commission ನಲ್ಲಿ ಚರ್ಚಿಸಲಾಗಿದೆ. ಈ

ಆಕ್ಷೇಪಣೆಗಳು	ಉತ್ತರಗಳು
ಪಿ. ರವರ General Power of Attorney holder ಆದ ಮೆ॥ ತಿರುವತಿ ಕನ್ಸ್ಟ್ರಕ್ಷನ್ ಇವರಿಗೆ ವಹಿಸಲಾಗಿದೆ. General Power of Attorney ಆಧಾರದ ಮೇಲೆ ಯಾವ ನಿಯಮಗಳ ಅನ್ವಯ ಮೇ॥ ತಿರುವತಿ ಕನ್ಸ್ಟ್ರಕ್ಷನ್ ಇವರಿಗೆ ವಹಿಸಲಾಗಿದೆ ಎಂಬ ಬಗ್ಗೆ ಮಾಹಿತಿ ಲೆಕ್ಕತನಿಖೆಗೆ ಒದಗಿಸಿರುವುದಿಲ್ಲ. ಈ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಯಾವುದೇ ವರದಿ ನೀಡಿರುವುದಿಲ್ಲ ಹಾಗೂ ವಿಳಂಬಿತ ಅವಧಿಗೆ ದಂಡವನ್ನು ವಿಧಿಸದೇ ಬಿಲ್ಲುಗಳನ್ನು ಪಾವತಿಸಲಾಗಿದೆ ಈ ಮೇಲಿನ ಆಕ್ಷೇಪಣೆಗಳಿಗೆ ಸೂಕ್ತ ಉತ್ತರ ನೀಡುವವರೆವಿಗೆ ವೋಚರ್ ಸಂಖ್ಯೆ 920 ದಿನಾಂಕ: 24.02.2016 ರಲ್ಲಿ ಪಾವತಿಸಲಾದ ಮೊತ್ತ ರೂ.1,23,64,557.00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.	ಸಮಿತಿಯ ''ಪದ್ದತಿಯ ಲೋಪ'' ಎಂಬ ವರದಿಯನ್ನು ನೀಡಿದೆ. ಈ ವಿಷಯವನ್ನು ವಿಶ್ವವಿದ್ಯಾಲಯದ ಅಧಿಕಾರಿಗಳು ಪ್ರಥಮ ಮತ್ತು ದ್ವಿತೀಯ ತಾಂತ್ರಿಕ ಸಲಾಹಾ ಸಮಿತಿ ನಡೆದ ದಿನಾಂಕ 19–02–2015 ಮತ್ತು ದಿನಾಂಕ 17–03–2015 ರಂದು ನಡೆದ ಕಾಮಗಾರಿ ಸಭೆಯಲ್ಲಿ ಹಾಗೂ ದಿನಾಂಕ 24–03–2015 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿದ್ದಾರೆ. ವಿವರವಾಗಿ ಚರ್ಚಿಸಿದ ನಂತರ ಸಿಂಡಿಕೇಟ್ ಸಭೆಯು ಆಯಾ ಕಾಮಗಾರಿಯ ಗುತ್ತಿಗೆದಾರರಿಗೆ ಕಾಮಗಾರಿಯನ್ನು ಚಾಲ್ತಿಯಲ್ಲಿರುವ ದರಪಟ್ಟಿಯ ದರಗಳಿಗೆ ವಹಿಸಲು ನಿರ್ಧರಿಸಲಾಯಿತು. ಗುತ್ತಿಗೆದಾರರು ಈ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು ಮತ್ತು ಈ ಕಟ್ಟಡಗಳ ಉದ್ಘಾಟನೆಯು ದಿನಾಂಕ 06–02–2017ರಂದು ನಡೆಸಲಾಯಿತು. ಸ್ಪಷ್ಟವಾದ ಕಂಡಿಕೆವಾರು ಅಂತಿಮ ಉತ್ತರ ಸಲ್ಲಿಸಲು ದಿನಾಂಕ:25.03.2019ರ ಕಛೇರಿ ಟಿಪ್ಪಣಿಯಲ್ಲಿ ತಿಳಿಸಲಾಗಿದೆ. ದಿನಾಂಕ : 21.10.2019 ರಂದು ನಡೆದ ಸಭೆಯಲ್ಲಿ ಚರ್ಚಿಸಿ ಕೂಡಲೆ ಉತ್ತರ ಸಲ್ಲಿಸಲು ಮತೊಮ್ಮೆ ತಿಳಿಸಲಾಯಿತು.
120. ಬೆಂಗಳೂರು ವಿಶ್ವವಿದ್ಯಾಲಯದ ಕಛೇರಿಯ ಆವರಣದಲ್ಲಿನ ಗ್ರಂಥಾಲಯ ಕಟ್ಟಡದ ನವೀಕರಣ ಕಾಮಗಾರಿ ರೂ. 53,73,197.00 ಗಳು (ಆಕ್ಷೇಪಣೆ)	
ಬೆಂಗಳೂರು ವಿಶ್ವವಿದ್ಯಾಲಯದ ಕಛೇರಿಯ ಆವರಣದಲ್ಲಿನ ಗ್ರಂಥಾಲಯ ಕಟ್ಟಡದ ನವೀಕರಣ ಕಾಮಗಾರಿಯ ಅಂದಾಜು (Providing Plasterinng Painting, Replacement of Windows, Sanitary & Other items) ರೂ.65.00 ಲಕ್ಷಕ್ಕೆ ಅಧೀಕ್ಷಕ ಅಭಿಯಂತರರು, ಪಿಡಬ್ಲ್ಯೂಡಿ ಬೆಂಗಳೂರು ಇವರಿಂದ 2013–14ನೇ ಸಾಲಿನ ದರಪಟ್ಟಿಯ ರೀತ್ಯ ಅನುಮೋದನೆಗೊಂಡಿರುತ್ತದೆ. ಈ ಅಂದಾಜಿನ ಬಗ್ಗೆ ವಿಶ್ವವಿದ್ಯಾಲಯದ ತಾಂತ್ರಿಕ ಮಂಜೂರಾತಿ ಸಮಿತಿಯು ತನ್ನ 57, 59 ಹಾಗೂ 61ನೇ ಮೀಟಿಂಗ್‌ನಲ್ಲಿ ಚರ್ಚಿಸಿ 65.00 ಲಕ್ಷ ಮೊತ್ತದ ಕಾಮಗಾರಿಯ ಅಂದಾಜನ್ನು ಅನುಮೋದಿಸಿದೆ, ನಂತರ ಸದರಿ ಅಂದಾಜು ದಿನಾಂಕ–03–05–2014ರ 40ನೇ ವರ್ಕ್ಸ್ ಕಮಿಟಿಯಲ್ಲಿ ಮಂಡಿಸಿದ್ದು ಈ ಕಮಿಟಿಯಲ್ಲಿ ತಾಂತ್ರಿಕ ಮಂಜೂರಾತಿ ಸಮಿತಿಯ ಅಧ್ಯಕ್ಷರು ತಾವು ಸ್ಥಳ ಪರಿಶೀಲನೆ ಮಾಡಿ ನೀಡುವ ವರದಿ ಅನ್ವಯ ಕಾಮಗಾರಿ ನಿರ್ವಹಿಸಲು ಸೂಚಿಸಿದ್ದು. ವರ್ಕ್ಸ್ ಕಮಿಟಿ ಪ್ರೊಸೀಡಿಂಗ್ಸ್‌ಅನ್ನು ವಿಶ್ವವಿದ್ಯಾಲಯ ಸಿಂಡಿಕೇಟ್‌ನ ದಿನಾಂಕ 14–05–2014ರಂದು ಅನುಮೋದಿಸಿದೆ. ಟೆಕ್ನಿಕಲ್ ಕಮಿಟಿಯ ಅಧ್ಯಕ್ಷರು ನೀಡಿದ ವರದಿಯನ್ನು 41ನೇ ವರ್ಕ್ಸ್ ಕಮಿಟಿಯು ದಿನಾಂಕ–18–09–2014ರಲ್ಲಿ ಅನುಮೋದಿಸಿದೆ.	1, 2, 3 ಬೆಂಗಳೂರು ವಿಶ್ವವಿದ್ಯಾಲಯದ ಕಛೇರಿಯ ಆವರಣದಲ್ಲಿನ ಗ್ರಂಥಾಲಯ ಕಟ್ಟಡ ನವೀಕರಣ ಕಾಮಗಾರಿಯ ಅಂದಾಜು ಪಟ್ಟಿಯನ್ನು 2013–14ನೇ ಸಾಲಿನ ದರಪಟ್ಟಿಯ ಪ್ರಕಾರ ರೂ. 65.00 ಲಕ್ಷಗಳಿಗೆ ತಯಾರಿಸಲಾಯಿತು. ಈ ಮೇಲ್ಕಂಡ ಅಂದಾಜುಪಟ್ಟಿಯನ್ನು ಅಧೀಕ್ಷಕ ಅಭಿಯಂತರರು, ಬೆಂಗಳೂರು ವೃತ್ತ, ಪಿ.ಡಬ್ಲ್ಯೂ.ಡಿ ಇವರಿಗೆ ಸಲ್ಲಿಸಲಾಯಿತು. ಮತ್ತು ಅಧೀಕ್ಷಕ ಅಭಿಯಂತರರು ಅಂದಾಜು ಪಟ್ಟಿಯನ್ನು 2013–14ನೇ ಸಾಲಿನ ದರಪಟ್ಟಿಯ ಪ್ರಕಾರ ಪರಿಶೀಲಿಸಿದ್ದಾರೆ. ಈ ಮೇಲ್ಕಂಡ ಅಂದಾಜುಪಟ್ಟಿಯನ್ನು 57ನೇ, 59ನೇ ಮತ್ತು 61ನೇ ತಾಂತ್ರಿಕ ಪರಿಶೋಧನಾ ಸಮಿತಿಯಲ್ಲಿ ಇರಿಸಲಾಗಿತ್ತು. ದಿನಾಂಕ 22–04–2014ರಂದು ನಡೆದ 62ನೇ ತಾಂತ್ರಿಕ ಪರಿಶೋಧನಾ ಸಮಿತಿಯು ಈ ಮೇಲ್ಕಂಡ ಅಂದಾಜುಪಟ್ಟಿಗೆ ತಾಂತ್ರಿಕ ಅನುಮೋದನೆಯನ್ನು ನೀಡಿರುತ್ತದೆ.

ಆಕ್ಷೇಪಣೆಗಳು	ಉತ್ತರಗಳು
ಟೆಕ್ನಿಕಲ್ ಕಮಿಟಿ ಅಧ್ಯಕ್ಷರು ನೀಡಿದ ಸಲಹೆಯಲ್ಲಿ ಕಾಮಗಾರಿಯ ವಿಶೇಷ ವಿವರಣೆಗಳಲ್ಲಿ ಹಲವಾರು ಬದಲಾವಣೆಗಳು ಇದ್ದು ವಿಶ್ವವಿದ್ಯಾಲಯದ ಅಭಿಯಂತರರು ನಂತರ ರೂ.58.50 ಲಕ್ಷಕ್ಕೆ ಅಂದಾಜುನ್ನು ಸಿದ್ದಪಡಿಸಿ 42ನೇ ವರ್ಕ್ಸ್ ಕಮಿಟಿಯಲ್ಲಿ ಮಂಡಿಸಿ ಅನುಮೋದಿಸಲಾಗಿದೆ. ಈ ಕಾಮಗಾರಿಗೆ ಸಂಬಂಧಿಸಿದಂತೆ ಈ ಕೆಳಕಂಡ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿದೆ.: 1. ಯಾವುದೇ ಕಾಮಗಾರಿಗೂ ಅಂದಾಜನ್ನು ಪಿಡಬ್ಲ್ಯು.ಡಿಯಿಂದ ಮಂಜೂರಾತಿ ಪಡೆಯುವ ಮುನ್ನ line estimate ಸಿದ್ದಪಡಿಸಿ ತಾಂತ್ರಿಕ ಸಮಿತಿ ಹಾಗೂ ವರ್ಕ್ಸ್ ಕಮಿಟಿಯಲ್ಲಿ ಮಂಡಿಸಿ ಮಂಜೂರಾತಿ ಪಡೆಯಬೇಕಾಗಿರುತ್ತದೆ. ಆದರೆ ಈ ಕಾಮಗಾರಿಯಲ್ಲಿ ಮೊದಲು ಪಿಡಬ್ಲ್ಯು.ಡಿಯಿಂದ ಅನುಮೋದನೆ ಪಡೆದಿದ್ದು, ಈ ಅಂದಾಜಿನ ವಿಶಿಷ್ಟ ವಿವರಗಳಲ್ಲಿ 34 ಐಟಂಗಳಿದ್ದು ನಂತರ ತಾಂತ್ರಿಕ ಕಮಿಟಿ ಅಧ್ಯಕ್ಷರ ಸಲಹೆಯ ಮೆರೆಗೆ ಸಿದ್ದಪಡಿಸಲಾದ ಅಂದಾಜಿನಲ್ಲಿ 56 ಐಟಂಗಳಿದ್ದು ಸದರಿ ಅಂದಾಜಿನ ಮೊತ್ತ ರೂ.58.50 ಲಕ್ಷ ಆಗಿರುತ್ತದೆ, ಅಂದರೆ ಪಿಡಬ್ಲ್ಯು.ಡಿಯಿಂದ ಪಡೆಯಲಾದ ಮಂಜೂರಾತಿ ನಿಶ್ಪ್ರಯೋಜನಾಕಾರಿಯಾಗಿದ್ದು, ಪಿಡಬ್ಲ್ಯು.ಡಿ ಇಲಾಖೆಯ ಸಿಬ್ಬಂದಿ ಮತ್ತು ಅಧಿಕಾರಿಗಳ ಸಮಯ ಹಾಗೂ ಕೆಲಸ ವ್ಯರ್ಥವಾಗಿರುತ್ತದೆ. ಅಲ್ಲದೆ ನಂತರ ಬದಲಾದ ವಿಶಿಷ್ಟ ವಿವರಗಳ ಅನ್ವಯ ಅಂದಾಜಿನ ಮಂಜೂರಾತಿ ಪಡೆಯುವ ಅವಶ್ಯಕತೆ ಇದ್ದು ಪಿ.ಡಬ್ಲ್ಯು.ಡಿ ಯಿಂದ ಮಂಜೂರಾತಿ ಪಡೆದಿರುವುದಿಲ್ಲ. 2. ತಾಂತ್ರಿಕ ಮಂಜೂರಾತಿ ಸಮಿತಿಯು ತನ್ನ 57, 59 & 61ನೇ ಕಮಿಟಿ ಸಭೆಯಲ್ಲಿ ಈ ಕಾಮಗಾರಿಯ ಅನುಮೋದಿತ ಅಂದಾಜಿಗೆ ಅನುಮತಿ ನೀಡಿದ್ದು ಅದರ ಅನ್ವಯ ಕಾಮಗಾರಿ ನಿರ್ವಹಿಸಲು ಅಂಗೀಕರಿಸಿದ್ದು, ಇದನ್ನು ವರ್ಕ್ಸ್ ಕಮಿಟಿಯಲ್ಲಿ ಮಂಡಿಸಿದ ಸಂದರ್ಭದಲ್ಲಿ ತಾಂತ್ರಿಕ ಮಂಜೂರಾತಿ ಸಮಿತಿಯ ಅಧ್ಯಕ್ಷರು ತಾವು ಸ್ಥಳ ಪರಿಶೀಲನೆ ಮಾಡಿರುವುದಿಲ್ಲ ಎಂಬುದಾಗಿ ತಿಳಿಸಿ ತಾವು ಪರಿಶೀಲಿಸಿ ನೀಡುವ ಸಲಹೆಗಳ ಅನ್ವಯ ಕಾಮಗಾರಿ ನಿರ್ವಹಿಸಲು ಸೂಚಿಸಿರುವುದನ್ನು ವರ್ಕ್ಸ್ ಕಮಿಟಿಯು ಅನುಮೋದಿಸಿ ಸಲಹೆ ನೀಡಲು ಒಂದು ವಾರದ ಸಮಯ ನೀಡಿರುತ್ತದೆ. 3. ತಾಂತ್ರಿಕ ಮಂಜೂರಾತಿ ಸಮಿತಿ ತನ್ನ 57, 59 & 61ನೇ ಕಮಿಟಿ ಮೀಟಿಂಗ್ ಸಂದರ್ಭದಲ್ಲಿ ಸದರಿ ಸಮಿತಿಯ ಅಧ್ಯಕ್ಷರೇ ಅನುಮತಿ ನೀಡಿದ್ದು, ಇದೇ ಅಧ್ಯಕ್ಷರು ದಿನಾಂಕ 03.05.2014ರ ವರ್ಕ್ಸ್ ಕಮಿಟಿ ಮೀಟಿಂಗ್‌ನಲ್ಲಿ ಕಾಮಗಾರಿಯ ಐಟಂಗಳಲ್ಲಿ ಬದಲಾವಣೆಗಾಗಿ ಪ್ರಸ್ತಾವನೆ ಸಲ್ಲಿಸಿರುವುದನ್ನು ವಿಶ್ವವಿದ್ಯಾಲಯದ ಸಿಂಡಿಕೇಟ್ ದಿನಾಂಕ:14.05.2014ರಲ್ಲಿ ಅನುಮೋದಿಸಿದೆ.	40ನೇ ಕಾಮಗಾರಿ ಸಮಿತಿಯಲ್ಲಿ ಸಮಿತಿಯ ಅಧ್ಯಕ್ಷರು ಕಾಮಗಾರಿಯ ಕಟ್ಟಡವನ್ನು ಪರಿವೀಕ್ಷಣೆ ಮಾಡಿರುವುದಿಲ್ಲ ಎಂದು ತಿಳಿಸಿರುತ್ತಾರೆ. 40ನೇ ಕಾಮಗಾರಿ ಸಮಿತಿಯ ನಡಾವಳಿಯು ದಿನಾಂಕ 14–05–2014ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಗೊಂಡಿರುತ್ತದೆ. ಗ್ರಂಥಾಲಯದ ಕಟ್ಟಡವನ್ನು ತಾಂತ್ರಿಕ ಪರಿಶೋಧನಾ ಸಮಿತಿಯ ಅಧ್ಯಕ್ಷರು ದಿನಾಂಕ 20–08–2014ರಂದು ಪರಿವೀಕ್ಷಣೆ ನಡೆಸಿರುತ್ತಾರೆ. ಪರಿವೀಕ್ಷಣೆ ಸಂದರ್ಭದಲ್ಲಿ ಅಧ್ಯಕ್ಷರು ಗ್ರಂಥಾಲಯದ ಕಟ್ಟಡದಲ್ಲಿ Water proofing of roof ಅನ್ನು ತೆಗೆದು ಹಾಕಲು ಸೂಚಿಸಿರುತ್ತಾರೆ. ಈ ಮೇಲ್ಕಂಡ ಸೂಚನೆಯ ಪ್ರಕಾರ Water proofing of roof ಅನ್ನು ತೆಗೆದು ಹಾಕಿ ರೂ. 50.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ದಿನಾಂಕ 28–08–2014ರಂದು ನಡೆದ 41ನೇ ಕಾಮಗಾರಿ ಸಮಿತಿಯಲ್ಲಿ ಮತ್ತು 30–09–2014ರಂದು ನಡೆದ 63ನೇ ತಾಂತ್ರಿಕ ಪರಿಶೋಧನಾ ಸಮಿತಿಯಲ್ಲಿ ಇರಿಸಲಾಗಿತ್ತು. ಮೇಲ್ಕಂಡ ಸಮಿತಿಗಳು ಅಂದಾಜು ಪಟ್ಟಿಯನ್ನು 2014–15ನೇ ಸಾಲಿನ ದರಪಟ್ಟಿಯ ಪ್ರಕಾರ ತಿದ್ದುಪಡಿ ಮಾಡುವಂತೆ ಸೂಚಿಸಿದೆ. ಸದರಿ ತಿದ್ದುಪಡಿಸಲಾದ ರೂ. 58.50 ಲಕ್ಷಗಳ ಅಂದಾಜುಪಟ್ಟಿಯನ್ನು ದಿನಾಂಕ 15–10–2016ರಂದು ನಡೆದ 42ನೇ ಕಾಮಗಾರಿ ಸಮಿತಿಯಲ್ಲಿ ಇರಿಸಿ ಅನುಮೋದನೆಗೊಂಡಿರುತ್ತದೆ. 42ನೇ ಕಾಮಗಾರಿ ಸಮಿತಿಯ ನಡಾವಳಿಯನ್ನು 21–10–2014ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯು ಅನುಮೋದಿಸಿದೆ. ಆದುದರಿಂದ ಅಭಿಯಂತರರ ವಿಭಾಗವು ಅಂದಾಜು ಪಟ್ಟಿಯನ್ನು ಸಿದ್ದಪಡಿಸುವ ಮುನ್ನ ಕಟ್ಟಡದ ಪರಿವೀಕ್ಷಣೆಯನ್ನು ಮಾಡಿ, ಅಂದಾಜು ಪಟ್ಟಿಯನ್ನು ಎಲ್ಲಾ ನೀತಿ ಮತ್ತು ನಿಯಮಗಳ ಪ್ರಕಾರ ಸಲ್ಲಿಸಿರುತ್ತದೆ. ಮತ್ತು ಈ ಅಂದಾಜು ಪಟ್ಟಿಯನ್ನು ಸರಿಸುಮಾರು 8 ಸಮಿತಿಗಳಿಗೆ ಸಲ್ಲಿಸಿ ಅನುಮೋದನೆಯನ್ನು ಪಡೆದಿರುತ್ತದೆ. 1.ಬೆಂಗಳೂರು ವಿಶ್ವವಿದ್ಯಾಲಯದ ಕಛೇರಿಯ

ಆಕ್ಷೇಪಣೆಗಳು	ಉತ್ತರಗಳು
4. ಈ ಕಾಮಗಾರಿಗೆ ಸಂಬಂಧಿಸಿದ EIRLಗೆ Technical Advisory Committee ಯು ದಿನಾಂಕ 29.09.2015 ರಂದು ಹಾಗೂ ವರ್ಕ್ಸ್ ಕಮಿಟಿಯು ದಿನಾಂಕ 06.10.2015 ರಂದು ಸಿಂಡಿಕೇಟ್ ಕಮಿಟಿ ದಿನಾಂಕ 19.11.2015 ರಂದು ರೂ.5,67,359.00 ಮೊತ್ತದ Extra Item ಅನ್ನು ಅನುಮೋದಿಸಿದೆ. ಅಂಗೀಕೃತ ಕರಾರಿನ ಕಲಂ 30.4 ರ ಅನ್ವಯ "Approval of Government has to be obtained for the variation exceeding 5%" ಈ ಬಗ್ಗೆ ಸರ್ಕಾರದಿಂದ ಪಡೆದಿರುವ ಅನುಮತಿಯನ್ನು ಪಡೆಯಬೇಕಾಗಿರುತ್ತದೆ.	ಆವರಣದಲ್ಲಿನ ಗ್ರಂಥಾಲಯ ಕಟ್ಟಡ ನವೀಕರಣ ಕಾಮಗಾರಿಯ ರೂ. 58.50 ಲಕ್ಷಗಳ ಅಂದಾಜು ಪಟ್ಟಿಯನ್ನು ಸಿದ್ದಪಡಿಸಿ ಮತ್ತು ಈ ಅಂದಾಜು ಪಟ್ಟಿಯನ್ನು ದಿನಾಂಕ 30–09–2014ರಂದು ನಡೆದ 63ನೇ ತಾಂತ್ರಿಕ ಪರಿಶೋಧನಾ ಸಮಿತಿಯಲ್ಲಿ ಮತ್ತು ದಿನಾಂಕ 15–10–2016ರಂದು ನಡೆದ 42ನೇ ಕಾಮಗಾರಿ ಸಮಿತಿಯಲ್ಲಿ ಹಾಗೂ 21–10–2014ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯು ಅನುಮೋದನೆಯನ್ನು ನೀಡಿರುತ್ತದೆ. ದಿನಾಂಕ 29–09–2015ರಂದು ನಡೆದ ತಾಂತ್ರಿಕ ಸಲಹಾ ಸಮಿತಿಯು ಮತ್ತು 19–11–2015ರಂದು ನಡೆದ ಸಿಂಡಿಕೇಟ್ ಸಭೆಯು Workslip & EIRLನ ಮೊತ್ತ ರೂ. 5,67,359.00ಗಳಿಗೆ ಅನುಮೋದನೆಯನ್ನು ನೀಡಿರುತ್ತದೆ.
5. ಈ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ಗುತ್ತಿಗೆದಾರರಾದ ಶ್ರೀ ಸಿ.ಎಸ್ ಸಿದ್ದೇಗೌಡ ಇವರಿಗೆ 2014–15ನೇ ಸಾಲಿನ ಎಸ್.ಆರ್. ದರಗಳಿಗೆ 15.35% ಕಡಿಮೆ ದರಗಳ ಅನ್ವಯ ರೂ.49.05 ಮೊತ್ತದ ಕಾಮಗಾರಿಯನ್ನು 6 ತಿಂಗಳ ಕಾಲಾವಧಿಯೊಂದಿಗೆ ವರ್ಕ್ ಆರ್ಡರ್ ಸಂಖ್ಯೆ.UE/DM/344/2015–16, ದಿನಾಂಕ 06.07.2015 ರಂದು ವಹಿಸಿದ್ದು, ನಿಗದಿತ ಅವಧಿ ದಿನಾಂಕ 05.01.2016ಕ್ಕೆ ಪೂರ್ಣಗೊಂಡಿರುತ್ತದೆ. ವಿಳಂಬಿತ ಅವಧಿಗೆ ದಂಡವನ್ನು ವಿದಿಸದೇ ಬಿಲ್ಲುಗಳನ್ನು ಪಾವತಿಸಲಾಗಿದೆ.	ಸದರಿ ಅಂದಾಜು ಪಟ್ಟಿಯ ಒಟ್ಟು ಮೊತ್ತ ರೂ. 58.50 ಲಕ್ಷಗಳು Workslip & EIRLನ ಮೊತ್ತ ರೂ. 5,67,359.00 5% of ರೂ. 58.50 ಲಕ್ಷಗಳು = ರೂ. 2,92,500.00 ಗುತ್ತಿಗೆದಾರರ ಅಂತಿಮ ಬಿಲ್ಲನ್ನು ಇನ್ನೂ ಪಾವತಿಸಿರುವುದಿಲ್ಲ. ಸದರಿ ಕಾಮಗಾರಿಯಲ್ಲಿ ಶೇಕಡಾ 5% ಕ್ಕಿಂತ ಹೆಚ್ಚಾದ ವ್ಯತ್ಯಾಸದ ಮೊತ್ತವನ್ನು ಸರ್ಕಾರದ ವತಿಯಿಂದ ಅನುಮೋದನೆಯನ್ನು ಪಡೆಯಲಾಗುವುದು.
6. ಸರ್ಕಾರಿ ಆದೇಶ ಸಂಖ್ಯೆ–ಪಿಡಬ್ಲ್ಯೂಡಿ–671 ಎಫ್.ಸಿ–1 2009 ಬೆಂಗಳೂರು ದಿನಾಂಕ–03.02.2010ರಲ್ಲಿ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದ ಅನ್ವಯ ಕಾರ್ಯಪಾಲಕ ಇಂಜಿನಿಯರ್‌ರವರಿಗೆ ರೂ.10.00 ಲಕ್ಷವರೆಗಿನ ಅಂದಾಜು ಪಟ್ಟಿಗಳಿಗೆ ಮಾತ್ರ ತಾಂತ್ರಿಕ ಮಂಜೂರಾತಿ ನೀಡಲು ಅಧಿಕಾರವಿದ್ದು, ಈ ಕುರಿತಂತೆ ಆರ್ಥಿಕ ಮತ್ತು ಆಡಳಿತಾತ್ಮಕ ಅಧಿಕಾರದ ಬಗ್ಗೆ ವಿವರಗಳನ್ನು ಲೆಕ್ಕತನಿಖೆಗೆ ಒದಗಿಸಿರುವುದಿಲ್ಲ. ಈ ಕಾಮಗಾರಿಗೆ ಸಂಭಂಧಿಸಿದಂತೆ ಟೆಂಡರ್‌ನಲ್ಲಿ ನಿಗದಿಪಡಿಸಲಾದ ವೇಳಾಪಟ್ಟಿ ಈ ರೀತಿ ಇರುತ್ತದೆ. ಸದರಿ ಕಾಮಗಾರಿಗೆ ಆರು ಜನ ಟೆಂಡರ್‌ದಾರರು ಟೆಂಡರ್‌ನ್ನು ಸಲ್ಲಿಸಿದ್ದು ದಿನಾಂಕ:30.12.2014ರಲ್ಲಿ ತಾಂತ್ರಿಕ ಬಿಡ್‌ನ್ನು ತೆಗೆಯಲಾಗಿ ದಿನಾಂಕ: 05–03–2014 ಟೆಂಡರ್ (ಮೌಲ್ಯಮಾಪನ) ಪರಿವೀಕ್ಷಣೆ ಕಮಿಟ್ಟಿಯಲ್ಲಿ ಟೆಂಡರ್‌ದಾರರು ಸಲ್ಲಿಸಿರುವ ಲಗತ್ತುಗಳನ್ನು ಪರಿಶೀಲಿಸಿ ಕ್ರಮ ಸಂಖ್ಯೆ–6ರ ಶ್ರೀ.ಅನಿಲ್ ಕುಮಾರ್.ಎನ್.ಎಚ್ ಹೊರತು ಪಡಿಸಿ ಇತರೆ 5ಜನ ಟೆಂಡರ್‌ದಾರರು ಹಣಕಾಸು ಬಿಡ್‌ನಲ್ಲಿ ಭಾಗವಹಿಸಲು ಅರ್ಹರಾಗಿರುವುದಾಗಿ	1. ಸದರಿ ಕಾಮಗಾರಿಯು ಸೂಚಿಸಿರುವ ಅವಧಿಯ ಮುನ್ನ ಪೂರ್ಣಗೊಂಡಿದ್ದು ಬಳಕೆದಾರರ ವಿಭಾಗಕ್ಕೆ ದಿನಾಂಕ 05–01–2016ರಂದು ಹಸ್ತಾಂತರಿಸಲಾಗಿದೆ. 2. Liquid assests / availability of credit facilities ಗಳ ಮೊತ್ತ ರೂ. 18.00 ಲಕ್ಷಗಳ ವಿವರಗಳನ್ನು ಶ್ರೀ ಸಿದ್ದೇಗೌಡ ಗುತ್ತಿಗೆದಾರರು ಸಲ್ಲಿಸಿರುವುದನ್ನು ಕೆಲವು ತಾಂತ್ರಿಕ ಕಾರಣಗಳಿಂದ ದಿನಾಂಕ 08–01–2015 ರಂದು ಡೌನ್ಲೋಡ್ ಆಗಿರುವುದಿಲ್ಲ. ಶ್ರೀ. ಅನಿಲ್ ಕುಮಾರ್ ಅವರ ಮನವಿಯನ್ನು ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರಿಗೆ ಕಾನೂನು ಅಭಿಪ್ರಾಯವನ್ನು ಪಡೆಯಲು ನೀಡಲಾಗಿತ್ತು. Tender inviting and accepting authority ಯು

ಟೆಂಡರ್ ಪ್ರಕಟಣೆ ದಿನಾಂಕ 25.12.2014	ತಾಂತ್ರಿಕ ಬಿಡ್ ತೆಗೆಯುವ ದಿ: 30.12.14
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 26.12.2014	ಹಣಕಾಸಿನ ಬಿಡ್ ತೆಗೆಯುವ ದಿ:31.12.14

ಆಕ್ಷೇಪಣೆಗಳು	ಉತ್ತರಗಳು
ನಿರ್ಧರಿಸಲಾಗಿದೆ, ತಾಂತ್ರಿಕ ಬಿಡ್ ಕುರಿತಂತೆ ತುಲನಾತ್ಮಕ ಪಟ್ಟಿ ತಯಾರಿಸಲಾಗಿದ್ದು ಕ್ರಮ ಸಂಖ್ಯೆ–5ರ ಶ್ರೀ.ಸಿದ್ದೇಗೌಡ ಹಾಗೂ ಕ್ರ.ಸಂಖ್ಯೆ–6ರ ಶ್ರೀ.ಅನಿಲ್ ಕುಮಾರ್.ಎನ್.ಎಚ್ ಇವರುಗಳ Liquid assets/availability of credit facility (Rs.18.00 Lakhs) ಹಾಗೂ Availability of owining key critical equipments of works ಕುರಿತಂತೆ ವಿವರಗಳನ್ನು ಲಗತ್ತಿಸಿರುವುದಿಲ್ಲ, ಆದರೆ ದಿನಾಂಕ–05–03–2015ರಲ್ಲಿ ಕ್ರಮ ಸಂಖ್ಯೆ –5ರ ಶ್ರೀ.ಸಿದ್ದೇಗೌಡ ಇವರು ವಿವರಗಳನ್ನು ಲಗತ್ತಿಸಲಾಗಿದೆ ಎಂದು ತುಲನಾತ್ಮಕ ಪಟ್ಟಿ ತಯಾರಿಸಿರುವುದು ಕಂಡುಬರುತ್ತದೆ. ಆದುದರಿಂದ ಟೆಂಡರ್‌ದಾರರು ತಾಂತ್ರಿಕ ಬಿಡ್‌ನೊಂದಿಗೆ ಸಲ್ಲಿಸಿರುವ ಲಗತ್ತುಗಳನ್ನು ಪರಿಶೀಲಿಸಲಾಗಿ ಶ್ರೀ.ಸಿದ್ದೇಗೌಡ ಇವರು ಸಲ್ಲಿಸಿರುವ Liquid assers/availability of credir facility (Rs.18.00 Lakhs) ಸಂಬಂಧಿಸಿದ ಮಾಹಿತಿಯು ದಿನಾಂಕ–08–01–2015ರಂದು ಪಡೆದಿದ್ದು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕದ ನಂತರದಾಗಿರುತ್ತದೆ. ಹಾಗೂ ಈ ಮಾಹಿತಿಯನ್ನು ಪರಿಗಣಿಸಿ ಇವರ ಟೆಂಡರ್‌ನ್ನು ಅಂಗೀಕರಿಸಿದೆ. ಕೆ.ಟಿ.ಟಿ.ಪಿ. ನಿಯಮಗಳ ಅನ್ವಯ ಟೆಂಡರ್‌ದಾರರು ಎಲ್ಲಾ ದಾಖಲೆಗಳನ್ನು ಟೆಂಡರ್‌ನೊಂದಿಗೆ ಸಲ್ಲಿಸಬೇಕಾಗಿದ್ದು, ನಂತರದ ದಾಖಲೆಗಳನ್ನು ಪರಿಗಣಿಸಲು ಅವಕಾಶವಿಲ್ಲದಿದ್ದರೂ ಸಹ ಶ್ರೀ.ಸಿದ್ದೇಗೌಡ ಇವರು ದಿನಾಂಕ 18.01.2015 ರಂದು ನೀಡಿರುವ ದಾಖಲೆಗಳನ್ನು ತಾಂತ್ರಿಕ ಬಿಡ್ ಉತ್ತೀರ್ಣಗೊಳಿಸಲು ಪರಿಗಣಿಸಿರುವುದನ್ನು ಲೆಕ್ಕತನಿಖೆಯು ತೀವ್ರವಾಗಿ ಆಕ್ಷೇಪಿಸಿದೆ. ಶ್ರೀ.ಅನಿಲ್ ಕುಮಾರ್.ಎನ್.ಎಚ್ ಇವರನ್ನು ತಾಂತ್ರಿಕ ಬಿಡ್‌ನಲ್ಲಿ ಅನುತ್ತೀರ್ಣಗೊಳಿಸಿದ್ದರಿಂದ ಅಪೀಲನ್ನು ಸಲ್ಲಿಸಿದ್ದು ಈ ಬಗ್ಗೆ ಲೀಗಲ್ ಸೆಲ್‌ನಿಂದ ಅಭಿಪ್ರಾಯ ಪಡೆದು ಸದರಿಯವರನ್ನು ತಾಂತ್ರಿಕ ಬಿಡ್‌ನಲ್ಲಿ ಕೈಬಿಟ್ಟಿರುವುದುಕಂಡು ಬರುತ್ತದೆ. ದಿನಾಂಕ–10.03.2015ರಲ್ಲಿ ಶ್ರೀ.ಅನಿಲ್ ಕುಮಾರ್.ಎನ್.ಎಚ್‌ರವರು ದಿನಾಂಕ–12–03–2015ರ ಬ್ಯಾಂಕರ್ ಸರ್ಟಿಫಿಕೇಟ್‌ನ್ನು ಸಲ್ಲಿಸಿ, ಟೆಂಡರ್ ಮರು ಪರಿಶೀಲಿಸಿ ಪರಿಗಣಿಸಲು ಕೋರಿರುವುದು ಕಂಡುಬರುತ್ತದೆ. ದಿನಾಂಕ–05–03–2015ರಂದು ಹಣಕಾಸು ಬಿಡ್‌ನ್ನು ತೆಗೆಯಲಾಗಿದ್ದು ಶ್ರೀ.ಸಿದ್ದೇಗೌಡ, ಬೆಂಗಳೂರು ಇವರು ನಮೂದಿಸಿರುವ ದರಗಳು 15.13% below rate ಆಗಿರುವುದರಿಂದ ಎಲ್–1 ಟೆಂಡರ್‌ದಾರರಾಗಿ ಪರಿಗಣಿಸಿ ಕಾರ್ಯದೇಶ ದಿನಾಂಕ–22–06–2015ರಲ್ಲಿ ನೀಡಿರುವುದು ಕಂಡುಬರುತ್ತದೆ. ಈ ಆಕ್ಷೇಪಣೆಗಳಿಗೆ ವಿವರಗಳನ್ನು ಯಾವುದೇ ವರದಿ ನೀಡದೇ ಇರುವುದರಿಂದ ವೌಚರ್ ಸಂಖ್ಯೆ 921 ದಿನಾಂಕ: 02.02.2016 ರಲ್ಲಿ ಪಾವತಿಸಲಾದ ಮೊತ್ತ ರೂ.53,73,197.00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.	ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಆಗಿರುವುದರಿಂದ E-Procurement authority ಗೆ ನೀಡಿರುವ ಮನವಿಯನ್ನು ತಿರಸ್ಕರಿಸಬೇಂಕೆಂದು ತಿಳಿಸಿರುತ್ತಾರೆ. ಸದರಿ ಕಾಮಗಾರಿಯು ಸೂಚಿಸಿರುವ ಅವಧಿಯ ಮುನ್ನ ಶ್ರೀ ಸಿದ್ದೇಗೌಡ ಗುತ್ತಿಗೆದಾರರು ಪೂರ್ಣಗೊಳಿಸಿದ್ದು ಬಳಕೆದಾರರ ವಿಭಾಗಕ್ಕೆ ದಿನಾಂಕ 05–01–2016ರಂದು ಹಸ್ತಾಂತರಿಸಲಾಗಿದೆ ಗ್ರಂಥಾಲಯ ಕಟ್ಟಡ ನವೀಕರಣ ಕಾಮಗಾರಿ ಸಮಿತಿಗಳ ನಡಾವಳಿಯ ಪ್ರತಿಯನ್ನು ಒದಗಿಸಲು ದಿನಾಂಕ:25.03.2019ರ ಟಿಪ್ಪಣಿಯಲ್ಲಿ ಸೂಚಿಸಿದೆ.

ಆಕ್ಷೇಪಣೆಗಳು	ಉತ್ತರಗಳು
121. ಬೆಂಗಳೂರು ವಿಶ್ವವಿದ್ಯಾಲಯದ ಕಛೇರಿಯ ಆವರಣದಲ್ಲಿರುವ ಮೌಲ್ಯಮಾಪನ ಕಟ್ಟಡ ನವೀಕರಣ ಕಾಮಗಾರಿಯ ಮೊಬಲಗು: ರೂ. 36,82,926.00 ಗಳು (ಆಕ್ಷೇಪಣೆ)	
ಬೆಂಗಳೂರು ವಿಶ್ವವಿದ್ಯಾಲಯದ ಕಛೇರಿಯ ಆವರಣದಲ್ಲಿರುವ ಮೌಲ್ಯಮಾಪನ ಕಟ್ಟಡ ನವೀಕರಣ ಕಾಮಗಾರಿಯ ಅಂದಾಜು ರೂ.79.00 ಲಕ್ಷಗಳಲ್ಲಿ 2013–14ನೇ ಸಾಲಿನ ಬೆಂಗಳೂರು ವೃತ್ತದ ದರಪಟ್ಟಿಯ ರೀತ್ಯ ಅಧೀಕ್ಷಕ ಅಭಿಯಂತರರು ಬೆಂಗಳೂರು ವೃತ್ತ ಬೆಂಗಳೂರು ಇವರಿಂದ ಹಾಗೂ ದಿನಾಂಕ–22.04.2014ರ ವಿಶ್ವವಿದ್ಯಾಲಯದ ಟೆಕ್ನಿಕಲ್ ಕಮಿಟಿಯಿಂದ ಅನುಮೋದನೆಗೊಂಡಿರುತ್ತದೆ. ಟೆಕ್ನಿಕಲ್ ಕಮಿಟಿಯ ತನ್ನ ದಿನಾಂಕ–28–08–2014ರ 41ನೇ ವರ್ಕ್ಸ್ ಕಮಿಟ್ಟಿ ನಡವಳಿಗಳಲ್ಲಿ ಈ ಕಾಮಗಾರಿಯಲ್ಲಿನ ಅಲ್ಯುಮೀನಿಯಂ ಪಾರ್ಟಿಷ್ನ್ ಬದಲಾಗಿ Solid Concrete Block Masonry ಸೇರ್ಪಡೆಗೊಂಡ ಪರಿಷ್ಕೃತ ಅಂದಾಜು 45.50 ಲಕ್ಷಕ್ಕೆ ಸಿದ್ದಪಡಿಸಿ 41ನೇ ವರ್ಕ್ಸ್ ಕಮಿಟ್ಟಿಯಲ್ಲಿ ದಿನಾಂಕ:28.08.2014ರಲ್ಲಿ ಅನುಮೋದನೆ ಪಡೆಯಲಾಗಿದೆ. ಈ ಕಾಮಗಾರಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಆಕ್ಷೇಪಣೆಗಳನ್ನು ವ್ಯಕ್ತಪಡಿಸಲಾಗಿದೆ. *1.* ಇಲಾಖಾ ಸಂಹಿತೆಗಳ ರೀತ್ಯ ಕಾಮಗಾರಿಯ ವಿವರಣೆಗಳಲ್ಲಿ (Specification) ಬದಲಾವಣೆಗಳಿಂದಾಗಿ ಅಂದಾಜು ಪಟ್ಟಿಯು ಪರಿಷ್ಕೃತಗೊಂಡಿಲ್ಲ ಸದರಿ ಅಂದಾಜು ಪಟ್ಟಿಯು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಬೇಕಾಗಿರುತ್ತದೆ, ಈ ಬಗ್ಗೆ ರೂ.45.50ಲಕ್ಷ ಪರಿಷ್ಕೃತ ಅಂದಾಜಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದಿರುವುದಿಲ್ಲ. *2.* ಈ ಕಾಮಗಾರಿಯನ್ನು ಟೆಂಡರ್ ಮೇಲೆ ಗುತ್ತಿಗೆದಾರರಾದ M/s.A1 Constructions, Bangalore ಇವರಿಗೆ ಈ ಕಛೇರಿಯ ಅಗ್ರಿಮೆಂಟ್ ಸಂಖ್ಯೆ–1453/2014–15, ದಿನಾಂಕ–13.03.2015ರಲ್ಲಿ ರೂ.4318847.00 ಮೊತ್ತದ ಕಾಮಗಾರಿಯನ್ನು ಮೂರು ತಿಂಗಳ ಕಾಲಾವದಿಯೊಂದಿಗೆ ವಹಿಸಲಾಗಿದೆ ನಿಗದಿತ ಅವದಿಯು ದಿನಾಂಕ–12–06–2015ಕ್ಕೆ ಪೂರ್ಣಗೊಂಡಿರುತ್ತದೆ, ನಿಗದಿತ ಅವದಿಯಲ್ಲಿ ಗುತ್ತಿಗೆದಾರರು ಯಾವುದೇ ಆರ್ಥಿಕ ಪ್ರಗತಿಯನ್ನು ಸಾಧಿಸಿರುವುದಿಲ್ಲ, ಅಂಗೀಕೃತ ಕರಾರಿನ ಕಲಾಂ 37.2ರ ರೀತ್ಯಾ ಕುಂಠಿತ ಆರ್ಥಿಕ ಪ್ರಗತಿಗೆ ದಂಡ ವಿಧಿಸಬೇಕಾಗಿದ್ದು ದಂಡವನ್ನು ವಿದಿಸದೇ ಬಿಲ್ಲುಗಳನ್ನು ಪಾವತಿಸಲಾಗಿದೆ. *3.* ಈ ಕಾಮಗಾರಿಯಲ್ಲಿ Extra item Providing Aluminium windows and ventilators ಗಾಗಿ ರೂ.380299.00 ಮೊತ್ತ ಪಾವತಿಸಲಾಗಿದೆ. ಅಂಗೀಕೃತ ಕರಾರಿನ ಕಲಂ 30.4 ರ ಅನ್ವಯ Approval of Government has to be obtainied	1.ಬೆಂಗಳೂರು ವಿಶ್ವವಿದ್ಯಾಲಯದ ಕಛೇರಿಯ ಆವರಣದಲ್ಲಿನ ಮೌಲ್ಯಮಾಪನ ಕಟ್ಟಡ ನವೀಕರಣ ಕಾಮಗಾರಿಯ ಅಂದಾಜು ಪಟ್ಟಿಯನ್ನು 2013–14ನೇ ಸಾಲಿನ ದರಪಟ್ಟಿಯ ಪ್ರಕಾರ ರೂ. 79.00 ಲಕ್ಷಗಳಿಗೆ ತಯಾರಿಸಲಾಯಿತು ಮತ್ತು ಸದರಿ ಅಂದಾಜು ಪಟ್ಟಿಯು ದಿನಾಂಕ 22–04–2014ರಂದು ನಡೆದ 62ನೇ ತಾಂತ್ರಿಕ ಪರಿಶೋಧನಾ ಸಮಿತಿಯು ಈ ಮೇಲ್ಕಂಡ ಅಂದಾಜುಪಟ್ಟಿಗೆ ತಾಂತ್ರಿಕ ಅನುಮೋದನೆಯನ್ನು ನೀಡಿರುತ್ತದೆ ಮತ್ತು 40ನೇ ಕಾಮಗಾರಿ ಸಮಿತಿಯಲ್ಲಿ ಸಮಿತಿಯ ಅಧ್ಯಕ್ಷರು ಕಾಮಗಾರಿಯ ಕಟ್ಟಡವನ್ನು ಪರಿವೀಕ್ಷಣೆ ಮಾಡಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಮೌಲ್ಯಮಾಪನ ಕಟ್ಟಡವನ್ನು ತಾಂತ್ರಿಕ ಪರಿಶೋಧನಾ ಸಮಿತಿಯ ಅಧ್ಯಕ್ಷರು ದಿನಾಂಕ 20–08–2014ರಂದು ಪರಿವೀಕ್ಷಣೆ ನಡೆಸಿರುತ್ತಾರೆ. ಪರಿವೀಕ್ಷಣೆ ಸಂದರ್ಭದಲ್ಲಿ ಮೌಲ್ಯ ಮಾಪನ ಕಟ್ಟಡದಲ್ಲಿ aluminium partition ಬದಲಿಗೆ concrete hollow blocks ಒದಗಿಸಿ ಎಂದು ಸೂಚಿಸಿರುತ್ತಾರೆ. ಈ ಮೇಲ್ಕಂಡ ಸೂಚನೆಯ ಪ್ರಕಾರ aluminium partition ಬದಲಿಗೆ concrete hollow blocks ಒದಗಿಸಿ ರೂ. 45.50 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ದಿನಾಂಕ 28–08–2014ರಂದು ನಡೆದ 41ನೇ ಕಾಮಗಾರಿ ಸಮಿತಿಯಲ್ಲಿ ಇರಿಸಿ ವಿವರವಾಗಿ ಚರ್ಚಿಸಿದ ನಂತರ ರೂ. 45.50 ಲಕ್ಷಗಳ ಅಂದಾಜು ಪಟ್ಟಿಗೆ ಅನುಮೋದನೆ ನೀಡಿರುತ್ತದೆ. ಈ ಮೇಲ್ಕಂಡ ಸಮಿತಿಗಳ ನಡಾವಳಿಗಳನ್ನು **ಅನುಬಂಧ–161ರಲ್ಲಿ** ಲಗತ್ತಿಸಲಾಗಿದೆ. ಆದುದರಿಂದ ಅಭಿಯಂತರರ ವಿಭಾಗವು ಅಂದಾಜು ಪಟ್ಟಿಯನ್ನು ಸಿದ್ದಪಡಿಸುವ ಮುನ್ನ ಕಟ್ಟಡದ ಪರಿವೀಕ್ಷಣೆಯನ್ನು ಮಾಡಿ, ಅಂದಾಜು ಪಟ್ಟಿಯನ್ನು ಎಲ್ಲಾ ನೀತಿ ಮತ್ತು ನಿಯಮಗಳ ಪ್ರಕಾರ ಸಲ್ಲಿಸಿರುತ್ತದೆ. ಈ ಅಂದಾಜು ಪಟ್ಟಿಯನ್ನು 41ನೇ ಕಾಮಗಾರಿ ಸಮಿತಿಯು ಮತ್ತು 114ನೇ ಸಿಂಡಿಕೇಟ್ ಸಭೆಯು ಅನುಮೋದನೆಯನ್ನು ನೀಡಿರುತ್ತದೆ. ಆದುದರಿಂದ ಈ ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ. 2.ಸದರಿ ಕಾಮಗಾರಿಯನ್ನು ಗುತ್ತಿಗೆದಾರರಾದ o1 Construction ಅವರು ಸೂಚಿಸಿದ ಅವಧಿಯಲ್ಲಿ

ಆಕ್ಷೇಪಣೆಗಳು	ಉತ್ತರಗಳು
for the variation of 5% ಈ ಬಗ್ಗೆ ಸರ್ಕಾರದಿಂದ ಅನುಮತಿ ಪಡೆಯಬೇಕಾಗಿರುತ್ತದೆ. ಈ ಕಾಮಗಾರಿಗಳಿಗೆ ಸಂಬಂಧಿಸಿದಂತೆ ವಿವರಗಳನ್ನು ಕೋರಿದ್ದು ಯಾವುದೇ ವರಿದಿ ನೀಡದೇ ಇರುವುದರಿಂದ ವೋಚರ್ ಸಂಖ್ಯೆ 703 ದಿನಾಂಕ: 14.11.2016 ರಲ್ಲಿ ಪಾವತಿಸಲಾದ ಮೊತ್ತ ರೂ.36,82,926.00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.	ಕಾಮಗಾರಿಯನ್ನು ಪೂರ್ಣಗೊಳಿಸಿರುತ್ತಾರೆ. ಆದುದರಿಂದ ದಂಡವನ್ನು ವಿಧಿಸುವುದನ್ನು ಕೈಬಿಡಲಾಗಿದೆ. 3. ಬೆಂಗಳೂರು ವಿಶ್ವವಿದ್ಯಾಲಯದ ಕಛೇರಿಯ ಆವರಣದಲ್ಲಿನ ಮೌಲ್ಯಮಾಪನ ಕಟ್ಟಡ ನವೀಕರಣ ಕಾಮಗಾರಿಯನ್ನು ಗುತ್ತಿಗೆದಾರರಾದ o1 Construction ಅವರಿಗೆ @ 4.99% below SR 2013–14 & @ 11.39% below SR 2014–15 ಕಾಮಗಾರಿಯನ್ನು ನೀಡಲಾಗಿದೆ. ದಿನಾಂಕ 23–12–2014ರಂದು ನಡೆದ 43ನೇ ಕಾಮಗಾರಿ ಸಮಿತಿಯು ಮತ್ತು ದಿನಾಂಕ 14–01–2015ರಂದು ನಡೆದ ವಿಶೇಷ ಸಿಂಡಿಕೇಟ್ ಸಭೆಯು lowest tenderer A1 Construction ಅವರಿಗೆ ಸದರಿ ಕಾಮಗಾರಿಯನ್ನು ವಹಿಸಲು ಅನುಮೋದನೆ ಯನ್ನು ನೀಡಿರುತ್ತದೆ. ಸದರಿ ಕಾಮಗಾರಿಯು ನಡೆಯುವ ಸಂದರ್ಭದಲ್ಲಿ Workslip ನ ಮೊತ್ತ ರೂ. 3,05,637.00, ಇಖಖಐನ ಮೊತ್ತ ರೂ. 4,65,647.39 ಕೆಲಸವನವನ್ನು ಗುತ್ತಿಗೆದಾರರು ಕೈಗೊಂಡಿರುತ್ತಾರೆ. ಮತ್ತು ಈ Workslip & EIRL ನ್ನು ದಿನಾಂಕ 29–09–2015 ರಂದು ನಡೆದ 4ನೇ ತಾಂತ್ರಿಕ ಸಲಹಾ ಸಮಿತಿಯು ಮತ್ತು 46ನೇ ಕಾಮಗಾರಿ ಸಮಿತಿಯು ಅನುಮೋದನೆಯನ್ನು ನೀಡಿರುತ್ತದೆ. 46ನೇ ಕಾಮಗಾರಿ ಸಮಿತಿಯ ನಡಾವಳಿಗೆ ದಿನಾಂಕ 13–10–2015ರಂದು ನಡೆದ 123ನೇ ಸಿಂಡಿಕೇಟ್ ಸಮಿತಿಯು ಅನುಮೋದನೆಯನ್ನು ನೀಡಿರುತ್ತದೆ. Workslip & EIRL ನ್ನು ಒಳಗೊಂಡ ಪರಿಷ್ಕೃತ ಅಂದಾಜು ಪಟ್ಟಿಯ ಮೊತ್ತ ರೂ. 40,30,841.02 ಮೊತ್ತವು ಮೂಲ ಅಂದಾಜು ಪಟ್ಟಿಯ ಮೊತ್ತ ರೂ. 40,50,000.00ಕ್ಕಿಂತ ಕಡಿಮೆ ಇರುತ್ತದೆ. ಬೆಂಗಳೂರು ವಿಶ್ವವಿದ್ಯಾಲಯದ ನಿಯಮಗಳ ಪ್ರಕಾರ ಮಾನ್ಯ ಕುಲಪತಿಗಳಿಗೆ ಮೂಲ ಅಂದಾಜು ಪಟ್ಟಿಯ ಮೊತ್ತ ಶೇಕಡಾ 25% ವರೆಗೆ ಅನುಮೋದನೆಯನ್ನು ನೀಡುವ ಅಧಿಕಾರವಿರುತ್ತದೆ. ಆದುದರಿಂದ ಮಾನ್ಯ ಕುಲಪತಿಗಳಿಂದ ಪರಿಷ್ಕೃತ ಅಂದಾಜು ಪಟ್ಟಿಯ ಮೊತ್ತ ರೂ. 40,30,841.02 ಅನುಮೋದನೆಯನ್ನು ಪಡೆಯ ಲಾಗಿದೆ.vide No.UE:DM:REV:EST:REP:RENO: VAL:CENlJBC:BUB:1532:2016-16 Dt:05-12-16 ಆದುದರಿಂದ ಅಭಿಯಂತರರ ವಿಭಾಗವು ಅಂದಾಜು

ಆಕ್ಷೇಪಣೆಗಳು	ಉತ್ತರಗಳು
	ಪಟ್ಟಿಯನ್ನು ಸಿದ್ದಪಡಿಸುವ ಮುನ್ನ ಕಟ್ಟಡದ ಪರಿವೀಕ್ಷಣೆಯನ್ನು ಮಾಡಿ, ಅಂದಾಜು ಪಟ್ಟಿಯನ್ನು ಎಲ್ಲಾ ನೀತಿ ಮತ್ತು ನಿಯಮಗಳ ಪ್ರಕಾರ ಸಲ್ಲಿಸಿರುತ್ತದೆ ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಕಛೇರಿಯ ಆವರಣದಲ್ಲಿನ ಮೌಲ್ಯಮಾಪನ ಕಟ್ಟಡ ನವೀಕರಣ ಕಾಮಗಾರಿಯ ಪರಿಷ್ಕೃತ ಅಂದಾಜು ಪಟ್ಟಿಯ ಮೊತ್ತ ರೂ. 40,30,841.02 ಗೆ ಅನುಮೋದನೆಯನ್ನು ಪಡೆಯಲಾಗಿದೆ. ಸದರಿ ಕಾಮಗಾರಿಯಲ್ಲಿ ಶೇಕಡಾ 5% ಕ್ಕಿಂತ ಹೆಚ್ಚಾದ ವ್ಯತ್ಯಾಸದ ಮೊತ್ತವನ್ನು ಸರ್ಕಾರದ ವತಿಯಿಂದ ಅನುಮೋದನೆಯನ್ನು ಪಡೆಯಲಾಗುವುದು. ಸ್ಪಷ್ಟವಾದ ಕಂಡಿಕೆವಾರು ಅಂತಿಮ ಉತ್ತರ ಸಲ್ಲಿಸಲು ದಿನಾಂಕ:25.03.2019ರ ಕಛೇರಿ ಟಿಪ್ಪಣಿಯಲ್ಲಿ ತಿಳಿಸಲಾಗಿದೆ. ದಿನಾಂಕ 21.10.2019ರಂದು ನಡೆದ ಸಭೆಯಲ್ಲಿ ಚರ್ಚಿಸಿ, ಕೂಡಲೇ ಉತ್ತರ ಸಲ್ಲಿಸಲು ಮತ್ತೊಮ್ಮೆ ಕೋರಲಾಯಿತು.
122. ಬೆಂಗಳೂರು ವಿಶ್ವವಿದ್ಯಾಲಯ ಆಡಳಿತ ಕಛೇರಿ ಕಟ್ಟಡದ ನವೀಕರಣ ಕಾಮಗಾರಿಯ ಮೊಬಲಗು ರೂ.58,92,239.00 ಗಳು (ಆಕ್ಷೇಪಣೆ)	
ಬೆಂಗಳೂರು ವಿಶ್ವವಿದ್ಯಾಲಯ ಆಡಳಿತ ಕಛೇರಿ ಕಟ್ಟಡದ ನವೀಕರಣ ಕಾಮಗಾರಿಯ ಅಂದಾಜು, ಅಧೀಕ್ಷಕ ಇಂಜಿನಿಯರ್, ಕಟ್ಟಡಗಳ ವೃತ್ತ, ಬೆಂಗಳೂರು ಇವರಿಂದ 2014–15ನೇ ಸಾಲಿನ ದರ ಪಟ್ಟಿಯ ರೀತ್ಯ ರೂ.185.00 ಲಕ್ಷಗಳಿಗೆ ಅನುಮೋದನೆ ಗೊಂಡಿರುತ್ತದೆ. ವಿಶ್ವವಿದ್ಯಾಲಯದ 42ನೇ ವರ್ಕ್ಸ್ ಕಮಿಟಿಯು ದಿನಾಂಕ: 21–10–2014ರಲ್ಲಿ ಈ ಕಾಮಗಾರಿಗೆ ಕೆ.ಟಿ.ಟಿ.ಪಿ ನಿಯಮಗಳ ರೀತ್ಯ ಈ–ಪೋರ್ಟಲ್ ಟೆಂಡರ್ ಆಹ್ವಾನಿಸಲು ತಿರ್ಮಾನಿಸಿದ್ದು ಟೆಂಡರ್ ನೋಟಿಫಿಕೇಷ್ನ್ ಸಂಖ್ಯೆ–UE/DM/TENDER-NOT/JBC/2014–15 ದಿನಾಂಕ–30–10–2014ರಲ್ಲಿ ಟೆಂಡರ್ ನೀಡಿದ್ದು ಈ ಕಾಮಗಾರಿಯ ತಾಂತ್ರಿಕ ಬಿಡ್ಡನ್ನು ದಿನಾಂಕ–16–12–2014 ಹಾಗೂ ಕಮರ್ಷಿಯಲ್ ಬಿಡ್ಡನ್ನು ದಿನಾಂಕ: 22.12.2014ರಲ್ಲಿ ತೆರೆಯಲಾಗಿದೆ. Amount put to Tender Rs.147.98 Lakhs Amount As per Tender Rs.133.33 Lakhs ಈ ಕಾಮಗಾರಿಗೆ 3 ಜನ ಟೆಂಡರ್‌ದಾರರು ಟೆಂಡರನ್ನು ಭಾಗವಹಿಸಿದ್ದು ಶ್ರೀ.ಗೊನ್ವಾರ್ ಮಲಕಪ್ಪ ರೆಡ್ಡಿ ಎಲ್–1 ಟೆಂಡರ್‌ದಾರರಿಗೆ ಆಯ್ಕೆಯಾಗಿರುತ್ತದೆ ಇವರು 2014–15ನೇ ಸಾಲಿನ ದರಪಟ್ಟಿಗೆ 10.04% ಕಡಿಮೆ ದರಗಳನ್ನು ನಮೂದಿಸಿದ್ದು, ಇವರಿಗೆ 133–13 ಲಕ್ಷ ರೂಪಾಯಿಗಳ ಕಾಮಗಾರಿಯನ್ನು ವರ್ಕ್ ಆರ್ಡರ್ ಸಂಖ್ಯೆ–UE/DM/WO/1452/2014–15 ದಿನಾಂಕ–13–03–2015ರಲ್ಲಿ 9 ತಿಂಗಳ ಕಾಲವದಿಯೊಂದಿಗೆ ನೀಡಲಾಗಿದೆ. ಈ ಕಾಮಗಾರಿಗೆ	1, 2 ಬೆಂಗಳೂರು ವಿಶ್ವವಿದ್ಯಾಲಯದ ಆಡಳಿತ ಕಛೇರಿ ಕಟ್ಟಡ ನವೀಕರಣ ಕಾಮಗಾರಿಯನ್ನು ಶ್ರೀ. ಗಾನವಾರ್ ಮಲಕಪ್ಪ ರೆಡ್ಡಿ ಅವರಿಗೆ vide work order No. UE:DM:WO:1452: 2014-15 Dated: 13-03-2015ಗೆ ನೀಡಲಾಗಿರುತ್ತದೆ. ಕಾಮಗಾರಿಯ ಮುಕ್ತಾಯದ ಅವಧಿಯು 12–12–2016. ಸದರಿ ಗುತ್ತಿಗೆದಾರರಿಗೆ ರೂ. 96.00 ರವರೆಗೆ ದಿನಾಂಕ 08–06–2016 ರ ಒಳಗೆ ಪಾವತಿಸಲಾಗಿದೆ. ಆದುದರಿಂದ ಯಾವುದೇ short fall ಇರುವುದಿಲ್ಲ. ಕ್ರಮೇಣ ಈ ಗುತ್ತಿಗೆದಾರರು ಮಾನ್ಯ ಕುಲಪತಿಗಳ ಕೊಠಡಿಯನ್ನು ನವೀಕರಿಸಿರುತ್ತಾರೆ. ಈ ನವೀಕರಣ ಕೆಲಸವು Workslip & EIRL ಎಂದು ಅನುಮೋದನೆಗೊಂಡಿರುತ್ತದೆ. ಗುತ್ತಿಗೆದಾರರು ಈ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು ಮತ್ತು ಅಂತಿಮ ಬಿಲ್ಲಿನ ಕಾರ್ಯವು ಪ್ರಗತಿಯಲ್ಲಿರುತ್ತದೆ. ಸ್ಪಷ್ಟವಾದ ಕಂಡಿಕೆವಾರು ಅಂತಿಮ ಉತ್ತರ ಸಲ್ಲಿಸಲು ದಿನಾಂಕ:25.03.2019ರ ಕಛೇರಿ ಟಿಪ್ಪಣಿಯಲ್ಲಿ ತಿಳಿಸಲಾಗಿದೆ. ದಿನಾಂಕ : 21.10.2019ರಂದು ನಡೆದ ಸಭೆಯಲ್ಲಿ ಚರ್ಚಿಸಿ ಕೂಡಲೆ ಉತ್ತರ ಸಲ್ಲಿಸಲು ಮತ್ತೊಮ್ಮೆ

ಆಕ್ಷೇಪಣೆಗಳು	ಉತ್ತರಗಳು
ಸಂಬಂಧಿಸಿದಂತೆ ಈ ಕೆಳಕಂಡ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿದೆ. 1. ಈ ಕಾಮಗಾರಿಗೆ 9 ತಿಂಗಳು ಕಾಲವದಿಯನ್ನು ನೀಡಿದ್ದು ದಿನಾಂಕ–13–03–2015ರಲ್ಲಿ ಕಾರ್ಯದೇಶ ನೀಡಿದ್ದು ನಿಗದಿತ ಅವದಿ ದಿನಾಂಕ–12–12–2016ಕ್ಕೆ ಪೂರ್ಣಗೊಂಡಿರುತ್ತದೆ. ನಿಗದಿತ ಅವದಿಯೊಳಗೆ ಗುತ್ತಿಗೆದಾರರು ಯಾವುದೇ ಆರ್ಥಿಕ ಪ್ರಗತಿಯನ್ನು ಸಾದಿಸಿರುವುದಿಲ್ಲ, ಈ ಕಾಮಗಾರಿಯ ಪ್ರಥಮ ಹಾಗೂ ಭಾಗದ ಬಿಲ್ಲು ರೂ.5892239.00 ವೋಚರ್ ನಂ–97, ದಿನಾಂಕ–03–02–2016 ಹಾಗೂ 2ನೇ ಮತ್ತು ಭಾಗದ ಬಿಲ್ಲು ರೂ.3705144.00 ವೋಚರ್ ನಂ.214, ದಿನಾಂಕ–08–06–2016ರಲ್ಲಿ ಪಾವತಿಯಾಗಿರುತ್ತದೆ. ಕಾಮಗಾರಿ ನಿರ್ವಹಿಸುವಲ್ಲಿನ ವಿಳಂಬಕ್ಕೆ ಟೆಂಡರ್ ಕರಾರಿನ ಕಲಂ–41ರ ರೀತ್ಯ ವಿಳಂಬಿತ ಅವಧಿಗೆ ದಂಡ ವಿಧಿಸಬೇಕಾಗಿದ್ದು ದಂಡ ವಿಧಿಸದೆ ಬಿಲ್ಲನ್ನು ಪಾವತಿಸಲಾಗಿದೆ. 2. ಕಾಮಗಾರಿ ನಿರ್ವಹಣೆಯಲ್ಲಿನ ವಿಳಂಬದ ಸಲುವಾಗಿ ಗುತ್ತಿಗೆದಾರರಿಗೆ ಲಿಖಿತವಾಗಿ ನೋಟೀಸ್ ನೀಡಿರುವುದಿಲ್ಲ ಹಾಗೂ ಕಾಲ ವಿಸ್ತರಣೆ ಸಹ ನೀಡಿರುವುದಿಲ್ಲ. ಈ ಕಾಮಗಾರಿಗಳಿಗೆ ಸಂಬಂಧಿಸಿದಂತೆ ವಿವರಗಳನ್ನು ಕೋರಿದ್ದು ಯಾವುದೇ ವರಿದಿ ನೀಡದೇ ಇರುವುದರಿಂದ ವೋಚರ್ ಸಂಖ್ಯೆ 97 ದಿನಾಂಕ: 03.02.2016 ರಲ್ಲಿ ಪಾವತಿಸಲಾದ ಮೊತ್ತ ರೂ.58,92,239.00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.	ಕೋರಲಾಯಿತು.
123. ಬೆಂಗಳೂರು ವಿಶ್ವವಿದ್ಯಾಲಯದ ಕಛೇರಿಯ ಆವರಣದಲ್ಲಿನ ಪಿ.ಹೆಚ್.ಡಿ. ಕಟ್ಟಡದ ನವೀಕರಣ ಮತ್ತು ರಿಪೇರಿ ಕಾಮಗಾರಿ ಮೊಬಲಗು: ರೂ. 53,25,353.00 ಗಳು (ಆಕ್ಷೇಪಣೆ)	
